ಬುಧವಾರ, ಡಿಸೆಂಬರ್ 4, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹರ್ಷ

ಪಟ್ಟಾದಲ್ಲಿ ತರಬೇತಿ ಪೂರ್ಣಗೊಳಿಸಿರುವ ಇಬ್ಬರು ಅಗ್ನಿವೀರರು ತಾಯಿಯೊಂದಿಗೆ ಕಾಣಿಸಿಕೊಂಡಿದ್ದು ಹೀಗೆ...



ವಿಶ್ವ ಅಂಗವಿಕಲರ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಕಡಿತವಾಗಿದ್ದ ₹44 ಕೋಟಿ ಮರು ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗವಿಕಲರ ಅಭಿವೃದ್ಧಿ ಕಾರ್ಯಕ್ರಮಗಳ ವೆಚ್ಚದಲ್ಲಿ ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ಕಡಿತಗೊಳಿಸಿದ್ದ ₹44 ಕೋಟಿ ಅನುದಾನವನ್ನು ಪೂರಕ ಅಂದಾಜಿನಲ್ಲಿ ಮರು ಮಂಜೂರು ಮಾಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ 'ವಿಶ್ವ ಅಂಗವಿಕಲರ ದಿನಾಚರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಸುಮಾರು 15 ಲಕ್ಷ ಅಂಗವಿಕಲರಿದ್ದಾರೆ. ಇವರೆಲ್ಲರ ಆರ್ಥಿಕ ಮತ್ತು ವಿಶೇಷ ಸೌಲಭ್ಯಗಳನ್ನು ನೀಡುವುದು ಸರ್ಕಾರದ ಕರ್ತವ್ಯ. ಸಂವಿಧಾನವು ಎಲ್ಲರಿಗೂ ಬದುಕುವ, ಉದ್ಯೋಗ ಪಡೆಯುವ ಅವಕಾಶ ಕಲ್ಪಿಸಿದೆ. ಇವರು ಸಮಾಜಕ್ಕೆ ಹೊರೆಯಲ್ಲ, ಆಸ್ತಿಯಾಗಿದ್ದಾರೆ. ಇವರು ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿದ್ದು, ಇತ್ತೀಚೆಗೆ ನಡೆದ ಪ್ಯಾರಾಲಿಂಪಿಕ್ಸ್‌ನಲ್ಲಿ ದೇಶದ ಕ್ರೀಡಾಪಟುಗಳು ಹೆಚ್ಚಿನ ಪದಕಗಳನ್ನು ಪಡೆದಿದ್ದಾರೆ' ಎಂದು ಹೇಳಿದರು.

'ಸಾಮಾಜಿಕ ಸುರಕ್ಷತೆಗಾಗಿ ಶೇ 40ರಿಂದ 74ರಷ್ಟು ಅಂಗವೈಕಲ್ಯ ಹೊಂದಿರುವವರಿಗೆ ಪ್ರತಿ ತಿಂಗಳು ₹800 ಹಾಗೂ ಶೇ 75ಕ್ಕಿಂತ ಹೆಚ್ಚು ಅಂಗವೈಕಲ್ಯ ಇರುವವರಿಗೆ ₹1,400, ಮನೋವೈಕಲ್ಯ ಇರುವ ವ್ಯಕ್ತಿಗಳಿಗೆ ₹2,000 ಮಾಸಾಶನ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ನೀಡಲಾಗುವ ಅಂಗವಿಕಲರ ಮಾಸಾಶನ ಮೊತ್ತವನ್ನು ಹೆಚ್ಚಿಸುವಂತೆ ಪತ್ರ ಬರೆಯಲಾಗುವುದು' ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಉಪಸ್ಥಿತರಿದ್ದರು.

ಆರ್ಥಿಕ ಭತ್ಯೆಗೆ ಚಾಲನೆ: ಅಂಗವಿಕಲರ ಆರೈಕೆದಾರರಿಗೆ ಪ್ರತಿ ತಿಂಗಳು ₹1 ಸಾವಿರ ಭತ್ಯೆ ನೀಡುವ ಯೋಜನೆ ಅನುಷ್ಠಾನಕ್ಕೆ ಸಮಾರಂಭದಲ್ಲಿ ಚಾಲನೆ ನೀಡಲಾಯಿತು. ಮುಖ್ಯಮಂತ್ರಿಯವರು ಐವರಿಗೆ ಸಾಂಕೇತಿಕವಾಗಿ ಮಂಜೂರಾತಿ ಪತ್ರ ವಿತರಿಸಿದರು.



ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 'ವಿಶ್ವ ಅಂಗವಿಕಲರ ದಿನಾಚರಣೆ' ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಂಗವಿಕಲ ಬಾಲಕಿಯೊಬ್ಬರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ಕೊಡಿಸಿದರು. ಜವಾಹರ ಬಾಲಭವನ ಸೊಸೈಟಿ ಅಧ್ಯಕ್ಷ ಬಿ.ಆರ್ ನಾಯ್ಡು, ಲಕ್ಷ್ಮಿ ಹೆಬ್ಬಾಳಕರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

14 ವ್ಯಕ್ತಿಗಳಿಗೆ, 10 ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿ

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಕೊಪ್ಪ ಗ್ರಾಮದ ಹನುಮಂತ ಹಾವಣ್ಣವರ, ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಸಲೀಯಾ ಬೇಗಂ ದಾವಲಸಾಬ ಮಶ್ಯಾಳ, ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಮಹಾಂತೇಶ್ ಬ್ರಹ್ಮ, ರಾಯಚೂರಿನ ಹೊನ್ನಪ್ಪ, ಮೈಸೂರಿನ ಎಸ್. ಶ್ರೀಧರ್ ದೀಕ್ಷಿತ್, ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಕೋಳೂರ ಎಲ್.ಟಿ. ಗ್ರಾಮದ ಮಹೇಶ ರಾಮನಗೌಡ ತೋಟದ, ಉಡುಪಿ ಜಿಲ್ಲೆಯ ಹೆಗ್ಗುಂಜೆ ಗ್ರಾಮದ ಉಮೇಶ್ ಕುಂದರ್, ಬೆಂಗಳೂರಿನ ಅನಿಲ್ ಡಿ. ಅಲ್ವಿಡಾ, ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಹಿರೇಜಾವೂರು ಗ್ರಾಮದ ನಾಗರಾಜ ನಾಡಗೌಡರ, ಬೆಂಗಳೂರಿನ ಮೇಘನಾ ಜೋಯಿಸ್, ಮೈಸೂರಿನ ಮಧುಸೂದನ್ ಬಿ., ಬೆಂಗಳೂರಿನ ಮಂಜುಳಾ ವಿ., ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಗುಂಡ್ಲೂರ ಚಾಳ ಗ್ರಾಮದ ಫಕ್ಕೀರಗೌಡ ಬನ್ನಿಬಸಪ್ಪ ಪಾಟೀಲ, ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ವಿಜಯ್ ಕುಮಾರ್ ಎಚ್. ಬಣಕಾರ ಅವರು ಅಂಗವಿಕಲರ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಂಗಳೂರಿನ ಅಕಾಡೆಮಿ ಫಾರ್ ಸಿವಿಯರ್ ಹ್ಯಾಂಡಿಕ್ಯಾಪ್ಸ್ ಆ್ಯಂಡ್ ಆಟಿಸಂ, ಬಾಗಲಕೋಟೆ ಜಿಲ್ಲೆಯ ಹುನಗುಂದದ ವಿಜಾಪುರ ಇಂಟಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿಗಳಿಗೆ ಅಂಗವಿಕಲರ ಕ್ಷೇತ್ರದಲ್ಲಿ ಸಾಧನೆಗೈದಿರುವುದಕ್ಕಾಗಿ ಅತ್ಯುತ್ತಮ ಪ್ರಶಸ್ತಿ ನೀಡಲಾಯಿತು.

ಬೆಂಗಳೂರಿನ ಈಶಾನ್ಯ ಇಂಡಿಯಾ ಫೌಂಡೇಶನ್, ಮಲ್ಟಿಪಲ್ ಸ್ಕ್ಲೆರೋಸಿಸ್ ಸೊಸೈಟಿ ಆಫ್ ಇಂಡಿಯಾ, ಸನ್ಮತಿರಾವ್ ವಿದ್ಯಾಸಂಸ್ಥೆ, ಕೊಪ್ಪಳ ಜಿಲ್ಲೆ ಇನ್ನರ್ ವ್ಹೀಲ್ ಕ್ಲಬ್ ಕೊಪ್ಪಳ, ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ದೇವಲಾಪುರದ ದಿ ಅಪಾಸ್ಟೋಲಿಕ್ ಕಾರ್ಮೆಲ್ ವಿದ್ಯಾ ವಿಕಾಸ ಕೇಂದ್ರ-ಆಶಾಕಿರಣ್ ವಿದ್ಯಾ ವಿಕಾಸ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ, ವಿಜಯನಗರ ಜಿಲ್ಲೆಯ ಸಾಧ್ಯ ಟ್ರಸ್ಟ್ ಫಾರ್ ಸೋಶಿಯಲ್ ಡೆವಲಪ್‌ಮೆಂಟ್, ಮೈಸೂರಿನ ಕರುಣಾಮಯಿ ಫೌಂಡೇಶನ್-ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ, ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನ ಚಿಟ್ಟೆ ಕುಡಿಗೆಯ ಸಂತ ಬೆನೆಡಿಕ್ಟ್ ಹೋಂ ಸಂಸ್ಥೆಗಳಿಗೆ ಉತ್ತಮ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸುದ್ದಿ 2 ನಿಮಿಷ

ಕೋರ್ಟ್‌ಗೆ ಚೈತ್ರಾ ಹಾಜರು

ಬೆಂಗಳೂರು: ಹೋಟೆಲ್ ಉದ್ಯಮಿ ಗೋವಿಂದಬಾಬು ಪೂಜಾರಿ ಅವರಿಗೆ ಉಡುಪಿ ಜಿಲ್ಲೆಯ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಆಮಿಷವೊಡ್ಡಿ ಹಣ ಪಡೆದು ವಂಚಿಸಿದ್ದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆಯು ನ್ಯಾಯಾಲಯದಲ್ಲಿ ನಡೆಯುತ್ತಿದ್ದು, ಹಿಂದುತ್ವಪರ ಸಂಘಟನೆ ಕಾರ್ಯಕರ್ತೆ, ಭಾಷಣಕಾರ್ತಿ ಚೈತ್ರಾ ಕುಂದಾಪುರ ಅವರು ಮಂಗಳವಾರ ಕೋರ್ಟ್‌ಗೆ ಹಾಜರಾಗಿದ್ದರು.

ವಿಚಾರಣೆಗೆ ಹಾಜರಾಗುವಂತೆ ಚೈತ್ರಾ ಕುಂದಾಪುರ ಸೇರಿದಂತೆ ಪ್ರಕರಣದ ಆರೋಪಿಗಳಿಗೆ ಕೋರ್ಟ್ ನೋಟಿಸ್ ಜಾರಿ ಮಾಡಿತ್ತು. ನೋಟಿಸ್ ಜಾರಿಯಾದ ಬೆನ್ನಲ್ಲೇ ಆರೋಪಿಗಳು ನ್ಯಾಯಾಲಯಕ್ಕೆ ಹಾಜರಾಗಿ, ವಿಚಾರಣೆ ಎದುರಿಸಿದರು.

ವಂಚನೆ ಪ್ರಕರಣದಲ್ಲಿ ಚೈತ್ರಾ ಅವರನ್ನು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಬಳಿಕ, ಅವರು ಜಾಮೀನು ಪಡೆದು ಜೈಲಿನಿಂದ ಬಿಡುಗಡೆ ಆಗಿದ್ದರು. ಸದ್ಯ ಚೈತ್ರಾ ಅವರು ಬಿಗ್‌ಬಾಸ್ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದಾರೆ. ಬಿಗ್‌ಬಾಸ್ ಮನೆಯಿಂದ ಅವರು ನೇರವಾಗಿ ನ್ಯಾಯಾಲಯಕ್ಕೆ ಬಂದಿದ್ದರು ಎಂದು ಮೂಲಗಳು ತಿಳಿಸಿವೆ.

'ಚೈತ್ರಾ ಕುಂದಾಪುರ ನೇತೃತ್ವದಲ್ಲಿ ಆರೋಪಿಗಳು ₹5 ಕೋಟಿ ವಂಚಿಸಿದ್ದಾರೆ' ಎಂದು ಉದ್ಯಮಿ ಗೋವಿಂದ ಬಾಬು ಪೂಜಾರಿ ಬೆಂಗಳೂರಿನ ಬಂಡೇಪಾಳ್ಯ ಠಾಣೆಗೆ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ದೂರು ನೀಡಿದ್ದರು. ಬಳಿಕ ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು. ಸಿಸಿಬಿ ಪೊಲೀಸರು ಚೈತ್ರಾ ಅವರನ್ನು ಉಡುಪಿಯಲ್ಲಿ ಬಂಧಿಸಿದ್ದರು.



ಹಣ ಅಕ್ರಮ ವರ್ಗಾವಣೆ: ಡಿಕೆಶಿ ಪ್ರಕರಣ ವಿಚಾರಣೆ ಮುಂದೂಡಿಕೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯ ನಡೆಸುತ್ತಿರುವ ತನಿಖೆ ಪ್ರಶ್ನಿಸಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಜನವರಿ 23ಕ್ಕೆ ಮುಂದೂಡಿತು.

ಈಗಾಗಲೇ ಪಟ್ಟಿ ಮಾಡಲಾದ ಪ್ರಕರಣಗಳು ಸಾಕಷ್ಟು ಇರುವುದರಿಂದ ಈ ಪ್ರಕರಣದ ವಿಚಾರಣೆಯನ್ನು ಇಂದು ನಡೆಸಲು ಸಾಧ್ಯವಿಲ್ಲ ಎಂದು ಕಾರಣ ನೀಡಿ ನ್ಯಾಯಮೂರ್ತಿಗಳಾದ ಪ್ರತಿಭಾ ಎಂ.ಸಿಂಗ್ ಹಾಗೂ ಅಮಿತ್ ಶರ್ಮಾ ಅವರಿದ್ದ ಪೀಠವು ವಿಚಾರಣೆ ಮುಂದೂಡಿತು. ಜಾರಿ ನಿರ್ದೇಶನಾಲಯವು 2020ರಲ್ಲಿ ಹೂಡಿರುವ ಪ್ರಕರಣಗಳನ್ನು ಹಾಗೂ ಸಮನ್ಸ್‌ಗಳನ್ನು ರದ್ದುಗೊಳಿಸಬೇಕು ಎಂದು ಕೋರಿ ಶಿವಕುಮಾರ್ ಅವರು 2020ರಲ್ಲಿ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಪ್ರಕರಣದಲ್ಲಿ ಮಹತ್ವದ ಕಾನೂನು ಸಮಸ್ಯೆಗಳಿದ್ದು, ವಾದ ಮಂಡಿಸಲು ಅರ್ಧ ದಿನ ನೀಡಬೇಕು ಎಂದು ಶಿವಕುಮಾರ್ ಪರ ವಕೀಲರು ಕೋರಿದರು.

ಸಾಹಿತ್ಯ ಸಮ್ಮೇಳನ: ಪ್ರತಿನಿಧಿ ನೋಂದಣಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವಿಶೇಷ ಪ್ರತಿನಿಧಿ ನೋಂದಣಿ ಅವಧಿಯನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಇದೇ 7ರವರೆಗೆ ವಿಸ್ತರಿಸಿದೆ.

ಇದೇ 20, 21 ಮತ್ತು 22ರಂದು ಸಮ್ಮೇಳನ ನಡೆಯಲಿದೆ. ನೋಂದಣಿಗಾಗಿ ಆನ್‌ಲೈನ್ ವ್ಯವಸ್ಥೆ ಮಾಡಲಾಗಿದೆ. ಒಟ್ಟು ಐದು ಸಾವಿರ ಪ್ರತಿನಿಧಿಗಳಿಗೆ ಈ ಮೊದಲು ಅವಕಾಶವನ್ನು ಕಲ್ಪಿಸಿ, ಇದೇ 5ರವರೆಗೆ ನೋಂದಣಿಗೆ ಅವಕಾಶ ಕಲ್ಪಿಸಲಾಗಿತ್ತು. 4,077 ಕನ್ನಡಿಗರು ಪ್ರತಿನಿಧಿಗಳಾಗಿ ನೋಂದಣಿ ಮಾಡಿಕೊಂಡಿದ್ದು, ಪ್ರತಿನಿಧಿಯಾಗಲು ಕನ್ನಡಿಗರು ಆಸಕ್ತಿ ತೋರುತ್ತಿದ್ದಾರೆ.

ಸಂಬಂಧಪಟ್ಟ ಸಮಿತಿ ಮತ್ತು ಜಿಲ್ಲಾಡಳಿತದ ಜತೆಗೆ ಚರ್ಚಿಸಿ, ಪ್ರತಿನಿಧಿಗಳ ಸಂಖ್ಯೆಯನ್ನು ಒಟ್ಟು ಆರು ಸಾವಿರಕ್ಕೆ ನಿಗದಿಪಡಿಸಲಾಗಿದೆ. ನೋಂದಣಿಯಾದ ಪ್ರತಿನಿಧಿಗಳಿಗೆ ಸೂಕ್ತ ವಸತಿ ವ್ಯವಸ್ಥೆ, ಬ್ಯಾಗ್ ಸೇರಿ ವಿವಿಧ ಸೌಲಭ್ಯಗಳನ್ನು ಜಿಲ್ಲಾಡಳಿತದ ವತಿಯಿಂದ ಒದಗಿಸಲಾಗುವುದು ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೋಂದಣಿಗೆ ಲಿಂಕ್: https://kannadasahithyaparishattu.in/sammelana2024/

'ಸೀಟ್ ಬ್ಲಾಕಿಂಗ್': ಆರೋಪಿಗಳ ಬಂಧನ

ಖಾಸಗಿ ಕಾಲೇಜುಗಳಿಗೆ ಲಾಭ ಮಾಡಿಕೊಟ್ಟ ಆರೋಪ; ಹೊರಗುತ್ತಿಗೆ ನೌಕರ, ಮಧ್ಯವರ್ತಿಗಳಿಂದ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಕೋಟಾದಡಿ ಬರುವ ಎಂಜಿನಿಯರಿಂಗ್ ಸೀಟುಗಳನ್ನು ಬ್ಲಾಕ್ ಮಾಡಿ ಖಾಸಗಿ ಕಾಲೇಜುಗಳಿಗೆ ಲಾಭ ಮಾಡಿ ಕೊಟ್ಟು ಅರ್ಹ ಅಭ್ಯರ್ಥಿಗಳಿಗೆ ವಂಚಿಸುತ್ತಿದ್ದ ಆರೋಪದಡಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಹೊರಗುತ್ತಿಗೆ ನೌಕರ, ಮೂವರು ಮಧ್ಯವರ್ತಿಗಳು ಹಾಗೂ ಎಂಜಿನಿಯರಿಂಗ್ ಕಾಲೇಜುಗಳ ಸಿಬ್ಬಂದಿ ಸೇರಿದಂತೆ ಹತ್ತು ಮಂದಿಯನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆಇಎ ಹೊರಗುತ್ತಿಗೆ ನೌಕರ, ಯಶವಂತಪುರದ ನಿವಾಸಿ ಬಿ.ಎಸ್. ಅವಿನಾಶ್ (36), ತುಮಕೂರಿನ ಚಿಕ್ಕನಾಯಕನಹಳ್ಳಿ ನಿವಾಸಿ ಟಿ.ಎಂ. ಶ್ರೀಹರ್ಷ(42), ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಎಸ್.ಆರ್. ಪ್ರಕಾಶ್ (42), ಶಶಿಕುಮಾರ್, ಪುರುಷೋತ್ತಮ್, ಎಸ್.ಎಲ್. ಪುನೀತ್, ಕನಕಪುರದ ಸಾತನೂರಿನ ಎಸ್.ಸಿ.ರವಿಶಂಕರ್, ಜಾರ್ಖಂಡ್ ನಿವಾಸಿಗಳಾದ ದಿಲ್‌ಶಾದ್ ಆಲಂ (33), ನೌಶದ್ ಆಲಂ (42), ಆರ್.ಜಿ.ತಿಲಕ್ (60) ಬಂಧಿತರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ನೀಡಿದ ದೂರು ಆಧರಿಸಿ, ನವೆಂಬರ್ 13ರಂದು ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿತ್ತು. ತನಿಖೆ ವೇಳೆ ಲಭಿಸಿದ ಸಾಕ್ಷ್ಯಾಧಾರ ಆಧರಿಸಿ ಆರೋಪಿಗಳನ್ನು ನಗರದ ಮೆಜೆಸ್ಟಿಕ್, ದೇವನಹಳ್ಳಿ, ಕಡೂರು ಸೇರಿದಂತೆ ವಿವಿಧೆಡೆ ಬಂಧಿಸಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಅವಿನಾಶ್ | ತಿಲಕ್ | ದಿಲ್‌ಶಾದ್ | ನೌಶದ್ ಆಲಂ | ಪುರುಷೋತ್ತಮ್ | ಪುನೀತ್ | ಪ್ರಕಾಶ್ | ರವಿಶಂಕರ್ | ಶಶಿಕುಮಾರ್ | ಶ್ರೀಹರ್ಷ

ಆರೋಪಿಗಳಿಂದ 13 ಮೊಬೈಲ್ ಫೋನ್, ಮೂರು ಲ್ಯಾಪ್‌ಟಾಪ್ ಹಾಗೂ ಕೆಲವು ದಾಖಲೆಗಳನ್ನು ಜಪ್ತಿ ಮಾಡಲಾಗಿದೆ ಎಂದು ಹೇಳಿವೆ.

ಪ್ರಕರಣದ ಪ್ರಮುಖ ಆರೋಪಿ ಅವಿನಾಶ್. ಈತ ರೂಪಿಸಿದ ಯೋಜನೆ ಹಾಗೂ ನೀಡಿದ ಮಾಹಿತಿಯಂತೆ ಆರೋಪಿಗಳು ಸೀಟ್ ಬ್ಲಾಕಿಂಗ್ ದಂಧೆ ನಡೆಸುತ್ತಿದ್ದರು. ದಿಲ್‌ಶಾದ್ ಆಲಂ, ನೌಶದ್ ಆಲಂ ಹಾಗೂ ಆರ್.ಜಿ. ತಿಲಕ್ ಪ್ರಕರಣದಲ್ಲಿ ಮಧ್ಯವರ್ತಿಗಳಾಗಿ ಕೆಲಸ ಮಾಡಿದ್ದರು ಎಂದು ಪೊಲೀಸರು ಹೇಳಿದರು.

'52 ಎಂಜಿನಿಯರಿಂಗ್ ಅಭ್ಯರ್ಥಿಗಳ ಲಾಗಿನ್, ಪಾಸ್‌ವರ್ಡ್ ಹಾಗೂ ಸೀಕ್ರೆಟ್ ಕೀ ಅನ್ನು ಆರೋಪಿಗಳು ಅನಧಿಕೃತವಾಗಿ ಪಡೆದುಕೊಂಡಿದ್ದರು. ಅಭ್ಯರ್ಥಿಗಳ ಪರವಾಗಿ ಆರೋಪಿಗಳೇ ಆಯ್ಕೆ ನಮೂದಿಸುತ್ತಿದ್ದರು. ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಆಕಾಶ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್, ನ್ಯೂ ಹೊರೈಜಾನ್ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರದ ಕೋಟಾದಡಿ ಲಭ್ಯವಿದ್ದ ಎಂಜಿನಿಯರಿಂಗ್ ಸೀಟುಗಳನ್ನು ಬ್ಲಾಕ್ ಮಾಡಿ ಖಾಸಗಿ ಕಾಲೇಜುಗಳಿಗೆ ಲಾಭ ಮಾಡಿಕೊಟ್ಟಿದ್ದರು' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಹೊರ ರಾಜ್ಯದಲ್ಲೂ ವಂಚನೆ: 'ಸಿಇಟಿಯಲ್ಲಿ ಅರ್ಹ ಅಭ್ಯರ್ಥಿಗಳ ಮಾಹಿತಿಯನ್ನು ಇತರೆ ಆರೋಪಿಗಳಿಗೆ ಬಂಧಿತ ಅವಿನಾಶ್ ಮಾಹಿತಿ ನೀಡುತ್ತಿದ್ದ. ಬಳಿಕ ಉಳಿದ ಒಂಬತ್ತು ಮಂದಿ ವಂಚನೆ ಎಸಗುತ್ತಿದ್ದರು. ಖಾಸಗಿ ಕಾಲೇಜುಗಳಲ್ಲಿ ಸೀಟು ಕೊಡಿಸಿ ಲಕ್ಷಾಂತರ ರೂಪಾಯಿ ಪಡೆದುಕೊಳ್ಳುತ್ತಿದ್ದರು. ಗೋವಾ, ಶಿವಮೊಗ್ಗ, ದಾವಣಗೆರೆ, ಕಡೂರು ಹಾಗೂ ಬೆಂಗಳೂರಿನ ಖಾಸಗಿ ಕಾಲೇಜುಗಳಿಗೆ ಲಾಭ ಮಾಡಿಕೊಟ್ಟಿದ್ದಾರೆ' ಎಂದು ಅವರು ಹೇಳಿದರು.

₹60 ಲಕ್ಷದವರೆಗೆ ಮಾರಾಟ

ಪ್ರಮುಖ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಸೇರಿದಂತೆ ಕೆಲವು ಕೋರ್ಸ್‌ಗಳಿಗೆ ಬಹಳ ಬೇಡಿಕೆ ಇದೆ. ಅದನ್ನೇ ಬಂಡವಾಳ ಮಾಡಿಕೊಂಡಿದ್ದ ಆರೋಪಿಗಳು, ಲಕ್ಷಾಂತರ ರೂಪಾಯಿ ವಂಚಿಸಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ.

ಪ್ರತಿಭಾವಂತ ವಿದ್ಯಾರ್ಥಿಗಳ ದತ್ತಾಂಶವನ್ನು ಸಂಗ್ರಹಿಸಿಕೊಂಡ ಆರೋಪಿಗಳು, ಅವರ ಹೆಸರಲ್ಲಿ ಬಹು ಬೇಡಿಕೆಯ ಕೋರ್ಸ್‌ಗಳಲ್ಲಿ ಸೀಟುಗಳನ್ನು ಸರ್ಕಾರದ ಕೋಟಾದಡಿ ಬ್ಲಾಕ್ ಮಾಡುತ್ತಿದ್ದರು. ಕೊನೆಯ ಸುತ್ತಿನವರೆಗೂ ಸೀಟು ಹಿಡಿದಿಟ್ಟುಕೊಳ್ಳುತ್ತಿದ್ದರು.

ಅಂತಿಮ ಪ್ರಕ್ರಿಯೆ ಮುಗಿದ ನಂತರ ಆ ಸೀಟುಗಳನ್ನು ಬೇರೆ ವಿದ್ಯಾರ್ಥಿಗಳಿಗೆ ಕೊಡಿಸಲು ಮಧ್ಯವರ್ತಿಗಳಂತೆ ಕೆಲಸ ಮಾಡುತ್ತಿದ್ದರು. ಪ್ರತಿ ಸೀಟಿಗೂ ₹60 ಲಕ್ಷದವರೆಗೂ ಹಣ ಪಡೆದು ಸೀಟುಗಳನ್ನು ಮಾರಾಟ ಮಾಡುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಮತೀಯವಾದಿ ನಾಯಕರಂತಿದೆ ಪೇಜಾವರ ಶ್ರೀ ನಡೆ: ಹರಿಪ್ರಸಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ ಬದಲಾವಣೆಯ ಮುಂಚೂಣಿಯ ನಾಯಕರಂತೆ ವರ್ತಿಸುತ್ತಿದ್ದ ಪೇಜಾವರ ಮಠದ ಸ್ವಾಮೀಜಿ, ತಮ್ಮ ಹೇಳಿಕೆಗಳು ಹಾಗೂ ನಡವಳಿಕೆಗಳಿಂದ ಪ್ರಜ್ಞಾವಂತ ಸಮಾಜ ತಿರುಗಿ ಬಿದ್ದಿರುವುದನ್ನು ನೋಡಿ 'ನಾನು ಸಂವಿಧಾನ ವಿರೋಧಿ ಹೇಳಿಕೆಯನ್ನೇ ನೀಡಿಲ್ಲ' ಎಂದು ತಾವೇ ಆಡಿದ ಮಾತುಗಳನ್ನು ತಿರುಚುತ್ತಿದ್ದಾರೆ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಟೀಕಿಸಿದ್ದಾರೆ.

'ಸಮಾಜ ದಾರಿ ತಪ್ಪಿದರೆ ತಿದ್ದುವ ಹಾಗೂ ಧರ್ಮದೊಳಗಿನ ಸಹಬಾಳ್ವೆಯ ತಿರುಳನ್ನು ತಿಳಿ ಹೇಳುವ ಸ್ವಾಮೀಜಿಗಳೇ ಸಮಾಜವನ್ನು ದಾರಿತಪ್ಪಿಸುತ್ತಿರುವುದು ಸ್ವಾಸ್ಥ್ಯ ಸಮಾಜ ಒಡೆಯುವ ಹುನ್ನಾರ. ಪೇಜಾವರರ ನಡೆ ಮತೀಯವಾದಿ ಸಂಘಟನೆ ನಾಯಕರಂತೆ ಕಾಣುತ್ತಿದೆ' ಎಂದಿದ್ದಾರೆ.

'ಸಂವಿಧಾನದಡಿ ಚುನಾಯಿತ ಸರ್ಕಾರದ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿಯ ಮಾಧ್ಯಮ ವಕ್ತಾರರಂತೆ ಸ್ವಾಮೀಜಿ ಮಾತನಾಡುತ್ತಿದ್ದಾರೆ. 'ಅಲ್ಪಸಂಖ್ಯಾತರನ್ನು ಓಲೈಕೆ ಮಾಡುತ್ತಿದ್ದಾರೆ' ಎಂಬ ಅವರ ಬಹಿರಂಗ ಹೇಳಿಕೆ ಬಿಜೆಪಿ ಪಕ್ಷದ ನಿಷ್ಠೆಯನ್ನು ಸಾಬೀತು ಮಾಡುತ್ತಿರುವಂತಿದೆ. ಆಧಾರ ಇಲ್ಲದೇ ಒಂದು ಸರ್ಕಾರದ ಮೇಲೆ ಗಂಭೀರ ಆರೋಪಗಳನ್ನು ಮಾಡುವುದು ಯತಿಗಳಾದಂಥವರಿಗೆ ತರವಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಬಿ.ಕೆ. ಹರಿಪ್ರಸಾದ್

'ತಮ್ಮ ಸಂವಿಧಾನದ ವಿರೋಧಿ ನಿಲುವುಗಳಿಂದ ದಲಿತರು, ಶೋಷಿತ ಸಮುದಾಯಗಳ ಆಕ್ರೋಶ ಎದುರಿಸಲಾಗದೆ ಅಲ್ಪಸಂಖ್ಯಾತರ ವಿರುದ್ಧ ಮಾತಾಡುವ ಮೂಲಕ ಚರ್ಚೆಯನ್ನೇ ದಾರಿ ತಪ್ಪಿಸುತ್ತಿದ್ದಾರೆ. ಸಂವಿಧಾನ ಬದಲಾವಣೆಯ ಹೇಳಿಕೆ ನೀಡಿದ ಬಿಜೆಪಿ ನಾಯಕರಿಗೆ ಸಾರ್ವಜನಿಕ ಜೀವನದಲ್ಲಿ ಯೋಗ್ಯತೆಯೇ ಇಲ್ಲ ಎಂದು ಕಳೆದ ವರ್ಷವೇ ಜನರು ತಕ್ಕ ಉತ್ತರ ನೀಡಿದ್ದಾರೆ. ಅಂತಹ ದುರ್ದೈವವನ್ನು ಪೇಜಾವರ ಸ್ವಾಮೀಜಿ ಬರ ಮಾಡಿಕೊಳ್ಳದೇ ಇರಲಿ' ಎಂದು ಆಶಿಸಿದ್ದಾರೆ.

'ತಮಗೆ ಗೌರವ ನೀಡುವ ಸಂವಿಧಾನ ಬರಲಿ ಎಂದು ರಾಜ್ಯದ ಸಂವಿಧಾನದ ರಕ್ಷಕರಾಗಿರುವ ರಾಜ್ಯಪಾಲರಿಗೆ ಮನವಿ ನೀಡುವುದು ಅತ್ಯಂತ ಖಂಡನೀಯ. ಕೂಡಲೇ, ರಾಜ್ಯಪಾಲರು ಸಂವಿಧಾನ ವಿರೋಧಿ ಮನಸ್ಥಿತಿಯ ಸ್ವಾಮೀಜಿ ವಿರುದ್ಧ ಕ್ರಮಕ್ಕೆ ಮುಂದಾಗಬೇಕು' ಎಂದು ಹರಿಪ್ರಸಾದ್ ಒತ್ತಾಯಿಸಿದ್ದಾರೆ.



ಮಹಿಳೆಯರ ಸಾರಥ್ಯ...

ವಿಜಯಪುರ ಜಿಲ್ಲೆಯ ಸಿಂದಗಿಯ ಸಾರಂಗಮಠ-ಗಚ್ಚಿನಮಠದ ವೀರಭದ್ರೇಶ್ವರ ಹಾಗೂ ಭದ್ರಕಾಳಿ ಅಮ್ಮನವರ ಜಾತ್ರಾ ಮಹೋತ್ಸವದ ಪ್ರಯುಕ್ತ ಮಹಿಳೆಯರು ಮಂಗಳವಾರ ಬೆಳ್ಳಿ ರಥ ಎಳೆದರು. ಏಳು ವರ್ಷಗಳಿಂದ ಮಹಿಳೆಯರೇ ಬೆಳ್ಳಿ ರಥ ಎಳೆಯುತ್ತಿರುವುದು ವಿಶೇಷ

'ಸಂವಿಧಾನ ದ್ರೋಹಿ- ಜನವಿರೋಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನದ ಬಗ್ಗೆ ಗೌರವ ಇಲ್ಲದವರ ಕೈಗೆ ಅಧಿಕಾರ ಸಿಕ್ಕರೆ, ಎಷ್ಟೇ ಒಳ್ಳೆಯ ಸಂವಿಧಾನವಿದ್ದರೂ ಸಮಾಜದ ಮೇಲಾಗುವ ಪರಿಣಾಮ ಕೆಟ್ಟದಾಗಿರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಸಂವಿಧಾನ' ಓದು ಅಭಿಯಾನದ ಅಂಗವಾಗಿ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಿದ ನಂತರ ವಿದ್ಯಾರ್ಥಿಗಳಿಗೆ ಸಂವಿಧಾನದ 'ಪಾಠ' ಹೇಳಿಕೊಟ್ಟರು.

'ಸರ್ಕಾರ ಯಾರ ಕೈಯಲ್ಲಿದೆ ಎನ್ನುವುದರ ಆಧಾರದ ಮೇಲೆ ಸಂವಿಧಾನದ ಶ್ರೇಷ್ಠತೆ ಮತ್ತು ವಿಫಲತೆ ನಿರ್ಧಾರವಾಗುತ್ತದೆ' ಎಂದು ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಹೇಳಿದ್ದರು. ಕುವೆಂಪು ಅವರು ಸಂವಿಧಾನದ ಆಶಯವೇ 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಉಲ್ಲೇಖಿಸಿದ್ದರು ಎಂದು ಸ್ಮರಿಸಿದರು.

ಸಂವಿಧಾನದ ಪ್ರಸ್ತಾವನೆಯಲ್ಲಿಯೇ ಸಂವಿಧಾನದ ಸಾರಾಂಶ ಇದೆ. ಜಾತ್ಯತೀತ, ಸಾಮಾಜಿಕ ನ್ಯಾಯ ಎರಡೂ ಮೂಲ ಸಂವಿಧಾನದಲ್ಲಿ ಇರಲಿಲ್ಲ. ಬಳಿಕ ಸೇರ್ಪಡೆಯಾಯಿತು. ಜಾತ್ಯತೀತ, ಸಾಮಾಜಿಕ ನ್ಯಾಯ ಪದಗಳನ್ನು ಕೈಬಿಡಬೇಕು ಎಂದು ಕೆಲವರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದರು. ಆದರೆ, ಕೋರ್ಟ್ ಒಪ್ಪಲಿಲ್ಲ, ನ್ಯಾಯವನ್ನು ಎತ್ತಿ ಹಿಡಿಯಿತು ಎಂದರು.

'ಭಾರತ ಬಹುತ್ವದ ದೇಶ. ಎಲ್ಲಾ ಜಾತಿ, ಧರ್ಮದವರೂ ಸಹಬಾಳ್ವೆಯ ಜೀವನ ನಡೆಸುತ್ತಿದ್ದಾರೆ. ಸಮಾನವಾಗಿ ನಡೆಸಿಕೊಳ್ಳುವುದು ನಮ್ಮ ದೇಶದ ಗುಣ. ಇದೇ ಸಂವಿಧಾನದ ಮೌಲ್ಯ. ಭಾರತದ ಜಾತಿ ವ್ಯವಸ್ಥೆಯಿಂದ ಅಸಮಾನತೆ ಸೃಷ್ಟಿಯಾಗಿದೆ. ಜಾತಿ ಆಧಾರದ ಮೇಲೆ ಒಬ್ಬರ ಯೋಗ್ಯತೆ ಅಳೆಯುವುದು ಅನಾಗರಿಕತನ. ಸಂವಿಧಾನ ನೀಡಿದ ಹಕ್ಕು, ಸ್ವಾತಂತ್ರ್ಯ ಕುರಿತು ಎಲ್ಲರೂ ತಿಳಿದುಕೊಳ್ಳಬೇಕು' ಎಂದರು.

'ಸಂವಿಧಾನ ದ್ರೋಹಿಗಳು ಸಮಾಜ ದ್ರೋಹಿಗಳೂ, ಜನ ವಿರೋಧಿಗಳೂ ಆಗಿರುತ್ತಾರೆ. ಜಾತಿ, ಧರ್ಮದ ಹೆಸರಲ್ಲಿ ಒಬ್ಬರನ್ನು ಅಗೌರವದಿಂದ ಕಾಣುವುದು ತಪ್ಪು. ಬಸವಣ್ಣ 850 ವರ್ಷಗಳ ಹಿಂದೆಯೇ ಜಾತಿ ವ್ಯವಸ್ಥೆ ಮತ್ತು ಕರ್ಮ ಸಿದ್ಧಾಂತವನ್ನು ಧಿಕ್ಕರಿಸಿದ್ದಾರೆ. ಆದರೂ, ಜಾತಿ ವ್ಯವಸ್ಥೆ ಸಂಪೂರ್ಣ ನಿರ್ಮೂಲನೆಯಾಗಿಲ್ಲ ಎಂದರು.

ಮುಖ್ಯಮಂತ್ರಿಯವರ 'ಪಾಠ'ವನ್ನು ವಿದ್ಯಾರ್ಥಿಗಳು ಆಲಿಸಿದರು. ಹಲವು ಪ್ರಶ್ನೆಗಳ ಮೂಲಕ ಸಂವಿಧಾನದ ಬಗ್ಗೆ ಇನ್ನಷ್ಟು ಪಡೆದರು. ಮಕ್ಕಳ ಪ್ರಶ್ನೆಗಳಿಗೆ ಸಿದ್ದರಾಮಯ್ಯ ಶಿಕ್ಷಕರ ರೀತಿ ಉತ್ತರ ನೀಡಿದರು.

ಕನ್ನಡ ಅನುಷ್ಠಾನ: ಡಿ.17ರಂದು ದೆಹಲಿಗೆ ನಿಯೋಗ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕನ್ನಡ ಭಾಷೆಯ ಅನುಷ್ಠಾನ ಮತ್ತು ಬೆಳವಣಿಗೆ ಬಗ್ಗೆ ಕೇಂದ್ರದ ಸಚಿವರೊಂದಿಗೆ ಚರ್ಚಿಸಲು ಡಿ.17ರಂದು ನವದೆಹಲಿಗೆ ನಿಯೋಗ ಹೋಗಲಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ನಿಯೋಗದಲ್ಲಿ ಎಲ್. ಹನುಮಂತಯ್ಯ, ಬಿ.ಕೆ. ಚಂದ್ರಶೇಖರ್, ವಿ.ಆರ್. ಸುದರ್ಶನ್ ಮೊದಲಾದವರು ಇರಲಿದ್ದಾರೆ. ಬ್ಯಾಂಕುಗಳಲ್ಲಿ ಕನ್ನಡ ಅನುಷ್ಠಾನದ ಬಗ್ಗೆ ಸಚಿವೆ ನಿರ್ಮಲಾ ಸೀತಾರಾಮನ್ ಜೊತೆ ಚರ್ಚಿಸಲಾಗುವುದು' ಎಂದರು.

'ಭಾರತೀಯ ಭಾಷಾ ವಿಶ್ವವಿದ್ಯಾಲಯ ಸ್ಥಾಪಿಸಿ, ಶಾಸ್ತ್ರೀಯ ಭಾಷೆಗಳ ಬಗ್ಗೆ ಅಧ್ಯಯನ ನಡೆಸಲು 10 ಕೇಂದ್ರಗಳನ್ನು ತೆರೆಯುವುದಾಗಿ ಕೇಂದ್ರ ಸರ್ಕಾರವು ಘೋಷಿಸಿದೆ. ಇದು ಆರಂಭವಾದರೆ, ಕನ್ನಡ ಸೇರಿದಂತೆ ಎಲ್ಲ ಶಾಸ್ತ್ರೀಯ ಭಾಷೆಗಳ ಬೆಳವಣಿಗೆಯನ್ನು ಕೇಂದ್ರವೇ ನೋಡಿಕೊಳ್ಳುತ್ತದೆ. ಆಗ ರಾಜ್ಯ ಸರ್ಕಾರದ ಪಾತ್ರ ಇರುವುದಿಲ್ಲ. ಬೇಕಾದರೆ ಪ್ರತ್ಯೇಕ ಕನ್ನಡ ಶಾಸ್ತ್ರೀಯ ಕೇಂದ್ರವನ್ನು ಆರಂಭಿಸಬಹುದು. ಆ ಬಗ್ಗೆ ಸ್ಪಷ್ಟತೆ ಪಡೆದುಕೊಳ್ಳಲು ಮಾನವ ಸಂಪನ್ಮೂಲ ಸಚಿವರನ್ನು ಭೇಟಿ ಮಾಡಲಾಗುವುದು' ಎಂದರು.

'8 ವರ್ಷಗಳಲ್ಲಿ ಕನ್ನಡ ಶಾಸ್ತ್ರಿಯ ಭಾಷೆಗೆ ಸಂಬಂಧಿಸಿ ಸುಮಾರು ₹6 ಕೋಟಿ ಬಿಡುಗಡೆಯಾಗಿದೆ. ಸಂಸ್ಕೃತಕ್ಕೆ ₹548 ಕೋಟಿ, ತಮಿಳಿಗೆ ₹250 ಕೋಟಿ ಬಿಡುಗಡೆಯಾಗಿದೆ. ಕೇಂದ್ರ ಸರ್ಕಾರ ಸೂಚಿಸಿದ 6 ನಿಯಮಗಳನ್ನು ರಾಜ್ಯ ಸರ್ಕಾರ ಪಾಲಿಸಲು ಆಗಿಲ್ಲ. ಹೀಗಾಗಿ ಶಾಸ್ತ್ರೀಯ ಭಾಷೆಯ ಸಮಸ್ಯೆ ಹಾಗೆಯೇ ಉಳಿದಿದೆ' ಎಂದರು.

'ರಾಜ್ಯದ ಎಲ್ಲ ಸಂಸದರನ್ನು ದೆಹಲಿಯಲ್ಲಿ ಭೇಟಿ ಮಾಡಿ, ಕನ್ನಡಪರ ವಿಷಯಗಳು ಬಂದಾಗ ಕೇಂದ್ರದ ಮಟ್ಟದಲ್ಲಿ ಹೋರಾಡುವಂತೆ ಮನವಿ ಮಾಡುತ್ತೇವೆ. ಜೆಎನ್‌ಯು ಮತ್ತು ಕರ್ನಾಟಕ ಭವನಕ್ಕೆ ನಿಯೋಗ ಭೇಟಿ ನೀಡಲಿದೆ' ಎಂದರು.

> **ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ರಾಜ್ಯ ಸರ್ಕಾರ ಕೊಡುವ ₹25 ಕೋಟಿಯಲ್ಲಿ ಸ್ವಲ್ಪ ಹಣ ಉಳಿಸಿ ಮಂಡ್ಯದಲ್ಲಿ 'ಕನ್ನಡ ಭವನ' ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿದ್ದೇವೆ**
> **ಪುರುಷೋತ್ತಮ ಬಿಳಿಮಲೆ**
> ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಚುನಾವಣಾ ಬಾಂಡ್ ದುರ್ಬಳಕೆ ಆರೋಪ
ಕಟೀಲ್ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕಾಣೆಯೇ ಇಲ್ಲದ, ಕಿಂಚಿತ್ತೂ ಅಪರಾಧಿಕ ಅಂಶಗಳನ್ನೇ ಒಳಗೊಳ್ಳದ, ನೋಡುತ್ತಿದ್ದಂತೆಯೇ ಇದೊಂದು ಅರ್ಥಹೀನ ಎನ್ನಿಸುವಂತಹ ಈ ಕ್ರಿಮಿನಲ್ ದೂರಿನಲ್ಲಿ ಯಾವುದೇ ಹುರುಳಿಲ್ಲ' ಎಂದು ಅರ್ಜಿದಾರರ ನಡೆಯನ್ನು ತೀಕ್ಷ್ಣವಾಗಿ ಕುಟುಕಿರುವ ಹೈಕೋರ್ಟ್, 'ಚುನಾವಣಾ ಬಾಂಡ್‌ಗಳ ಮೂಲಕ ಬಹುಕೋಟಿ ದೇಣಿಗೆ ಪಡೆಯಲು ಜಾರಿ ನಿರ್ದೇಶನಾಲಯವನ್ನು (ಇ.ಡಿ) ದುರ್ಬಳಕೆ ಮಾಡಿಕೊಂಡ ಆರೋಪದಡಿ ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ವಿರುದ್ಧ ತಿಲಕ್ ನಗರ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್ ರದ್ದುಪಡಿಸಿದೆ.

ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ನಳಿನ್ ಕಮಾರ್ ಕಟೀಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು, 'ಶಾಸಕರು– ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರ ಪ್ರಕಟಿಸಿದರು.

ಜನಪ್ರತಿನಿಧಿಗಳ ಮ್ಯಾಜಿಸ್ಟ್ರೇಟ್, 42ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಅವರ ಆದೇಶದ ಅನುಸಾರ ದಾಖಲಾಗಿದ್ದ ಎಫ್‌ಐಆರ್ ರದ್ದುಪಡಿಸಿ ಆದೇಶಿಸಿದರು.

ಅರ್ಜಿದಾರ ಆದರ್ಶ್ ಅಯ್ಯರ್ ಪರ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಪ್ರಶಾಂತ್ ಭೂಷಣ್, 'ದೂರುದಾರರ ಆರೋಪಗಳನ್ನು ಗಮನಿಸಿದರೆ ಇದು ಸುಲಿಗೆಗೆ ಅತ್ಯುತ್ತಮ ಉದಾಹರಣೆ ಎನಿಸಿದೆ. ಸುಲಿಗೆಗೆ ಗುರಿಯಾಗಿರುವ ವ್ಯಕ್ತಿಯೂ ಅಪರಾಧದಿಂದ ಲಾಭ ಪಡೆದಿದ್ದಾರೆ. ಬಿಜೆಪಿಗೆ ಚುನಾವಣಾ ಬಾಂಡ್ ಮೂಲಕ ದೇಣಿಗೆ ನೀಡಿದ ಬಳಿಕ ಇ.ಡಿ ಅಂಥವರ ವಿರುದ್ಧ ಆದಾಯ ತೆರಿಗೆ ಇಲಾಖೆಯ ತನಿಖೆಯನ್ನು ಸ್ಥಗಿತಗೊಳಿಸಲಾಗಿದೆ. ಈ ಕಾರಣಕ್ಕಾಗಿ ಅವರು ದೂರು ನೀಡಿಲ್ಲ. ಶ್ರೀಸಾಮಾನ್ಯರೇ ಈ ಸಂಬಂಧ ದೂರು ನೀಡಬಹುದು' ಎಂದು ಮಂಡಿಸಿದ್ದ ವಾದವನ್ನು ನ್ಯಾಯಪೀಠ ತಳ್ಳಿ ಹಾಕಿದೆ.

'ಈ ಪ್ರಕರಣದಲ್ಲಿ ಸಂತ್ರಸ್ತರ್‍ಯಾರೂ ನಮಗೆ ಅನ್ಯಾಯವಾಗಿದೆ ಎಂದು ಕೋರ್ಟ್ ಮೆಟ್ಟಿಲೇರಿಲ್ಲ. ದೂರುದಾರ ಆದರ್ಶ ಅಯ್ಯರ್ ಅವರಿಗಂತೂ ಯಾವುದೇ ಹಾನಿಯಾಗಿಲ್ಲ. ಹೀಗಾಗಿ, ಸುಲಿಗೆ ನಡೆದಿದೆ ಎಂಬ ಅಯ್ಯರ್ ಆರೋಪ ಮೇಲ್ನೋಟಕ್ಕೆ ಆಧಾರರಹಿತವಾಗಿದೆ. ಅಂತೆಯೇ, ಭಾರತೀಯ ದಂಡ ಸಂಹಿತೆ–1860ರ ಕಲಂ 384ರ ವ್ಯಾಖ್ಯಾನವು ಪ್ರತಿಯೊಂದು ಪ್ರಕರಣದ ವಾಸ್ತವಿಕ ವಿಚಾರದ ಮೇಲೆ ಬದಲಾಗುವುದಿಲ್ಲ. ಕೇವಲ ರಂಜನೆಗಾಗಿ ಪ್ರಕರಣ ದಾಖಲಿಸುವ ನಡೆ ಒಪ್ಪತಕ್ಕದ್ದಲ್ಲ' ಎಂಬ ಕಟೀಲ್ ಪರ ಹಿರಿಯ ವಕೀಲ ಕೆ.ಜಿ. ರಾಘವನ್ ಮಂಡಿಸಿದ್ದ ವಾದವನ್ನು ನ್ಯಾಯಪೀಠ ಎತ್ತಿ ಹಿಡಿದಿದೆ.

'ಜನಾಧಿಕಾರ ಸಂಘರ್ಷ ಪರಿಷತ್' ಸಹ ಅಧ್ಯಕ್ಷ ಆದರ್ಶ ಅಯ್ಯರ್ ಸಲ್ಲಿಸಿದ್ದ ಖಾಸಗಿ ದೂರಿನಲ್ಲಿ 1ನೇ ಆರೋಪಿಯಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, 2ನೇ ಆರೋಪಿಯಾಗಿ ಇ.ಡಿ ಅಧಿಕಾರಿ, 3ನೇ ಆರೋಪಿಯಾಗಿ ಬಿಜೆಪಿ ಘಟಕದ ಪದಾಧಿಕಾರಿಗಳು, 4ನೇ ಆರೋಪಿಯಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಇತರರ ವಿರುದ್ಧ ದೂರು ದಾಖಲಿಸಲಾಗಿತ್ತು.



ಮುಖ್ಯಾಂಶಗಳು
- ಸುಲಿಗೆ ನಡೆದಿದೆ ಎಂಬ ಆರೋಪ ಆಧಾರರಹಿತ
- ಕೇವಲ ರಂಜನೆಗಾಗಿ ಪ್ರಕರಣ ದಾಖಲಿಸುವ ನಡೆ ಒಪ್ಪತಕ್ಕದಲ್ಲ: ನ್ಯಾಯಪೀಠ
- ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ವಿರುದ್ಧ ದಾಖಲಾಗಿದ್ದ ಪ್ರಕರಣ

ಮೊದಲ ಬಾರಿಗೆ ಶಿರಸಿಯಲ್ಲಿ ಅನುಷ್ಠಾನ

ಬಗರ್ ಹುಕುಂ ಆ್ಯಪ್: ನಾಲ್ವರಿಗೆ ಇಂದು 'ಹಕ್ಕುಪತ್ರ'

• ಗಣಪತಿ ಹೆಗಡೆ

ಕಾರವಾರ: ಸರ್ಕಾರಿ ಭೂಮಿಯಲ್ಲಿ ಹಲವು ದಶಕದ ಸಾಗುವಳಿ ಮಾಡಿಕೊಂಡಿರುವ ಕುಟುಂಬಗಳಿಗೆ ಜಮೀನು ಮಂಜೂರು ಮಾಡಿಕೊಡಲು ಕಂದಾಯ ಇಲಾಖೆ ಪರಿಚಯಿಸಿದ್ದ 'ಬಗರ್ ಹುಕುಂ ತಂತ್ರಾಂಶ' (ಆ್ಯಪ್) ಫಲಪ್ರದವಾಗಿದೆ. ರಾಜ್ಯದಲ್ಲೇ ಮೊದಲ ಬಾರಿಗೆ ಬುಧವಾರ ಶಿರಸಿ ತಾಲ್ಲೂಕಿನ ನಾಲ್ವರು ರೈತರಿಗೆ ಹಕ್ಕುಪತ್ರ (ಡಿಜಿಟಲ್ ಸಾಗುವಳಿ ಚೀಟಿ) ಸಿಗಲಿದೆ.

'ಬಗರ್ ಹುಕುಂ ತಂತ್ರಾಂಶ' (ಆ್ಯಪ್) ಮೂಲಕ ಸಕ್ರಮಗೊಳಿಸುವ ಪ್ರಕ್ರಿಯೆ ಆರಂಭಗೊಂಡ ವರ್ಷದಲ್ಲೇ ಶಿರಸಿ ತಾಲ್ಲೂಕಿನಲ್ಲಿ ನಾಲ್ವರು ಸಾಗುವಳಿದಾರರಿಗೆ ಪೋಡಿ ಸಹಿತ ಹಕ್ಕು ಪತ್ರ ಸಿಗಲಿದೆ. ಅಚನಳ್ಳಿ ಗ್ರಾಮದ ಸರ್ವೆ ನಂ.45ರಲ್ಲಿನ 1.24 ಎಕರೆ ಜಾಗವನ್ನು ಪೋಡಿ ಮಾಡಿ, ಪಹಣಿಯಲ್ಲಿ ರೈತರ ಹೆಸರು ನಮೂದಿಸಲಾಗಿದೆ.

ಗ್ರಾಮದ ಪೂಜಾ ಕಾನಡೆ, ಈಶ್ವರ ಕಾನಡೆ, ವಿನಾಯಕ ಜೋಗಿ ಮತ್ತು ರಾಘವೇಂದ್ರ ಕಾನಡೆ ಎಂಬ ಪರಿಶಿಷ್ಟರ ಕುಟುಂಬಕ್ಕೆ ಹಕ್ಕುಪತ್ರ ಸಿಗಲಿದೆ.

'ರೈತರನ್ನು ಕಚೇರಿಗೆ ಅಲೆದಾಡಿಸದೆ, ಪ್ರತಿ ಹಂತದಲ್ಲೂ ಅಧಿಕಾರಿಗಳೇ ಅವರ ಮನೆ ಬಾಗಿಲಿಗೆ ತೆರಳಿ ದಾಖಲೆ ಸಂಗ್ರಹಿಸಿ, ತಂತ್ರಾಂಶದ ಮೂಲಕ ದಾಖಲೆಗಳನ್ನು ಕ್ರೋಡೀಕರಿಸಿ ಸಾಗುವಳಿ ಚೀಟಿ ನೀಡುತ್ತಿರುವುದು ಇದೇ ಮೊದಲು' ಎಂದು ಕಂದಾಯ ಇಲಾಖೆ ಹೇಳಿದೆ.

'ನಮೂನೆ 57ರಡಿ 'ಬಗರ್ ಹುಕುಂ ತಂತ್ರಾಂಶ'ದಲ್ಲಿ ಸಲ್ಲಿಕೆಯಾದ ಅರ್ಜಿಯನ್ನು ಗ್ರಾಮ ಆಡಳಿತಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ಜಿಯೋ ಫೆನ್ಸಿಂಗ್ ಮೂಲಕ ಗಡಿ ಗುರುತಿಸಿದ್ದರು. ಕಂದಾಯ ನಿರೀಕ್ಷಕರಿಂದ ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ, ತಹಶೀಲ್ದಾರ್ ಮಟ್ಟದಲ್ಲಿ ಸಾಗುವಳಿಯ ಕುರಿತಾಗಿ ಎರಡು ಹಂತದಲ್ಲಿ ಪರಿಶೀಲನೆ ನಡೆದಿದ್ದವು. ತಕರಾರು ಇಲ್ಲವೆಂದು ದೃಢಪಟ್ಟ ಬಳಿಕ ಶಾಸಕರ ಅಧ್ಯಕ್ಷತೆಯ ಬಗರ್ ಹುಕುಂ ಸಮಿತಿಯಲ್ಲಿ ರೈತರಿಗೆ ಜಮೀನು ಮಂಜೂರು ಮಾಡಲು ನಿರ್ಧರಿಸಲಾಯಿತು' ಎಂದು ಶಿರಸಿ ತಹಶೀಲ್ದಾರ್ ಶ್ರೀಧರ ಮುಂದಲಮನಿ ತಿಳಿಸಿದರು.

ಶಿರಸಿಯ ಅಂಬೇಡ್ಕರ್ ಭವನದಲ್ಲಿ ಮಧ್ಯಾಹ್ನ 3.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ನಾಲ್ವರು ರೈತರಿಗೆ ಡಿಜಿಟಲ್ ಸಾಗುವಳಿ ಚೀಟಿ ವಿತರಿಸುವರು. ಶಾಸಕ ಭೀಮಣ್ಣ ನಾಯ್ಕ, ಜಿಲ್ಲಾ ಮತ್ತು ತಾಲ್ಲೂಕು ಆಡಳಿತದ ಅಧಿಕಾರಿಗಳು ಪಾಲ್ಗೊಳ್ಳುವರು.



> **ರೈತರಿಗೆ ಭೂಮಿ ಹಕ್ಕು ತ್ವರಿತವಾಗಿ ಮಂಜೂರು ಮಾಡುವಲ್ಲಿ ರಾಜ್ಯ ಸರ್ಕಾರದ ಪರಿಣಾಮಕಾರಿ ಆಡಳಿತ ನೆರವಾಗಿದೆ. ಇದರಿಂದ ಕೃಷಿಕರಿಗೆ ಅನುಕೂಲ ಆಗಲಿದೆ.**
> **ಭೀಮಣ್ಣ ನಾಯ್ಕ**
> ಶಾಸಕ ಹಾಗೂ ಅಧ್ಯಕ್ಷ, ಬಗರ್ ಹುಕುಂ ಸಮಿತಿ



> **ಬಗರ್ ಹುಕುಂ ತಂತ್ರಾಂಶದ ಮೂಲಕ ಪ್ರತಿ ಹಂತದಲ್ಲಿ ದಾಖಲೆ ಕ್ರೋಡೀಕರಣಕ್ಕೆ ಅನುಕೂಲವಾಗಿದೆ. ಅರ್ಜಿದಾರರ ಪ್ರತಿ ಮಾಹಿತಿ ಸಂಗ್ರಹಿಸಲು ಸಾಧ್ಯವಾಗಿದೆ.**
> **ಶ್ರೀಧರ ಮುಂದಲಮನಿ**
> ತಹಶೀಲ್ದಾರ್, ಶಿರಸಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕಟ್ಟಡಗಳ ನಿರ್ಮಾಣದ ಸಮಯವನ್ನೂ ವೆಚ್ಚವನ್ನೂ ಕಡಿಮೆಗೊಳಿಸಲು ಕೃತಕ ಬುದ್ಧಿಮತ್ತೆ ನೆರವಾಗಬಲ್ಲದು



ಆಳ–ಅಗಲ
ರಾಷ್ಟ್ರಪತಿ ಆಡಳಿತ ಜಾರಿ ಏಕಿಲ್ಲ?

ಕೊಡಗು, ಮಂಗಳೂರಲ್ಲಿ ಜಡಿ ಮಳೆ 5

ಉಪಮುಖ್ಯಮಂತ್ರಿ: ಶಿಂದೆ ಒಪ್ಪಿಗೆ? 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,845 ▲	24,457 ▲	₹80,230 (ಬೆಂಗಳೂರು) ▲	₹94,700 (ಬೆಂಗಳೂರು) ▲	84.68 ▼

ಜಾರಿ ನಿರ್ದೇಶನಾಲಯದ ಆಂತರಿಕ ವರದಿಯಲ್ಲಿ ಉಲ್ಲೇಖ • ಲೋಕಾಯುಕ್ತಕ್ಕೂ ಮಾಹಿತಿ ರವಾನೆ

‘ಸಿ.ಎಂ ಪತ್ನಿಗೆ ಸೈಟ್; ಹಲವು ಅಕ್ರಮ’

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ನವದೆಹಲಿ/ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮುಡಾ) 14 ಬದಲಿ ನಿವೇಶನಗಳನ್ನು ಹಂಚಿಕೆ ಮಾಡುವಲ್ಲಿ ಹಲವು ಅಕ್ರಮಗಳು ನಡೆದಿವೆ. ಅಷ್ಟೇ ಅಲ್ಲದೆ, ಮುಡಾದಲ್ಲಿ ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ನಿಯಮಬಾಹಿರವಾಗಿ ಹಂಚಿಕೆ ಮಾಡಲಾಗಿದೆ’ ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಹೇಳಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತವೂ ತನಿಖೆ ನಡೆಸುತ್ತಿದೆ. ಇ.ಡಿಯು ತನ್ನ ತನಿಖೆಯ ಕೆಲ ಮಾಹಿತಿಗಳನ್ನು ಒಳಗೊಂಡ ವರದಿಯನ್ನು ಲೋಕಾಯುಕ್ತ ತನಿಖಾಧಿಕಾರಿಗಳಿಗೆ ಐದು ದಿನಗಳ ಹಿಂದೆ ನೀಡಿದೆ ಎಂದು ಮೂಲಗಳು ಖಚಿತಪಡಿಸಿವೆ. ಈ ವರದಿಯ ಕೆಲ ಭಾಗಗಳು ಸುದ್ದಿಸಂಸ್ಥೆಗಳಿಗೆ ಸೋರಿಕೆಯಾಗಿದ್ದು, ಅವುಗಳಲ್ಲಿ ಯಾವ ಹಂತಗಳಲ್ಲಿ ಅಕ್ರಮ ನಡೆದಿದೆ ಎಂಬುದನ್ನು ತನಿಖಾಧಿಕಾರಿಗಳು ವಿವರಿಸಿದ್ದಾರೆ.

‘ಕರ್ತವ್ಯ ಲೋಪ, ನಿಯಮ ಉಲ್ಲಂಘನೆ, ಸಹಿಗಳ ನಕಲಿ, ದಾಖಲೆ ತಿದ್ದುವಿಕೆ ಮತ್ತು ಸಾಕ್ಷ್ಯನಾಶದಂತಹ ಅಕ್ರಮಗಳು ನಡೆದಿವೆ’ ಎಂದು ಇ.ಡಿ ಹೇಳಿದೆ.

‘ಕೆಸರೆ ಗ್ರಾಮದ 3 ಎಕರೆ 16 ಗುಂಟೆ ಜಮೀನನ್ನು ಭೂಸ್ವಾಧೀನದಿಂದ ಕೈಬಿಡುವಲ್ಲಿ ಅಕ್ರಮ ನಡೆದಿದೆ. ದಾಖಲೆ ಪರಿಶೀಲನೆ, ಸ್ಥಳಭೇಟಿ ಪರಿಶೀಲನೆಯಲ್ಲಿ ಲೋಪಗಳಾಗಿವೆ. ಡಿನೋಟಿಫೈ ಪ್ರಕ್ರಿಯೆ ನಡೆಯುವಾಗ ಸಿದ್ದರಾಮಯ್ಯ ಅವರು ರಾಜ್ಯದ ಉಪಮುಖ್ಯಮಂತ್ರಿ ಆಗಿದ್ದರು’ ಎಂಬುದನ್ನು ಇ.ಡಿ ಪುನರುಚ್ಚರಿಸಿದೆ.

‘ಈ ಜಮೀನನ್ನು ಮಾರಾಟ ಮಾಡುವಲ್ಲಿ, ಮಲ್ಲಿಕಾರ್ಜುನ ಸ್ವಾಮಿ ಖರೀದಿಸುವಲ್ಲಿ ನಿಯಮಗಳ ಉಲ್ಲಂಘನೆಯಾಗಿವೆ. ಅನಂತರ ಭೂಪರಿವರ್ತನೆ ವೇಳೆ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕ, ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಯಿಂದ ಕರ್ತವ್ಯ ಲೋಪಗಳಾಗಿವೆ’ ಎಂದು ಇ.ಡಿ ವಿವರಿಸಿದೆ.

10ನೇ ಪುಟ ನೋಡಿ

1,094 ನಿವೇಶನ ಅಕ್ರಮ ಹಂಚಿಕೆ ₹700 ಕೋಟಿ ಅಕ್ರಮದ ಮೊತ್ತ

‘ಪಾರ್ವತಿ ಅವರಿಗೆ 14 ನಿವೇಶನಗಳ ಹಂಚಿಕೆಗಷ್ಟೇ ಮುಡಾದಲ್ಲಿನ ಅಕ್ರಮ ಸೀಮಿತವಾಗಿಲ್ಲ. ಬದಲಿಗೆ ₹700 ಕೋಟಿ ಮೌಲ್ಯದ 1,094 ನಿವೇಶನಗಳನ್ನು ನಿಯಮಬಾಹಿರವಾಗಿ ಅನರ್ಹರಿಗೆ ಹಂಚಿಕೆ ಮಾಡಲಾಗಿದೆ. ದೊಡ್ಡ ಪ್ರಮಾಣದ ಹಗರಣ ನಡೆದಿದೆ’ ಎಂದು ಇ.ಡಿ ಹೇಳಿದೆ.

‘ಪಾರ್ವತಿ ಅವರ ಪ್ರಕರಣದ ತನಿಖೆ ನಡೆಸುವಾಗ ಹಲವು ದಾಖಲೆಗಳು ಲಭ್ಯವಾಗಿದ್ದು, ಅಕ್ರಮದ ಪರಿಯನ್ನು ಬಿಚ್ಚಿಟ್ಟಿವೆ. ಬೇನಾಮಿ ವ್ಯಕ್ತಿಗಳ ಹೆಸರಿನಲ್ಲಿ ಅರ್ಜಿಗಳನ್ನು ಸೃಷ್ಟಿಸಿ ಮುಡಾಗೆ ಸಲ್ಲಿಸಲಾಗಿದೆ. ಹೀಗೆ 1,094 ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಅಂತಿಮವಾಗಿ ಅವು ಕೆಲ ಬಿಲ್ಡರ್‌ಗಳು ಮತ್ತು ಪ್ರಭಾವಿ ವ್ಯಕ್ತಿಗಳ ಪಾಲಾಗಿವೆ’ ಎಂದು ಹೇಳಿದೆ.

‘ಆ ಬಿಲ್ಡರ್‌ಗಳು ಮತ್ತು ಪ್ರಭಾವಿಗಳ ಕುರಿತು ಇನ್ನಷ್ಟು ತನಿಖೆಯ ಅಗತ್ಯವಿದ್ದು, ಅವುಗಳ ವಿವರ ಬಹಿರಂಗವಾಗಿಲ್ಲ’ ಎಂದು ಮೂಲಗಳು ಹೇಳಿವೆ.

10ನೇ ಪುಟ ನೋಡಿ

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಅವರ ವಿಚಾರಣೆ

ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ), ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಅವರನ್ನು ಮಂಗಳವಾರ ವಿಚಾರಣೆಗೆ ಒಳಪಡಿಸಿದೆ. ಮಂಗಳವಾರ ಬೆಳಿಗ್ಗೆ ವಿಚಾರಣೆಗೆ ಹಾಜರಾಗುವಂತೆ ದೀಪಾ ಅವರಿಗೆ ಇ.ಡಿ ಅಧಿಕಾರಿಗಳು ಸೋಮವಾರ ಸಮನ್ಸ್ ನೀಡಿದ್ದರು. ಅದರಂತೆ ಶಾಂತಿನಗರದಲ್ಲಿರುವ ಇ.ಡಿ ಕಚೇರಿಗೆ ಅವರು ಹಾಜರಾದರು. ಆರು ಗಂಟೆ ವಿಚಾರಣೆ ಎದುರಿಸಿ, ನಂತರ ಮರಳಿದರು.

‘ನಗರಾಭಿವೃದ್ಧಿ ಇಲಾಖೆ ಕಚೇರಿಯಲ್ಲಿನ ಕೆಲ ಕಡತಗಳನ್ನು ತನಿಖಾಧಿಕಾರಿಗಳು ಕೇಳಿದ್ದರು. ದೀಪಾ ಅವರು ದಾಖಲೆಗಳನ್ನು ಸಲ್ಲಿಸಿದ್ದಾರೆ. 50:50ರ ಅನುಪಾತದಲ್ಲಿ ಪರಿಹಾರ ನಿವೇಶನ ಹಂಚಿಕೆ ನಿಯಮ ಬದಲಾವಣೆ ಮತ್ತು ಈ ನಿಯಮದಂತೆ ನಿವೇಶನ ಹಂಚಲಾದ 1,000ಕ್ಕೂ ಹೆಚ್ಚು ಪ್ರಕರಣಗಳಿಗೆ ಸಂಬಂಧಿಸಿದಂತೆ ದಾಖಲೆಗಳು ತಾಳೆಯಾಗುತ್ತಿರಲಿಲ್ಲ.

10ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬಿಜೆಪಿ ಸಭೆಯಲ್ಲಿ ಬೇಗುದಿ ಸ್ಫೋಟ

ದೆಹಲಿಯಲ್ಲಿ ಬೀಡುಬಿಟ್ಟಿರುವ ಬಿಜೆಪಿ ಭಿನ್ನಮತೀಯರ ಗುಂಪಿನ ನಾಯಕ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಬುಧವಾರ ಪಕ್ಷದ ರಾಷ್ಟ್ರೀಯ ಶಿಸ್ತು ಸಮಿತಿ ಸದಸ್ಯ ಓಂಪಾಠಕ್ ಅವರನ್ನು ಭೇಟಿ ಮಾಡಿ ಶೋಕಾಸ್ ನೋಟಿಸ್‌ಗೆ ಉತ್ತರ ನೀಡುವುದರ ಜತೆ, ಬಿ.ವೈ.ವಿಜಯೇಂದ್ರ ವಿರುದ್ಧ ದೂರು ನೀಡಲು ಸಜ್ಜಾಗಿದ್ದಾರೆ. ಇತ್ತ ಬೆಂಗಳೂರಿನಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಅವರು ಭಾಗವಹಿಸಿದ್ದ ಸಂಘಟನಾ ಪರ್ವ ಮತ್ತು ಪ್ರಮುಖ ನಾಯಕರ ಸಮಿತಿ ಸಭೆಯಲ್ಲಿ ಒಳ ಬೇಗುದಿ ಸ್ಫೋಟಗೊಂಡಿದೆ. ಆದರೆ, ಚುಗ್ ಮಧ್ಯಪ್ರವೇಶಿಸಲು ನಿರಾಕರಿಸಿ ದೆಹಲಿಗೆ ಮರಳಿದ್ದಾರೆ.



ಬೆಂಗಳೂರು: ಭಿನ್ನಮತೀಯರ ಬಣದ ನೇತೃತ್ವ ವಹಿಸಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಾಗೂ ಅವರ ತಂಡದ ಸದಸ್ಯರನ್ನು ಪಕ್ಷದಿಂದಲೇ ಉಚ್ಚಾಟಿಸಬೇಕು ಎಂದು ಮಂಗಳವಾರ ನಡೆದ ಪಕ್ಷದ ಪ್ರಮುಖ ನಾಯಕರ ಸಮಿತಿ ಸಭೆ ಮತ್ತು ಸಂಘಟನಾ ಪರ್ವ ಸಭೆಯಲ್ಲಿ ವಿಜಯೇಂದ್ರ ನಿಷ್ಠರ ಬಣ ಪಟ್ಟು ಹಿಡಿದಿದೆ.

5ನೇ ಪುಟ ನೋಡಿ

ಶಿಸ್ತು ಸಮಿತಿ ಮುಂದೆ ಇಂದು ಯತ್ನಾಳ ಹಾಜರು



ನವದೆಹಲಿ: ಬಿಜೆಪಿ ರಾಜ್ಯ ನಾಯಕತ್ವದ ವಿರುದ್ಧ ಬಂಡೆದ್ದಿರುವ ಕಾರಣಕ್ಕೆ ಶೋಕಾಸ್ ನೋಟಿಸ್ ಪಡೆದಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಪಕ್ಷದ ಕೇಂದ್ರೀಯ ಶಿಸ್ತು ಸಮಿತಿಯ ಮುಂದೆ ಬುಧವಾರ ಹಾಜರಾಗಿ ವಿವರಣೆ ನೀಡಲಿದ್ದಾರೆ.

5ನೇ ಪುಟ ನೋಡಿ

ಕುಖ್ಯಾತ ಕಳ್ಳನ ಬಂಧನ

₹1.36 ಕೋಟಿ ಮೌಲ್ಯದ 1 ಕೆ.ಜಿ 700 ಗ್ರಾಂ ಚಿನ್ನ ಜಪ್ತಿ

ಪ್ರಜಾವಾಣಿ ವಾರ್ತೆ


ಇರ್ಫಾನ್ ಇಸ್ಲಾಮುದ್ದೀನ್

ಬೆಂಗಳೂರು: ವಿವಿಧ ಬಡಾವಣೆಗಳಲ್ಲಿ ಮನೆ ಕಳ್ಳತನ ಮಾಡುತ್ತಿದ್ದ ಹೊರ ರಾಜ್ಯದ ಕುಖ್ಯಾತ ಕಳ್ಳನನ್ನು ಬಂಧಿಸಲು ಅನ್ನ ಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಯಶಸ್ವಿ ಆಗಿದ್ದಾರೆ.

ಉತ್ತರ ಪ್ರದೇಶದ ಉಮರಿಯ ನಿವಾಸಿ ಇರ್ಫಾನ್ ಇಸ್ಲಾಮುದ್ದೀನ್ ಬಂಧಿತ.

ಬಂಧಿತನಿಂದ ₹1.36 ಕೋಟಿ ಮೌಲ್ಯದ 1 ಕೆ.ಜಿ 700 ಗ್ರಾಂ. ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಆರೋಪಿ ಕುಖ್ಯಾತ ಕಳ್ಳ. ಈತನ ವಿರುದ್ಧ ವಿವಿಧ ರಾಜ್ಯಗಳಲ್ಲಿ 50ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು. ಈತನ ಬಂಧನದಿಂದ ನಗರದ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ 11 ಪ್ರಕರಣಗಳು ಪತ್ತೆ ಆಗಿವೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಂಧಿತ ಆರೋಪಿಯು, ಕಳ್ಳತನ ಪ್ರಕರಣದಲ್ಲಿ ಸಿಕ್ಕಿಬಿದ್ದು ಜೈಲಿಗೆ ಹೋಗುತ್ತಿದ್ದ. ಜಾಮೀನು ಪಡೆದು ಬಿಡುಗಡೆಯಾದ ಬಳಿಕ ಮತ್ತೆ ಕೃತ್ಯ ಎಸಗುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆಗಸ್ಟ್ 19ರಂದು ಆರೋಗ್ಯ ಬಡಾವಣೆಯ ನಿವಾಸಿ, ದೂರುದಾರ ಕುಟುಂಬ ಸಮೇತ ಮನೆಗೆ ಬೀಗ ಹಾಕಿ ಹೊರಗೆ ತೆರಳಿದ್ದರು. ಅವರು ಮನೆಗೆ ಬಂದು ನೋಡಿದಾಗ ಬೀಗ ಒಡೆದು ಕಪಾಟಿನಲ್ಲಿ ಇಟ್ಟಿದ್ದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಕಳ್ಳತನ ಮಾಡಿರುವುದು ಪತ್ತೆಯಾಗಿತ್ತು. ಮನೆ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಪತ್ತೆ ಮಾಡಲಾಯಿತು. ಉತ್ತರ ಪ್ರದೇಶದ ಮುರಾದಾಬಾದ್‌ನ ಜಿಲ್ಲಾ ಕಾರಾಗೃಹದಿಂದ ಬಾಡಿ ವಾರೆಂಟ್ ಮೇರೆಗೆ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಕೃತ್ಯ ಎಸಗಿರುವುದು ಬಯಲಾಯಿತು' ಎಂದು ಪೊಲೀಸರು ಹೇಳಿದರು.

'ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಹೆಚ್ಚಿನ ವಿಚಾರಣೆಗೆ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಕದ್ದ ಚಿನ್ನಾಭರಣಗಳನ್ನು ಉತ್ತರ ಪ್ರದೇಶದ ವಿವಿಧ ಚಿನ್ನಾಭರಣ ಅಂಗಡಿಗಳಿಗೆ ಮಾರಾಟ ಮಾಡಿದ್ದ. ಮಾರಾಟ ಮಾಡಿದ್ದ ಚಿನ್ನಾಭರಣಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಸಿಸಿಬಿ ಪೊಲೀಸರ ಕಾರ್ಯಾಚರಣೆ: ಮೊಬೈಲ್ ಫೋನ್, ನಕಲಿ ಸಿಮ್ ಕಾರ್ಡ್ ವಶ

₹5.5 ಕೋಟಿ ವಂಚನೆ: ಮೂವರ ಸೆರೆ

ಪ್ರಜಾವಾಣಿ ವಾರ್ತೆ


ಉತ್ತಮ್ ಕುಮಾರ್


ಮೌಲಿಕ್


ಪಾರ್ಥ್ ಬಾಯ್

ಅಪರಾಧ ಸುದ್ದಿ

ಬೆಂಗಳೂರು: ನಕಲಿ ಗ್ರಾಹಕರನ್ನು ಸೃಷ್ಟಿಸಿ ಆನ್‌ಲೈನ್ ಇ– ಕಾಮರ್ಸ್ ವೇದಿಕೆ ಮೀಶೊ ಕಂಪನಿಗೆ ವಂಚಿಸಿದ್ದ ಆರೋಪದ ಅಡಿ ಗುಜರಾತ್‌ನ ಮೂವರು ಆರೋಪಿಗಳನ್ನು ಸಿ.ಸಿ.ಬಿ ಪೊಲೀಸರು ಬಂಧಿಸಿದ್ದಾರೆ.

ಗುಜರಾತ್ ಸೂರತ್ ಜಿಲ್ಲೆಯ ಉತ್ತಮ್ ಕುಮಾರ್(23), ಪಾರ್ಥ್ ಬಾಯ್(24) ಮತ್ತು ಮೌಲಿಕ್(26) ಬಂಧಿತರು.

ಇದೇ ಪ್ರಕರಣದಲ್ಲಿ ಇನ್ನೂ ಮೂವರು ತಲೆ ಮರೆಸಿಕೊಂಡಿದ್ದು ಶೋಧ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಆರೋಪಿಗಳಿಂದ ಮೂರು ಮೊಬೈಲ್ ಫೋನ್ ಹಾಗೂ ನಕಲಿ ಸಿಮ್ ಕಾರ್ಡ್ ಜಪ್ತಿ ಮಾಡಲಾಗಿದೆ ಎಂದು ಹೇಳಿದರು.

ಮುಖ್ಯಾಂಶಗಳು

- ಜನವರಿಯಿಂದ ಜುಲೈತನಕ ಕಂಪನಿಗೆ ವಂಚನೆ
- ಸೂರತ್‌ನಲ್ಲಿ ನಕಲಿ ಕಂಪನಿ ಸ್ಥಾಪಿಸಿದ್ದ ಆರೋಪಿಗಳು
- ಮೀಶೊ ಆ್ಯಪ್ ಮೂಲಕ ಸಂಚು

'ಜನವರಿಯಿಂದ ಜುಲೈ ತನಕ ಮೀಶೊ ಕಂಪನಿಗೆ ಆರೋಪಿಗಳು ₹5.50 ಕೋಟಿ ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಅವರು ಹೇಳಿದರು.

'ಮೀಶೊ ಕಂಪನಿಯಿಂದ ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಿಕೊಂಡ ಬ್ಯಾಂಕ್ ಖಾತೆ ವಿವರ ಮತ್ತು ಹಲವಾರು ಮೊಬೈಲ್ ನಂಬರ್‌ಗಳ ಮಾಹಿತಿ ಸಂಗ್ರಹಿಸಿದಾಗ ಒಟ್ಟು ಆರು ಮಂದಿ ಆರೋಪಿಗಳ ಮಾಹಿತಿ ಸಿಕ್ಕಿತ್ತು. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿರುವುದು ಗೊತ್ತಾಗಿದೆ' ಎಂದು ಹೇಳಿದರು.

ಮೀಶೊ ಆ್ಯಪ್ ಮೂಲಕ ಗ್ರಾಹಕರು ವಿವಿಧ ವಸ್ತುಗಳನ್ನು ಖರೀದಿಸಬಹುದಾಗಿದೆ. ಈ ರೀತಿ ಖರೀದಿಸಿದ ವಸ್ತುಗಳಿಗೆ ಗ್ರಾಹಕರು ಆನ್‌ಲೈನ್ ಅಥವಾ ನಗದು ರೂಪದಲ್ಲಿ ಹಣ ಪಾವತಿಸುತ್ತಾರೆ. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ಆರೋಪಿಗಳು, ಸೂರತ್‌ನಲ್ಲಿ ಓಂ ಸಾಯಿ ಫ್ಯಾಷನ್ ಎಂಬ ಹೆಸರಿನಲ್ಲಿ ನಕಲಿ ಕಂಪನಿ ತೆರೆದಿದ್ದರು. ಅದನ್ನು ಸರಬರಾಜುದಾರ ಕಂಪನಿ ಎಂದು ಬಿಂಬಿಸಿ ಮೀಶೊದಲ್ಲಿ ಹೆಸರು ನೋಂದಾಯಿಸಿದ್ದರು. ನಂತರ, ಮೀಶೊ ಆ್ಯಪ್ ಬಳಸಿ ತಾವೇ ಗ್ರಾಹಕರ ಸೋಗಿನಲ್ಲಿ ನಕಲಿ ಹೆಸರು ಮತ್ತು ವಿಳಾಸ ನೀಡಿ ಪ್ರತಿ ದಿನ ಸರಾಸರಿ 2,000ರಿಂದ 2,500 ವಿವಿಧ ಉತ್ಪನ್ನಗಳನ್ನು ಬುಕ್ ಮಾಡುತ್ತಿದ್ದರು. ತಪ್ಪಾಗಿ ನೀಡಿದ ಗ್ರಾಹಕರ ವಿಳಾಸದಿಂದ ಉತ್ಪನ್ನಗಳು ವಾಪಸ್ ತಮ್ಮ ಕಂಪನಿಗೆ ಬರುವಂತೆ ಸಂಚು ರೂಪಿಸಿದ್ದರು' ಎಂದು ದಯಾನಂದ ಅವರು ತಿಳಿಸಿದರು.

'ವಾಪಸ್ ಬಂದ ಉತ್ಪನ್ನ ಇರುವ ಪಾರ್ಸಲ್‌ನಲ್ಲಿರುವ ವಸ್ತು ಬದಲಾಯಿಸಿ, ಮೀಶೊ ಕಂಪನಿಯವರಿಗೆ ಪಾರ್ಸೆಲ್‌ನಲ್ಲಿದ್ದ ವಸ್ತುವು ಬದಲಾಗಿದೆ ಎಂದು ವಿಡಿಯೊ ಮಾಡಿ, ಈ ವಿಡಿಯೊವನ್ನು ಕಂಪನಿಗೆ ಕಳುಹಿಸುತ್ತಿದ್ದರು. ಬಳಿಕ ಆ ಉತ್ಪನ್ನಗಳ ಮೌಲ್ಯದಷ್ಟು ಹಣವನ್ನು ಪಡೆದುಕೊಳ್ಳುತ್ತಿದ್ದರು. ಈ ರೀತಿ ಪಡೆದುಕೊಳ್ಳುತ್ತಿದ್ದ ಹಣವು ಸ್ವಯಂ ಚಾಲಿತವಾಗಿ ಮೀಶೊ ಕಂಪನಿಯಿಂದ ಆರೋಪಿಗಳ ಖಾತೆಗೆ ಪಾವತಿ ಆಗುತ್ತಿತ್ತು' ಎಂದು ಅವರು ಹೇಳಿದರು.

ಪಬ್, ರೆಸ್ಟೋರೆಂಟ್ ಮೇಲೆ ದಾಳಿ: ಹಲವರ ವಿಚಾರಣೆ– ಬಿ.ದಯಾನಂದ

ಹೊಸ ವರ್ಷಾಚರಣೆ: ಮುನ್ನೆಚ್ಚರಿಕೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ನಗರದಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸಿದಂತೆ ತೀವ್ರ ನಿಗಾ ವಹಿಸಲಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಡ್ರಗ್ಸ್ ಪೂರೈಕೆ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳು, ಅನುಮಾನಾಸ್ಪದ ವ್ಯಕ್ತಿಗಳು, ರೌಡಿಶೀಟರ್‌ಗಳನ್ನು ವಿಚಾರಣೆ ನಡೆಸಿ, ಎಚ್ಚರಿಕೆ ನೀಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

'ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಗಿದೆ. ನಶೆಮುಕ್ತ ನಗರವನ್ನಾಗಿಸಲು ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ' ಎಂದು ಹೇಳಿದರು.

'ಎಲ್ಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನವೆಂಬರ್ 29 ಹಾಗೂ 30ರಂದು ಕಾರ್ಯಾಚರಣೆ ನಡೆಸಿ ಎನ್‌ಡಿಪಿಎಸ್ ಪ್ರಕರಣಗಳಲ್ಲಿ ಭಾಗಿ ಆದ ಆರೋಪಿಗಳ ಪರಿಶೀಲನೆ, ಪಬ್, ವೈನ್ಸ್ ಸ್ಟೋರ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಯಿತು' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಎನ್‌ಡಿಪಿಎಸ್ ಪ್ರಕರಣಗಳಲ್ಲಿ ಭಾಗಿಯಾದ 380 ಆರೋಪಿಗಳ ವಿಚಾರಣೆ ನಡೆಸಲಾಯಿತು. ಬಾರ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಕೆಲಸ ಮಾಡುತ್ತಿರುವ 1,633 ಮಂದಿಯನ್ನು ವಿಚಾರಣೆಗೆ ಒಳಪಡಿಸಿ ಮಾಹಿತಿ ಪಡೆದುಕೊಳ್ಳಲಾಗಿದೆ ಎಂದು ತಿಳಿಸಿದರು.

'ಬಿಎನ್‌ಎಸ್ ಅಡಿ ಒಂದು, ಕೋಟ್ಪಾ ಕಾಯ್ದೆ ಅಡಿ 29, ವಿಶೇಷ ಕಾಯ್ದೆ ಅಡಿ ಒಂದು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ವಿವರಿಸಿದರು.

ಮಾದಕ ವಸ್ತುಗಳ ದುಷ್ಪರಿಣಾಮದ ಕುರಿತು ಅರಿವು

'ನವೆಂಬರ್ 30ರಂದು 460 ಶಾಲಾ–ಕಾಲೇಜುಗಳು ಮತ್ತು 302 ಹಾಸ್ಟೆಲ್‌ಗಳಿಗೆ ಭೇಟಿ ನೀಡಿ 61,398 ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ದುಷ್ಪರಿಣಾಮದ ಕುರಿತು ಅರಿವು ಮೂಡಿಸಲಾಗಿದೆ' ಎಂದು ದಯಾನಂದ ತಿಳಿಸಿದರು.

ಮಕ್ಕಳನ್ನು ಬಳಸಿಕೊಂಡು ಭಿಕ್ಷಾಟನೆಯಲ್ಲಿ ತೊಡಗಿದ್ದ 12 ಮಹಿಳೆಯರನ್ನು ಸಿಸಿಬಿಯ ಮಹಿಳಾ ಸಂರಕ್ಷಣಾ ದಳದ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಬೇರೆ ಬೇರೆ ವಯಸ್ಸಿನ ಈ 16 ಮಕ್ಕಳನ್ನು ರಕ್ಷಿಸಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳ ಎದುರು ಹಾಜರು ಪಡಿಸಲಾಗಿದೆ ಎಂದು ಅವರು ವಿವರಿಸಿದರು.

ವಿದೇಶಿ ಮಹಿಳೆಯರ ರಕ್ಷಣೆ

'ಪರಿಶೀಲನೆ ವೇಳೆ ವೇಶ್ಯಾವಾಟಿಕೆಯಲ್ಲಿ ಸಿಲುಕಿದ್ದ ಆರು ಮಂದಿ ವಿದೇಶಿ ಮಹಿಳೆಯರನ್ನು ರಕ್ಷಿಸಲಾಗಿದೆ. ಸುಮಾರು 411 ವಿದೇಶಿಗರನ್ನು ಪರಿಶೀಲಿಸಲಾಗಿದ್ದು, ವೀಸಾ ಅವಧಿ ಮೀರಿ ವಾಸವಾಗಿದ್ದ 29 ವಿದೇಶಿ ಪ್ರಜೆಗಳನ್ನು ಪ್ರಾದೇಶಿಕ ನೋಂದಣಿ ಕೇಂದ್ರದ ಅಧಿಕಾರಿಗಳ ಎದುರು ಹಾಜರುಪಡಿಸಲಾಗಿತ್ತು. ಅವರ ದೇಶಕ್ಕೆ ವಾಪಸ್ ಕಳುಹಿಸುವ ಪ್ರಕ್ರಿಯೆಗಳು ನಡೆಯುತ್ತಿವೆ' ಎಂದು ಬಿ.ದಯಾನಂದ ತಿಳಿಸಿದರು.



ವಸತಿಗೃಹ ಸೇರಿದಂತೆ ಇತರೆ 1,020 ಸ್ಥಳಗಳಲ್ಲಿ ಪರಿಶೀಲನೆ ನಡೆಸಲಾಗಿದೆ. 1,233 ರೌಡಿಶೀಟರ್‌ಗಳನ್ನು ಠಾಣೆಗೆ ಕರೆಸಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗದಂತೆ ಎಚ್ಚರಿಕೆ ನೀಡಲಾಗಿದೆ

ಬಿ.ದಯಾನಂದ, ನಗರ ಪೊಲೀಸ್ ಕಮಿಷನರ್

ಅಂತ್ಯಕ್ರಿಯೆ ಮುಗಿಸಿ ಬರುವಾಗ ಅಪಘಾತ: ಮಹಿಳೆ ಸಾವು



ಮಾಗಡಿ–ಬೆಂಗಳೂರು ಮುಖ್ಯರಸ್ತೆಯ ಹೊನ್ನಾಪುರದ ಬಳಿ ಚಾಲಕನ ನಿಯಂತ್ರಣ ತಪ್ಪಿ ಬಂಡೆಗೆ ಡಿಕ್ಕಿ ಹೊಡೆದಿರುವ ಕಾರು

ಪ್ರಜಾವಾಣಿ ವಾರ್ತೆ

ಮಾಗಡಿ: ಸಂಬಂಧಿಕರೊಬ್ಬರು ಅಂತ್ಯಕ್ರಿಯೆಗೆ ಹೋಗಿ ವಾಪಸ್ಸಾಗುತ್ತಿದ್ದ ಬೆಂಗಳೂರಿನ ಕುಟುಂಬದವರಿದ್ದ ಕಾರು ಬಂಡೆಗೆ ಡಿಕ್ಕಿ ಹೊಡೆದಿದ್ದರಿಂದ ಮಹಿಳೆಯೊಬ್ಬರು ಮೃತಪಟ್ಟು, ಮೂವರು ಗಂಭೀರವಾಗಿ ಗಾಯಗೊಂಡ ಘಟನೆ ತಾಲ್ಲೂಕಿನ ಬೆಂಗಳೂರು–ಮಾಗಡಿ ಮುಖ್ಯರಸ್ತೆಯ ಹೊನ್ನಾಪುರದ ಬಳಿ ಮಂಗಳವಾರ ನಡೆದಿದೆ.

ಬೆಂಗಳೂರಿನ ಲಗ್ಗೆರೆ ನಿವಾಸಿ ಭಾಗ್ಯಮ್ಮ(50) ಮೃತರು. ಅವರ ಕುಟುಂಬದವರಾದ ಗಿರೀಶ್, ರೇವತಿ ಹಾಗೂ ಶ್ರೀನಿವಾಸ್ ಅವರಿಗೆ ಗಂಭೀರ ಗಾಯಗಳಾಗಿದ್ದು, 2 ವರ್ಷದ ಮಗು ಅಪಾಯದಿಂದ ಪಾರಾಗಿದೆ. ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಕಳಿಸಿ ಕೊಡಲಾಗಿದೆ.

ಕುಣಿಗಲ್ ತಾಲ್ಲೂಕಿನ ಹಾಲ್ಕೆರೆ ಗ್ರಾಮದಲ್ಲಿ ಮೃತಪಟ್ಟಿದ್ದ ಸಂಬಂಧಿಕರೊಬ್ಬರ ಅಂತ್ಯಕ್ರಿಯೆಗೆ ಭಾಗ್ಯಮ್ಮ ಸೇರಿದಂತೆ ಕುಟುಂಬದ ಐವರು ಕಾರಿನಲ್ಲಿ ಹೋಗಿದ್ದರು. ಶವಸಂಸ್ಕಾರ ಮುಗಿಸಿಕೊಂಡು ಸಂಜೆ ಬೆಂಗಳೂರಿಗೆ ವಾಪಸ್ಸಾಗುತ್ತಿದ್ದರು. ಸಂಜೆ 5.45ರ ಸುಮಾರಿಗೆ ಹೊನ್ನಾಪುರದ ಬಳಿ ಕಾರು ಚಾಲಕ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಯ ಬಂಡೆಗೆ ಡಿಕ್ಕಿ ಹೊಡೆದಿದ್ದಾನೆ ಎಂದು ಮಾಗಡಿ ಠಾಣೆ ಪೊಲಿಸರು ತಿಳಿಸಿದರು.

ಡಿಕ್ಕಿಯ ತೀವ್ರತೆಗೆ ಭಾಗ್ಯಮ್ಮ ಅವರು ಸ್ಥಳದಲ್ಲೇ ಮೃತಪಟ್ಟು, ಮೂವರು ಗಾಯಗೊಂಡರು. ವಿಷಯ ತಿಳಿದು ಸ್ಥಳಕ್ಕೆ ತೆರಳಿ ಶವ ಹಾಗೂ ಗಾಯಾಳುಗಳನ್ನು ಮಾಗಡಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಯಿತು. ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕಳಿಸಲಾಯಿತು. ಘಟನೆ ಕುರಿತು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಕ್ಯಾನ್ಸರ್ ಆರಂಭಿಕ ಪತ್ತೆಗೆ 'ಕ್ಯಾನ್ಸರ್ ಸ್ಪಾಟ್' ರಕ್ತ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾನ್ಸರ್ ಆರಂಭಿಕ ಪತ್ತೆಗೆ ರಿಲಯನ್ಸ್‌ನ ಅಂಗಸಂಸ್ಥೆಯಾದ ಸ್ಟ್ರಾಂಡ್ ಲೈಫ್ ಸೈನ್ಸಸ್ ನಗರದಲ್ಲಿ 'ಕ್ಯಾನ್ಸರ್ ಸ್ಪಾಟ್' ರಕ್ತ ಪರೀಕ್ಷೆ ಆರಂಭಿಸಿದೆ.

ಜಿನೋಮಿಕ್ಸ್ ಡಯಾಗ್ನೋಸ್ಟಿಕ್ಸ್ ಆ್ಯಂಡ್ ರೀಸರ್ಚ್ ಸೆಂಟರ್ ರಕ್ತದ ಮಾದರಿಗಳ ಪರೀಕ್ಷೆ ನಡೆಸಲಿದೆ. ಈ ಪರೀಕ್ಷೆಗೆ ಜಾಗತಿಕ ಮಟ್ಟದಲ್ಲಿ ಅಂಗೀಕೃತವಾದ 'ಮೆಥಿಲೇಷನ್ ಪ್ರೊಫೈಲಿಂಗ್' ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಇದರ ಮೂಲಕ ಕ್ಯಾನ್ಸರ್ ಗಡ್ಡೆಯ ಡಿಎನ್‌ಎ ತುಣುಕುಗಳನ್ನು ಗುರುತಿಸಲಾಗುತ್ತದೆ. ಈ ಪರೀಕ್ಷೆಗೆ ₹15 ಸಾವಿರದಿಂದ ₹20 ಸಾವಿರ ನಿಗದಿಪಡಿಸಲಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮಂಡಳಿಯ ಸದಸ್ಯೆ ಇಶಾ ಅಂಬಾನಿ ಪಿರಾಮಲ್, 'ದೇಶದಲ್ಲಿ ಕ್ಯಾನ್ಸರ್ ಕಾಯಿಲೆಗೆ ಹೆಚ್ಚು ಮಂದಿ ಮೃತಪಡುತ್ತಿದ್ದಾರೆ. ರೋಗಿಗಳು ಹಾಗೂ ಅವರ ಕುಟುಂಬದ ಸದಸ್ಯರಿಗೆ ಆರ್ಥಿಕ, ಸಾಮಾಜಿಕ ಹಾಗೂ ಮಾನಸಿಕ ಹೊರೆಯಾಗಿ ಪರಿಣಮಿಸುತ್ತಿದೆ. ಆದ್ದರಿಂದ 'ಕ್ಯಾನ್ಸರ್ ಸ್ಪಾಟ್' ಆರಂಭಿಸಲಾಗಿದೆ' ಎಂದು ಹೇಳಿದ್ದಾರೆ.

ಸ್ಟ್ರಾಂಡ್ ಲೈಫ್ ಸೈನ್ಸಸ್ ಸಹ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ರಮೇಶ್ ಹರಿಹರನ್, 'ಕ್ಯಾನ್ಸರ್ ಕಾಯಿಲೆಯನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭ' ಎಂದು ತಿಳಿಸಿದ್ದಾರೆ.



ಮಧ್ಯಾಹ್ನ ಬಿರುಸು ಮಳೆ ಜನಜೀವನ ಅಸ್ತವ್ಯಸ್ತ

ಫೆಂಜಲ್ ಚಂಡಮಾರುತ ಪರಿಣಾಮ ಮಳೆ; ಮಂಗಳವಾರ ಸಂಜೆ ನಂತರ ಬಿಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ಬೆಳಿಗ್ಗೆ ಬಿಡುವು ನೀಡಿದ್ದ ಮಳೆ, ಮಧ್ಯಾಹ್ನದ ವೇಳೆಗೆ ಆರ್ಭಟದೊಂದಿಗೆ ಸುರಿಯಿತು. ಮಳೆಯ ಅಬ್ಬರಕ್ಕೆ ಕೆಲಕಾಲ ಜನಜೀವನ ಅಸ್ತವ್ಯಸ್ತವಾಯಿತು.

ಮಂಗಳವಾರ ಬೆಳಿಗ್ಗೆಯಿಂದ ಮಳೆ ಇಲ್ಲದೆ, ಬಿಸಿಲು ಮೂಡಿತ್ತು. ಫೆಂಜಲ್ ಚಂಡಮಾರುತದ ಪರಿಣಾಮ ಕಡಿಮೆಯಾಯಿತು ಎಂಬ ಭಾವದಿಂದ ಜನರು ನಿತ್ಯ ಕಾಯಕದಲ್ಲಿ ತೊಡಗಿದ್ದರು. ಆದರೆ, ಮಧ್ಯಾಹ್ನ 12 ಗಂಟೆಯ ನಂತರ ನಗರದ ಹಲವು ಭಾಗಗಳಲ್ಲಿ ಗುಡುಗು ಸಹಿತ ಮಳೆ ಆರ್ಭಟಿಸಿತು. ಜನರು ಮಳೆಯಿಂದ ರಕ್ಷಿಸಿಕೊಳ್ಳಲು ಹಲವು ಸ್ಥಳಗಳಲ್ಲಿ ಆಶ್ರಯ ಪಡೆದರು. ಕೆಲವರು ಅನಿವಾರ್ಯವಾಗಿ ಮಳೆಯಲ್ಲೇ ಸಂಚರಿಸಿದರು.

ರಾಜರಾಜೇಶ್ವರಿನಗರ, ನಾಯಂಡಹಳ್ಳಿ, ಕೆಂಗೇರಿ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಮಲ್ಲೇಶ್ವರ, ವಿದ್ಯಾಪೀಠ ಸುತ್ತಮುತ್ತಲ ಪ್ರದೇಶಗಳಲ್ಲಿ ಮಳೆ ಬಿರುಸಾಗಿ ಸುರಿಯಿತು. ಸುಮಾರು ಒಂದು ಗಂಟೆ ಸುರಿದ ಮಳೆಯಿಂದ ಈ ಪ್ರದೇಶಗಳಲ್ಲಿ ರಸ್ತೆಗಳಲ್ಲಿ ನೀರು ತುಂಬಿಕೊಂಡು ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಬಿಡುವು ನೀಡಿದ್ದ ಮಳೆ ಒಂದೇ ಸಮನೆ ಸುರಿದಿದ್ದರಿಂದ, ದ್ವಿಚಕ್ರ ವಾಹನ ಸವಾರರು ಅಲ್ಲಲ್ಲಿ ವಾಹನಗಳನ್ನು ನಿಲ್ಲಿಸಿ ಮಳೆಯಿಂದ ರಕ್ಷಿಸಿಕೊಳ್ಳಲು ಆಶ್ರಯಪಡೆದರು. ನಮ್ಮ ಮೆಟ್ರೊ ಮಾರ್ಗ, ನಿಲ್ದಾಣಗಳ ಕೆಳಭಾಗದಲ್ಲಿ ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು ನಿಂತುಕೊಂಡಿದ್ದರು. ಇದರಿಂದ ಇತರೆ ವಾಹನಗಳ ಸಂಚಾರಕ್ಕೆ ತಡೆಯಾಯಿತು. ಅಲ್ಲದೆ, ರಸ್ತೆಗಳಲ್ಲಿ ಹೆಚ್ಚು ನೀರು ನಿಂತಿದ್ದರಿಂದ ವಾಹನಗಳು ನಿಧಾನ ಗತಿಯಲ್ಲೇ ಸಂಚರಿಸಿದವು. ಹೀಗಾಗಿ, ಪ್ರಮುಖ ರಸ್ತೆಗಳಲ್ಲಿ ಮಧ್ಯಾಹ್ನ ಸುಮಾರು ಮೂರು ತಾಸು ವಾಹನ ದಟ್ಟಣೆ ಹೆಚ್ಚಾಗಿತ್ತು.

ರೂಪೇನ ಅಗ್ರಹಾರದ ಬಳಿ ಮಳೆ ನೀರು ನಿಂತಿದ್ದರಿಂದ, ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆಯನ್ನು ಸಂಚಾರ ವಿಭಾಗದ ಪೊಲೀಸರು ತಾತ್ಕಾಲಿಕವಾಗಿ ಮುಚ್ಚಿದ್ದರು. ನೀರು ಕಡಿಮೆಯಾದ ನಂತರ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ವರ್ತೂರು ಕೋಡಿಯಿಂದ ವೈಟ್‌ಫೀಲ್ಡ್ ಮುಖ್ಯ ರಸ್ತೆಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿತ್ತು. ಎಂಇಎಸ್‌ನಿಂದ ಜಾಲಹಳ್ಳಿ ರೈಲ್ವೆಗೇಟ್ ಮೇಲ್ಸೇತುವೆ, ಎಲೆಕ್ಟ್ರಾನಿಕ್ ಸಿಟಿಯಿಂದ ಸಿಲ್ಕ್ ಬೋರ್ಡ್, ಬೊಮ್ಮನಹಳ್ಳಿಯಿಂದ ಸಿಲ್ಕ್ ಬೋರ್ಡ್, ಕೆ.ಆರ್. ಮಾರುಕಟ್ಟೆಯಿಂದ ಟೌನ್‌ಹಾಲ್, ಲುಲು ಮಾಲ್‌ನಿಂದ ಖೋಡೆ ಜಂಕ್ಷನ್, ಬನ್ನೇರುಘಟ್ಟ ರಸ್ತೆಯಿಂದ ಜೇಡಿ ಮರದ ಕಡೆ, ಸಾರಕ್ಕಿ ಸಿಗ್ನಲ್‌ನಿಂದ ವೇಗಾ ಸಿಟಿಮಾಲ್, ಸಂಜಯನಗರದಿಂದ ವಿಮಾನ ನಿಲ್ದಾಣದ ಕಡೆ ರಸ್ತೆ, ರಾಮಮೂರ್ತಿ ನಗರ, ಬಿಳೇಕಹಳ್ಳಿ ಜಂಕ್ಷನ್, ಓಕಳಿಪುರ ಅಂಡರ್ ಪಾಸ್‌ಗಳಲ್ಲಿ ಅತಿಹೆಚ್ಚು ನೀರು ನಿಂತು ವಾಹನ ಸವಾರರು ಹರಸಾಹಸಪಟ್ಟರು.



ಮೈಸೂರು ರಸ್ತೆಯಲ್ಲಿ ಮಂಗಳವಾರ ಸುರಿದ ಮಳೆಯಲ್ಲಿ ತಾಯಿ ಮತ್ತು ಬಾಲಕ ವಾಹನಗಳ ನಡುವೆ ರಸ್ತೆ ದಾಟಲು ಪರದಾಡಿದರು



ಜಲಾವೃತಗೊಂಡಿದ್ದ ರಸ್ತೆಯಲ್ಲಿ ಸಾಗಿದ ದ್ವಿಚಕ್ರ ವಾಹನ ಸವಾರ

ಎಲ್ಲೆಲ್ಲಿ ಹೆಚ್ಚು ಮಳೆ? (ಸೆಂ.ಮೀ)

ಸಿಂಗಸಂದ್ರ	2.25
ವಿಶ್ವೇಶ್ವರಪುರ	2.1
ದೊರೆಸಾನಿಪಾಳ್ಯ	2.1
ವಿದ್ಯಾಪೀಠ	1.9
ಅರೆಕೆರೆ	1.8
ರಾಜರಾಜೇಶ್ವರಿನಗರ	1.65
ಬಿಳೇಕಹಳ್ಳಿ	1.6
ದಯಾನಂದನಗರ	1.45
ನಾಯಂಡಹಳ್ಳಿ	1.4
ಗೊಟ್ಟಿಗೆರೆ	1.25
ಕಾಟನ್‌ಪೇಟೆ	1.25
ಚಾಮರಾಜಪೇಟೆ	1.2



ನೌಕಾ ದಿನಾಚರಣೆ ಆಚರಿಸಲಾಗುತ್ತಿದೆ

‘ರಿಂಗರ್ಸ್ ಲ್ಯಾಕ್ಟೇಟ್’ ದ್ರಾವಣದ ಗುಣಮಟ್ಟ ಕಳಪೆ: ಪರೀಕ್ಷಾ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಬಂಗಾಳದ ‘ಪಶ್ಚಿಮ್ ಬಂಗಾ ಫಾರ್ಮಾಸ್ಯುಟಿಕಲ್ಸ್’ ಕಂಪನಿಯು ರಾಜ್ಯದ ಆರೋಗ್ಯ ಇಲಾಖೆಗೆ ಪೂರೈಸಿರುವ ‘ರಿಂಗರ್ಸ್ ಲ್ಯಾಕ್ಟೇಟ್ ಐ.ಪಿ.’ ದ್ರಾವಣದ 22 ಬ್ಯಾಚ್‌ಗಳು ಅಸುರಕ್ಷಿತ ಎಂದು ಗುಣಮಟ್ಟ ಪರೀಕ್ಷಾ ವರದಿ ಹೇಳಿದೆ.

ಈ ಕಂಪನಿಯ ಮೇಲೆ ಕ್ರಮಕ್ಕೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಅವರು ಕೇಂದ್ರ ಔಷಧ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ ಸರಬರಾಜಾಗಿದ್ದ ‘ರಿಂಗರ್ಸ್ ಲ್ಯಾಕ್ಟೇಟ್ ಐ.ಪಿ.’ ದ್ರಾವಣವನ್ನು ಜಿಲ್ಲಾ ಔಷಧ ಗೋದಾಮುಗಳ ಮೂಲಕ ಆಸ್ಪತ್ರೆಗಳಿಗೆ ಪೂರೈಸಲಾಗಿತ್ತು. ನ.9ರಿಂದ 11ರ ಅವಧಿಯಲ್ಲಿ ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ನಾಲ್ವರು ಬಾಣಂತಿಯರ ಸಾವು ಪ್ರಕರಣಗಳು ವರದಿಯಾಗಿದ್ದು, ಅಲ್ಲಿ ‘ರಿಂಗರ್ಸ್ ಲ್ಯಾಕ್ಟೇಟ್ ಐ.ಪಿ.’ ದ್ರಾವಣ ಬಳಕೆ ಮಾಡಲಾಗಿತ್ತು. ಈ ಪ್ರಕರಣದ ತನಿಖೆ ನಡೆಯುತ್ತಿದೆ. ಜಿಲ್ಲಾ ಔಷಧ ಗೋದಾಮುಗಳಲ್ಲಿದ್ದ ಈ ದ್ರಾವಣದ ವಿವಿಧ ಬ್ಯಾಚ್‌ಗಳನ್ನು ಔಷಧ ನಿಯಂತ್ರಣ ಅಧಿಕಾರಿಗಳು ಪರೀಕ್ಷೆ ಹಾಗೂ ವಿಶ್ಲೇಷಣೆ ನಡೆಸಿದ್ದು, ಕೆಲ ಬ್ಯಾಚ್‌ಗಳಲ್ಲಿ ಶಿಲೀಂಧ್ರ ಹಾಗೂ ಬ್ಯಾಕ್ಟೀರಿಯಾ ಅಂಶಗಳು ಪತ್ತೆಯಾಗಿವೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

‘ಬಳ್ಳಾರಿಯಲ್ಲಿ ಬಾಣಂತಿಯರ ಮರಣ ಪ್ರಕರಣಗಳು ವರದಿಯಾದ ಬಳಿಕ ಪಶ್ಚಿಮ್ ಬಂಗಾ ಕಂಪನಿ ಪೂರೈಸಿರುವ ‘ರಿಂಗರ್ಸ್ ಲ್ಯಾಕ್ಟೇಟ್ ಐ.ಪಿ.’ ದ್ರಾವಣದ ಎಲ್ಲ ಬ್ಯಾಚ್‌ಗಳ ಬಳಕೆಯನ್ನು ರಾಜ್ಯದಲ್ಲಿ ಸ್ಥಗಿತಗೊಳಿಸಲಾಗಿದೆ. ನಿಮ್ಮ ಕಚೇರಿಯಿಂದ ಅನುಮೋದಿಸಲ್ಪಟ್ಟ ಕೋಲ್ಕತ್ತ ಔಷಧ ನಿಯಂತ್ರಣ ಇಲಾಖೆಯು ಪಶ್ಚಿಮ್ ಬಂಗಾ ಕಂಪನಿಗೆ ಪರವಾನಗಿ ನೀಡಿದ್ದು, ಈ ಬಗ್ಗೆ ತನಿಖೆ ನಡೆಸುವ ಜತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕಿದೆ. ಉತ್ಪಾದನಾ ಘಟಕದಲ್ಲಿ ರಾಜ್ಯದ ಅಧಿಕಾರಿಗಳು ತನಿಖೆ ನಡೆಸುವ ಸಮಯದಲ್ಲಿ ಸಹಕಾರ ನೀಡುವಂತೆ ಪಶ್ಚಿಮ ಬಂಗಾಳ ಔಷಧ ನಿಯಂತ್ರಕರು ಹಾಗೂ ಅಧೀನ ಅಧಿಕಾರಿಗಳಿಗೆ ನಿರ್ದೇಶಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಮಂಚನಬೆಲೆ: ಸೇತುವೆಯಲ್ಲಿ ಬಿರುಕು

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನ ಮಂಚನಬೆಲೆ ಜಲಾಶಯದ ಸಮೀಪ ಎರಡು ವರ್ಷಗಳ ಹಿಂದೆ ಭಾರಿ ಮಳೆಗೆ ಕೊಚ್ಚಿ ಹೋಗಿದ್ದ ಸೇತುವೆಗೆ ಪರ್ಯಾಯವಾಗಿ ನಿರ್ಮಿಸಿದ್ದ ಎರಡನೇ ತಾತ್ಕಾಲಿಕ ಸೇತುವೆಯೂ ಮಂಗಳವಾರ ಬಿರುಕು ಬಿಟ್ಟಿದೆ.

ತಿಂಗಳ ಹಿಂದೆಯಷ್ಟೇ ಸುರಿದ ಮಳೆಯಿಂದಾಗಿ ಜಲಾಶಯದಿಂದ ಭಾರಿ ಪ್ರಮಾಣದ ನೀರನ್ನು ನದಿಗೆ ಬಿಡಲಾಗಿತ್ತು. ಆಗ ಮೊದಲಿದ್ದ ತಾತ್ಕಾಲಿಕ ಸೇತುವೆ ಕೊಚ್ಚಿ ಹೋಗಿ, ಒಂದು ಭಾಗದ ಸಂಪರ್ಕ ಕಡಿತಗೊಂಡಿತ್ತು. ಬಳಿಕ, ಮತ್ತೊಂದು ತಾತ್ಕಾಲಿಕ ಸೇತುವೆ ನಿರ್ಮಿಸಲಾಗಿತ್ತು.

‘ಫೆಂಜಲ್’ ಚಂಡಮಾರುತದ ಪರಿಣಾಮದಿಂದಾಗಿ ಸುರಿಯುತ್ತಿರುವ ಮಳೆಯಿಂದಾಗಿ ನದಿ ನೀರಿನ ಪ್ರಮಾಣ ಹೆಚ್ಚಾಗಿದ್ದರಿಂದ ಈಗಿನ ಸೇತುವೆಯೂ ಬಿರುಕು ಬಿಟ್ಟಿದ್ದು, ಕೊಚ್ಚಿ ಹೋಗುವ ಆತಂಕ ಎದುರಾಗಿದೆ.



ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದ ಸಮೀಪ ಸೇತುವೆಗೆ ಪರ್ಯಾಯವಾಗಿ ನಿರ್ಮಿಸಿದ್ದ ಎರಡನೇ ತಾತ್ಕಾಲಿಕ ಸೇತುವೆಯೂ ಮಂಗಳವಾರ ಬಿರುಕು ಬಿಟ್ಟಿದೆ

ಶೇ 25ರಷ್ಟು ಬಾಕಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಗುತ್ತಿಗೆದಾರರು 2023ರ ಆಗಸ್ಟ್ 5ರವರೆಗೆ ನಿರ್ವಹಿಸಿರುವ ಕಾಮಗಾರಿಗಳಲ್ಲಿ ಬಾಕಿ ಉಳಿದಿರುವ ಶೇ 25ರಷ್ಟು ಮೊತ್ತ ಬಿಡುಗಡೆ ಮಾಡಲು ಮುಖ್ಯ ಎಂಜಿನಿಯರ್‌ಗಳಿಗೆ ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತರು ಆದೇಶಿಸಿದ್ದಾರೆ.

ಸರ್ಕಾರದ ಅನುದಾನದಲ್ಲಿ ಪೂರ್ಣಗೊಳಿಸಲಾಗಿದ್ದ ಕಾಮಗಾರಿಗಳ ಬಿಲ್‌ನಲ್ಲಿ ಶೇ 25ರಷ್ಟನ್ನು ಬಾಕಿ ಉಳಿಸಿಕೊಳ್ಳಲಾಗಿತ್ತು. ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ವಿಚಾರಣಾ ಆಯೋಗದ ಅಂತಿಮ ವರದಿಯ ತೀರ್ಮಾನಕ್ಕೆ ಒಳಪಟ್ಟು, ಶೇ 100ರಷ್ಟು ಬಿಲ್ ಪಾವತಿಸಲು ಸರ್ಕಾರ ನವೆಂಬರ್ 4ರಂದು ಆದೇಶ ಮಾಡಿತ್ತು.

ಈ ಆದೇಶದಂತೆ ಡಿ.2ರಂದು ಸಾಫ್ಟ್‌ವೇರ್ ಕಂಪನಿಗೆ ಸೂಚನೆ ನೀಡಿರುವ ಹಣಕಾಸು ವಿಭಾಗದ ವಿಶೇಷ ಆಯುಕ್ತರು, ಶೇ 25ರಷ್ಟನ್ನು ಪಾವತಿಸಲು ಸಾಫ್ಟ್‌ವೇರ್‌ನಲ್ಲಿ ಅವಕಾಶ ನೀಡಲು ಹೇಳಿದ್ದರು. ಕೇಂದ್ರ ಹಾಗೂ ಎಂಟು ವಲಯಗಳ ಮುಖ್ಯ ಎಂಜಿನಿಯರ್‌ಗಳ ಖಾತೆಗೆ ₹626.14 ಕೋಟಿಯನ್ನು ಡಿ.3ರಂದು ವರ್ಗಾಯಿಸಲಾಗಿದ್ದು, ಐಎಫ್‌ಎಂಎಸ್ ತಂತ್ರಾಂಶದ ಮೂಲಕ ಜ್ಯೇಷ್ಠತೆ ಆಧಾರದಲ್ಲಿ ಬುಧವಾರದಿಂದ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡಲು ಸೂಚಿಸಲಾಗಿದೆ.

‘ಸಂಘದ ಪದಾಧಿಕಾರಿಗಳ ಸತತ ಹೋರಾಟದಿಂದ ಬಾಕಿ ಇದ್ದ ಶೇ 25ರಷ್ಟು ಬಿಲ್ ಬಿಡುಗಡೆಯಾಗುತ್ತಿದೆ. ಸರ್ಕಾರದ ಆದೇಶದ ಮೇರೆಗೆ ಬಿಬಿಎಂಪಿ ಹಣವನ್ನೂ ಬಿಡುಗಡೆ ಮಾಡಿದ್ದು, ಜ್ಯೇಷ್ಠತೆ ಆಧಾರದಲ್ಲಿ ಗುತ್ತಿಗೆದಾರರ ಖಾತೆಗೆ ಜಮೆಯಾಗಲಿದೆ. ಸಂಘಟಿತ ಹೋರಾಟಕ್ಕೆ ಪ್ರತಿಫಲ ಸಿಕ್ಕಂತಾಗಿದೆ’ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್, ಪ್ರಧಾನ ಕಾರ್ಯದರ್ಶಿ ಎನ್. ಚೇತನ್‌ಕುಮಾರ್ ಹಾಗೂ ಪದಾಧಿಕಾರಿಗಳು ಹೇಳಿದ್ದಾರೆ.

ವಲಯಕ್ಕೆ ಎಷ್ಟು ಹಣ ಬಿಡುಗಡೆ? (₹ಕೋಟಿಗಳಲ್ಲಿ)

ವಲಯ	ಮೊತ್ತ
ಕೇಂದ್ರ	221.04
ಪೂರ್ವ	40.41
ಪಶ್ಚಿಮ	85.73
ದಕ್ಷಿಣ	53.61
ರಾಜರಾಜೇಶ್ವರಿ ನಗರ	61.03
ಬೊಮ್ಮನಹಳ್ಳಿ	51.55
ಯಲಹಂಕ	53.39
ಮಹದೇವಪುರ	56.87
ದಾಸರಹಳ್ಳಿ	2.47
ಒಟ್ಟು	626.14

ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಾಜ್ಯ ಕಾರ್ಯಪಡೆ ಸಭೆ

ವೈದ್ಯರ ಸುರಕ್ಷತೆ: ಮುನ್ನೆಚ್ಚರಿಕೆ ಕ್ರಮಕ್ಕೆ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗೆ ಸುರಕ್ಷತೆ ಒದಗಿಸಲು ಮತ್ತು ಹಲ್ಲೆ ತಡೆಗೆ ಅಗತ್ಯ ಸಂಖ್ಯೆಯಲ್ಲಿ ಸಿಬ್ಬಂದಿ ನಿಯೋಜನೆ, ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಕಾರ್ಯ ಪಡೆ ನಿರ್ಣಯ ಕೈಗೊಂಡಿದೆ.

ವೈದ್ಯರು ಮತ್ತು ಸಿಬ್ಬಂದಿ ಮೇಲೆ ಹಲ್ಲೆ ಹಾಗೂ ದೌರ್ಜನ್ಯ ಪ್ರಕರಣಗಳ ತಡೆಗೆ ಅಕ್ಟೋಬರ್‌ನಲ್ಲಿ ರಾಜ್ಯ ಕಾರ್ಯ ಪಡೆ ರಚಿಸಲಾಗಿದೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಪ್ರಥಮ ಸಭೆಯಲ್ಲಿ ವೈದ್ಯಕೀಯ ಸಂಸ್ಥೆಗಳಲ್ಲಿನ ಸುರಕ್ಷತೆ ಬಗ್ಗೆ ಚರ್ಚಿಸಲಾಯಿತು.

ವೈದ್ಯಕೀಯ ಸಂಸ್ಥೆಗಳಲ್ಲಿ ತುರ್ತು ಎಚ್ಚರಿಕೆ ಕರೆ ಗಂಟೆಗಳನ್ನು ಅಳವಡಿಸಬೇಕು. ಎಲ್ಲ ಆಸ್ಪತ್ರೆಗಳ ಆವರಣದಲ್ಲಿ ಪೊಲೀಸ್ ಚೌಕಿ ಹಾಗೂ ಪೊಲೀಸ್ ಗಸ್ತು ಕಡ್ಡಾಯಗೊಳಿಸಬೇಕು. ನಿಗದಿತ ಪ್ರದೇಶದಲ್ಲಿ ಬೆಳಕಿನ ವ್ಯವಸ್ಥೆ, ನಿರ್ಬಂಧಿತ ಸ್ಥಳ ಗುರುತಿಸುವುದು ಸೇರಿ ಹಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಜಿಲ್ಲಾ ಕಾರ್ಯಪಡೆಗಳನ್ನೂ ರಚಿಸಲಾಗಿದೆ.

ಜಿಲ್ಲಾ ಕಾರ್ಯಪಡೆಯು ಕಾಲಕಾಲಕ್ಕೆ ಸಭೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ರಕ್ಷಣೆಗೆ ಇರುವ ಕಾಯ್ದೆಯ ಪ್ರತಿಗಳನ್ನು ಆಸ್ಪತ್ರೆಗಳ ಆವರಣದಲ್ಲಿ ಪ್ರದರ್ಶಿಸಬೇಕು ಎಂದು ಶಾಲಿನಿ ರಜನೀಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಆರೋಗ್ಯ ಇಲಾಖೆ ಆಯುಕ್ತ ಶಿವಕುಮಾರ್, ನಿರ್ದೇಶಕಿ ಡಾ.ತ್ರಿವೇಣಿ ಎಂ.ಜಿ., ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ.ಸುಜಾತ ರಾಥೋಡ್, ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ.ವಿವೇಕ್ ದೊರೈ, ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಅಧ್ಯಕ್ಷ ವಿ.ವಿ.ಚಿನ್ನಿವಾಲರ್, ಐಎಂಎ ಕರ್ನಾಟಕ ಶಾಖೆಯ ನಿಯೋಜಿತ ಅಧ್ಯಕ್ಷ ಡಾ.ವೀರಭದ್ರಯ್ಯ, ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳ ಸಂಘದ ಅಧ್ಯಕ್ಷ ಡಾ. ಯತೀಶ್ ಹಾಗೂ ವಿವಿಧ ವೈದ್ಯಕೀಯ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಆಡಳಿತಾತ್ಮಕ ಮುಖ್ಯಸ್ಥರಾಗಿ ಕೆ. ಶ್ರೀನಿವಾಸ

ಬೆಂಗಳೂರು: ರಾಜ್ಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಆಯುಕ್ತರಾಗಿರುವ ಐಎಎಸ್ ಅಧಿಕಾರಿ ಕೆ. ಶ್ರೀನಿವಾಸ ಅವರನ್ನು ರಾಜ್ಯ ಔಷಧ ನಿಯಂತ್ರಣ ಇಲಾಖೆಯ ಆಡಳಿತಾತ್ಮಕ ಮುಖ್ಯಸ್ಥರನ್ನಾಗಿ ನೇಮಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ. ಇಲಾಖೆಯ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಶ್ರೀನಿವಾಸ್ ಅವರ ಅಧೀನದಲ್ಲಿ ಕಾರ್ಯನಿರ್ವಹಿಸಬೇಕು. ಮುಂದಿನ ಆದೇಶದವರೆಗೆ ಈ ನೇಮಕಾತಿ ಜಾರಿಯಲ್ಲಿ ಇರಲಿದೆ ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಬಿಡಿಎ: ಒತ್ತುವರಿ ತೆರವು



ಭೀಮನಕುಪ್ಪೆಯಲ್ಲಿ ಒತ್ತುವರಿಯಾಗಿದ್ದ ಜಮೀನನ್ನು ಬಿಡಿಎ ಸಿಬ್ಬಂದಿ ಸ್ಥಳೀಯ ಪೊಲೀಸರ ನೆರವಿನೊಂದಿಗೆ ವಶಕ್ಕೆ ಪಡೆದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೀಮನಕುಪ್ಪೆಯಲ್ಲಿ ಒತ್ತುವರಿಯಾಗಿದ್ದ 2 ಎಕರೆ 30 ಗುಂಟೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂಗಳವಾರ ಮರು ವಶಪಡಿಸಿಕೊಂಡಿದೆ.

ಕೆಂಗೇರಿ ಹೋಬಳಿ ಭೀಮನಕುಪ್ಪೆ ಸರ್ವೆ ನಂಬರ್ 240ರ ಸ್ವತ್ತನ್ನು ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಬಿಡಿಎ ಸ್ವಾಧೀನಪಡಿಸಿಕೊಂಡಿತ್ತು. ಆದರೆ, ಈ ಸ್ಥಳದಲ್ಲಿ ಅನಧಿಕೃತವಾಗಿ ನರ್ಸರಿ ತಲೆ ಎತ್ತಿತ್ತು. ಸುಮಾರು ₹60 ಕೋಟಿ ಮೌಲ್ಯದ ಜಮೀನನ್ನು ಬಿಡಿಎ ಸಿಬ್ಬಂದಿ ವಶಕ್ಕೆ ತೆಗೆದುಕೊಂಡರು.

ನಾಡಪ್ರಭು ಕೆಂಪೇಗೌಡ ಬಡಾವಣೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ನೇತೃತ್ವದಲ್ಲಿ ಬಿಡಿಎ ಕಾರ್ಯಪಡೆ ತೆರವು ಕಾರ್ಯಾಚರಣೆ ನಡೆಸಿತು ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ದಿ ಮೋಸ್ಟ್ ಇಂಪ್ಯಾಕ್ಟ್‌ಫುಲ್ ಪ್ರಾಪ್‌ಟೆಕ್ ಸಮ್ಮಿಟ್: ಅತಿಥಿಗಳು: ಪ್ರಿಯಾಂಕ್ ಖರ್ಗೆ, ಸುಜಾತಾ ಜಿ., ಭಾಷಣಕಾರರು: ಜಿತು ವಿರವಾಣಿ, ಸಮೀರ್ ಕುಮಾರ್, ಪುಷ್ಕರ್ ಸಿಂಗ್, ವಿವೇಕ್ ಅಗರ್ವಾಲ್, ಆಯೋಜನೆ: ಬ್ರಿಗೇಡ್ ರೀಪ್, ಸ್ಥಳ: ಶೆರಾಟನ್ ಗ್ರ್ಯಾಂಡ್, ರಾಜಾಜಿನಗರ, ಬ್ರಿಗೇಡ್ ಗೇಟ್‌ವೇ, ಬೆಳಿಗ್ಗೆ 9.30

ಭಾರತೀಯ ಆರ್ಥೋಪೆಡಿಕ್ ಅಸೋಸಿಯೇಷನ್‌ನ 69ನೇ ವಾರ್ಷಿಕ ಸಮ್ಮೇಳನ: ಅತಿಥಿಗಳು: ಎಚ್.ಡಿ. ಕುಮಾರಸ್ವಾಮಿ, ಡಾ. ಶರಣಪ್ರಕಾಶ ಪಾಟೀಲ, ಜೆ.ಆರ್. ಮಿಧಾ, ಆಯೋಜನೆ: ಭಾರತೀಯ ಅರ್ಥೋಪಡಿಕ್ ಅಸೋಸಿಯೇಷನ್, ಸ್ಥಳ: ಬೆಂಗಳೂರು ಅರಮನೆ, ಸಂಜೆ 5.30

‘ಒಂದು ವಿಲಯ ಕಥೆ’ ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಶರತ್ ಪರ್ವತವಾಣಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಕೃಷಿ ನವೋದ್ಯಮ ಸಮಾವೇಶದಲ್ಲಿ ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ ಅಭಿಮತ

‘ಕೃಷಿ ಆದಾಯ ಹೆಚ್ಚಳಕ್ಕೆ ನವೋದ್ಯಮ ನೆರವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹವಾಮಾನ ವೈಪರೀತ್ಯ ನಿರ್ವಹಣೆ ದೊಡ್ಡ ಸವಾಲಾಗಿದ್ದು, ಇಂಥ ಸಂದರ್ಭದಲ್ಲಿ ನವೋದ್ಯಮಗಳು ಕೃಷಿಯಲ್ಲಿ ನಷ್ಟದ ಪ್ರಮಾಣ ತಪ್ಪಿಸಿ ಹೆಚ್ಚಿನ ಆದಾಯ ತರುವ ನಿಟ್ಟಿನಲ್ಲಿ ನೆರವಾಗಲಿವೆ’ ಎಂದು ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಕೃಷಿ ನಾವೀನ್ಯ ಮತ್ತು ಉದ್ಯಮಶೀಲತೆ ಉತ್ತೇಜಿಸಲು ಕೃಷಿ ನವೋದ್ಯಮ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿಯಲ್ಲಿ ಆದಾಯ ಹೆಚ್ಚಿಸಲು ರಾಜ್ಯದಲ್ಲಿ ಮೊದಲ ಬಾರಿಗೆ ಸೆಕೆಂಡರಿ ಕೃಷಿ ನಿರ್ದೇಶನಾಲಯ ಆರಂಭಿಸಲಾಗಿದೆ. ರೈತರನ್ನು ಉದ್ದಿಮೆದಾರರನ್ನಾಗಿ ರೂಪಿಸುವುದು, ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಮತ್ತು ರಫ್ತು ಚಟುವಟಿಕೆಗಳಿಗೆ ಒತ್ತು ನೀಡುವುದು ಸೆಕೆಂಡರಿ ಕೃಷಿ ನಿರ್ದೇಶನಾಲಯದ ಪ್ರಮುಖ ಉದ್ದೇಶವಾಗಿದೆ’ ಎಂದು ವಿವರಿಸಿದರು.

‘ಕೃಷಿ ನವೋದ್ಯಮಗಳಿಂದ ಹೆಚ್ಚು ಹೆಚ್ಚು ತಾಂತ್ರಿಕತೆಗಳು ಹೊರಹೊಮ್ಮಿ ರೈತರನ್ನು ಸುಸ್ಥಿರ ಕೃಷಿಯೆಡೆಗೆ ಕೊಂಡೊಯ್ಯಬೇಕು. ಇಂಥ ಸಮ್ಮೇಳನಗಳು ಯುವಜನರನ್ನು ನವೋದ್ಯಮದೆಡೆಗೆ ಸೆಳೆಯಲು ಸಹಕಾರಿಯಾಗಿವೆ’ ಎಂದು ಸಚಿವರು ಅಭಿಪ್ರಾಯಪಟ್ಟರು.

ಕರ್ನಾಟಕ ಇನ್ನೋವೇಷನ್ ಆ್ಯಂಡ್ ಟೆಕ್ನಾಲಜಿ ಸೊಸೈಟಿ ವ್ಯವಸ್ಥಾಪಕ ನಿರ್ದೇಶಕ ಎಚ್‌.ವಿ.ದರ್ಶನ್ ಮಾತನಾಡಿ, ‘ಬೆಂಗಳೂರು ಸಿಲಿಕಾನ್ ಸಿಟಿ ಅಷ್ಟೇ ಅಲ್ಲದೇ ನವೋದ್ಯಮ ನಗರವಾಗುತ್ತಿದೆ. ಶಾಲಾ ಮತ್ತು ಕಾಲೇಜು ಪಠ್ಯಗಳಲ್ಲಿ ನವೋದ್ಯಮಗಳ ಬಗ್ಗೆ ಮಾಹಿತಿ ನೀಡಬೇಕು. ಆ ಮೂಲಕ ಯುವ ಜನರಲ್ಲಿ ಆಸಕ್ತಿ ಮೂಡಿಸಬೇಕು’ ಎಂದು ಸಲಹೆ ನೀಡಿದರು.

ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ ಮಾತನಾಡಿ, ‘ಡಿಜಿಟಲ್ ಕೃಷಿಯು ರೈತರ ಅಗತ್ಯಗಳನ್ನು ಪೂರೈಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ. ಬದಲಾದ ಪರಿಸ್ಥಿತಿಯಲ್ಲಿ ರೈತ ಸ್ನೇಹಿ ತಂತ್ರಜ್ಞಾನಗಳ ಬಗ್ಗೆ ಹೆಚ್ಚು ಸಂಶೋಧನೆಗಳಾಗಬೇಕು. ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯ ಕೃಷಿ ವಿಜ್ಞಾನ ಕೇಂದ್ರಗಳ ವಿಸ್ತರಣಾ ಚಟುವಟಿಕೆಗಳಲ್ಲಿ ನವೋದ್ಯಮಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸ ಮಾಡಲಾಗುವುದು’ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾಲಯದಲ್ಲಿ ತರಬೇತಿ ಪಡೆದು, ಯಶಸ್ವಿಯಾಗಿರುವ ನವೋದ್ಯಮಿಗಳ ಯಶೋಗಾಥೆಗಳನ್ನು ಒಳಗೊಂಡ ಕೃತಿಯನ್ನು ಬಿಡುಗಡೆ ಮಾಡಲಾಯಿತು.


ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಟಿ.ಕೆ.ಪ್ರಭಾಕರ ಶೆಟ್ಟಿ, ಎಂ.ಚಂದ್ರೇಗೌಡ, ಕುಲಸಚಿವ ಕೆ.ಸಿ.ನಾರಾಯಣಸ್ವಾಮಿ, ಸಂಶೋಧನಾ ನಿರ್ದೇಶಕ ಎಚ್‌.ಎಸ್‌.ಶಿವರಾಮು, ಡೀನ್‌ಗಳಾದ ಮೋಹನ್ ನಾಯ್ಕ್, ಎನ್‌.ಬಿ.ಪ್ರಕಾಶ್ ಉಪಸ್ಥಿತರಿದ್ದರು.



ಕೃಷಿ ನವೋದ್ಯಮ ಸಮಾವೇಶದಲ್ಲಿ ಆಯೋಜಿಸಿದ್ದ ಪ್ರದರ್ಶನ ಮಳಿಗೆಯೊಂದರಲ್ಲಿ ವಿದ್ಯಾರ್ಥಿಗಳು ಮಾಹಿತಿ ಪಡೆದರು — ಪ್ರಜಾವಾಣಿ ಚಿತ್ರ

ಪ್ರೊ.ಎಸ್‌.ಜಿ.ಎಸ್‌–78: ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ 8ಕ್ಕೆ

ಪ್ರಜಾವಾಣಿ ವಾರ್ತೆ



ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ

ಬೆಂಗಳೂರು: ಭಾಗವತರು ಸಾಂಸ್ಕೃತಿಕ ಸಂಘಟನೆ ಇದೇ 8ರಂದು ಬೆಳಿಗ್ಗೆ 10.30ರಿಂದ ಜೆ.ಸಿ. ರಸ್ತೆಯಲ್ಲಿರುವ ನಯನ ಸಭಾಂಗಣದಲ್ಲಿ ‘ಪ್ರೊ. ಎಸ್‌.ಜಿ.ಎಸ್‌.-78’ ಕಾರ್ಯಕ್ರಮ ಹಮ್ಮಿಕೊಂಡಿದೆ.

‘ಪ್ರೊ.ಎಸ್‌.ಜಿ.ಸಿದ್ಧರಾಮಯ್ಯ: ಬದುಕು–ಬರಹ’ ರಾಜ್ಯಮಟ್ಟದ ವಿಚಾರ ಸಂಕಿರಣ, ಗಾಯನ, ಪುಸ್ತಕ ಬಿಡುಗಡೆ ಹಾಗೂ ರಂಗ ಗೌರವವನ್ನು ಈ ಕಾರ್ಯಕ್ರಮದಡಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಸಂಗೀತ ನಿರ್ದೇಶಕ ಹಂಸಲೇಖ ಉದ್ಘಾಟಿಸುತ್ತಾರೆ. ಕವಿ ಎಲ್‌. ಹನುಮಂತಯ್ಯ ಅಧ್ಯಕ್ಷತೆ ವಹಿಸುತ್ತಾರೆ. ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅವರು ಪ್ರಾಸ್ತಾವಿಕ ಮಾತುಗಳನ್ನಾಡಲಿದ್ದಾರೆ. ‘ಎಸ್‌.ಜಿ.ಎಸ್‌. ಸಮಗ್ರ ನಾಟಕಗಳು’ ಹಾಗೂ ‘ಅನಾದಿಯ ಗೆಜ್ಜೆಧ್ವನಿ’ ಕವನ ಸಂಕಲನ ಬಿಡುಗಡೆಯಾಗಲಿದೆ.

ಮಧ್ಯಾಹ್ನ 12.30ಕ್ಕೆ ‘ಪ್ರೊ.ಎಸ್‌.ಜಿ.ಎಸ್‌: ಬರಹ–ಬದುಕು’ ಗೋಷ್ಠಿ ನಡೆಯಲಿದ್ದು, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌. ಮುಕುಂದರಾಜ್ ಅಧ್ಯಕ್ಷತೆ ವಹಿಸುತ್ತಾರೆ. ಮಧ್ಯಾಹ್ನ 2.45ಕ್ಕೆ ‘ಪ್ರೊ.ಎಸ್‌.ಜಿ.ಎಸ್‌.: ವಿಚಾರ ಮತ್ತು ಆಡಳಿತ’ ಗೋಷ್ಠಿ ಹಮ್ಮಿಕೊಳ್ಳಲಾಗಿದ್ದು, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ ಅಧ್ಯಕ್ಷತೆ ವಹಿಸುತ್ತಾರೆ.

ಇದೇ ದಿನ ಸಂಜೆ 4.30ಕ್ಕೆ ಎಸ್‌.ಜಿ. ಸಿದ್ಧರಾಮಯ್ಯ ಅವರೊಂದಿಗೆ ಸಂವಾದ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜಲಮಂಡಳಿಯ ಉಳಿವಿಗೆ ಸಹಕಾರ ನೀಡಿ – ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್

ನೀರಿನ ದರ ಪರಿಷ್ಕರಣೆ: ಶಾಸಕರಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರಿನ ದರ ಪರಿಷ್ಕರಣೆಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವೇದಿಕೆ ಸಿದ್ಧಗೊಳಿಸುತ್ತಿದ್ದು, ಮೊದಲ ಪ್ರಯತ್ನವಾಗಿ ದರ ಪರಿಷ್ಕರಣೆಯನ್ನು ಬೆಂಬಲಿಸುವಂತೆ ಕೋರಿ ನಗರದ ಎಲ್ಲ ಶಾಸಕರಿಗೆ ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಪತ್ರ ಬರೆದಿದ್ದಾರೆ.

ಪತ್ರದಲ್ಲಿ ಜಲಮಂಡಳಿಯ ಆರ್ಥಿಕ ಸ್ಥಿತಿ ಕುರಿತ ಮಾಹಿತಿಯೊಂದಿಗೆ ದರ ಪರಿಷ್ಕರಣೆಯ ಅಗತ್ಯವನ್ನು ಒತ್ತಿ ಹೇಳಿದ್ದಾರೆ. 'ದರ ಪರಿಷ್ಕರಿಸದಿದ್ದರೆ ನಗರಕ್ಕೆ ನಿರಂತರವಾಗಿ ನೀರು ಪೂರೈಸುವುದು ಹಾಗೂ ನೈರ್ಮಲ್ಯ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವುದಕ್ಕೆ ತೊಂದರೆಯಾಗುತ್ತದೆ' ಎಂದು ವಿವರಿಸಿದ್ದಾರೆ.

'ಒಂದೂವರೆ ಕೋಟಿ ಜನಸಂಖ್ಯೆಯ ನಗರಕ್ಕೆ ನೂರು ಕಿ.ಮೀ ದೂರದ ಕಾವೇರಿ ನದಿಯಿಂದ ನೀರು ಪೂರೈಸಲಾಗುತ್ತಿದೆ. ಸರ್ಕಾರದ ಹಣಕಾಸಿನ ನೆರವಿಲ್ಲದೇ, ಸ್ವಾಯತ್ತ ಸಂಸ್ಥೆಯಾಗಿರುವ ಜಲಮಂಡಳಿಗೆ ಕುಡಿಯುವ ನೀರಿಗೆ ವಿಧಿಸುವ ಶುಲ್ಕವೇ ಪ್ರಮುಖ ಆದಾಯವಾಗಿದೆ. 10 ವರ್ಷಗಳಲ್ಲಿ ಬೆಂಗಳೂರು ನಗರ ಬೃಹತ್ತಾಗಿ ಬೆಳೆದಿದೆ. ಜನಸಂಖ್ಯೆಯೂ ಹೆಚ್ಚಾಗಿದೆ. ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಯ ಕಾರ್ಯಾಚರಣೆ ವೆಚ್ಚಗಳು ದುಪ್ಪಟ್ಟಾಗಿವೆ. ಆದರೆ, ಜಲಮಂಡಳಿ ಆರ್ಥಿಕ ಪರಿಸ್ಥಿತಿ ಸ್ಥಿರವಾಗಿದ್ದು, ಈಗಂತೂ ಬಹಳಷ್ಟು ತೊಂದರೆ ಎದುರಿಸುತ್ತಿದೆ' ಎಂದು ತಿಳಿಸಿದ್ದಾರೆ.

'ಇಷ್ಟಾದರೂ ದಶಕದಿಂದ ಕುಡಿಯುವ ನೀರಿನ ದರ ಪರಿಷ್ಕರಿಸಿಲ್ಲ. 2014ರಲ್ಲಿ ನಿಗದಿಪಡಿಸಲಾಗಿದ್ದ ಕುಡಿಯುವ ನೀರಿನ ದರದಿಂದ ಬರುತ್ತಿರುವ ಲಾಭ, ಈಗಿನ ಕಾರ್ಯಾಚರಣೆಯ ವೆಚ್ಚಗಳನ್ನು ಸರಿದೂಗಿಸಲು ಸಾಧ್ಯವಾಗುತ್ತಿಲ್ಲ. ನೀರಿನ ದರ ಪರಿಷ್ಕರಿಸದಿದ್ದರೆ, ಜಲಮಂಡಳಿ ತನ್ನ ದೈನಂದಿನ ಕಾರ್ಯಚಟುವಟಿಕೆ ನಿರ್ವಹಿಸಲು ಕಷ್ಟವಾಗುತ್ತದೆ' ಎಂದು ಹೇಳಿದ್ದಾರೆ.

'ಹಿಂದೆ ಪರಿಷ್ಕರಿಸಿದ ಶುಲ್ಕದಲ್ಲೇ ಜಲಮಂಡಳಿಯನ್ನು ನಿರ್ವಹಿಸಿಕೊಂಡು ಬರಲಾಗಿದೆ. ಬೆಳೆಯುತ್ತಿರುವ ನಗರಕ್ಕೆ ಜಾಗತಿಕ ಮಟ್ಟದ ಸೌಲಭ್ಯಗಳ ಜೊತೆಗೆ, ಮೂಲಸೌಲಭ್ಯ ಒದಗಿಸಬೇಕು. ಒಳಚರಂಡಿ ಸೇವೆ ಸುಧಾರಣೆಗೆ ಉನ್ನತ ತಂತ್ರಜ್ಞಾನಗಳನ್ನು ಬಳಸಬೇಕಿದೆ. ಇವುಗಳ ಜೊತೆಗೆ ಜಲಮಂಡಳಿ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ದರ ಪರಿಷ್ಕರಣೆ ಅನಿವಾರ್ಯವಾಗಿದೆ. ಜಲಮಂಡಳಿಯ ಉಳಿವಿಗಾಗಿ ದರ ಪರಿಷ್ಕರಣೆಗೆ ಸಹಕಾರ ನೀಡಿ' ಎಂದು ಶಾಸಕರಲ್ಲಿ ಮನವಿ ಮಾಡಿದ್ದಾರೆ.

ಮುಂದಿನ ದಿನಗಳಲ್ಲಿ ಉಪ ಮುಖ್ಯಮಂತ್ರಿಯವರು ದರ ಪರಿಷ್ಕರಣೆ ಸಂಬಂಧ ಸಭೆ ಕರೆಯಲಿದ್ದು, ಆ ಸಭೆಯಲ್ಲಿ ತಾವು ಭಾಗವಹಿಸಿ, ನೀರಿನ ದರ ಪರಿಷ್ಕರಣೆಯನ್ನು ಬೆಂಬಲಿಸಿ ಎಂದು ಮಂಡಳಿ ಪರವಾಗಿ ವಿನಂತಿಸಿದ್ದಾರೆ.

'ವರಮಾನಕ್ಕಿಂತಲೂ ವೆಚ್ಚವೇ ಅಧಿಕ'



ರಾಮ್‌ಪ್ರಸಾತ್ ಮನೋಹರ್

'ವಿದ್ಯುತ್ ವೆಚ್ಚ ಶೇ 107.3ರಷ್ಟು ಹೆಚ್ಚಾಗಿದೆ(2014ರಿಂದ 2024ರವರೆಗೆ). ನಿರ್ವಹಣಾ ವೆಚ್ಚದಲ್ಲಿ ಶೇ 122.5ರಷ್ಟು ಹೆಚ್ಚಿದೆ. ವೇತನ ಮತ್ತು ಪಿಂಚಣಿ ವೆಚ್ಚ ಶೇ 61.3ರಷ್ಟು ಏರಿಕೆಯಾಗಿದೆ. ಪ್ರಸ್ತುತ ಜಲಮಂಡಳಿಯ ತಿಂಗಳ ವೆಚ್ಚ ₹170 ಕೋಟಿ. ಪ್ರತಿ ತಿಂಗಳು ಸಂಗ್ರಹವಾಗುತ್ತಿರುವ ಶುಲ್ಕ ₹129 ಕೋಟಿ ಮಾತ್ರ' ಎಂದು ರಾಮ್‌ಪ್ರಸಾತ್ ಪತ್ರದಲ್ಲಿ ವಿವರಿಸಿದ್ದಾರೆ.

'ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡಿರುವ 110 ಹಳ್ಳಿಗಳಿಗೆ ಕಳೆದ ತಿಂಗಳಿನಿಂದ ಕಾವೇರಿ 5ನೇ ಹಂತದಲ್ಲಿ ಕುಡಿಯುವ ನೀರು ಪೂರೈಸಲಾಗುತ್ತಿದೆ. ಇದರಿಂದ ಪ್ರತಿ ತಿಂಗಳು ₹40 ಕೋಟಿ ಹೆಚ್ಚಿನ ವಿದ್ಯುತ್ ಶುಲ್ಕ ಭರಿಸಬೇಕಿದೆ. ಪ್ರತಿ ತಿಂಗಳು ಮಂಡಳಿಯ ವೆಚ್ಚ ₹210 ಕೋಟಿಗೆ ಏರಲಿದೆ. ತಿಂಗಳಿಗೆ ₹82 ಕೋಟಿ, ವಾರ್ಷಿಕವಾಗಿ ₹972 ಕೋಟಿ ಕೊರತೆಯಾಗಲಿದೆ. ಇದರಿಂದ ಜಾಗತಿಕ ಆರ್ಥಿಕ ಸಂಸ್ಥೆಗಳಿಂದ ಅಗತ್ಯ ಹಣಕಾಸಿನ ನೆರವು ಪಡೆಯುವುದೂ ಕಷ್ಟವಾಗುತ್ತದೆ' ಎಂದು ಉಲ್ಲೇಖಿಸಿದ್ದಾರೆ.

ತಲಾ ₹1 ಕೋಟಿ ವಿಮೆ: ಕೆನರಾ ಬ್ಯಾಂಕ್ ಜೊತೆ ಕೆಕೆಆರ್‌ಟಿಸಿ ಒಪ್ಪಂದ

ಬೆಂಗಳೂರು: ನೌಕರರಿಗೆ ಪ್ರೀಮಿಯಂ ರಹಿತವಾಗಿ ತಲಾ ₹1 ಕೋಟಿ ಮೊತ್ತದ ಅಪಘಾತ ವಿಮಾ ಯೋಜನೆ ಜಾರಿಗೊಳಿಸಲು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು (ಕೆಕೆಆರ್‌ಟಿಸಿ) ಕೆನರಾ ಬ್ಯಾಂಕ್ ಜೊತೆ ಒಪ್ಪಂದ ಮಾಡಿಕೊಂಡಿದೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಂ. ರಾಚಪ್ಪ ಮತ್ತು ಕೆನರಾ ಬ್ಯಾಂಕ್‌ನ ಜನರಲ್ ಮ್ಯಾನೇಜರ್ ವಿಜಯಕುಮಾರ್ ಅವರು ಒಡಂಬಡಿಕೆಗಳನ್ನು ವಿನಿಮಯ ಮಾಡಿಕೊಂಡರು.

'ನಿಗಮದ ನೌಕರರ ವೇತನ ಖಾತೆಗಳನ್ನು ಕೆನರಾ ಬ್ಯಾಂಕಿನ 'ಪೇ-ರೋಲ್ ಪ್ಯಾಕೇಜ್ ಸ್ಕೀಮ್' ಅಡಿಯಲ್ಲಿ ತೆರೆದು ಈ ವಿಮಾ ಸೌಲಭ್ಯವನ್ನು ಎಲ್ಲ ನೌಕರರು ಶುಲ್ಕ ರಹಿತವಾಗಿ ಪಡೆದುಕೊಳ್ಳಬಹುದು' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಂ. ರಾಚಪ್ಪ ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಮಲಿಂಗಾರೆಡ್ಡಿ ಅವರು ಮಾತನಾಡಿ, 'ನಿಗಮದ ನೌಕರರು ವೈಯಕ್ತಿಕ ಮತ್ತು ಕರ್ತವ್ಯನಿರತ ಸಂದರ್ಭದಲ್ಲಿ ಅಪಘಾತವಾಗಿ ನಿಧನರಾದರೆ ₹1ಕೋಟಿ ಅಪಘಾತ ವಿಮೆಯ ಪರಿಹಾರ ಮೊತ್ತವನ್ನು ನಾಮನಿರ್ದೇಶಿತರಿಗೆ ನೀಡಲಾಗುತ್ತದೆ. ಡೆಬಿಟ್ ಕಾರ್ಡ್ ಹೊಂದಿದರೆ ₹ 6ಲಕ್ಷದಿಂದ ₹14 ಲಕ್ಷದವರೆಗೂ ಹಾಗೂ ಪ್ರೀಮಿಯಂ ರಹಿತವಾಗಿ ₹1ಲಕ್ಷದಿಂದ ₹6 ಲಕ್ಷದವರೆಗೆ ಉಚಿತ ಅವಧಿ ವಿಮೆಯನ್ನು ಪಾಲಿಸಿಯಲ್ಲಿ ನಾಮನಿರ್ದೇಶಿತರಾದವರಿಗೆ ವಿತರಿಸಲಾಗುತ್ತದೆ' ಎಂದು ತಿಳಿಸಿದರು.

ಕೆಲಸ ಕಾಯಂಗೊಳಿಸಲು ಕಸ ಸಂಗ್ರಹಿಸುವ ವಾಹನಗಳ ಚಾಲಕರು, ಸಹಾಯಕರ ಆಗ್ರಹ

ಡಿಸಿಎಂ ಭರವಸೆ: ಮುಷ್ಕರ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಭರವಸೆಗೆ ಮನ್ನಣೆ ನೀಡಿರುವ, ಕಸ ಸಂಗ್ರಹಿಸುವ, ವಿಲೇವಾರಿ ಮಾಡುವ ವಾಹನಗಳ ಚಾಲಕರು ಮತ್ತು ಸಹಾಯಕರು ಮುಷ್ಕರವನ್ನು ವಾಪಸ್ ಪಡೆದಿದ್ದಾರೆ.

ಮನೆಗಳಿಂದ ಕಸ ಸಂಗ್ರಹಿಸುವ, ವಿಲೇವಾರಿ ಮಾಡುವ ವಾಹನಗಳ ಚಾಲಕರು ಮತ್ತು ಸಹಾಯಕರು ತಮ್ಮ ಸೇವೆಯನ್ನು ಬಿಬಿಎಂಪಿಯಲ್ಲಿ ಕಾಯಂ ವಿಲೀನ ಮಾಡಿಕೊಳ್ಳುವಂತೆ ಆಗ್ರಹಿಸಿ ಸೋಮವಾರದಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು. ಬಿಬಿಎಂಪಿ ವ್ಯಾಪ್ತಿಯ ಪಶ್ಚಿಮ ವಲಯದ ಎಲ್ಲ ಬಡಾವಣೆಗಳು, ದಕ್ಷಿಣ, ಪೂರ್ವ ವಲಯದ ಕೆಲವು ಬಡಾವಣೆಗಳಲ್ಲಿ ಎರಡು ದಿನದಿಂದ ಕಸ ಸಂಗ್ರಹ ಕಾರ್ಯ ಸ್ಥಗಿತಗೊಂಡಿತ್ತು.

ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ಚಾಲಕರು, ಸಹಾಯಕರು, 'ಬಿಬಿಎಂಪಿಯಲ್ಲಿ ಸುಮಾರು 20 ವರ್ಷದಿಂದ ಕೆಲಸ ಮಾಡುತ್ತಿರುವ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ ಆಧಾರ ದಲ್ಲಿ ಘನತ್ಯಾಜ್ಯ ಸಾಗಿಸುವ ವಾಹನ ಚಾಲಕರು, ಸಹಾಯಕರು, ಲೋಡರ್ಸ್‌ಗಳ ಸೇವೆಯನ್ನು ಕಾಯಂ ವಿಲೀನ ಮಾಡಿಕೊಳ್ಳಬೇಕು. ನಿರಂತರ ಗುತ್ತಿಗೆಯಲ್ಲಿ ಕೆಲಸ ಮಾಡಿಸುವುದು 'ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿಷೇಧ) ಕಾಯ್ದೆಯಂತೆ ಕಾನೂನುಬಾಹಿರ. ಹೀಗಾಗಿ, ಈ ವ್ಯವಸ್ಥೆಯಲ್ಲಿರುವ ಎಲ್ಲರನ್ನೂ ಪೌರ ಕಾರ್ಮಿಕರೆಂದು ಸರ್ಕಾರ ಅಧಿಸೂಚನೆ ಹೊರಡಿಸಬೇಕು' ಎಂದು ಆಗ್ರಹಿಸಿದರು.



ತ್ಯಾಜ್ಯ ಸಂಗ್ರಹಿಸುವ ವಾಹನಗಳ ಚಾಲಕರು ಹಾಗೂ ಸಹಾಯಕರು ಪ್ರತಿಭಟಿಸುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಪತ್ರ ಸ್ವೀಕರಿಸಿದರು

ಪ್ರತಿಭಟನಾ ಸ್ಥಳಕ್ಕೆ ಭೇಟಿನೀಡಿದ ಶಿವಕುಮಾರ್, ಮುಷ್ಕರ ನಡೆಸುತ್ತಿದ್ದವರ ಮನವೊಲಿಸಿದರು. ಆ ಬಳಿಕ ಮುಷ್ಕರ ವಾಪಸ್ ಪಡೆಯುವುದಾಗಿ ಅವರು ಘೋಷಿಸಿದರು.

'ಉಪ ಮುಖ್ಯಮಂತ್ರಿಯವರು ನೀಡಿರುವ ಭರವಸೆಯಿಂದ ನಾವು ಮುಷ್ಕರವನ್ನು ವಾಪಸ್ ಪಡೆದುಕೊಂಡಿದ್ದೇವೆ. ಡಿಸೆಂಬರ್ 26ರ ನಂತರ ಸಭೆ ನಡೆಸದಿದ್ದರೆ, ನಮ್ಮ ಬೇಡಿಕೆಗಳನ್ನು ಈಡೇರಿಸಲು ಮುಂದಾಗದಿದ್ದರೆ ಮುಂದೆ ಉಗ್ರ ಹೋರಾಟ ನಡೆಸಲಾಗುತ್ತದೆ' ಎಂದು ಪ್ರಜಾ ಹಕ್ಕುಗಳ ವೇದಿಕೆ ಅಧ್ಯಕ್ಷ ತ್ಯಾಗರಾಜ್ ತಿಳಿಸಿದರು.

ಬೇಡಿಕೆಗಳು: ಐಪಿಡಿ ಸಾಲಪ್ಪನವರ ವರದಿ ಜಾರಿಗೊಳಿಸಬೇಕು. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಮತ್ತು ರಾಹುಲ್ ಗಾಂಧಿಯವರು ನೀಡಿದ ಭರವಸೆಯಂತೆ ಚಾಲಕರು, ಸಹಾಯಕರು, ಲೋಡರ್ಸ್‌ಗಳ ಸೇವೆಯನ್ನು ಕಾಯಂ ವಿಲೀನಗೊಳಿಸಬೇಕು.

ಪೌರಕಾರ್ಮಿಕರ ನೇಮಕಾತಿಯ ಅಂತಿಮ ಪಟ್ಟಿ ಬಿಡುಗಡೆ ಮಾಡಿ, ಆದೇಶ ಪತ್ರ ನೀಡಬೇಕು. 55 ವರ್ಷ ತುಂಬಿದ ಪೌರಕಾರ್ಮಿಕರ ಸೇವೆಯನ್ನು ಅನುಭವದ ಆಧಾರದಲ್ಲಿ ಕಾಯಂ ವಿಲೀನ ಮಾಡಬೇಕು. 500 ಜನರಿಗೆ ಒಬ್ಬ ಪೌರಕಾರ್ಮಿಕರಂತೆ 32 ಸಾವಿರ ಪೌರಕಾರ್ಮಿಕರನ್ನು ನೇರ ಪಾವತಿಯಡಿ ಹೊಸದಾಗಿ ಕೆಲಸಕ್ಕೆ ನೇಮಿಸಬೇಕು. ಹೊರ ಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಘನತ್ಯಾಜ್ಯ ಪರಿವೀಕ್ಷಕರನ್ನು ನೇರ ವೇತನದಡಿ ನೇಮಿಸಿಕೊಳ್ಳಬೇಕು. ವಾಣಿಜ್ಯ ತ್ಯಾಜ್ಯ, ಒಣತ್ಯಾಜ್ಯ ಸಂಗ್ರಹ ಕೇಂದ್ರವನ್ನು ಪೌರಕಾರ್ಮಿಕರು, ಚಾಲಕರು, ಸಹಾಯಕರು, ಲೋಡರ್ಸ್‌ಗಳ ಅವಲಂಬಿತರಿಗೆ ಗುತ್ತಿಗೆ ನೀಡಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಮುಷ್ಕರ ಆರಂಭಿಸಲಾಗಿತ್ತು.

ಕಾನೂನು ಪ್ರಕಾರ ಕ್ರಮ: ಡಿಕೆಶಿ

'ನಮ್ಮ ಸರ್ಕಾರ, ಪೌರಾಡಳಿತ ಇಲಾಖೆ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಕೆಲವು ಪರಿಹಾರ ನೀಡಿದೆ. ವಿಧಾನಮಂಡಲ ಅಧಿವೇಶನದ ಬಳಿಕ ನಿಮ್ಮಲ್ಲಿರುವ ಎಲ್ಲಾ ಗುಂಪುಗಳೊಂದಿಗೆ ಚರ್ಚೆ ನಡೆಸುತ್ತೇನೆ. ಕಾನೂನು ಚೌಕಟ್ಟಿನಲ್ಲಿ ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭರವಸೆ ನೀಡಿದರು.

ಪ್ರತಿಭಟನೆ ಸ್ಥಳಕ್ಕೆ ಮಂಗಳವಾರ ಭೇಟಿ ನೀಡಿದ್ದ ಅವರು, 'ಪೌರಕಾರ್ಮಿಕರ ಬಗ್ಗೆ ನಮಗೆ ಸಹಾನುಭೂತಿ ಇದೆ. ಐಪಿಡಿ ಸಾಲಪ್ಪ ವರದಿ ಜಾರಿ ಸೇರಿದಂತೆ ಅನೇಕ ಬೇಡಿಕೆಗಳನ್ನು ಮುಂದಿರಿಸಲಾಗಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ನೀವು ಪಾಲಿಕೆ ವ್ಯಾಪ್ತಿಗೆ ಬರುವುದಿಲ್ಲ ಎಂದು ತೀರ್ಮಾನಿಸಲಾಗಿತ್ತು. ಈಗ ನೀವು ಹೋರಾಟ ಮಾಡುತ್ತಿದ್ದೀರಿ. ದೇಶದ ವಿವಿಧ ಭಾಗಗಳಲ್ಲಿ ವಿವಿಧ ವ್ಯವಸ್ಥೆ ಇವೆ. ಎಲ್ಲವೂ ವ್ಯವಸ್ಥಿತವಾಗಿ ಆಗಬೇಕು. ನಿಮಗೆ ಎಲ್ಲ ರೀತಿಯಲ್ಲೂ ಸೂಕ್ತವಾದ ನೆರವು ನೀಡಲಾಗುವುದು' ಎಂದರು.

ಕೈಗೆಟಕುವ ದರದಲ್ಲಿ ಮರಳು: ಸಚಿವ ಮಲ್ಲಿಕಾರ್ಜುನ್

'ಜಿಲ್ಲಾ ಸಮಿತಿಗಳಿಂದಲೇ ವಿಲೇವಾರಿ'

ಪ್ರಜಾವಾಣಿ ವಾರ್ತೆ



ಎಸ್‌.ಎಸ್ ಮಲ್ಲಿಕಾರ್ಜುನ್

ಬೆಂಗಳೂರು: 'ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಮರಳು ಪೂರೈಸುವ ಉದ್ದೇಶದಿಂದ ಮರಳು ಬ್ಲಾಕ್‌ಗಳನ್ನು ಹಂಚಿಕೆ ಮಾಡುವ ಹೊಣೆಗಾರಿಕೆಯನ್ನು ಜಿಲ್ಲಾ ಸಮಿತಿಗಳಿಗೇ ನೀಡಲು ನಿರ್ಧರಿಸಲಾಗಿದೆ' ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್‌.ಎಸ್.ಮಲ್ಲಿಕಾರ್ಜುನ್ ತಿಳಿಸಿದರು.

'ನೂತನ ಮರಳು ನೀತಿ ಜಾರಿಗೆ ತರುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಅದರಂತೆ ಸಾರ್ವಜನಿಕ ಕಾಮಗಾರಿಗಳಿಗೆ ಗ್ರಾಮ ಪಂಚಾಯತಿ ಮಟ್ಟದಲ್ಲೇ ಅತ್ಯಂತ ಕಡಿಮೆ ದರದಲ್ಲಿ ಮರಳನ್ನು ಪೂರೈಕೆ ಮಾಡಲಾಗುತ್ತಿದೆ. ಅದೇ ಮಾದರಿಯಲ್ಲಿ ಖಾಸಗಿ ಬಳಕೆಗೆ ಮರಳನ್ನು ಕಡಿಮೆ ಬೆಲೆಗೆ ಪೂರೈಸಲು ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಅವರು ಹೇಳಿದರು.

'ಒಂದು, ಎರಡು ಮತ್ತು ಮೂರನೇ ಶ್ರೇಣಿಯ ಹಳ್ಳಗಳಿಂದ ಮರಳನ್ನು ತೆಗೆದು ವಿಲೇವಾರಿ ಮಾಡುವ ಹೊಣೆಗಾರಿಕೆಯನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಲಾಗಿದೆ. ಸಾರ್ವಜನಿಕ ಕಾಮಗಾರಿಗಳಿಗೆ ಪ್ರತಿ ಟನ್‌ಗೆ ₹300ರಂತೆ ಮರಳು ಪೂರೈಕೆ ಮಾಡಲಾಗುತ್ತಿದೆ' ಎಂದರು.

'ಈಗ ನಾಲ್ಕು ಮತ್ತು ಐದನೇ ಶ್ರೇಣಿ ಹಾಗೂ ಅದಕ್ಕಿಂತ ಉನ್ನತ ಶ್ರೇಣಿಯ ಹಳ್ಳಗಳು ಹಾಗೂ ನದಿ ಪಾತ್ರಗಳಲ್ಲಿ ಮರಳು ಗಣಿಗಾರಿಕೆ ಬ್ಲಾಕ್‌ಗಳನ್ನು ವಿಲೇವಾರಿ ಮಾಡುವ ಹೊಣೆಗಾರಿಕೆಯನ್ನು ಜಿಲ್ಲಾ ಮರಳು ಸಮಿತಿಗಳಿಗೆ ನೀಡಲು ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಅಧಿಸೂಚಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ಇಲಾಖೆಗಳು ಮರಳು ಗಣಿಗಾರಿಕೆ ನಡೆಸಲು ಅವಕಾಶ ಕಲ್ಪಿಸಲಾಗಿದೆ. ವ್ಯಕ್ತಿ ಮತ್ತು ಸಂಸ್ಥೆಗಳು ಟೆಂಡರ್ ಮೂಲಕ ಬ್ಲಾಕ್‌ಗಳನ್ನು ಪಡೆಯಬಹುದಾಗಿದೆ' ಎಂದು ಅವರು ವಿವರಿಸಿದರು.

ಮುಖ್ಯಾಂಶಗಳು

- ಸಾರ್ವಜನಿಕರಿಗೆ ಪೂರೈಸಲು ಪ್ರತಿ ಟನ್‌ಗೆ ₹850 ದರ ನಿಗದಿ
- ಬ್ಲಾಕ್ ಹಂಚಿಕೆಯಲ್ಲಿ ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ
- ಇತರೆ ಹಿಂದುಳಿದ ಜಾತಿಗಳಿಗೂ ಮೀಸಲಾತಿ ಅನ್ವಯ

9, 10ನೇ ತರಗತಿಗೆ ವಿಜ್ಞಾನ, ಸಮಾಜ ವಿಜ್ಞಾನದಲ್ಲಿ ಎರಡು ವಿಧದ ಪ್ರಶ್ನೆ ಪತ್ರಿಕೆ

ನವದೆಹಲಿ (ಪಿಟಿಐ): ಕೇಂದ್ರ ಪ್ರೌಢಶಿಕ್ಷಣ ಮಂಡಳಿ(ಸಿಬಿಎಸ್‌ಇ) 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯದಲ್ಲಿ ಎರಡು ರೀತಿಯ ಪ್ರಶ್ನೆ ಪತ್ರಿಕೆಗಳ (ಸ್ಟ್ಯಾಂಡರ್ಡ್ ಮತ್ತು ಅಡ್ವಾನ್ಸ್ಡ್) ಆಯ್ಕೆ ವ್ಯವಸ್ಥೆಯನ್ನು ಪರಿಚಯಿಸಲು ಮುಂದಾಗಿದೆ.

ಮಂಡಳಿಯು ಈಗಾಗಲೇ 10ನೇ ತರಗತಿ ವಿದ್ಯಾರ್ಥಿಗಳಿಗೆ ಗಣಿತದಲ್ಲಿ ಎರಡು ರೀತಿಯ ಪ್ರಶ್ನೆ ಪತ್ರಿಕೆಗಳನ್ನು ಪರಿಚಯಿಸಿದೆ. ಸಿಬಿಎಸ್‌ಸಿಯ ಪಠ್ಯ ಪುಸ್ತಕ ಸಮಿತಿಯು ಈ ಪರಿಕಲ್ಪನೆಯನ್ನು ಅನುಮೋದಿಸಿದೆ. ಆದರೆ, ಇದಕ್ಕೆ ಸಿಬಿಎಸ್‌ಸಿ ಆಡಳಿತ ಮಂಡಳಿ ಇನ್ನೂ ಒಪ್ಪಿಗೆ ನೀಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಇಪಿಗೆ ಅನುಗುಣವಾಗಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಸದ್ಯ ಗಣಿತದಲ್ಲಿ ಸ್ಟ್ಯಾಂಡರ್ಡ್ ಮತ್ತು ಬೇಸಿಕ್ ಎಂದು ಎರಡು ಪ್ರಶ್ನೆ ಪತ್ರಿಕೆಗಳನ್ನು ಪರಿಚಯಿಸಲಾಗಿದೆ. ವಿದ್ಯಾರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ಪರೀಕ್ಷೆ ಬರೆಯಲು ಅವಕಾಶವಿದೆ.

'ವಿಜ್ಞಾನ ಮತ್ತು ಸಮಾಜ ವಿಜ್ಞಾನದಲ್ಲಿಯೂ ಎರಡು ರೀತಿಯ ಪ್ರಶ್ನೆ ಪತ್ರಿಕೆ ನೀಡುವ ಈ ಪ್ರಸ್ತಾವವನ್ನು ಪಠ್ಯಪುಸ್ತಕ ಸಮಿತಿ ಅನುಮೋದಿಸಿದೆ. ಆದಾಗ್ಯೂ ಇದರ ವ್ಯವಸ್ಥೆ ಮತ್ತು ಚೌಕಟ್ಟನ್ನು ಇನ್ನೂ ರೂಪಿಸಿಲ್ಲ. ಪ್ರಸ್ತುತ, ನಾವು 10ನೇ ತರಗತಿಯಲ್ಲಿ ಒಂದು ವಿಷಯದಲ್ಲಿ ಮಾತ್ರ ಎರಡು ಹಂತದ ಪ್ರಶ್ನೆ ಪತ್ರಿಕೆಗಳನ್ನು ನೀಡುತ್ತಿದ್ದು, ಗಣಿತದಲ್ಲಿ ಸ್ಟ್ಯಾಂಡರ್ಡ್ ಅಥವಾ ಬೇಸಿಕ್ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳಿಗೆ ಪಠ್ಯಕ್ರಮ ಒಂದೇ ಆಗಿರುತ್ತದೆ. ಆದರೆ, ಪ್ರಶ್ನೆ ಪತ್ರಿಕೆಗಳು, ಪ್ರಶ್ನೆಗಳ ಸ್ವರೂಪ ಭಿನ್ನವಾಗಿರುತ್ತದೆ' ಎಂದು ಸಿಬಿಎಸ್‌ಇ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇನ್ನೂ ನಿರ್ಧರಿಸಿಲ್ಲ: ಎರಡು ಹಂತದಲ್ಲಿ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಸಿಬಿಎಸ್‌ಸಿ ಇನ್ನೂ ನಿರ್ಧರಿಸಿಲ್ಲ. 2024-25ರ ಶೈಕ್ಷಣಿಕ ವರ್ಷದಿಂದ ದ್ವೈವಾರ್ಷಿಕ ಬೋರ್ಡ್ ಪರೀಕ್ಷೆಗಳನ್ನು ಪರಿಚಯಿಸುವುದು ಸಚಿವಾಲಯದ ಚಿಂತನೆಯಾಗಿದೆ.

₹1 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ

ಯಲಹಂಕ: ಯಲಹಂಕ ಕ್ಷೇತ್ರದ ಎಂ.ಎಸ್.ಪಾಳ್ಯ ವೃತ್ತದಿಂದ ಜಿಕೆವಿಕೆ ಜಂಕ್ಷನ್‌ವರೆಗೆ ಬೆಂಗಳೂರು ಜಲಮಂಡಳಿ ವತಿಯಿಂದ ₹1 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಜಲಮಂಡಳಿಯವರು ಒಳಚರಂಡಿ ಮತ್ತು ಕುಡಿಯುವ ನೀರು ಪೂರೈಕೆಯ ಕೊಳವೆ ಜೋಡಣೆಗಾಗಿ ರಸ್ತೆ ಅಗೆದಿದ್ದರು. ಇದರಿಂದ ರಸ್ತೆ ಹಾಳಾಗಿತ್ತು. ವಾಹನಸವಾರರು ತೊಂದರೆ ಅನುಭವಿಸುತ್ತಿದ್ದರು. ರಸ್ತೆಯನ್ನು ಸರಿಪಡಿಸಬೇಕೆಂಬ ಈ ಭಾಗದ ಜನರ ಮನವಿಯ ಮೇರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಕಾಮಗಾರಿ ಶೀಘ್ರದಲ್ಲೇ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಬಿಜೆಪಿ ಮುಖಂಡರಾದ ಎ.ಸಿ. ಮುನಿಕೃಷ್ಣಪ್ಪ, ವಿ.ಪವನ್‌ಕುಮಾರ್, ಅಟ್ಟೂರು ನಾರಾಯಣಸ್ವಾಮಿ, ಸತೀಶ್ ಶೇಷಾದ್ರಿ, ಎಚ್.ಎಸ್.ಕಿರಣ್, ಕವಿತಾ, ಭವ್ಯ, ಪದ್ಮಾವತಿ ಮತ್ತಿತರರು ಇದ್ದರು.

ಗ್ರಂಥಾಲಯ ಸಂಘ ಕಾಡದೇವರಮಠ ನೂತನ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘಕ್ಕೆ ಅಧ್ಯಕ್ಷರಾಗಿ ಎಸ್.ಎಲ್. ಕಾಡದೇವರಮಠ ಅವರು ಆಯ್ಕೆಯಾಗಿದ್ದಾರೆ.

ಸಾಮಾನ್ಯ ಚುನಾವಣೆಯಲ್ಲಿ ಮುಂದಿನ ಎರಡು ವರ್ಷಗಳ ಅವಧಿಗೆ ಪದಾಧಿಕಾರಿಗಳ ಆಯ್ಕೆ ನಡೆದಿದೆ. ಉಪಾಧ್ಯಕ್ಷರಾಗಿ ನಾಗಪ್ಪ ಬಕ್ಕಣ್ಣನವರ್, ಸುಭಾಷ್ ರೆಡ್ಡಿ ಬಿ., ಪ್ರಧಾನ ಕಾರ್ಯದರ್ಶಿಯಾಗಿ ಶೇಖರ ಎಚ್.ಪಿ., ಸಹ ಕಾರ್ಯದರ್ಶಿಯಾಗಿ ಪ್ರಕಾಶ್ ಐ.ಎನ್., ರೂಪೇಶ್ ಕುಮಾರ್ ಹಾಗೂ ಖಜಾಂಚಿಯಾಗಿ ಮೀರಾಮಣಿ ಎನ್. ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷಿಸಬೇಕು'



ಸಂತೋಷ್ ಹೆಗ್ಡೆ

ಯಲಹಂಕ: 'ಕೇವಲ ಶ್ರೀಮಂತಿಕೆ ಮತ್ತು ಅಧಿಕಾರವನ್ನು ಗುರುತಿಸುವ ಸಮಾಜದಲ್ಲಿ ನಾವಿದ್ದೇವೆ. ಪ್ರಾಮಾಣಿಕತೆಗೆ ಯಾವುದೇ ಬೆಲೆ ಇಲ್ಲದಂತಾಗಿದೆ' ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ವಿಷಾದ ವ್ಯಕ್ತಪಡಿಸಿದರು.

ಬ್ಯಾಟರಾಯನಪುರ ಕ್ಷೇತ್ರ, ಕನ್ನಡ ಸಾಹಿತ್ಯ ಪರಿಷತ್ ಘಟಕದ ವತಿಯಿಂದ ಕಾಫಿಬೋರ್ಡ್ ಬಡಾವಣೆಯಲ್ಲಿ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

'ಒಳ್ಳೆ ಕೆಲಸ ಮಾಡಿದವರನ್ನು ಗುರುತಿಸಿ ಸನ್ಮಾನಿಸುವುದರ ಜೊತೆಗೆ ತಪ್ಪು ಮಾಡಿದವರನ್ನು ಶಿಕ್ಷಿಸುತ್ತಿದ್ದ ಹಿಂದಿನ ಸಮಾಜದ ವ್ಯವಸ್ಥೆಗೆ ದೇಶವನ್ನು ಕೊಂಡೊಯ್ಯಬೇಕಾಗಿದೆ. ಆ ಮೂಲಕ ಸಮಾಜದ ಬದಲಾವಣೆ ಸಾಧ್ಯ' ಎಂದರು.

'ನಿತ್ಯಜೀವನದಲ್ಲಿ ಕನ್ನಡ ಭಾಷೆಯನ್ನು ಹೆಚ್ಚಾಗಿ ಬಳಸುವುದರ ಜೊತೆಗೆ ಇತರರಿಗೂ ಪ್ರೀತಿಯಿಂದ ಕನ್ನಡವನ್ನು ಕಲಿಸುವ ಮೂಲಕ ಭಾಷೆಯನ್ನು ಉಳಿಸಿ, ಬೆಳೆಸಬಹುದು' ಎಂದು ಅವರು ಅಭಿಪ್ರಾಯಪಟ್ಟರು.

ಬ್ಯಾಟರಾಯನಪುರ ಕೇತ್ರದ ಕ.ಸಾ.ಪ ಘಟಕದ ಅಧ್ಯಕ್ಷ ರೇಣುಕ ಹೆಗ್ಗಡೆ ಮಾತನಾಡಿದರು. ಪ್ರೊ.ರವಿ ವರ್ಮಕುಮಾರ್, ಇತಿಹಾಸ ತಜ್ಞ ಧರ್ಮೇದ್ರಕುಮಾರ್, ಬೆಂಗಳೂರು ನಗರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

'ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿ'

ರಾಜರಾಜೇಶ್ವರಿನಗರ: 'ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಈ ಮೂಲಕ ಕಲಿಕೆಗೆ ಒತ್ತು ನೀಡುವ ಕಾರ್ಯದಲ್ಲಿ ಶಿಕ್ಷಣ ಸಂಸ್ಥೆಗಳು, ಶಿಕ್ಷಕ ಸಮೂಹ ಮುಂದಾಗಬೇಕು' ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಕರೆ ನೀಡಿದರು.

ಬ್ರೈನ್ ಸೆಂಟರ್, ಶಿಕ್ಷಣ ಸಂಶೋಧನಾ ಕೇಂದ್ರ ಮತ್ತು ಕ್ಯಾಮ್ಸ್ ವತಿಯಿಂದ ಹಮ್ಮಿಕೊಂಡಿದ್ದ 'ಫ್ಯಾಪ್(ಎಫ್‌ಎಪಿ) ಇಂಡಿಯಾ ಅವಾರ್ಡ್ಸ್ 2024' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಶಾಲೆಗಳಲ್ಲಿ ಬೋಧನೆಯ ಜೊತೆಗೆ, ಮಾನವೀಯ ಮೌಲ್ಯ, ಸಂಸ್ಕಾರವನ್ನು ಕಲಿಸುವಂತಹ ವಾತಾವರಣ ಇರಬೇಕು' ಎಂದರು.



ಭೂ ಮಾಲೀಕರು, ಕಟ್ಟಡ ಮಾಲೀಕರ ಸಭೆಯಲ್ಲಿ ಶಾಸಕ ಎಸ್‌.ಟಿ.ಸೋಮಶೇಖರ್ ಮಾತನಾಡಿದರು

'ಟಿಡಿಆರ್ ಮೂಲಕ ಪರಿಹಾರ'

ಭೂ ಮಾಲೀಕರು, ಕಟ್ಟಡ ಮಾಲೀಕರ ಸಭೆಯಲ್ಲಿ ಕರಿಗೌಡ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ವೈಟ್ ಟಾಪಿಂಗ್ ರಸ್ತೆ ನಿರ್ಮಾಣದ ಸಂಬಂಧ ವಾಣಿಜ್ಯ ಮಳಿಗೆ, ಅಂಗಡಿ ಮತ್ತು ಮನೆಗಳನ್ನು ಕಳೆದುಕೊಳ್ಳುವ ಮಾಲೀಕರಿಗೆ ಈಗಿನ ಮಾರುಕಟ್ಟೆ ದರದಲ್ಲಿ ಪರಿಹಾರ ನೀಡಬೇಕು. 2013ರ ಭೂ ಕಾಯ್ದೆಯಡಿ ನೀಡುವ ಪರಿಹಾರದಿಂದ ಬಡ, ಮಧ್ಯಮ ವರ್ಗದವರಿಗೆ ತೊಂದರೆಯಾಗಲಿದೆ..'

ಉತ್ತರಹಳ್ಳಿ ಮುಖ್ಯರಸ್ತೆಯಿಂದ ಕೋಡಿಪಾಳ್ಯ ಮಾರ್ಗವಾಗಿ ನೈಸ್ ಜಂಕ್ಷನ್‌ವರೆಗೆ ಕೈಗೊಂಡಿರುವ ರಸ್ತೆ ವಿಸ್ತರಣೆ, ರಸ್ತೆ ಬದಿಗಳಲ್ಲಿ ಚರಂಡಿ ನಿರ್ಮಾಣ, ರಸ್ತೆಗೆ ವೈಟ್ ಟಾಪಿಂಗ್ ಅಳವಡಿಸುವ ಕಾಮಗಾರಿಗಳ ಕುರಿತು ಕೋಡಿಪಾಳ್ಯದಲ್ಲಿ ಕರೆದಿದ್ದ ಭೂ ಮಾಲೀಕರು, ಕಟ್ಟಡ ಮಾಲೀಕರ ಸಭೆಯಲ್ಲಿ ಕೋಡಿಪಾಳ್ಯದ ರಾಮಚಂದ್ರ ಅವರು ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ, 'ಏಳು ತಿಂಗಳಿಂದ ರಸ್ತೆ ನಿರ್ಮಾಣಕ್ಕಾಗಿ ಭೂಮಿ ವಶಪಡಿಸಿಕೊಳ್ಳುತ್ತಿದ್ದರೂ, ಮತ್ತೆ ಮತ್ತೆ ಸಭೆಗಳನ್ನು ಏಕೆ ಕರೆಯಲಾಗುತ್ತಿದೆ' ಎಂದು ಪ್ರಶ್ನಿಸಿದರೆ, 'ಹಿಂದಿನ ದರಕ್ಕೆ ಭೂಮಿ, ಮನೆ ನೀಡಲು ಸಾಧ್ಯವಿಲ್ಲ. ಈಗಿನ ದರ ನೀಡಬೇಕು. ಇಲ್ಲದಿದ್ದರೆ ನಮಗೆ ವೈಟ್‌ಟಾಪಿಂಗ್ ರಸ್ತೆ ಬೇಡ. ಮನೆ ಕಳೆದುಕೊಂಡ ನಾವು ಎಲ್ಲಿಗೆ ಹೋಗುವುದು' ಎಂದು ಕೆಲವರು ಪ್ರಶ್ನಿಸಿದರು. ಇನ್ನೂ ಕೆಲವರು' ರಸ್ತೆ ಮಾಡಿ ನ್ಯಾಯಯುತವಾಗಿ ಹಣ ನೀಡಿ' ಎಂದು ಒತ್ತಾಯಿಸಿದರು.

ಬಿಬಿಎಂಪಿ ಟಿಡಿಆರ್ ವಿಭಾಗದ ಆಯುಕ್ತ ಕರಿಗೌಡ ಮಾತನಾಡಿ, 'ಟಿಡಿಆರ್ (ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು) ಮೂಲಕ ಹಣ ನೀಡುತ್ತೇವೆ. ರಸ್ತೆ ಬೇಡ ಎಂದರೆ ವೈಟ್ ಟಾಪಿಂಗ್ ಕಾಮಗಾರಿ ರದ್ದುಪಡಿಸುತ್ತೇವೆ. ಭೂಮಿ, ಮನೆ, ಕಟ್ಟಡಗಳ ಮಾಲೀಕರಿಗೆ 1:2ರ ಅನುಪಾತದಲ್ಲಿ ಹಣ ನೀಡುತ್ತೇವೆ. ಯಾವುದೇ ಗೊಂದಲ ಬೇಡ' ಎಂದರು.

ಶಾಸಕ ಎಸ್‌.ಟಿ. ಸೋಮಶೇಖರ್ ಮಾತನಾಡಿ, 'ಎಲ್ಲರೂ ಒಪ್ಪಿಗೆ ನೀಡಿದರೆ ಮಾತ್ರ ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭಿಸಲಾಗುತ್ತದೆ' ಎಂದು ಹೇಳಿದರು.

ಬಿಬಿಎಂಪಿ ಉಪ ಆಯುಕ್ತ ಅಬ್ದುಲ್ ರಬ್, ಬೃಹತ್ ರಸ್ತೆ ಕಾಮಗಾರಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮರಳ ಸಿದ್ದಪ್ಪ, ಸಹಾಯಕ ಕಾರ್ಯ ಪಾಲಕ ಎಂಜಿನಿಯರ್ ಸತೀಶ್ ಕುಮಾರ್, ವಾರ್ಡ್ ಮಟ್ಟದ ಸಹಾಯಕ ಕಾರ್ಯ ಪಾಲಕ ಎಂಜಿನಿಯರ್ ಎಂ.ಚಾಮ ರಾಜು, ಸಹಾಯಕ ಎಂಜಿನಿಯರ್ ಪ್ರದೀಪ್ ಜಿ., ಕಂದಾಯ ಅಧಿಕಾರಿ ಲೋಕಮಾತ, ಸಹಾಯಕ ಕಂದಾಯ ಅಧಿಕಾರಿ ಶಿವಕುಮಾರ್ ಇದ್ದರು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಸೌಲಭ್ಯದ ಕೊರತೆ

ವೇದಿಕೆ ತಲುಪಲು ಪರದಾಡಿದ ಅಂಗವಿಕಲರು



ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಲಿ ಕುರ್ಚಿಗಳು, ರ್‍ಯಾಂಪ್ ವ್ಯವಸ್ಥೆ ಇಲ್ಲದ ಕಾರಣ ಅಂಗವಿಕಲರು ಹಾಗೂ ಹಿರಿಯ ನಾಗರಿಕರು ತಮ್ಮ ಆರೈಕೆದಾರರ ಸಹಾಯ ಪಡೆದಕೊಂಡು ವೇದಿಕೆಗೆ ತಲುಪಿದರೆ, ಕೆಲವರು ಗೋಡೆಯ ಸಹಾಯ ಪಡೆದು ಮೆಟ್ಟಿಲುಗಳನ್ನು ಏರಿಕೊಂಡು ಸಭಾಂಗಣಕ್ಕೆ ತೆರಳಲು ಪರದಾಡುತ್ತಿದ್ದರು.

ಇವು ವಿಶ್ವ ಅಂಗವಿಕಲರ ದಿನಾಚರಣೆಯ ಅಂಗವಾಗಿ ಮಂಗಳವಾರ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಂಡು ಬಂದ ದೃಶ್ಯಗಳು...

ರಾಜ್ಯದ ವಿವಿಧ ಜಿಲ್ಲೆಗಳಿಂದ ನೂರಾರು ಸಂಖ್ಯೆಯಲ್ಲಿ ಬಂದಿದ್ದ ಅಂಗವಿಕಲರು ಒಳಾಂಗಣದಲ್ಲಿರುವ ಆಸನಗಳಿಗೆ ತೆರಳಲು ಹರಸಾಹಸ ಪಡುತ್ತಿದ್ದರು. ಇವರು ವೇದಿಕೆ ಮುಂಭಾಗದಲ್ಲಿ ಹಾಕಿದ್ದ ಆಸನಗಳಿಗೆ ತೆರಳಲು ಸರಿಯಾದ ವ್ಯವಸ್ಥೆ ಇರದ ಕಾರಣ ಪ್ರಯಾಸಪಟ್ಟು ಮೆಟ್ಟಿಲುಗಳನ್ನು ಏರಿಕೊಂಡು ತಲುಪಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಕೆಲವರು ಸ್ವಯಂಸೇವಕರ ಸಹಾಯ ಪಡೆದು ಮೆಟ್ಟಿಲುಗಳನ್ನು ಹತ್ತಿದರೆ, ಮತ್ತೆ ಕೆಲವರು ತಮ್ಮ ಜೊತೆಗಾರರ ಸಹಾಯ ಪಡೆದು ವೇದಿಕೆಗೆ ತಲುಪಿದರು.

'ಕಾರ್ಯಕ್ರಮದ ವೇದಿಕೆಗೆ ತೆರಳಲು ಅಂಗವಿಕಲರಿಗೆ ಸರಿಯಾದ ಸೌಲಭ್ಯ ಒದಗಿಸಲಿಲ್ಲ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ನಾವು ಪರದಾಡುವಂತಾಯಿತು. ವೇದಿಕೆಗೆ ಬರುವ ಮಾರ್ಗದಲ್ಲಿ ಅಗತ್ಯವಿದ್ದಷ್ಟು ಗಾಲಿ ಕುರ್ಚಿಗಳಿರಲಿಲ್ಲ' ಎಂದು ಅಂಗವಿಕಲರೊಬ್ಬರು ಆಕ್ರೋಶ ವ್ಯಕ್ತಪಡಿಸಿದರು.



ವಿಶ್ವ ಅಂಗವಿಕಲರ ದಿನ ಕಾರ್ಯಕ್ರಮದ ವೇದಿಕೆಗೆ ತಾಯಿಯೊಬ್ಬರು ವಿಶೇಷಚೇತನ ಬಾಲಕಿಯನ್ನು ಎತ್ತುಕೊಂಡು ತೆರಳಿದರು


ವಿಶ್ವ ಅಂಗವಿಕಲರ ದಿನ ಕಾರ್ಯಕ್ರಮದ ವೇದಿಕೆಗೆ ಮೆಟ್ಟಿಲುಗಳ ಮೂಲಕ ತೆರಳಿದ ಹಿರಿಯನಾಗರಿಕರು



ವಿಶ್ವ ಅಂಗವಿಕಲರ ದಿನ ಕಾರ್ಯಕ್ರಮದ ವೇದಿಕೆಗೆ ಮೆಟ್ಟಿಲುಗಳ ಮೂಲಕ ತೆರಳಿದ ಹಿರಿಯನಾಗರಿಕರು ಹಾಗೂ ಅಂಗವಿಕಲರು

ಸಿ.ಎಂ. ಗಲ್ಲ ಮುಟ್ಟಿ ಸಂಭ್ರಮಿಸಿದ ಮಗು

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಶೇಷ ಮಕ್ಕಳಿಂದ ಜೋತಿ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಬಾಲಕಿಯೊಬ್ಬಳು ಸಿದ್ದರಾಮಯ್ಯ ಅವರ ಗಲ್ಲವನ್ನು ಮುಟ್ಟಿ ಸಂಭ್ರಮಿಸಿದಳು. ಮುಖ್ಯಮಂತ್ರಿಯವರೂ ಮಗುವನ್ನು ಮುದ್ದು ಮಾಡಿದರು. ಈ ದೃಶ್ಯ ಸಾರ್ವಜನಿಕರ ಗಮನ ಸೆಳೆಯಿತು.



ಹಿರಿಯ ನಾಗರಿಕರು ಸ್ವಯಂ ಸೇವಕರ ಸಹಾಯದಿಂದ ಮೆಟ್ಟಿಲುಗಳನ್ನು ಹತ್ತಿದರು —ಪ್ರಜಾವಾಣಿ ಚಿತ್ರಗಳು

ಬಿಜೆಪಿ ಬಣ ಕಿತ್ತಾಟ: ರಾಜ್ಯ ಉಸ್ತುವಾರಿ ಮೌನಕ್ಕೆ ಕಿಡಿ • ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಜತೆ ರಾಜ್ಯ ನಾಯಕರ ಚರ್ಚೆ

ಅಗರವಾಲ್ ವಿರುದ್ಧ ಮುಗಿಬಿದ್ದ ಸಂಸದರು

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯ ಬಿಜೆಪಿ ಬಣ ಕಿತ್ತಾಟದ ವಿಷಯದಲ್ಲಿ 'ಮೌನ' ತಾಳಿದ ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ವಿರುದ್ಧ ಕಮಲ ಪಾಳಯದ ಸಂಸದರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಬಿಜೆಪಿಯಲ್ಲಿನ ಬೆಳವಣಿಗೆ, ಪಕ್ಷ ಸಂಘಟನೆ ಮತ್ತಿತರ ವಿಷಯಗಳ ಕುರಿತು ಚರ್ಚಿಸಲು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನಿವಾಸದಲ್ಲಿ ಸಂಸದರ ಸಭೆ ಮಂಗಳವಾರ ರಾತ್ರಿ ನಡೆಯಿತು.

'ಕಳೆದೊಂದು ತಿಂಗಳಿಂದ ಬಣ ಜಗಳ ವಿಕೋಪಕ್ಕೆ ಹೋಗಿದ್ದರೂ ಅಗರವಾಲ್ ಮಧ್ಯಪ್ರವೇಶ ಮಾಡಿಲ್ಲ. ರಾಜ್ಯಕ್ಕೆ ಭೇಟಿ ನೀಡಿಲ್ಲ. ಈ ಮೌನಕ್ಕೆ ಬಣ ಜಗಳ ಇನ್ನಷ್ಟು ತೀವ್ರವಾಗಲು ಕಾರಣವಾಯಿತು. ಉಭಯ ಬಣಗಳ ನಾಯಕರನ್ನು ಕರೆಸಿ ಮಾತನಾಡಿಸಿ ಎಚ್ಚರಿಕೆ ನೀಡುವ ಕೆಲಸ ಮಾಡಬೇಕಿತ್ತು. ಆಗ ಬಣ ಕದನ ನಿಲ್ಲುತ್ತಿತ್ತು. ಭಿನ್ನಮತ ಮಿತಿಮೀರಿದ ಬಳಿಕ ಸಭೆ ನಡೆಸಿ ಚರ್ಚೆ ನಡೆಸಿದರೇನು ಪ್ರಯೋಜನ' ಎಂದು ಕೆಲವು ಸಂಸದರು ಪ್ರಶ್ನಿಸಿದರು ಎಂದು ಮೂಲಗಳು ತಿಳಿಸಿವೆ. ಸಂಸದರ ಆಕ್ರೋಶದ ನುಡಿಗಳನ್ನು ಅಗರವಾಲ್ ಮೌನವಾಗಿ ಆಲಿಸಿದರು. 'ಪಕ್ಷದ ವರಿಷ್ಠರ ಗಮನಕ್ಕೆ ತಂದು ಬಿಕ್ಕಟ್ಟು ಶೀಘ್ರ ಬಗೆಹರಿಸಲಾಗುವುದು' ಎಂದು ವಾಗ್ದಾನ ನೀಡಿದರು ಎಂದು ಮೂಲಗಳು ಹೇಳಿವೆ.



ಜೆ.ಪಿ.ನಡ್ಡಾ ಜತೆಗೆ ಬಸವರಾಜ ಬೊಮ್ಮಾಯಿ, ವಿ.ಸೋಮಣ್ಣ ಹಾಗೂ ಕೆ.ಸುಧಾಕರ್ ಚರ್ಚಿಸಿದರು.

'ಎರಡೂ ಬಣಗಳ ಮುಖಂಡರು ಬೀದಿಯಲ್ಲಿ ಕಚ್ಚಾಡುತ್ತಿದ್ದಾರೆ. ಈ ವಿಷಯದಲ್ಲಿ ಎರಡೂ ಬಣಗಳಿಂದ ಲೋಪ ಆಗಿದೆ. ನಾಲ್ಕು ಗೋಡೆಗಳ ನಡುವೆ ಇತ್ಯರ್ಥವಾಗಿದ್ದ ವಿಷಯ ಬಹುದೊಡ್ಡ ವಿವಾದವಾಗಲು ಬಿಟ್ಟಿದ್ದು ತಪ್ಪು. ಕೆಲವೊಂದು ನಾಯಕರ ಅಹಂಕಾರ, ಅಹಂನಿಂದ ಈ ಸಮಸ್ಯೆ ಸೃಷ್ಟಿಯಾಗಿದೆ' ಎಂದು ಹಿರಿಯ ಸಂಸದರೊಬ್ಬರು ಅಗರವಾಲ್ ಗಮನಕ್ಕೆ ತಂದರು.

'ವಿಧಾನಸಭಾ ಚುನಾವಣೆಯಲ್ಲಿ ಸೋತ ದಿನದಿಂದಲೇ ರಾಜ್ಯ ಘಟಕದಲ್ಲಿ ಭಿನ್ನಮತ ಆರಂಭವಾಗಿದೆ. ಆ ಚಟುವಟಿಕೆಗೆ ಪಕ್ಷದ ವರಿಷ್ಠರು ಆಗಲೇ ಕಡಿವಾಣ ಹಾಕಬೇಕಿತ್ತು. ಆದರೆ, ರಾಜ್ಯ ಘಟಕದಲ್ಲಿನ ಭಿನ್ನಮತ ಬಗೆಹರಿಸಲು ಮುಂದಾಗಲೇ ಇಲ್ಲ. ಎರಡೂ ಬಣಗಳ ನಾಯಕರನ್ನು ಜತೆಗೆ ಕೂರಿಸಿ ಮಾತನಾಡಿಸಿದ್ದರೆ ಸಾಕಿತ್ತು. ಆ ಕೆಲಸವೂ ಆಗಿಲ್ಲ. ಇಂತಹ ಧೋರಣೆಗಳಿಂದ ಪಕ್ಷ ಕಟ್ಟಲು ಸಾಧ್ಯವೇ' ಎಂದು ಮತ್ತೊಬ್ಬ ಸಂಸದರು ಪ್ರಶ್ನಿಸಿದರು.

'ವಿಧಾನಸಭಾ ಚುನಾವಣೆ ಸೋಲಿನ ಪರಾಮರ್ಶೆಯನ್ನು ವರಿಷ್ಠರು ನಡೆಸಲಿಲ್ಲ. ಲೋಕಸಭಾ ಚುನಾವಣೆಯಲ್ಲಿ ಪಕ್ಷ 17 ಸ್ಥಾನಕ್ಕೆ ಕುಸಿಯಲು ಕಾರಣವಾದ ಅಂಶಗಳೇನು ಎಂಬ ಬಗ್ಗೆ ಪರಿಶೀಲನೆ ನಡೆಸಲಿಲ್ಲ. ಹೊಂದಾಣಿಕೆ ರಾಜಕಾರಣದ ಬಗ್ಗೆಯೂ ಚಕಾರ ಎತ್ತಲಿಲ್ಲ. ಇಂತಹ ಧೋರಣೆಯೇ ಭಿನ್ನಮತ ಹೆಮ್ಮರವಾಗಿ ಬೆಳೆಯಲು ಕಾರಣ' ಎಂದು ಇನ್ನೊಬ್ಬ ಸಂಸದರು ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿದ ಕೇಂದ್ರ ಸಚಿವ ವಿ.ಸೋಮಣ್ಣ, ಸಂಸದರಾದ ಬಸವರಾಜ ಬೊಮ್ಮಾಯಿ, ಕೆ. ಸುಧಾಕರ್ ಭೇಟಿ ಮಾಡಿ ಚರ್ಚಿಸಿದರು. ಈ ವೇಳೆ, ರಾಜ್ಯ ಘಟಕದ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿದರು. 'ನಡ್ಡಾ ಅವರಿಗೆ ಜನ್ಮದಿನದ ಶುಭಾಶಯ ಕೋರಲು ಹೋಗಿದ್ದೆವು' ಎಂದು ಸಂಸದರು ಸ್ಪಷ್ಟಪಡಿಸಿದರು.

ಪಕ್ಷ ಸಂಘಟನೆ ಕುರಿತು ಚರ್ಚೆ: ಬೊಮ್ಮಾಯಿ

ಕರ್ನಾಟಕದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ ಹಾಗೂ ಸಂಘಟನೆಯ ಬಗ್ಗೆ ರಾಜ್ಯದ ಸಂಸದರ ಸಭೆಯಲ್ಲಿ ಚರ್ಚೆಯಾಗಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ವಾಡಿಕೆಯಂತೆ ಈ ಬಾರಿ ಬಿಜೆಪಿ ಸಂಸದರ ಸಭೆ ಆಗಿದೆ. ರಾಜ್ಯದಲ್ಲಿ ಸದಸ್ಯತ್ವ ಅಭಿಯಾನ ಹಾಗೂ ಪಕ್ಷ ಸಂಘಟನೆಯ ಏನೇನು ಕೆಲಸ ಆಗಿದೆ, ಏನು ಬದಲಾವಣೆ ಮಾಡಬೇಕು ಎಂಬ ಕುರಿತು ಚರ್ಚೆ ಆಗಿದೆ' ಎಂದರು.


'ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ಬಗ್ಗೆ ಕರ್ನಾಟಕ ಸರ್ಕಾರ ಸಿದ್ಧತೆ ನಡೆಸಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸಿಕ್ಕ ಗೆಲುವು ಹಾಗೂ ಇತ್ತೀಚೆಗೆ ನಡೆದ ಮೂರು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಆಗಿರುವ ಹಿನ್ನಡೆಯನ್ನು ಮೆಟ್ಟಿ ನಿಂತು, ಎಲ್ಲರೂ ಒಗ್ಗಟ್ಟಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಗೆಲ್ಲಬೇಕು ಎಂಬ ಚರ್ಚೆ ಆಯಿತು ಎಂದು ತಿಳಿಸಿದರು.

ರಾಜ್ಯ ಘಟಕದ ಭಿನ್ನಮತದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಈ ವಿಚಾರ ಈಗಾಗಲೇ ಹೈಕಮಾಂಡ್ ಮುಂದೆ ಇದೆ' ಎಂದು ಹೇಳಿದರು.

'ಬಿಜೆಪಿಯ ಅಶಿಸ್ತಿಗೆ ಔಷಧಿ ನೀಡುವ ಕಾಲ ಮುಗಿದಿದೆ'

ಶಿರಸಿ: 'ರಾಜಕೀಯ ಪಕ್ಷದಲ್ಲಿ ಅಶಿಸ್ತಿಗೆ ಕಾಲಕಾಲಕ್ಕೆ ಔಷಧಿ ನೀಡಬೇಕು. ಆದರೆ, ಈಗ ಬಿಜೆಪಿಯಲ್ಲಿ ಔಷಧಿ ನೀಡುವ ಸಮಯ ಮೀರಿದೆ. ಇಡೀ ಪಕ್ಷ ಅಶಿಸ್ತಿನಿಂದ ಕೂಡಿದೆ. ಈಗ ಬಿಜೆಪಿಯಲ್ಲಿ ನಾಯಕರಿಲ್ಲ, ಪಕ್ಷವಾಗಿಯೂ ಉಳಿದಿಲ್ಲ. ಪಂಗಡಗಳಿಂದ ತುಂಬಿಕೊಂಡಿದೆ' ಎಂದು ಬಿಜೆಪಿ ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು.

'ಒಂದು ವರ್ಷದಿಂದ ಪಕ್ಷದ ಚಟುವಟಿಕೆಗಳಿಂದ ಬಹಳ ದೂರವಿದ್ದೇನೆ. ಪಕ್ಷದ ಒಳಗಡೆ ನಡೆಯುವ ಆಕ್ರಮಣಕಾರಿ ಸಂದೇಶ ನನ್ನ ಗಮನಕ್ಕೆ ಬರುವುದಿಲ್ಲ. ಬಸವನಗೌಡ ಪಾಟೀಲ ಯತ್ನಾಳ, ಕುಮಾರ ಬಂಗಾರಪ್ಪ, ರಮೇಶ ಜಾರಕಿಹೊಳಿ ನನ್ನ ಸ್ನೇಹಿತರು. ಪಕ್ಷದ ಒಳಗಿನ ಬೆಳವಣಿಗೆಯನ್ನು ಅವರು ನನಗೆ ತಿಳಿಸುತ್ತಾರೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.



ಶಿವರಾಮ ಹೆಬ್ಬಾರ್

ಜಮೀರ್‌ಗೆ 'ಲೋಕಾ' ವಿಚಾರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪ
- ಲೋಕಾಯುಕ್ತ ಕಚೇರಿಯಲ್ಲಿ ಎರಡು ತಾಸು ವಿಚಾರಣೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಪ್ರಕರಣದಲ್ಲಿ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳ ಎದುರು ಮಂಗಳವಾರ ವಿಚಾರಣೆಗೆ ಹಾಜರಾದರು.



ಡಿಸೆಂಬರ್ 3ರಂದು ವಿಚಾರಣೆಗೆ ಹಾಜರಾಗುವಂತೆ ನವೆಂಬರ್ 17ರಂದು ಲೋಕಾಯುಕ್ತ ಅಧಿಕಾರಿಗಳು ಸಮನ್ಸ್ ಜಾರಿ ಮಾಡಿದ್ದರು. ಮಂಗಳವಾರ ಮಧ್ಯಾಹ್ನ ಲೋಕಾಯುಕ್ತ ಕಚೇರಿಗೆ ಬಂದ ಜಮೀರ್ ಅವರನ್ನು ಸುಮಾರು ಎರಡು ತಾಸಿನಷ್ಟು ವಿಚಾರಣೆಗೆ ಒಳಪಡಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ವಿಚಾರಣೆ ನಂತರ ಹೊರಬಂದ ಜಮೀರ್, 'ಲೋಕಾಯುಕ್ತ ಅಧಿಕಾರಿಗಳು ಮೂರು ಬಾರಿ ಸಮನ್ಸ್ ನೀಡಿದ್ದರು. ವಿಚಾರಣೆಗೆ ಹಾಜರಾಗಲು ಆಗಿರಲಿಲ್ಲ. ಈಗ ಹಾಜರಾಗಿದ್ದೇನೆ. ಅವರು ಕೇಳಿದ ಮಾಹಿತಿಗಳನ್ನು ನೀಡಿದ್ದೇನೆ, ದಾಖಲೆಗಳನ್ನು ವಿವರಿಸಿದ್ದೇನೆ. ಅಗತ್ಯವಾದರೆ ಮತ್ತೆ ವಿಚಾರಣೆಗೆ ಕರೆಯುತ್ತೇವೆ ಎಂದಿದ್ದಾರೆ' ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಐಎಂಎ ಚಿಟ್‌ಫಂಡ್ ವಂಚನೆ ಪ್ರಕರಣದ ತನಿಖೆ ವೇಳೆ, ಐಎಂಎ ಮತ್ತು ಜಮೀರ್ ಅಹಮದ್ ಅವರ ನಡುವೆ ಹಣಕಾಸು ವ್ಯವಹಾರ ನಡೆದಿರುವುದನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಪತ್ತೆ ಮಾಡಿತ್ತು. ಹೆಚ್ಚಿನ ತನಿಖೆಗಾಗಿ ಜಮೀರ್ ಅವರಿಗೆ ಸೇರಿದ ಜಾಗಗಳ ಮೇಲೆ ಇ.ಡಿ ಅಧಿಕಾರಿಗಳು 2021ರ ಆಗಸ್ಟ್‌ನಲ್ಲಿ ದಾಳಿ ನಡೆಸಿದ್ದರು. ಆಗ ಪತ್ತೆಯಾದ ದಾಖಲೆಗಳ ಆಧಾರದಲ್ಲಿ ವರದಿ ಸಿದ್ಧಪಡಿಸಿದ್ದ ಇ.ಡಿ, ಅಂದಿನ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ನೀಡಿತ್ತು. ತನಿಖೆಗೆ ಶಿಫಾರಸೂ ಮಾಡಿತ್ತು.

2022ರಲ್ಲಿ ಎಸಿಬಿ ರದ್ದಾದ ನಂತರ ಪ್ರಕರಣ ಲೋಕಾಯುಕ್ತಕ್ಕೆ ವರ್ಗಾವಣೆಯಾಗಿತ್ತು. ಆದರೆ ಪ್ರಕರಣದ ತನಿಖೆ ಚುರುಕಾಗಿರಲಿಲ್ಲ. ಲೋಕಾಯುಕ್ತವು ಪ್ರಕರಣದ ತನಿಖೆಗೆ ಈಗಷ್ಟೇ ವೇಗ ನೀಡಿದೆ.

ಲಂಚ; ಕಂದಾಯ ವಸೂಲಿಗಾರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾತಾ ವರ್ಗಾವಣೆ ಮಾಡಲು ₹13,000 ಲಂಚ ಪಡೆಯುತ್ತಿದ್ದಾಗ ಗ್ರಾಮ ಪಂಚಾಯತಿ ಕಂದಾಯ ವಸೂಲಿಗಾರ ಒಬ್ಬರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ರಾಜಾಜಿನಗರದ ನಿವಾಸಿ ರಕ್ಷಾ ಅವರು ಬೆಂಗಳೂರು ಉತ್ತರ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ಶಿವಕೋಟೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಆಸ್ತಿ ಹೊಂದಿದ್ದು, ಅದರ ಇ–ಖಾತಾ ವರ್ಗಾವಣೆ ಬಾಕಿ ಇತ್ತು. ಈ ಕೆಲಸಕ್ಕಾಗಿ ಕಂದಾಯ ವಸೂಲಿಗಾರ ಪ್ರದೀಪ್ ಎಂ.ಎಂ. ಅವರನ್ನು ಭೇಟಿ ಮಾಡಿದಾಗ ₹13,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದ ಲೋಕಾಯುಕ್ತ ಪೊಲೀಸರು ತಿಳಿಸಿದರು.

'ಈ ಸಂಬಂಧ ರಕ್ಷಾ ಅವರು ದೂರು ನೀಡಿದ್ದರು. ತನಿಖಾಧಿಕಾರಿಗಳ ಮಾರ್ಗದರ್ಶನದಂತೆ ದೂರುದಾರರು ಮಂಗಳವಾರ, ಪ್ರದೀಪ್ ಅವರಿಗೆ ಕಚೇರಿ ಬಳಿಯಲ್ಲೇ ಲಂಚ ನೀಡಿದ್ದರು. ಆರೋಪಿ ಲಂಚ ಪಡೆಯುತ್ತಿರುವಾಗಲೇ ದಾಳಿ ನಡೆಸಿ ಬಂಧಿಸಲಾಯಿತು. ಲಂಚದ ಮೊತ್ತವನ್ನೂ ವಶಕ್ಕೆ ಪಡೆಯಲಾಯಿತು' ಎಂದು ಮಾಹಿತಿ ನೀಡಿದರು.

ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪೊಲೀಸ್ ಇನ್‌ಸ್ಪೆಕ್ಟರ್ ಜೆ.ರಮೇಶ್ ಅವರ ತಂಡವು ಕಾರ್ಯಾಚರಣೆ ನಡೆಸಿತ್ತು. ತನಿಖೆ ನಡೆಯುತ್ತಿದೆ.

ಬ್ಯಾಸ್ಕೆಟ್‌ಬಾಲ್: ಕ್ವಾರ್ಟರ್‌ಗೆ ಬ್ಯಾಂಕ್ ಆಫ್ ಬರೋಡಾ

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾ, ಡಿವೈಇಎಸ್ ಬೆಂಗಳೂರು ತಂಡಗಳು ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಕಪ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಬ್ಯಾಸ್ಕೆಟ್‌ಬಾಲ್ ಅಂಗಣದಲ್ಲಿ ಮಂಗಳವಾರ ನಡೆದ ಪಂದ್ಯಗಳಲ್ಲಿ ಬ್ಯಾಂಕ್ ಆಫ್ ಬರೋಡಾ 72–48ರಿಂದ ವ್ಯಾನ್ಗಾರ್ಡ್ಸ್ ತಂಡವನ್ನು, ಡಿವೈಇಎಸ್ 84–63ರಿಂದ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡವನ್ನು ಸೋಲಿಸಿತು.

ಫಲಿತಾಂಶ: ಪುರುಷರ ವಿಭಾಗ: ಬ್ಯಾಂಕ್ ಆಫ್ ಬರೋಡಾ 72–48ರಿಂದ ಬೆಂಗಳೂರು ವ್ಯಾನ್ಗಾರ್ಡ್ಸ್ ವಿರುದ್ಧ; ದಕ್ಷಿಣ ಕನ್ನಡ 80–68ರಿಂದ ಐ.ಬಿ.ಬಿ.ಸಿ. ವಿರುದ್ಧ, ಕೆ.ಎಸ್.ಪಿ 65–53ರಿಂದ ವಿಮಾನಪುರ ವಿರುದ್ಧ; ಜೆ.ಎಸ್.ಸಿ. 77–70ರಿಂದ ಸದರ್ನ್ ವಿರುದ್ಧ; ಡಿವೈಇಎಸ್ ಬೆಂಗಳೂರು 84–63ರಿಂದ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ. ವಿರುದ್ಧ; ಜಿಎಸ್‌ಟಿ ಅಂಡ್ ಕಸ್ಟಮ್ಸ್ 77–69ರಿಂದ ಬೆಂಗಳೂರು ಸ್ಪೋರ್ಟಿಂಗ್ ವಿರುದ್ಧ; ಬೀಗಲ್ಸ್ ಬಿ.ಸಿ 60–48ರಿಂದ ಸಿನಿಸಿನಾಟಿಕ್ಸ್ ವಿರುದ್ಧ; ಎಂಇಜಿ ಅಂಡ್ ಸೆಂಟರ್ 60–52ರಿಂದ ಭಾರತ್ ಎಸ್.ಯು ವಿರುದ್ಧ ಗೆಲುವು ಸಾಧಿಸಿತು. **ಮಹಿಳಾ ವಿಭಾಗ:** ಎಸ್‌ಡಬ್ಲ್ಯು ರೈಲ್ವೆ 65–37ರಿಂದ ಕೋಲಾರ ವಿರುದ್ಧ; ಸದರ್ನ್ ಬ್ಲೂಸ್ 48–28ರಿಂದ ಡಿವೈಇಎಸ್ ವಿದ್ಯಾನಗರ ವಿರುದ್ಧ; ಯಂಗ್ ಓರಿಯನ್ಸ್ 76–51ರಿಂದ ಮೌಂಟ್ ಕ್ಲಬ್ಸ್ ವಿರುದ್ಧ, ಬೀಗಲ್ಸ್ ಬಿ.ಸಿ 60–22ರಿಂದ ಧಾರವಾಡ ಬಿ. ವಿರುದ್ಧ; ರಾಜಮಹಲ್ ಬಿ.ಸಿ 82–59ರಿಂದ ವಿಜಯಪುರ ಜಿಲ್ಲೆ ವಿರುದ್ಧ ಜಯ ಸಾಧಿಸಿದವು.

ಆರೋಪಿ ಪವಿತ್ರಾಗೌಡ ಪರ ಹಿರಿಯ ವಕೀಲ ಟಾಮಿ ಸೆಬಾಸ್ಟಿಯನ್ ಹೇಳಿಕೆ

'ರೇಣುಕಸ್ವಾಮಿ ಕೊಲೆಗೆ ಪಿತೂರಿ ನಡೆದಿಲ್ಲ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರೇಣುಕಸ್ವಾಮಿ ಕೊಲೆಗೆ ಯಾವುದೇ ಪಿತೂರಿ ನಡೆದಿಲ್ಲ. ರೇಣುಕಸ್ವಾಮಿಯನ್ನು ಪಟ್ಟಣಗೆರೆಯ ಜಯಣ್ಣ ಶೆಡ್‌ಗೆ ಕರೆತಂದಾಗ ಪವಿತ್ರಾಗೌಡ ಅವರು ದರ್ಶನ್ ಜೊತೆ ತೆರಳಿ ರೇಣುಕಸ್ವಾಮಿಗೆ ಒಮ್ಮೆ ಚಪ್ಪಲಿಯಲ್ಲಿ ಹೊಡೆದಿದ್ದಾರೆ ಅಷ್ಟೇ. ಆನಂತರ ಅಲ್ಲಿಂದ ತೆರಳಿದ್ದಾರೆ. ಆಮೇಲೆ ಏನಾಯಿತು ಎಂಬುದು ಅವರಿಗೆ ಗೊತ್ತಿಲ್ಲ' ಎಂದು ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಮೊದಲ ಆರೋಪಿಯಾಗಿರುವ ನಟಿ ಹಾಗೂ ಮಾಡೆಲ್ ಪವಿತ್ರಾಗೌಡ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಅರುಹಿದರು.

ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್ ತೂಗುದೀಪ ಶ್ರೀನಿವಾಸ್, ಪವಿತ್ರಾ ಗೌಡ, ಆರ್.ನಾಗರಾಜು, ಎಂ.ಲಕ್ಷ್ಮಣ್, ಅನುಕುಮಾರ್ ಅಲಿಯಾಸ್ ಅನು, ಜಗದೀಶ್ ಅಲಿಯಾಸ್ ಜಗ್ಗ ಸಲ್ಲಿಸಿರುವ ಜಾಮೀನು ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಮುಂದುವರಿಸಿತು.

ವಿಚಾರಣೆ ವೇಳೆ ಪವಿತ್ರಾ ಗೌಡ ಪರ ವಾದ ಮಂಡಿಸಿದ ಹಿರಿಯ ವಕೀಲ ಟಾಮಿ ಸೆಬಾಸ್ಟಿಯನ್, 'ಪ್ರಕರಣದ ಮತ್ತೊಬ್ಬ ಆರೋಪಿಯಾದ ಶಿವಕುಮಾರ್ ಹೇಳಿಕೆಯನ್ನು ಗಮನಿಸಿದರೆ, ರೇಣುಕಸ್ವಾಮಿಯ ಅಪಹರಣವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅಂತೆಯೇ, ನಟ ಚಿಕ್ಕಣ್ಣ, ನವೀನ್ ಕುಮಾರ್, ಯಶಸ್ ಸೂರ್ಯ ಅವರ ಹೇಳಿಕೆಗಳನ್ನೂ ಪರಿಶೀಲಿಸಿದರೆ ರೇಣುಕಸ್ವಾಮಿ ಕೊಲೆ ಮಾಡುವ ಸಂಬಂಧ ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿ ಯಾವುದೇ ಮಾತುಕತೆ ನಡೆದಿಲ್ಲ ಎಂಬುದು ವೇದ್ಯವಾಗುತ್ತದೆ. ಯಾವ ಪ್ರತ್ಯಕ್ಷ ಸಾಕ್ಷಿಯೂ ಪವಿತ್ರಾಗೌಡ ಅವರತ್ತ ಬೆರಳು ಮಾಡಿಲ್ಲ ಎಂಬುದು ಗಮನಾರ್ಹ. ರೇಣುಕಸ್ವಾಮಿ ಅಪಹರಣ ಮತ್ತು ಕೊಲೆಯಲ್ಲಿ ಪವಿತ್ರಾ ಗೌಡ ಅವರ ಯಾವುದೇ ಪಾತ್ರವಿಲ್ಲ. ಹೀಗಾಗಿ, ಅವರಿಗೆ ಜಾಮೀನು ಮಂಜೂರು ಮಾಡಬೇಕು' ಎಂದು ಮನವಿ ಮಾಡಿದರು.

ದರ್ಶನ್ ಕಾರು ಚಾಲಕ ಎಂ.ಲಕ್ಷ್ಮಣ್ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಗೋಲ್ಡನ್ ಅವರ್‌ನಲ್ಲಿ ಸರಿಯಾದ ರೀತಿಯಲ್ಲಿ ತನಿಖೆ ನಡೆಸಿಲ್ಲ. ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆ ವಿಳಂಬವಾಗಿರುವ ಕಾರಣ ತನಿಖೆಯ ಸಾಚಾತನವನ್ನು ನಂಬಲಾಗುತ್ತಿಲ್ಲ. ಅನಾಮಧೇಯರು ಎಂದು ಎಫ್‌ಐಆರ್ ಮಾಡಲಾಗಿದೆ. ಆರೋಪಿಗಳು ಗೊತ್ತು ಎಂದು ಯಾವ ಸಾಕ್ಷಿಯೂ ಹೇಳಿಲ್ಲ. ಹೇಳಿಕೆ ದಾಖಲೆಯಲ್ಲಿನ ವಿಳಂಬಕ್ಕೆ ಯಾವುದೇ ವಿವರಣೆ ನೀಡಲಾಗಿಲ್ಲ. ಗುರುತು ಪತ್ತೆ ಪರೇಡ್ ಕೂಡಾ ನಡೆದಿಲ್ಲ. ಸಿಸಿಟಿವಿ ವಿಡಿಯೊ ತುಣುಕುಗಳಿಗೆ ಸಂಬಂಧಿಸಿದಂತೆ ಸೈಬರ್ ಕಾನೂನಿನ ವರದಿಯನ್ನೂ ಪಡೆದಿಲ್ಲ' ಎಂದು ಆಕ್ಷೇಪಿಸಿದರು.

'ಫೋನ್ ಕರೆಗಳ ದಾಖಲೆಗೆ ಸಂಬಂಧಿಸಿದ ರೇಖಾಚಿತ್ರವು ಸೆನ್ ಠಾಣೆಯ ಕಾನ್‌ಸ್ಟೆಬಲ್ ಅವರ ಕಲ್ಪನೆಯ ಕಲಾ ಕೌಶಲ್ಯದ ಕಸುಬು ಎಂಬುದಕ್ಕೆ ಸಾಕ್ಷಿಯಾಗಿದೆ. ಜಪ್ತಿ ಮಾಡಿರುವ ಪ್ಯಾಂಟ್, ಶರ್ಟ್ ಮತ್ತು ಚಪ್ಪಲಿಯಲ್ಲಿ ರಕ್ತದ ಕಲೆ ಇತ್ತು ಎಂಬ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯೇ ಅಂತಿಮವಲ್ಲ. ಇಂತಹ ವರದಿಗಳನ್ನೂ ತಿರುಚಬಹುದಾದ ಸಾಧ್ಯತೆಗಳಿರುತ್ತವೆ ಎಂಬುದಕ್ಕೆ ಹೈಕೋರ್ಟ್‌ನ ಸಮನ್ವಯ ಪೀಠದ ಆದೇಶವಿದೆ ಎಂಬುದನ್ನು ನಾವು ಕಡೆಗಣಿಸಬಾರದು' ಎಂದರು.

'ಲಕ್ಷ್ಮಣ್ ಅವರು ದರ್ಶನ್ ಕಾರು ಚಾಲಕನಾಗಿರುವುದರಿಂದ ಪದೇಪದೇ ಅವರಿಗೆ ಮೊದಲಿನಿಂದಲೂ ಕರೆ ಮಾಡುತ್ತಿದ್ದರು. ಇಲ್ಲಿ ಕೊಲೆ ಮಾಡುವ ಸಮಾನ ಉದ್ದೇಶ ಕಾಣುತ್ತಿಲ್ಲ. ಆದ್ದರಿಂದ, ಆರೋಪಿಗೆ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದರು.

ಅನುಕುಮಾರ್ ಅಲಿಯಾಸ್ ಅನು ಮತ್ತು ಜಗದೀಶ್ ಅಲಿಯಾಸ್ ಜಗ್ಗ ಪರ ಹೈಕೋರ್ಟ್ ವಕೀಲ ರಂಗನಾಥ್ ರೆಡ್ಡಿ, 'ಫೋನ್ ಕರೆ ದಾಖಲೆಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ರೇಖಾಚಿತ್ರದಲ್ಲಿ ಅನುಕುಮಾರ್ ಮತ್ತು ಜಗದೀಶ್ ಇಲ್ಲ. ಪ್ರತ್ಯಕ್ಷ ಸಾಕ್ಷಿಗಳೂ ಸಹ ಅರ್ಜಿದಾರರ ವಿರುದ್ಧ ಪ್ರತಿಕೂಲ ಹೇಳಿಕೆ ನೀಡಿಲ್ಲ. ಹೀಗಾಗಿ, ಆರೋಪಿಗಳಿಗೆ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದರು. ವಾದ ಆಲಿಸಿದ ನ್ಯಾಯಪೀಠವು ವಿಚಾರಣೆಯನ್ನು ಇದೇ 6ಕ್ಕೆ ಮುಂದೂಡಿದೆ.

ಪ್ರಕರಣದ ಪ್ರತಿವಾದಿಯೂ ಆದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಶುಕ್ರವಾರ (ಡಿ.6) ತಮ್ಮ ವಾದ ಮಂಡಿಸಬೇಕಿದೆ. ದರ್ಶನ್ ಪರ ವಕಾಲತ್ತು ವಹಿಸಿರುವ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಹಾಜರಿದ್ದರು.

ಟ್ರಕ್ ಟರ್ಮಿನಲ್ ಪ್ರಕರಣ: ವೀರಯ್ಯ ವಿರುದ್ಧದ ತನಿಖೆಗೆ ತಡೆ

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ (ಡಿಡಿಯುಟಿಟಿಎಲ್) ನಡೆದಿದೆ ಎನ್ನಲಾದ ₹47.50 ಕೋಟಿ ಅಕ್ರಮ ಆರೋಪದ ಪ್ರಕರಣದಲ್ಲಿ ನಿಗಮದ ಮಾಜಿ ಅಧ್ಯಕ್ಷರೂ ಆದ, ಬಿಜೆಪಿ ಮುಖಂಡ ಡಿ.ಎಸ್.ವೀರಯ್ಯ ವಿರುದ್ಧದ ತನಿಖೆ ಮತ್ತು ದೋಷಾರೋಪ ಪಟ್ಟಿಗೆ ಹೈಕೋರ್ಟ್ ತಡೆ ನೀಡಿದೆ.

ಈ ಕುರಿತಂತೆ ವೀರಯ್ಯ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರ ವಿಚಾರಣೆ ನಡೆಸಿದರು.

'ವೀರಯ್ಯ ಅವರ ವಿರುದ್ಧದ ಹೆಚ್ಚುವರಿ ತನಿಖೆ ಮತ್ತು ಈಗಾಗಲೇ ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿಗೆ ತಡೆ ವಿಧಿಸಲಾಗುತ್ತಿದೆ' ಎಂದು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿತು.

ಅರ್ಜಿದಾರರ ವಿರುದ್ಧ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 120 ಬಿ, 409, 420,465, 468 ಮತ್ತು 471ರ ಅಡಿಯಲ್ಲಿ ಎಫ್‌ಐಆರ್ ದಾಖಲು ಮಾಡಲಾಗಿದೆ. ವೀರಯ್ಯ ಸದ್ಯ ಜಾಮೀನು ಪಡೆದಿದ್ದಾರೆ.

'ಲೋಕಾಯುಕ್ತ ಕಾಯ್ದೆ: ಸರ್ಕಾರಕ್ಕೆ ಪತ್ರ'

ಮಂಗಳೂರು: ಲೋಕಾಯುಕ್ತ ಸಲ್ಲಿಸುವ ವಿಚಾರಣಾ ವರದಿಗಳ ತ್ವರಿತ ವಿಲೇವಾರಿಗಾಗಿ ಕರ್ನಾಟಕ ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ಅಗತ್ಯವಿದೆ ಎಂದು ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಿ ನೌಕರರ ವಿರುದ್ಧ ಲೋಕಾಯುಕ್ತ, ಉಪಲೋಕಾಯುಕ್ತರು ವಿಚಾರಣೆ ನಡೆಸಿ ವರದಿ ಸಲ್ಲಿಸಿರುವ ಅನೇಕ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇವೆ. ಕೆಲವು ಪ್ರಕರಣಗಳಲ್ಲಿ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಳ್ಳುತ್ತಾರೆ. ಕಾರ್ಯವಿಧಾನದಲ್ಲಿ ಇರುವ ದೋಷಗಳನ್ನು ತಪ್ಪಿಸಲು ಕಾಯ್ದೆಯಲ್ಲಿ ತಿದ್ದುಪಡಿ ತರಬೇಕು. ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದರು.

'ಲೋಕಾಯುಕ್ತ ವ್ಯವಸ್ಥೆ ಬಲಪಡಿಸಬೇಕು. ಖಾಲಿ ಇರುವ ಹುದ್ದೆಗಳ ಭರ್ತಿ, ಜಿಲ್ಲಾ ಲೋಕಾಯುಕ್ತ ಕಚೇರಿಗೆ ಹೆಚ್ಚುವರಿ ಸಿಬ್ಬಂದಿ ನೇಮಕ ಮಾಡುವಂತೆ ಸರ್ಕಾರಕ್ಕೆ ತಿಳಿಸಲಾಗಿದೆ. ಲೋಕಾಯುಕ್ತ ವ್ಯವಸ್ಥೆಯಲ್ಲಿರುವ ಅಧಿಕಾರಿಗಳ ಮೇಲೆ ಭ್ರಷ್ಟಾಚಾರದ ಆರೋಪಗಳಿದ್ದಲ್ಲಿ ನಮಗೆ ಮಾಹಿತಿ ನೀಡಿದರೆ, ಈ ಬಗ್ಗೆ ಪರಿಶೀಲಿಸುತ್ತೇವೆ. ಆಂತರಿಕ ಮಾಹಿತಿ ಸಂಗ್ರಹಿಸಿ, ಇಲಾಖಾ ವಿಚಾರಣೆ ನಡೆಸುತ್ತೇವೆ. ಈ ಹಿಂದೆ ದೂರು ಬಂದಿರುವ ನಾಲ್ಕೈದು ಜನರನ್ನು ಈಗಾಗಲೇ ಲೋಕಾಯುಕ್ತ ಕಚೇರಿಯಿಂದ ಬಿಡುಗಡೆಗೊಳಿಸಲಾಗಿದೆ' ಎಂದರು.

ಇಸ್ರೊದ ವಾಣಿಜ್ಯ ಕಾರ್ಯಾಚರಣೆ 'ಪ್ರೋಬಾ –3' ಉಡಾವಣೆಗೆ ಕ್ಷಣಗಣನೆ

ಶ್ರೀಹರಿಕೋಟಾ (ಆಂಧ್ರಪ್ರದೇಶ) (ಪಿಟಿಐ): ಇಸ್ರೊದ ವಾಣಿಜ್ಯ ಕಾರ್ಯಾಚರಣೆಯಡಿ, ಐರೋಪ್ಯ ಬಾಹ್ಯಾಕಾಶ ಸಂಸ್ಥೆಯ (ಇಎಸ್‌ಎ) ಭಾಗವಾದ 'ಪ್ರೋಬಾ-3' ಯೋಜನೆಯ ಎರಡು ಬಾಹ್ಯಾಕಾಶ ನೌಕೆಗಳ ಉಡಾವಣೆಗೆ ಕ್ಷಣಗಣನೆ ಪ್ರಾರಂಭವಾಗಿದೆ.

'ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಬುಧವಾರ ಸಂಜೆ 4.08ಕ್ಕೆ ಉಪಗ್ರಹಗಳನ್ನು ಇಸ್ರೊದ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್‌ನಿಂದ (ಪಿಎಸ್‌ಎಲ್‌ವಿ) ಉಡಾವಣೆ ಮಾಡಲಾಗುವುದು. ಇದಕ್ಕೆ ಪೂರ್ವಸಿದ್ಧತೆ ನಡೆಯುತ್ತಿವೆ' ಎಂದು ಇಸ್ರೊ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದರು.

ಬುಧವಾರ ನಡೆಯುವ ಉಡಾವಣೆಯು ತಂತ್ರಜ್ಞಾನ ಪ್ರದರ್ಶನದ ಕಾರ್ಯಾಚರಣೆಯಾಗಿದೆ. ಇಸ್ರೊದ ವಾಣಿಜ್ಯ ವಿಭಾಗ 'ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್' ತನ್ನ ಇತ್ತೀಚಿನ ಕಾರ್ಯಾಚರಣೆಯಾಗಿ, ಇಎಸ್‌ಎನಿಂದ ಎರಡು ಉಪಗ್ರಹಗಳನ್ನು ಹೊತ್ತ ಎರಡು ಬಾಹ್ಯಾಕಾಶ ನೌಕೆಗಳನ್ನು ಉಡಾವಣೆ ಮಾಡುವ ಒಪ್ಪಂದ ಮಾಡಿಕೊಂಡಿತ್ತು.

ಪ್ರಪಂಚದ ಮೊದಲ ಉಪಕ್ರಮವೆಂದು ಹೆಸರಿಸಲಾದ 'ಪ್ರೋಬಾ-3' ಮಿಷನ್‌ನಲ್ಲಿ 'ಕರೋನಾಗ್ರಾಫ್' (310 ಕೆ.ಜಿ) ಮತ್ತು 'ಆಕಲ್ಟರ್' (240 ಕೆ.ಜಿ. ತೂಕ) ಎಂಬ ಎರಡು ಬಾಹ್ಯಾಕಾಶ ನೌಕೆಗಳನ್ನು ಒಟ್ಟಿಗೆ ಉಡಾವಣೆ ಮಾಡಲಾಗುತ್ತಿದೆ. ಇವು ಆರಂಭಿಕ ಕಕ್ಷೆಯನ್ನು ತಲುಪಿದ ನಂತರ, ಎರಡೂ ಉಪಗ್ರಹಗಳು 150 ಮೀಟರ್ ಅಂತರದಲ್ಲಿ (ಒಂದು ದೊಡ್ಡ ಉಪಗ್ರಹ ರಚನೆಯಾಗಿ) ಒಟ್ಟಿಗೆ ಹಾರುತ್ತವೆ. ಈ ಉಪಗ್ರಹಗಳ ಸಹಾಯದಿಂದ ಕೃತಕ ಸೂರ್ಯಗ್ರಹಣ ಸೃಷ್ಟಿಸಿ, ಸೂರ್ಯನ ಕರೋನಾ ಅಧ್ಯಯನ ಮಾಡಲು ಬಾಹ್ಯಾಕಾಶ ವಿಜ್ಞಾನಿಗಳಿಗೆ ಇದು ಉತ್ತಮ ಅವಕಾಶವಾಗಿದೆ. ಬಾಹ್ಯಾಕಾಶ ನೌಕೆಗಳ ನಿಖರ ಚಲನೆ ಮತ್ತು ಸೂರ್ಯನ ಹೊರಗಿನ ವಾತಾವರಣ ಅಧ್ಯಯನ ಮಾಡುವುದು ಈ ಕಾರ್ಯಾಚರಣೆಯ ಪ್ರಮುಖ ಉದ್ದೇಶವಾಗಿದೆ ಎಂದು ಇಎಸ್‌ಎ ಹೇಳಿದೆ.

ನಾಲ್ಕು ದಿನಗಳ ಪ್ರದರ್ಶನಕ್ಕೆ ಕುಲಪತಿ ಜಯಕರ್ ಚಾಲನೆ

ಜ್ಞಾನಭಾರತಿಯಲ್ಲಿ 'ಟಿಬೆಟ್ ಸಂಸ್ಕೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜ್ಞಾನಭಾರತಿ ಆವರಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗ ಮತ್ತು ದಲೈಲಾಮ ಇನ್‌ಸ್ಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್ ಸಂಸ್ಥೆಯ ಸಹಯೋಗದಲ್ಲಿ 'ಟಿಬೆಟಿಯನ್ನರ ಸಂಸ್ಕೃತಿ ಮತ್ತು ಸಂಪ್ರದಾಯ ಪ್ರದರ್ಶನ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

4 ದಿನಗಳು ನಡೆಯುವ ಈ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದ ಕುಲಪತಿ ಎಂ.ಎಸ್.ಜಯಕರ್ ಮಂಗಳವಾರ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಟಿಬೆಟಿಯನ್ನರ ಸಂಪ್ರದಾಯ, ಆಚಾರ, ವಿಚಾರ, ಸಂಸ್ಕೃತಿ, ಪದ್ಧತಿಗಳನ್ನು-ಅನಾವರಣ ಮಾಡಲಾಗುತ್ತಿದೆ. 'ಈ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಟಿಬೆಟ್ ಸಂಸ್ಕೃತಿ ಅರಿಯಲು ವೇದಿಕೆ ಕಲ್ಪಿಸಿದ್ದೇವೆ' ಎಂದು ಇತಿಹಾಸ ವಿಭಾಗದ ಮುಖ್ಯಸ್ಥ ಎಂ.ಶಶಿಧರ ಹೇಳಿದರು.



ಜ್ಞಾನಭಾರತಿಯಲ್ಲಿ ಮಂಗಳವಾರದಿಂದ ಆರಂಭವಾದ 'ಟಿಬೆಟ್ ಸಂಸ್ಕೃತಿ ಪ್ರದರ್ಶನ' ಕಾರ್ಯಕ್ರಮದಲ್ಲಿ ಮಂಡಲ ರಚನೆ ಕುರಿತು ಬೌದ್ಧ ಬಿಕ್ಕು ಒಬ್ಬರು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಸಾರಿಗೆ ಅದಾಲತ್ ನಾಳೆ

ಬೆಂಗಳೂರು: ಕಸ್ತೂರಿ ನಗರದಲ್ಲಿ ಇರುವ ಬೆಂಗಳೂರು ಪೂರ್ವ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಡಿ.5ರಂದು ಮಧ್ಯಾಹ್ನ 3ಕ್ಕೆ ಸಾರಿಗೆ ಅದಾಲತ್ ಹಮ್ಮಿಕೊಳ್ಳಲಾಗಿದೆ. ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗಹಿಸುತ್ತಿದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಲಿದ್ದಾರೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ತಿಳಿಸಿದ್ದಾರೆ.

ಮೈಸೂರು ರೇಸ್

ಬ್ರೇವ್ ಟ್ರೂಪರ್ ಗೆಲ್ಲುವ ನಿರೀಕ್ಷೆ

ಬಿಜಾಪುರ್ ಪ್ಲೇಟ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬ್ರೇವ್ ಟ್ರೂಪರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬಂಡಲ್‌ಕಾಂಡ್ ಕ್ವೀನ್ 1, ಧುರಂದರ್ 8, ಗೇಮ್ ಬಾಯ್ 9
2ನೇ ರೇಸ್: ನ್ಯಾಚುರಲ್ ಟೊರ್ನಾಡೊ 3, ಸ್ಪಿರಿಚ್ಯುಯಲ್ ಫೋರ್ಸ್ 2, ರೈಸಿಂಗ್ ಸನ್ 5
3ನೇ ರೇಸ್: ರಾಜ್ 10, ಬ್ರೇಕ್ ಅವೇ 2, ಗೋಲ್ಡನ್ ಬರ್ಡ್ 5
4ನೇ ರೇಸ್: ಬೆಂಗಾಜಿ 5, ಕಾನ್ಫಿಡೆಂಟ್ ಗೇಮ್ 1, ಡಬೀಟ್ 4
5ನೇ ರೇಸ್: ಸ್ಕೈ ಸ್ವಾರ್ಮ್ 7, ಆರಿಲೆ 1, ಸೇಪಿಯಂಟ್ 8
6ನೇ ರೇಸ್: ಬ್ರೇವ್ ಟ್ರೂಪರ್ 2, ಸೆಗೆರ 1, ಕೋರ್ಟ್ ಜೆಸ್ಟರ್ 8
7ನೇ ರೇಸ್: ಓ ಮಂಚಲಿ 3, ಹಿರೋಯಿಸ್ಮ್ 2, ನ್ಯಾಚುರಲ್ ಒನ್ 9

ಉತ್ತಮ ಬೆಟ್: ಸ್ಕೈ ಸ್ವಾರ್ಮ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಕ್ಷಮೆ ಯಾಚಿಸಲು ಯತ್ನಾಳಗೆ ಬಸವ ದಳ ಆಗ್ರಹ

ಬೆಂಗಳೂರು: 'ವಿಶ್ವಗುರು ಬಸವಣ್ಣನವರ ಬಗ್ಗೆ ಕೀಳುಮಟ್ಟದ ಹೇಳಿಕೆ ನೀಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕ್ಷಮೆ ಯಾಚಿಸಬೇಕು' ಎಂದು ರಾಷ್ಟ್ರೀಯ ಬಸವ ದಳ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ಉಪಾಧ್ಯಕ್ಷ ಬಸವಯೋಗಿ ಸ್ವಾಮೀಜಿ, 'ಬಸನಗೌಡ ಪಾಟೀಲ ಅವರು ಬಸವಣ್ಣನವರ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ಅವರು ಕೂಡಲೇ ಬಸವಾದಿ ಶರಣರು ಮತ್ತು ಅವರ ಅನುಯಾಯಿಗಳ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದರು. ರಾಷ್ಟ್ರೀಯ ಬಸವ ದಳದ ರಾಜ್ಯ ಘಟಕದ ಅಧ್ಯಕ್ಷ ಕೆ. ವೀರೇಶ್, ಲಿಂಗಾಯತ ಧರ್ಮ ಮಹಾಸಭಾದ ಈಶ್ವರ್ ಲಿಂಗಾಯತ, ಎನ್. ಚಂದ್ರಮೌಳಿ, ಶಿವಯೋಗಿ ಸ್ವಾಮೀಜಿ, ಕೆ.ಆರ್. ಜಗದೀಶ, ಪ್ರವೀಣ ಕೋಚ್ಚಾಕಿ, ಶಿವಪ್ರಸಾದ ಪಟ್ನೆ, ಪ್ರಕಾಶ ಜಿರ್ಗೆ ಸುದ್ದಿಗೋಷ್ಠಿಯಲ್ಲಿದ್ದರು.


ಸ್ವಾಭಿಮಾನಿ ಸಮಾವೇಶ ಅಲ್ಲ: ಲಕ್ಷ್ಮಿ ಹೆಬ್ಬಾಳಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನದಲ್ಲಿ ಡಿ. 5 ರಂದು ಹಮ್ಮಿಕೊಂಡಿರುವುದು ಸ್ವಾಭಿಮಾನಿ ಸಮಾವೇಶ ಅಲ್ಲ, ಕಾಂಗ್ರೆಸ್ ಕಾರ್ಯಕರ್ತರ ಅಭಿನಂದನಾ ಸಮಾರಂಭ. ಅಂಥ ಸಮಾವೇಶಗಳನ್ನು ಇತರೆ ಜಿಲ್ಲೆಗಳಲ್ಲೂ ಆಯೋಜಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ತಿಳಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷದವರು. ಅವರು ಕರ್ನಾಟಕದ ಮುಖ್ಯಮಂತ್ರಿ. ಹಾಗಾಗಿ, ಹಾಸನದಲ್ಲಿ ಅಹಿಂದ ಸಮಾವೇಶ ನಡೆಸುತ್ತಿಲ್ಲ ಎಂದರು.

ಗ್ಯಾರಂಟಿಗಳಿಗಾಗಿ ನಿಗಮದ ಆಸ್ತಿಯನ್ನೇ ಮಾರಾಟ ಮಾಡುವ ದುಸ್ಥಿತಿ ಸರ್ಕಾರಕ್ಕೆ ಬಂದಿಲ್ಲ. ಬಿಜೆಪಿ ಅಧಿಕಾರದಲ್ಲಿದ್ದಾಗ ಬಿಬಿಎಂಪಿಯನ್ನೇ ಅಡಮಾನ ಇಟ್ಟಿದ್ದರು. ವಿಧಾನಸೌಧ ಒಂದನ್ನ ಬಿಟ್ಟು ಬಹುತೇಕ ಎಲ್ಲ ಆಸ್ತಿಪಾಸ್ತಿಗಳನ್ನೂ ಅಡವಿಟ್ಟಿದ್ದರು. ಸಿದ್ದರಾಮಯ್ಯ ಅವರು ಉತ್ತಮ ಆರ್ಥಿಕ ತಜ್ಞ. ಗ್ಯಾರಂಟಿ ಯೋಜನೆಗಳಿಗೆ ₹58 ಸಾವಿರ ಕೋಟಿ ಮೀಸಲಿಟ್ಟಿದ್ದಾರೆ. ಸಾಲದ ಹೊರೆ ಹೊರಿಸಿಲ್ಲ ಎಂದು ಹೇಳಿದರು.



ರಾಜ್ಯದಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಬೆಂಬಲಿಗರು ಎನ್ನುವ ಯಾವ ಗೊಂದಲವೂ ಇಲ್ಲ, ಇರುವ ಎಲ್ಲರೂ ಕಾಂಗ್ರೆಸ್ ಬೆಂಬಲಿಗರು. ಎಲ್ಲರೂ ಸೇರಿ ಹಾಸನ ಸಮಾವೇಶ ನಡೆಸುತ್ತೇವೆ

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಹಾಸನ ಸಮಾವೇಶಕ್ಕೆ ಬೆಂಬಲ

ಹಾಸನದಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ಅಹಿಂದ ಸಮುದಾಯಗಳು ಹಮ್ಮಿಕೊಂಡಿರುವ 'ಸ್ವಾಭಿಮಾನಿ' ಸಮಾವೇಶಕ್ಕೆ 'ಅಹಿಂದ ಚಳವಳಿ, ಸಂಘಟನೆ' ಬೆಂಬಲ ವ್ಯಕ್ತಪಡಿಸಿದೆ.

ಈ ಕುರಿತು ಹೇಳಿಕೆ ನೀಡಿರುವ ಸಂಘಟನೆ ಕಾರ್ಯದರ್ಶಿ ಆರ್. ಸುರೇಂದ್ರ, ಅಹಿಂದ ಚಳವಳಿ ಸಂಘಟನೆಯನ್ನು ಭಾರತ ಸಂವಿಧಾನದ ಆಶಯಗಳು ಮತ್ತು ಕಾನೂನಿನ ಚೌಕಟ್ಟಿನಲ್ಲಿ ಸ್ಥಾಪನೆ ಮಾಡಲಾಗಿದೆ. ಸಮಾವೇಶದಲ್ಲಿ ಎಲ್ಲ ಜಿಲ್ಲೆಗಳ ಕೇಡರ್ ಮುಖಂಡರೂ ಭಾಗವಹಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಒಳಮೀಸಲಾತಿ: ಆಯೋಗಕ್ಕೆ ಕಚೇರಿ ವ್ಯವಸ್ಥೆ, ವಾಹನ, ಸಿಬ್ಬಂದಿ

ವಿಚಾರಣಾ ಆಯೋಗಕ್ಕೆ ಹೊಣೆ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸುವ ಸಂಬಂಧ ಸೂಕ್ತ ಶಿಫಾರಸುಗಳೊಂದಿಗೆ ವರದಿ ಸಲ್ಲಿಸಲು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಅಧ್ಯಕ್ಷತೆಯ ಏಕ ಸದಸ್ಯ ಆಯೋಗಕ್ಕೆ ನಿಯಮ ಮತ್ತು ನಿಬಂಧನೆಗಳನ್ನು ನಿಗದಿಪಡಿಸಿ ಸಮಾಜ ಕಲ್ಯಾಣ ಇಲಾಖೆಯು ಆದೇಶಿಸಿದೆ.

ಆಯೋಗಕ್ಕೆ ನಿಗದಿ ಮಾಡಿರುವ ಹೊಣೆಗಾರಿಕೆಯನ್ನು ನಿಭಾಯಿಸಲು ಅನುಕೂಲವಾಗುವಂತೆ ಕಚೇರಿ ವ್ಯವಸ್ಥೆ, ವಾಹನ, ಸಿಬ್ಬಂದಿ ಮತ್ತು ಇತರ ವ್ಯವಸ್ಥೆಗಳನ್ನು ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಒದಗಿಸಿಕೊಡಲಿದ್ದಾರೆ ಎಂದು ಆದೇಶ ಹೇಳಿದೆ.

ವರದಿ ಸಿದ್ಧಪಡಿಸಲು ಅಗತ್ಯವಿರುವ ದಾಖಲೆಗಳನ್ನು ಮತ್ತು ಪುರಾವೆಗಳನ್ನು ವಿಚಾರಣಾ ಆಯೋಗಕ್ಕೆ, ಸಂಬಂಧಪಟ್ಟ ಎಲ್ಲ ಅಧಿಕಾರಿಗಳು ಸಲ್ಲಿಸಬೇಕು ಮತ್ತು ಅಗತ್ಯ ಸಹಕಾರ ನೀಡಬೇಕು ಎಂದು ಸೂಚಿಸಿದೆ.

ಸಮಾಜ ಕಲ್ಯಾಣ ಇಲಾಖೆ ಆಯುಕ್ತರನ್ನು ಆಯೋಗದ ಸಂಚಾಲಕರಾಗಿ ಮತ್ತು ಇಂದಿರಾಗಾಂಧಿ ವೃತ್ತಿ ತರಬೇತಿ ಕೇಂದ್ರದ ಹೆಚ್ಚುವರಿ ನಿರ್ದೇಶಕಿ ಅವರನ್ನು ಆಯೋಗದ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ನಿಯಮ ಮತ್ತು ನಿಬಂಧನೆಗಳಲ್ಲಿ ಉಲ್ಲೇಖಿಸಲಾದ ಎಲ್ಲ ಅಂಶಗಳ ಬಗ್ಗೆ ದತ್ತಾಂಶಗಳು ಮತ್ತು ಅಗತ್ಯ ಶಿಫಾರಸುಗಳನ್ನು ನೀಡಬೇಕು. ಆಯೋಗವು ಅಧಿಕಾರ ವಹಿಸಿಕೊಂಡ 60 ದಿನಗಳ ಒಳಗೆ ವರದಿ ಸಲ್ಲಿಸಬೇಕು ಎಂದು ಸೂಚಿಸಿದೆ.

ನಿಯಮ ನಿಬಂಧನೆಗಳು

- ರಾಜ್ಯದಲ್ಲಿ ಲಭ್ಯವಿರುವ ದತ್ತಾಂಶ ಮತ್ತು 2011ರ ಜನಗಣತಿ ಆಧಾರದಲ್ಲಿ, ಪರಿಶಿಷ್ಟ ಜಾತಿಗಳಲ್ಲಿ ವೈಜ್ಞಾನಿಕ ಮತ್ತು ತರ್ಕಬದ್ಧ ಒಳ ಮೀಸಲಾತಿ ನೀಡುವ ಬಗ್ಗೆ ಪರಿಶೀಲನೆ
- ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣ ಸಂಸ್ಥೆಗಳ ಪ್ರವೇಶಾತಿಯಲ್ಲಿ ಪರಿಶಿಷ್ಟ ಜಾತಿಗಳ ಉಪ ಗುಂಪುಗಳಲ್ಲಿ 'ಅಂತರ್‌ಹಿಂದುಳಿದಿರುವಿಕೆ' ಗುರುತಿಸುವುದು ಮತ್ತು ಇದಕ್ಕಾಗಿ ದತ್ತಾಂಶ ಸಂಗ್ರಹ
- ಸುಪ್ರೀಂ ಕೋರ್ಟ್‌ನ ಆದೇಶದಂತೆ ಒಳ ಮೀಸಲಾತಿಗಾಗಿ, ಮೀಸಲಾತಿ ಪ್ರಮಾಣ ನಿಗದಿಪಡಿಸುವ ಬಗ್ಗೆ ಪರಿಶೀಲನೆ
- ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎಂಬ ಹೆಸರುಗಳಷ್ಟೇ ರಾಜ್ಯದ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿವೆ. ಜನಸಂಖ್ಯೆಯನ್ನೂ ಹೀಗೇ ವಿಂಗಡಿಸಲಾಗಿದೆ. ಈ ಮೂರೂ ಹೆಸರುಗಳ ಅಡಿ ಇರುವ ಉಪ ಜಾತಿಗಳ ಹೆಸರು ಮತ್ತು ಅವುಗಳ ಜನಸಂಖ್ಯೆಯ ದತ್ತಾಂಶಗಳ ಸಂಗ್ರಹ
- ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿಯ ಪರಿಣಾಮಕಾರಿ ಅನುಷ್ಠಾನ ವಿಧಾನದ ಪರಿಶೀಲನೆ
- ಪರಿಶಿಷ್ಟ ಜಾತಿಗಳ ವಿವಿಧ ಉಪ ಗುಂಪುಗಳು ಮೀಸಲಾತಿಯ ಪ್ರಯೋಜನವನ್ನು ಸಮಾನವಾಗಿ ಪಡೆಯುತ್ತಿವೆಯೇ ಎಂಬುದರ ಪರಿಶೀಲನೆ

ಚಾಮುಂಡಿಬೆಟ್ಟದಲ್ಲಿ ಭೂಕುಸಿತ, ರಸ್ತೆಗೆ ಉರುಳಿದ ಬಂಡೆ • ಭತ್ತ, ಕಾಫಿ ಬೆಳೆಗೆ ಹಾನಿ

ಕೊಡಗು, ಮಂಗಳೂರಲ್ಲಿ ಜಡಿ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು/ಮಂಗಳೂರು: ಫೆಂಜಲ್ ಚಂಡಮಾರುತದ ಪರಿಣಾಮ ಮಂಗಳವಾರವೂ ರಾಜ್ಯದ ಕೆಲವೆಡೆ ಮಳೆ ಸುರಿಯಿತು. ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಸೋಮವಾರ ರಾತ್ರಿಯಿಂದ ಅಬ್ಬರಿಸಿದ ಮಳೆ ಮಂಗಳವಾರ ಬೆಳಿಗ್ಗೆವರೆಗೂ ಸುರಿಯಿತು.

ಮೈಸೂರು ಮತ್ತು ಕೊಡಗು ಭಾಗದಲ್ಲಿ ಕೊಯ್ಲಿಗೆ ಬಂದಿದ್ದ ಭತ್ತ, ಅರೇಬಿಕಾ ಕಾಫಿ ಬೆಳೆ ನಷ್ಟವಾಗಿದೆ. ಕೆಲವೆಡೆ ವಿದ್ಯುತ್ ಕಂಬಗಳು, ಮರಗಳು ಉರುಳಿಬಿದ್ದವು. ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತ್ತು. ವಾಹನ ಸಂಚಾರಕ್ಕೂ ತೊಂದರೆಯಾಗಿತ್ತು.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಮುಂಜಾನೆ ಸಣ್ಣ ಪ್ರಮಾಣದ ಭೂಕುಸಿತವಾಗಿದ್ದು, ಬಂಡೆಯೊಂದು ರಸ್ತೆಗೆ ಉರುಳಿದೆ. ಯಾರಿಗೂ ತೊಂದರೆಯಾಗಿಲ್ಲ. ಬೆಟ್ಟದ ಆರಂಭ ಸ್ಥಳದಲ್ಲಿ ಮುಖ್ಯರಸ್ತೆಯ ಪಕ್ಕದಲ್ಲೇ ಕುಸಿತ ಉಂಟಾಗಿದ್ದು, ಮುಂಜಾನೆ ವಾಯುವಿಹಾರಿಗಳು ಹಾಗೂ ಬಸ್ ಚಾಲಕರು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಜೆಸಿಬಿ ಯಂತ್ರದ ಮೂಲಕ ಬಂಡೆಯನ್ನು ಪಕ್ಕಕ್ಕೆ ಸರಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಸುರತ್ಕಲ್ – ಕಾನ ರಸ್ತೆಯಲ್ಲಿರುವ ರೈಲ್ವೆ ಮೇಲ್ಸೇತುವೆ ಬಳಿ ಮೊಣಕಾಲು ಮಟ್ಟದವರೆಗೆ ನೀರು ನಿಂತು ವಾಹನ ಸವಾರರು ಪರದಾಡಿದರು. ಅಕಾಲಿಕ ಮಳೆಯಿಂದ ಯಕ್ಷಗಾನ ಮೇಳಗಳ ತಿರುಗಾಟಕ್ಕೂ ಅಡ್ಡಿಯಾಯಿತು. ಸೋಮವಾರ ರಾತ್ರಿ ಮಂದಾರ್ತಿ ಮೇಳದ ಚೌಕಿಗೆ ನೀರು ನುಗ್ಗಿ ತೀವ್ರ ಸಮಸ್ಯೆಯಾಯಿತು ಎಂದು ಮೂಲಗಳು ತಿಳಿಸಿವೆ.

‘ಫೆಂಜಲ್ ಚಂಡಮಾರುತವು ಮಂಗಳವಾರ ಬೆಳಿಗ್ಗೆ ಮಂಗಳೂರು, ಉಳ್ಳಾಲ ನಡುವೆ ಹಾದುಹೋಗಿದ್ದು, ನಂತರ ಮಳೆ ಇಳಿಮುಖವಾಗಿದೆ. ಮಳೆ ಕಡಿಮೆ ಆಗಿದ್ದರೂ, ಪ್ರವಾಸಿಗರು, ಸ್ಥಳೀಯರು ಸಮುದ್ರ, ನದಿ ನೀರಿಗೆ ಇಳಿಯಬಾರದು’ ಎಂದು ದಕ್ಷಿಣ ಕನ್ನಡ ಡಿ.ಸಿ ಮುಲ್ಲೈ ಮುಗಿಲನ್ ತಿಳಿಸಿದ್ದಾರೆ.

ಉಡುಪಿ ಜಿಲ್ಲೆಯ ನೀಲಾವರ, ಕಾಡೂರು ಮತ್ತು ಕೊಕ್ಕರ್ಣೆ ಪರಿಸರದಲ್ಲಿ ಸಿಡಿಲು ಬಡಿದು ಮನೆಗಳಿಗೆ ಹಾನಿಯಾಗಿದೆ. ಚಂಡಮಾರುತದ ಪರಿಣಾಮದಿಂದಾಗಿ ಸಮುದ್ರ ಪ್ರಕ್ಷುಬ್ಧ ಗೊಂಡಿದ್ದು, ಮೀನುಗಾರಿಕೆಗೆ ತೆರಳಿದ್ದ ದೋಣಿಗಳು ದಕ್ಕೆಗೆ ಮರಳಿವೆ. ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು ನೀರೆಯಲ್ಲಿ 26 ಸೆಂ.ಮೀ. ಮಳೆ ದಾಖಲಾಗಿದೆ.

ಚಿತ್ರದುರ್ಗ/ದಾವಣಗೆರೆ ವರದಿ: ಚಿತ್ರದುರ್ಗ ಜಿಲ್ಲೆಯಾದ್ಯಂತ ಮಂಗಳವಾರ ನಸುಕಿನಿಂದಲೇ ತುಂತುರು ಮಳೆ ಸುರಿಯಿತು. ಬೆಳಿಗ್ಗೆ 8 ಗಂಟೆವರೆಗೂ ಮಳೆ ಮುಂದುವರಿದ ಕಾರಣ ಡಿಸಿ ಟಿ.ವೆಂಕಟೇಶ್ ಶಾಲೆ ಹಾಗೂ ಪಿಯು ಕಾಲೇಜುಗಳಿಗೆ ರಜೆ ಘೋಷಣೆ ಮಾಡಿದರು. ದಾವಣಗೆರೆ ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಸೋಮವಾರ ತಡರಾತ್ರಿಯಿಂದ ಮಂಗಳವಾರ ಬೆಳಿಗ್ಗೆವರೆಗೆ ಜಿಟಿ ಜಿಟಿ ಮಳೆ ಸುರಿಯಿತು.

ರಾಯಚೂರು ವರದಿ: ಜಿಲ್ಲೆಯಲ್ಲಿ ಮಂಗಳವಾರ ಬೆಳಗಿನ ಜಾವ ಸುರಿದ ತುಂತುರು ಮಳೆ ಹಾಗೂ ಗಾಳಿಗೆ ರಾಯಚೂರು, ಸಿರವಾರ, ಲಿಂಗಸುಗೂರು ಹಾಗೂ ಸಿಂಧನೂರು ತಾಲ್ಲೂಕಿನ ವಿವಿಧೆಡೆ ಭತ್ತದ ಬೆಳೆ ನೆಲಕ್ಕುರುಳಿದೆ. ಮಳೆಯಿಂದಾಗಿ ರಾಯಚೂರಿನ ಹೊಸೂರು, ಆಶಾಪುರ ಪರಿಸರದಲ್ಲಿನ ಭತ್ತಕ್ಕೆ ಹಾನಿಯಾಗಿದೆ.



ಚಾಮುಂಡಿಬೆಟ್ಟದ ರಸ್ತೆಗೆ ಬಿದ್ದಿದ್ದ ಬಂಡೆಯನ್ನು ಜೆಸಿಬಿ ಯಂತ್ರದಿಂದ ತೆರವುಗೊಳಿಸಲಾಯಿತು



ಮಂಗಳೂರಿನಲ್ಲಿ ಮಂಗಳವಾರ ನಸುಕಿನಲ್ಲಿ ಸುರಿದ ಮಳೆಯಿಂದಾಗಿ ಕೊಟ್ಟಾರದ ಅಂಗಡಿಗೆ ನೀರು ನುಗ್ಗಿತ್ತು ಪ್ರಜಾವಾಣಿ ಚಿತ್ರ



ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದ ಸಮೀಪ ಎರಡು ವರ್ಷಗಳ ಹಿಂದೆ ಭಾರಿ ಮಳೆಗೆ ಕೊಚ್ಚಿಹೋಗಿದ್ದ ಸೇತುವೆಗೆ ಪರ್ಯಾಯವಾಗಿ ನಿರ್ಮಿಸಿದ್ದ ಎರಡನೇ ತಾತ್ಕಾಲಿಕ ಸೇತುವೆಯೂ ಮಂಗಳವಾರ ಬಿರುಕು ಬಿಟ್ಟಿದೆ

ಫೆಂಜಲ್: ಇಂದು ಕೆಲವೆಡೆ ಸಾಧಾರಣ ಮಳೆ ಸಾಧ್ಯತೆ

ಬೆಂಗಳೂರು: ‘ಫೆಂಜಲ್’ ಚಂಡಮಾರುತವು ಅರಬ್ಬಿ ಸಮುದ್ರದ ಮೇಲೆ ಪಶ್ಚಿಮ–ವಾಯುವ್ಯದ ಕಡೆಗೆ ಚಲಿಸುವ ಸಾಧ್ಯತೆಯಿದ್ದು, ರಾಜ್ಯದ ಕೆಲವೆಡೆ ಮಾತ್ರ ಬುಧವಾರ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಚಂಡಮಾರುತದ ಪರಿಣಾಮದಿಂದಾಗಿ ಬೆಂಗಳೂರು, ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ನಾಲ್ಕು ದಿನ ಹೆಚ್ಚಿನ ಮಳೆಯಾಗಿತ್ತು. ಬುಧವಾರದಿಂದ ವಾತಾವರಣದಲ್ಲಿ ಒಣಹವೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಯ ಹಲವೆಡೆ, ಕಲಬುರಗಿ, ಬೀದರ್, ಯಾದಗಿರಿ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಚಿತ್ರದುರ್ಗ ಜಿಲ್ಲೆಯ ಒಂದೆರಡು ಕಡೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಗರಿಷ್ಠ ಉಷ್ಣಾಂಶ 25 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್ ಇರುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ಜಿಲ್ಲೆಗಳು ಹಾಗೂ ರಾಜ್ಯದ ಕೆಲವೆಡೆ ಇದೇ 8ರವರೆಗೂ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

‘ಕರ್ಕಿ ಸಾಹಿತ್ಯ ಕಾವ್ಯ ಪ್ರಶಸ್ತಿ’ಗೆ ನಾಲ್ವರ ಆಯ್ಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಡಿ.ಎಸ್. ಕರ್ಕಿ ಸಾಹಿತ್ಯ ವೇದಿಕೆ ಟ್ರಸ್ಟ್ ನೀಡುವ ರಾಜ್ಯಮಟ್ಟದ ಡಿ.ಎಸ್. ಕರ್ಕಿ ಕಾವ್ಯ ಪ್ರಶಸ್ತಿಗೆ ಕವಿಗಳಾದ ಹೆಬಸೂರ ರಂಜಾನ್ (ಮಂಜಿನೊಳಗಣ ಕೆಂಡ), ನಿರ್ಮಲಾ ಶೆಟ್ಟರ್ (ಸರಹದ್ದುಗಳಿಲ್ಲದ ಭೂಮಿಯ ಕನಸು), ಶ್ವೇತಾ ನರಗುಂದ (ಮನಮದ್ದಳೆಯ ಸ್ವಗತ) ಮತ್ತು ಶಿವಾನಂದ ಕುಬಸದ (ಎಂಟು ಬಣ್ಣದ ಕೌದಿ) ಆಯ್ಕೆಯಾಗಿದ್ದಾರೆ.

ಡಿಸೆಂಬರ್ 7ರ ಸಂಜೆ 5.30ಕ್ಕೆ ನಗರದ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ನಾಲ್ಕು ವರ್ಷಗಳಿಂದ ಪ್ರಶಸ್ತಿ ನೀಡಿರಲಿಲ್ಲ. ಎಲ್ಲವನ್ನೂ ಸೇರಿಸಿ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ವೇದಿಕೆ ಅಧ್ಯಕ್ಷ ಎಂ.ಎ.ಸುಬ್ರಹ್ಮಣ್ಯ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಕವಿ ಬಿ.ಆರ್.ಲಕ್ಷ್ಮಣರಾವ್ ಅಧ್ಯಕ್ಷತೆ ವಹಿಸುವರು. ಪತ್ರಕರ್ತ ಜೋಗಿ, ತೀರ್ಪುಗಾರರಾದ ಚಂದ್ರಶೇಖರ ವಸ್ತ್ರದ ಮತ್ತು ಶಾಮಸುಂದರ ಬಿದರಕುಂದಿ ಸಮಾರಂಭದಲ್ಲಿ ಪಾಲ್ಗೊಳ್ಳುವರು’ ಎಂದರು. ವೇದಿಕೆಯ ಉಪಾಧ್ಯಕ್ಷ ಬಿ.ಎಸ್. ಮಾಳವಾಡ ಇದ್ದರು.



ಹೆಬಸೂರ ರಂಜಾನ್



ನಿರ್ಮಲಾ ಶೆಟ್ಟರ್



ಶ್ವೇತಾ ನರಗುಂದ



ಶಿವಾನಂದ ಕುಬಸದ

ಬಾಲಕಿ ಆತ್ಮಹತ್ಯೆ: ಆರೋಪಿಗಳ ಸೆರೆ

ನಾಲತವಾಡ(ವಿಜಯಪುರ): ಚುಡಾಯಿಸಿ, ಕಿರುಕುಳ ನೀಡಿ, ಕುಟುಂಬಕ್ಕೆ ಜೀವ ಬೆದರಿಕೆ ಒಡ್ಡಿದ್ದ ಆರೋಪಿಗಳ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿದ್ದ 10ನೇ ತರಗತಿ ವಿದ್ಯಾರ್ಥಿನಿ ಮಂಗಳವಾರ ಮನೆಯಲ್ಲೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ನಾಲತವಾಡದ ಖಾಸಗಿ ಪ್ರೌಢಶಾಲೆಯ ವಿದ್ಯಾರ್ಥಿನಿ ಮತ್ತು ಅವರ ಕುಟುಂಬದವರು ಅದೇ ಪಟ್ಟಣದ ಸಂಗಮೇಶ ಜುಂಜವಾರ, ಚಿದಾನಂದ ಕಟ್ಟಿಮನಿ, ಮೌನೇಶ ಮಾದರ ವಿರುದ್ಧ ಇತ್ತೀಚೆಗೆ ಪೋಕ್ಸೊ ಪ್ರಕರಣ ದಾಖಲಿಸಿದ್ದರು.

‘ಪ್ರಕರಣ ದಾಖಲಾದ ಬಳಿಕ ವಿಚಾರಣೆಗಾಗಿ ಪೊಲೀಸರು ಆಗಾಗ ಮನೆಗೆ ಬಂದು ಹೋದ ಕಾರಣ ಮತ್ತು ವಿಷಯ ಎಲ್ಲೆಡೆ ಪ್ರಚಾರವಾದ ಕಾರಣ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಶಿಕ್ಷಣ ಪಡೆಯುತ್ತಿದ್ದ ಮಗಳು ಭವಿಷ್ಯ ರೂಪಿಸಿಕೊಳ್ಳುವ ಬದಲು ಪುಡಾರಿಗಳ ಕಿರುಕುಳಕ್ಕೆ ಪ್ರಾಣ ಬಿಟ್ಟಿದ್ದಾಳೆ’ ಎಂದು ಬಾಲಕಿಯ ಪಾಲಕರು ದೂರಿದರು.

‘ಬಾಲಕಿಗೆ ಕಿರುಕುಳ ನೀಡಿದ ಆರೋಪಿಗಳಾದ ಸಂಗಮೇಶ ಜುಂಜವಾರ, ಚಿದಾನಂದ ಕಟ್ಟಿಮನಿ ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಬಂಧಿಸಲಾಗಿದೆ’ ಎಂದು ಸರ್ಕಲ್ ಇನ್‌ಸ್ಪೆಕ್ಟರ್ ಮಲ್ಲಿಕಾರ್ಜುನ ತುಳಿಸಿಗೇರಿ ತಿಳಿಸಿದರು.

ಬಾಲಕಿ ಮೇಲೆ ಅತ್ಯಾಚಾರ: ಶಿಕ್ಷಕನ ಬಂಧನ

ಯಡ್ರಾಮಿ (ಕಲಬುರಗಿ ಜಿಲ್ಲೆ): ಐದನೇ ತರಗತಿ ಓದುತ್ತಿರುವ 11 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಖಾಸಗಿ ಶಾಲೆಯ ಶಿಕ್ಷಕ ಹಾಜಿಮಲಂಗ ಗಣಿಯಾರನನ್ನು ಯಡ್ರಾಮಿ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಪ್ರತಿಭಟನೆ: ಅತ್ಯಾಚಾರ ಕೃತ್ಯ ಖಂಡಿಸಿ ಹಾಗೂ ಆರೋಪಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ಸ್ಥಳೀಯರು ಪ್ರತಿಭಟಿಸಿದರು. ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಂದ ಹೊರಗೆ ಉಳಿದಿದ್ದು, ವರ್ತಕರು ಅಂಗಡಿಗಳ ಬಾಗಿಲು ಹಾಕಿದ್ದರು.



ಹಾಜಿಮಲಂಗ ಗಣಿಯಾರ

ನದಿಯಲ್ಲಿ ಮುಳುಗಿ ಆರ್‌ಎಸ್‌ಎಸ್ ಕಾರ್ಯಕರ್ತ ಸಾವು

ಉಜಿರೆ (ದಕ್ಷಿಣ ಕನ್ನಡ): ಬೆಳಾಲು ಗ್ರಾಮದ ಕೂಡಿಗೆ ಎಂಬಲ್ಲಿ ಸೋಮವಾರ ಸಂಜೆ ನೇತ್ರಾವತಿ ನದಿಗೆ ಇಳಿದು ನಾಪತ್ತೆಯಾಗಿದ್ದ ಆರ್‌ಎಸ್‌ಎಸ್ ಕಾರ್ಯಕರ್ತ ಪ್ರಸಾದ್ (34) ಅವರ ಶವ ಮಂಗಳವಾರ ಪತ್ತೆಯಾಗಿದೆ.

ಅವರಿಗೆ ಪತ್ನಿ, ಪುತ್ರ ಇದ್ದಾರೆ. ಬೆಳಾಲು ಗ್ರಾಮದ ಸುರುಳಿ ಕುಂಡಟ್ಕ ನಿವಾಸಿಯಾಗಿದ್ದ ಪ್ರಸಾದ್, ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ‘ಗತಿವಿಧಿ’ಯ ಭಾಗವಾದ ಧರ್ಮ ಜಾಗರಣದ ಪುತ್ತೂರು ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಹಿಂದೆ ಸಂಘದ ಪ್ರಚಾರಕರಾಗಿದ್ದರು ಎಂದು ಮೂಲಗಳು ತಿಳಿಸಿವೆ. ಧರ್ಮಸ್ಥಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ’ ಎಂದು ಜಿಲ್ಲಾ ಎಸ್.ಪಿ ಯತೀಶ್ ಎನ್. ‘ಪ್ರಜಾವಾಣಿ’ಗೆ ತಿಳಿಸಿದರು.



ಪ್ರಸಾದ್

ಬಿಜೆಪಿ ಸಭೆಯಲ್ಲಿ ಬೇಗುದಿ ಸ್ಫೋಟ

ಒಂದನೇ ಪುಟದಿಂದ...

ಎರಡೂ ಸಭೆಯಲ್ಲಿ ಹಾಜರಿದ್ದ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಅವರಿಗೆ ‘ಬಣ ಕದನ’ದ ಬಿಸಿ ಮುಟ್ಟಿತು. ಆದರೆ, ಅವರು ದೂರುಗಳನ್ನು ಆಲಿಸಲು ನಿರಾಕರಿಸಿದರು. ಅಲ್ಲದೇ, ವಿಜಯೇಂದ್ರ ನಿಷ್ಠರ ಬಣ ನೀಡಿದ ಮನವಿಯನ್ನೂ ಸ್ವೀಕರಿಸಲಿಲ್ಲ.

ಸಂಘಟನಾ ಪರ್ವ ಸಭೆಯಲ್ಲಿ ಹಾಜರಿದ್ದ ಶಾಸಕರಾದ ಆರಗ ಜ್ಞಾನೇಂದ್ರ, ಡಾ.ಶೈಲೇಂದ್ರ ಬೆಲ್ದಾಳೆ, ಮಾಜಿ ಶಾಸಕ ರಾಜೂ ಗೌಡ ಮತ್ತು ವಿವಿಧ ಜಿಲ್ಲಾ ಘಟಕಗಳ ಅಧ್ಯಕ್ಷರು, ‘ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ವಜಾ ಮಾಡಬೇಕು’ ಎಂದು ಏರಿದ ಧ್ವನಿಯಲ್ಲಿ ಆಗ್ರಹಿಸಿದರು ಎಂದು ಪಕ್ಷದ ಮೂಲಗಳು ಹೇಳಿವೆ.

ಆಗ ತರುಣ್ ಚುಗ್, ‘ನಾನು ಈ ವಿಚಾರದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ. ಇದು ನನಗೆ ಸಂಬಂಧಪಟ್ಟ ವಿಚಾರವೂ ಅಲ್ಲ. ಪಕ್ಷದ ಸಂಘಟನೆ ವಿಚಾರಕ್ಕಾಗಿ ನನ್ನನ್ನು ನಿಯುಕ್ತಿ ಮಾಡಲಾಗಿದೆ. ಇಲ್ಲಿ ಸಂಘಟನೆ ವಿಚಾರವನ್ನು ಮಾತ್ರ ಪ್ರಸ್ತಾಪಿಸಿ. ನೀವು ವರಿಷ್ಠರನ್ನು ಸಂಪರ್ಕಿಸಿ ಅಥವಾ ಸಂಪರ್ಕಿಸಬೇಡಿ ಎಂದು ಹೇಳುವುದಿಲ್ಲ. ಆ ಬಗ್ಗೆ ನನಗೆ ಅಧಿಕಾರವಿಲ್ಲ. ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಬಂದಾಗ ಅವರ ಜತೆ ಚರ್ಚಿಸಿ’ ಎಂದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಆರಗ ಜ್ಞಾನೇಂದ್ರ, ‘ಪಕ್ಷ ಕಟ್ಟಿದ್ದು ಯಾರೋ ಕೆಲವರು ಅಲ್ಲ. ಲಕ್ಷಗಟ್ಟಲೆ ಕಾರ್ಯಕರ್ತರು ತುರ್ತು ಪರಿಸ್ಥಿತಿಯಲ್ಲಿ ಸೆರೆವಾಸ ಅನುಭವಿಸಿ ಪಕ್ಷವನ್ನು ಕಟ್ಟಿ ಬೆಳೆಸಿದ್ದಾರೆ. ಇಂತಹ ಪಕ್ಷಕ್ಕೆ ಈಗ ಕೆಲವರಿಂದ ಅವಮಾನ ಆಗ್ತಿದೆ ಎಂದು ತರುಣ್ ಚುಗ್ ಅವರ ಗಮನಕ್ಕೆ ತಂದಿದ್ದೇವೆ’ ಎಂದರು.

ಪ್ರಮುಖರ ಸಭೆಯಲ್ಲೂ ಪ್ರಸ್ತಾಪ: ‘ಭಿನ್ನಮತದ ವಿಷಯ ಪ್ರಸ್ತಾಪಿಸುವುದು ಬೇಡ’ ಎಂದು ತರುಣ್ ಚುಗ್ ಪಕ್ಷದ ಪ್ರಮುಖ ನಾಯಕರ ಸಮಿತಿ ಸಭೆಯ ಆರಂಭದಲ್ಲಿ ಹೇಳಿದರೂ, ಪುನಃ ಈ ವಿಷಯ ಸಭೆಯಲ್ಲಿ ಮಾರ್ದನಿಸಿತು.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ವಿಷಯ ಪ್ರಸ್ತಾಪಿಸಿ, ‘ಪಕ್ಷದಲ್ಲಿ ಎರಡು ಗುಂಪುಗಳಾಗಿವೆ. ಪಕ್ಷಕ್ಕೆ ಹಾನಿಯಾಗುತ್ತಿದೆ. ಭಿನ್ನಮತೀಯ ಚಟುವಟಿಕೆ ನಡೆಸುತ್ತಿರುವ ಯತ್ನಾಳ ಮತ್ತು ಅವರ ತಂಡದ ವಿರುದ್ಧ ಕ್ರಮ ಕೈಗೊಳ್ಳುವುದು ಸೂಕ್ತ. ಎಂ.ಪಿ. ರೇಣುಕಾಚಾರ್ಯ ಮತ್ತು ಉಳಿದವರು ಪ್ರತ್ಯೇಕ ಸಭೆ ಮಾಡಿದ್ದು ಕೂಡ ಸರಿಯಲ್ಲ’ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಚುಗ್, ಮುಖಂಡರ ಭಾವನೆಗಳನ್ನು ಹೈಕಮಾಂಡ್ ಗಮನಕ್ಕೆ ತರುತ್ತೇನೆ ಎಂದು ಹೇಳಿದರು.

ಪಕ್ಷದ ಸಣ್ಣ ಪುಟ್ಟ ವಿಚಾರಗಳು ಇನ್ನು ಮೂರು–ನಾಲ್ಕು ದಿನಗಳಲ್ಲಿ ಸುಖಾಂತ್ಯ ಕಾಣಲಿವೆ. ಪಕ್ಷದಲ್ಲಿ ನಾವೆಲ್ಲ ಒಗ್ಗಟ್ಟಾಗಿದ್ದೇವೆ. ಒಟ್ಟಾಗಿಯೇ ಮುನ್ನಡೆಯಲಿದ್ದೇವೆ

ಆರ್.ಅಶೋಕ

ವಿಧಾನಸಭೆ ವಿರೋಧ ಪಕ್ಷದ ನಾಯಕ

‘ಯತ್ನಾಳ ವಿಷಯದಲ್ಲಿ ವರಿಷ್ಠರಿಂದ ನಿರ್ಧಾರ’

ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ವಿಷಯವನ್ನು ವರಿಷ್ಠರು ಗಮನಿಸುತ್ತಿದ್ದಾರೆ. ಶಿಸ್ತುಕ್ರಮ ತೆಗೆದುಕೊಳ್ಳಬೇಕೆ ಅಥವಾ ಹೀಗೇ ಸುಮ್ಮನೆ ಬಿಡಬೇಕೆ ಎಂಬುದನ್ನು ನಿರ್ಧರಿಸಲಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ‘ಜಿಲ್ಲಾ ಘಟಕಗಳ ಅಧ್ಯಕ್ಷರು ರಾಷ್ಟ್ರೀಯ ನಾಯಕರಿಗೆ ಯಾವುದೇ ಮನವಿ ನೀಡಿಲ್ಲ. ಯಾರೂ ಭಯಪಡುವ ಅವಶ್ಯಕತೆ ಇಲ್ಲ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಕೇಂದ್ರದ ಗಮನಕ್ಕೆ ಬಂದಿರುವುದು ಹೆಮ್ಮೆ’

‘ಯತ್ನಾಳ ಅವರಿಂದ ವಿವರಣೆ ಕೇಳಿರುವುದು ಬಹಳ ಸಂತೋಷ. ರಾಜ್ಯದ ಒಳಜಗಳ ಕೇಂದ್ರ ನಾಯಕರ ಗಮನಕ್ಕೆ ಬಂದಿರುವುದು ಬಹಳ ಹೆಮ್ಮೆ ಅನಿಸುತ್ತಿದೆ’ ಎಂದು ಬಿ.ಪಿ. ಹರೀಶ್ ವ್ಯಂಗ್ಯವಾಗಿ ಹೇಳಿದರು.

‘ಲೋಕಸಭಾ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರದ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರನ್ನು ಸೋಲಿಸಲು ಯಡಿಯೂರಪ್ಪ ಹಾಗೂ ವಿಜಯೇಂದ್ರ ಅವರು ಶಾಮನೂರು ಕುಟುಂಬದ ಜತೆಗೆ ಹೊಂದಾಣಿಕೆ ರಾಜಕಾರಣ ಮಾಡಿದ್ದರು. ಅವರಿಗೆ ನೋಟಿಸ್ ನೀಡುವುದು ಯಾವಾಗ’ ಎಂದು ಅವರು ಪ್ರಶ್ನಿಸಿದರು.

‘ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರು ತಿನ್ನಲೆಂದು ಕೃಷ್ಣ ಮೃಗ ಸೇರಿದಂತೆ 60 ಕಾಡು ಪ್ರಾಣಿಗಳನ್ನು ತಮ್ಮ ಕಾರ್ಖಾನೆಯಲ್ಲಿ ಇಟ್ಟುಕೊಂಡಿದ್ದರು. ಆದರೆ, ನಮ್ಮ ಸರ್ಕಾರ ಇದ್ದಾಗ ಪ್ರಕರಣ ದಾಖಲಿಸಲಿಲ್ಲ. ಬಿ–ರಿಪೋರ್ಟ್ ಹಾಕಲಾಯಿತು. ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಯಡಿಯೂರಪ್ಪ ಮಾರ್ಗದರ್ಶನದಲ್ಲಿ ಮಲ್ಲಿಕಾರ್ಜುನ ಅವರನ್ನು ರಕ್ಷಿಸುವ ಕೆಲಸ ಮಾಡಿದರು. ಅದಕ್ಕಾಗಿ ಶಾಮನೂರು ಶಿವಶಂಕರಪ್ಪ ಅವರು ಯಡಿಯೂರಪ್ಪ ಕುಟುಂಬಕ್ಕೆ ಬಹುದೊಡ್ಡ ಉಡುಗೊರೆಯೊಂದನ್ನು ಕೊಟ್ಟರು. ಚುನಾವಣೆ ಸಂದರ್ಭದಲ್ಲಿ ಶಿವಮೊಗ್ಗಕ್ಕೆ ತೆರಳಿ ಬಿ.ವೈ. ರಾಘವೇಂದ್ರ ಅವರನ್ನು ಗೆಲ್ಲಿಸಿ ಎಂದು ಕರೆ ಕೊಟ್ಟರು. ಇದನ್ನು ನಾನು ಹಲವು ಸಲ ಬಹಿರಂಗವಾಗಿ ಖಂಡಿಸಿದ್ದೇನೆ. ಆದರೆ, ರಾಜ್ಯ ಸಮಿತಿಯಾಗಲಿ ಅಥವಾ ಕೇಂದ್ರ ಸಮಿತಿಯಾಗಲಿ ನನಗೆ ನೋಟಿಸ್ ನೀಡಿಲ್ಲ’ ಎಂದರು.

ಶಿಸ್ತು ಸಮಿತಿ ಮುಂದೆ ಇಂದು ಯತ್ನಾಳ ಹಾಜರು

ಒಂದನೇ ಪುಟದಿಂದ..

ಶಾಸಕರಾದ ರಮೇಶ ಜಾರಕಿಹೊಳಿ, ಬಿ.ಪಿ.ಹರೀಶ್, ಮಾಜಿ ಶಾಸಕರಾದ ಕುಮಾರ್ ಬಂಗಾರಪ್ಪ, ಅರವಿಂದ ಲಿಂಬಾವಳಿ, ಮುಖಂಡರಾದ ಎನ್.ಆರ್. ಸಂತೋಷ್ ಮತ್ತಿತರರು ಯತ್ನಾಳ ನೇತೃತ್ವದಲ್ಲಿ ಮಂಗಳವಾರ ಸಭೆ ಸೇರಿ ಮುಂದಿನ ಹೋರಾಟದ ಬಗ್ಗೆ ಸಮಾಲೋಚನೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ರಮೇಶ ಜಾರಕಿಹೊಳಿ, ‘ಬುಧವಾರ ಬೆಳಿಗ್ಗೆ 11.30ಕ್ಕೆ ಬರುವಂತೆ ಶಿಸ್ತು ಸಮಿತಿಯ ಸದಸ್ಯ ಕಾರ್ಯದರ್ಶಿ ಓಂ ಪಾಠಕ್ ಕರೆ ಮಾಡಿ ಸೂಚಿಸಿದ್ದಾರೆ. ಯತ್ನಾಳ ಅವರೊಬ್ಬರೇ ಹೋಗಿ ವಿವರಣೆ ನೀಡಲಿದ್ದಾರೆ. ನೋಟಿಸ್‌ಗೆ ಸಮರ್ಥವಾಗಿ ಉತ್ತರ ನೀಡುತ್ತೇವೆ. ನಾವು ಪಕ್ಷದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ’ ಎಂದು ಸ್ಪಷ್ಟಪಡಿಸಿದರು.

‘ವಿಜಯೇಂದ್ರಗೆ ನೋಟಿಸ್ ಯಾಕಿಲ್ಲ?’

ನವದೆಹಲಿ: ‘ಪಕ್ಷ ವಿರೋಧಿ ಕೆಲಸ ಮಾಡುತ್ತಿರುವ ಹಾಗೂ ಲೋಕಸಭಾ ಚುನಾವಣೆಯಲ್ಲಿ ಹೊಂದಾಣಿಕೆ ರಾಜಕಾರಣ ಮಾಡಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಷೋಕಾಸ್ ನೋಟಿಸ್ ಕೊಟ್ಟಿಲ್ಲ ಏಕೆ’ ಎಂದು ರಮೇಶ ಜಾರಕಿಹೊಳಿ ಹಾಗೂ ಬಿ.ಪಿ.ಹರೀಶ್ ಪ್ರಶ್ನಿಸಿದರು.

‘ರಾಜ್ಯ ಘಟಕದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಲು ಪಕ್ಷದ ವರಿಷ್ಠರ ಸಮಯ ಕೇಳಲಾಗಿದೆ. ಸಿಕ್ಕರೆ ಕೂಡಲೇ ಭೇಟಿಯಾಗುತ್ತೇವೆ. ಸಿಗದಿದ್ದರೆ ಮತ್ತೊಮ್ಮೆ ಬರುತ್ತೇವೆ ಹಾಗೂ ವಿಜಯೇಂದ್ರ ವಿರುದ್ಧ ಪಕ್ಷದ ವರಿಷ್ಠರಿಗೆ ದೂರು ನೀಡುತ್ತೇವೆ’ ಎಂದು ರಮೇಶ ಜಾರಕಿಹೊಳಿ ತಿಳಿಸಿದರು

‘ರಾಜ್ಯ ಘಟಕದ ಅಧ್ಯಕ್ಷರಾಗಿ ವಿಜಯೇಂದ್ರ ಅವರೇ ಪಕ್ಷ ವಿರೋಧಿ ಕೆಲಸ ಮಾಡುತ್ತಿದ್ದಾರೆ. ವಕ್ಫ್ ಹೋರಾಟವನ್ನು ಕೆಡಿಸಲು ವಿಜಯೇಂದ್ರ ತಂಡ ಪ್ರಯತ್ನಿಸಿದೆ. ವಕ್ಫ್ ಕುರಿತು ಅವರೇ ಹೋರಾಟ ಮಾಡಿದ್ದರೆ ನಾವು ಹೋರಾಟ ಮಾಡುವ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ’ ಎಂದು ಅವರು ತಿಳಿಸಿದರು.


‘ನಾವು ಕೆಜೆಪಿ ಟೀಮ್‌ಗೆ ಹೆದರುವುದಿಲ್ಲ. ವಿಜಯೇಂದ್ರ ಜತೆಗೆ ಶೇ 80ರಷ್ಟು ಕೆಜೆಪಿ ತಂಡದವರೇ ಇದ್ದಾರೆ. ಅವರನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿಲ್ಲ. ಒಂದು ವೇಳೆ ಯಡಿಯೂರಪ್ಪ ಪಕ್ಷ ತ್ಯಜಿಸಿದರೆ ಅವರೂ ಬೆನ್ನ ಹಿಂದೆ ಹೋಗುತ್ತಾರೆ. ಪಕ್ಷದ ನೈಜ ಕಾರ್ಯಕರ್ತರನ್ನು ಪ್ರಶ್ನಿಸಿದರೆ ವಾಸ್ತವ ಸ್ಥಿತಿ ಗೊತ್ತಾಗುತ್ತದೆ. ಪಕ್ಷದಲ್ಲಿ ಉತ್ತಮ ವಾತಾವರಣ ಇದೆ’ ಎಂದರು.

ವಕ್ಫ್ ವಿರುದ್ಧದ ಒಂದು ಹಂತದ ಹೋರಾಟ ಮುಕ್ತಾಯಗೊಂಡಿದೆ. ಈ ಬಗ್ಗೆ ಜಂಟಿ ಸಂಸದೀಯ ಸಮಿತಿಗೆ ಇದೇ 5ರಂದು ವರದಿ ಸಲ್ಲಿಸಲಿದ್ದೇವೆ ಎಂದು ಅವರು ಮಾಹಿತಿ ನೀಡಿದರು.

ಉದ್ಯೋಗ ವಾಣಿ

ತಂತ್ರಜ್ಞಾನ







ಬದಲಾಗುತ್ತಿದೆ ಬ್ಯಾಟರಿ

ಬ್ಯಾಟರಿಗೆ ಪೂರಕವಾದ ಯಂತ್ರಾಂಶ (ಹಾರ್ಡ್‌ವೇರ್) ಹಾಗೂ ತಂತ್ರಾಂಶ (ಸಾಫ್ಟ್‌ವೇರ್)ಗಳು ಬ್ಯಾಟರಿ ಚಾರ್ಜು ಖರ್ಚಾಗುವ ವೇಗವನ್ನು ಕಡಿಮೆಗೊಳಿಸುತ್ತವೆ. ಜೊತೆಗೆ ಬಳಕೆಯ ವಿಧಾನವೂ ಬ್ಯಾಟರಿ ಚಾರ್ಜನ್ನು ಖಾಲಿ ಮಾಡುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ.

ಅವಿನಾಶ್ ಬಿ.

ಹೊಸ ಸ್ಮಾರ್ಟ್‌ಫೋನ್ ಖರೀದಿಸುವಾಗ ಮೊದಲು ಕೇಳುವುದು ಅದರ ಬ್ಯಾಟರಿ ಸಾಮರ್ಥ್ಯ ಎಷ್ಟಿದೆ ಎಂದು. ಎರಡು-ಮೂರು ದಿನಗಳು ಚಾರ್ಜ್ ಮಾಡದೆಯೂ ಇರಬಹುದೇ? ಅಷ್ಟು ಸಾಮರ್ಥ್ಯ ಬ್ಯಾಟರಿಗಿದೆಯೇ? ಕೊಳ್ಳುವ ಮೊದಲು ಹೀಗೆಲ್ಲ ಪ್ರಶ್ನೆಗಳನ್ನು ಮುಂದಿಡುತ್ತೇವೆ. ಜನರ ಈ ನಾಡಿಮಿಡಿತವನ್ನು ಅರಿತಿರುವ ಮೊಬೈಲ್ ಫೋನ್ ತಯಾರಿಕಾ ಕಂಪನಿಗಳು ಕೂಡ '5-6 ಸಾವಿರ mAh (ಮಿಲಿ ಆಂಪಿಯರ್ ಹವರ್) ಬ್ಯಾಟರಿ ಇದೆ' ಎಂದು ಜೋರಾಗಿಯೇ ಪ್ರಚಾರ ಮಾಡುತ್ತವೆ.

ಅಷ್ಟು ಸಾಮರ್ಥ್ಯದ ಬ್ಯಾಟರಿಗಳಿರುವ ಮೊಬೈಲ್ ಫೋನ್ ಬಳಸುತ್ತಿದ್ದರೂ, ಸಂಜೆಯೊಳಗೆ ಪುನಃ ಚಾರ್ಜ್ ಮಾಡಬೇಕಾಗುತ್ತದೆ ಎಂದು ಅಲವತ್ತುಕೊಳ್ಳುವವರನ್ನೂ ಕಂಡಿದ್ದೇವೆ. ಬ್ಯಾಟರಿಗೆ ವಿದ್ಯುತ್ತನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಸಾಕಷ್ಟಿರುತ್ತದೆ ಎಂಬುದು ದಿಟವಾದರೂ, ಅದರ ಚಾರ್ಜ್ ಕಡಿಮೆಯಾಗುವುದಕ್ಕೆ ಕಾರಣಗಳು ಹಲವು. ಈಗಂತೂ ಬ್ಯಾಟರಿಗೆ ಪೂರಕವಾದ ಯಂತ್ರಾಂಶ (ಹಾರ್ಡ್‌ವೇರ್) ಹಾಗೂ ತಂತ್ರಾಂಶ (ಸಾಫ್ಟ್‌ವೇರ್)ಗಳು ಬ್ಯಾಟರಿ ಚಾರ್ಜು ಖರ್ಚಾಗುವ ವೇಗವನ್ನು ಕಡಿಮೆಗೊಳಿಸುತ್ತವೆ. ಎಂದರೆ, ಸಾಧನದಲ್ಲಿ ಬಳಸಿರುವ ಚಿಪ್‌ಸೆಟ್ ಮತ್ತು ಪರಿಷ್ಕೃತ ಕಾರ್ಯಾಚರಣಾ ವ್ಯವಸ್ಥೆಯು ಬ್ಯಾಟರಿ ಚಾರ್ಜನ್ನು ಹೆಚ್ಚು ಕಾಲ ಹಿಡಿದಿಟ್ಟುಕೊಳ್ಳಬಲ್ಲುದು. ಆದರೂ, ಫೋನನ್ನು ನಾವು ಬಳಸುವ ವಿಧಾನವು ಬ್ಯಾಟರಿಯ ಚಾರ್ಜ್ ಬೇಗ ಖಾಲಿಯಾಗುವುದನ್ನು ಅಥವಾ ಉಳಿತಾಯವಾಗುವುದನ್ನು ನಿರ್ಧರಿಸುತ್ತದೆ. ಉದಾಹರಣೆಗೆ, ಹೆಚ್ಚು ಪ್ರಖರವಾದ ಸ್ಕ್ರೀನ್ (ಬ್ರೈಟ್‌ನೆಸ್), ಹೆಚ್ಚು ವಿಡಿಯೊ/ಫೇಸ್‌ಬುಕ್, ರೀಲ್ಸ್ ನೋಡುವುದು, ಆನ್‌ಲೈನ್ ಗೇಮ್, ಡೇಟಾ (ಇಂಟರ್ನೆಟ್) ಸಂಪರ್ಕ ಸದಾ ಕಾಲ ಆನ್, ನೆಟ್‌ವರ್ಕ್ ಸಿಗ್ನಲ್ ಕಡಿಮೆ ಇರುವುದು, ಅನಗತ್ಯವಾಗಿ ದೀರ್ಘಕಾಲ ಚಾರ್ಜ್ ಮಾಡುತ್ತಿರುವುದು – ಇವೆಲ್ಲವೂ ಚಾರ್ಜನ್ನು ಬೇಗನೆ ಖಾಲಿಯಾಗುವಂತೆ ಮಾಡಬಲ್ಲ, ತನ್ಮೂಲಕ ಬ್ಯಾಟರಿ ಬಾಳಿಕೆಯನ್ನೂ ಕಡಿಮೆ ಮಾಡಬಹುದಾದ ಅಂಶಗಳು.

ಈ ಸೌಕರ್ಯಗಳಿಲ್ಲದ, ಕರೆ, ಎಸ್ಸೆಮ್ಮೆಸ್, ಟಾರ್ಚ್ ಲೈಟ್, ಎಫ್‌ಎಂ ರೇಡಿಯೊಗಳಷ್ಟೇ ಇರುವ ಫೀಚರ್ ಫೋನ್‌ಗಳಲ್ಲಿರುವ ಬ್ಯಾಟರಿಯ ಸಾಮರ್ಥ್ಯ ಕೇವಲ 2000mAhಗಿಂತಲೂ ಕಡಿಮೆ. ಆದರೂ ಅವುಗಳನ್ನು ಐದಾರು ದಿನಗಳಿಗೊಮ್ಮೆ ಚಾರ್ಜ್ ಮಾಡಿದರೂ ಸಾಕಾಗುತ್ತದೆ. ಸ್ಮಾರ್ಟ್ ಫೋನ್‌ನ ಬಳಕೆ ಮತ್ತು ಫೀಚರ್ ಫೋನ್‌ನ ಬಳಕೆಯ ನಡುವಿನ ವ್ಯತ್ಯಾಸವನ್ನು ತಿಳಿದಾಗ, ಬ್ಯಾಟರಿ ಉಳಿತಾಯ ಹೇಗೆ ಮಾಡಬಹುದೆಂಬುದು ನಮ್ಮ ಅರಿವಿಗೆ ಬರುತ್ತದೆ.

ಗಾತ್ರ ಕಿರಿದು, ಸಾಮರ್ಥ್ಯ ಹಿರಿದು: ಈಗಿನ ಸ್ಮಾರ್ಟ್‌ಫೋನ್‌ಗಳ ಗಾತ್ರ (ವಿಶೇಷವಾಗಿ ತೂಕ ಮತ್ತು ದಪ್ಪ) ಕಿರಿದಾಗಿರುತ್ತದೆ, ಆದರೆ ವೈಶಿಷ್ಟ್ಯಗಳು ಹೆಚ್ಚಿರುತ್ತವೆ; ಇವುಗಳಿಗಾಗಿ ಹೆಚ್ಚು ಸಾಮರ್ಥ್ಯದ ಬ್ಯಾಟರಿ ಬೇಕಾಗುತ್ತದೆ. ದೊಡ್ಡ ಗಾತ್ರದ ಫೋನ್‌ನಲ್ಲಿ ಹೆಚ್ಚು ವಿದ್ಯುತ್ ಸಂಗ್ರಹಿಸುವ ಬ್ಯಾಟರಿಗಳನ್ನು ಅಳವಡಿಸಬಹುದು. ಆದರೆ ಈಗಿನ ಫೋನ್‌ಗಳು ಸ್ಲಿಮ್ ಆಗಿರಬೇಕೆಂದು ಜನ ಬಯಸುತ್ತಾರೆ. ಇದಕ್ಕಾಗಿ ಬ್ಯಾಟರಿ ತಂತ್ರಜ್ಞಾನದಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆ ಆಗುತ್ತಿದೆ. ಈ ನಿಟ್ಟಿನಲ್ಲಿ ಇತ್ತೀಚೆಗೆ ಕೇಳಿ ಬಂದಿರುವುದು ಸಿಲಿಕಾನ್ ಕಾರ್ಬನ್ ಆ್ಯನೋಡ್ ಇರುವ ಬ್ಯಾಟರಿ. ಇದುವರೆಗೆ ಲೀಥಿಯಂ ಅಯಾನ್ (Li-ion) ಬ್ಯಾಟರಿ ಬಗ್ಗೆ ನಾವೆಲ್ಲ ಕೇಳಿದ್ದೇವೆ. ಇದರೊಂದಿಗೆ, ಲೀಥಿಯಂ ಸರ್ಫರ್, ಕೋಬಾಲ್ಟ್ ಫ್ರೀ ಲೀಥಿಯಂ ಅಯಾನ್, ಸಾಲಿಡ್ ಸ್ಟೇಟ್ ಬ್ಯಾಟರಿ, ಡ್ಯುಯಲ್ ಸೆಲ್ ಬ್ಯಾಟರಿ ತಂತ್ರಜ್ಞಾನಗಳನ್ನು ಬಹುತೇಕ ಫೋನ್ ತಯಾರಕರು ಅಳವಡಿಸಿ ನೋಡಿದ್ದಾರೆ. ಒಟ್ಟಿನಲ್ಲಿ, ವೇಗವಾಗಿಯೂ ಚಾರ್ಜ್ ಆಗಬೇಕು, ಹೆಚ್ಚು ಬ್ಯಾಟರಿ ಸಾಮರ್ಥ್ಯ ಉಳಿದುಕೊಳ್ಳಬೇಕು ಎಂಬ, ಬಳಕೆದಾರರ ಬೇಡಿಕೆಯನ್ನು ಈಡೇರಿಸುವುದೇ ಈ ಫೋನ್ ತಯಾರಕರೆಲ್ಲರ ಗುರಿ.

ಏನಿದು ಸಿಲಿಕಾನ್ ಕಾರ್ಬನ್ ಬ್ಯಾಟರಿ?

ರೆಡ್‌ಮಿಯ ಜಿ7 ಸರಣಿ, ಒಪ್ಪೋ, ಒನ್‌ಪ್ಲಸ್, ವಿವೊ, ಆನರ್ ಮುಂತಾದ ಆಂಡ್ರಾಯ್ಡ್ ಕಾರ್ಯಾಚರಣಾ ವ್ಯವಸ್ಥೆಯುಳ್ಳ ಇತ್ತೀಚೆಗಿನ ಉನ್ನತ ದರ್ಜೆಯ (ಫ್ಲ್ಯಾಗ್‌ಶಿಪ್) ಫೋನ್‌ಗಳಲ್ಲಿ ಸಿಲಿಕಾನ್ ಕಾರ್ಬನ್ ಆ್ಯನೋಡ್ ಇರುವ ಬ್ಯಾಟರಿಗಳನ್ನು ಬಳಸಲಾಗಿದೆ. ಲೀಥಿಯಂ ಅಯಾನ್ ಬ್ಯಾಟರಿಗಿಂತ ಇದು ಹೇಗೆ ಭಿನ್ನ? ಮುಖ್ಯವಾಗಿ, ಕಡಿಮೆ ಗಾತ್ರದಲ್ಲಿ ಹೆಚ್ಚು ವಿದ್ಯುತ್ ಉಳಿದುಕೊಳ್ಳುತ್ತದೆ ಎಂಬುದೇ ಇದರ ಹೆಗ್ಗಳಿಕೆ. ಎರಡರಲ್ಲಿಯೂ ಕ್ಯಾಥೋಡ್ (ಋಣ ವಿದ್ಯುತ್ ದ್ವಾರ) ಅನ್ನು ಲೀಥಿಯಂನಿಂದಲೇ ಮಾಡಲಾಗಿರುತ್ತದೆ. ಆದರೆ ಆ್ಯನೋಡ್ (ಧನ ವಿದ್ಯುತ್ ದ್ವಾರ) ಗಾಗಿ ಗ್ರಾಫೈಟ್ ಬದಲಾಗಿ ಸಿಲಿಕಾನ್ - ಕಾರ್ಬನ್ ಸಂಯುಕ್ತವಸ್ತುವನ್ನು ಬಳಸಲಾಗುತ್ತದೆ. ವ್ಯತ್ಯಾಸ ಹೇಳುವುದಾದರೆ, ಗ್ರಾಫೈಟ್ ಆನೋಡ್ ಇರುವ ಸಾಂಪ್ರದಾಯಿಕ ಲೀಥಿಯಂ ಅಯಾನ್ ಬ್ಯಾಟರಿಯು ಒಂದು ಗ್ರಾಂನಲ್ಲಿ ಗರಿಷ್ಠ 372 mAh ಬ್ಯಾಟರಿ ಚಾರ್ಜ್ ಹಿಡಿದಿಟ್ಟುಕೊಳ್ಳಬಹುದಾದರೆ, ಸಿಲಿಕಾನ್ ಕಾರ್ಬನ್ ಬ್ಯಾಟರಿಯು ಒಂದು ಗ್ರಾಂನಲ್ಲಿ ಗರಿಷ್ಠ 470mAh ಬ್ಯಾಟರಿ ಸಾಮರ್ಥ್ಯವನ್ನು ಅಡಕವಾಗಿಸಿಕೊಳ್ಳಬಹುದು. ಎಂದರೆ, ಗಾತ್ರ ಕಡಿಮೆಯಿದ್ದರೂ ಹೆಚ್ಚು ವಿದ್ಯುತ್ತನ್ನು ಹಿಡಿದಿಟ್ಟುಕೊಳ್ಳಬಹುದು. ಆದರೆ ಇಲ್ಲೂ ಮಿತಿ ಎಂಬುದಿದೆ. ಬ್ಯಾಟರಿ ಚಾರ್ಜ್ (ವಿದ್ಯುತ್) ಶೇಖರಣೆಯಾಗುವಾಗ ಸಿಲಿಕಾನ್ ಹಿಗ್ಗುತ್ತದೆ ಎಂಬುದನ್ನು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಹೀಗಾಗಿ, ಫೋನನ್ನು 'ಸ್ಲಿಮ್' ಆಗಿಸುವ ಗುರಿಯನ್ನು ಹೊಂದಿರುವ ಫೋನ್ ತಯಾರಕರು ಈ ಸಮಸ್ಯೆಯನ್ನು ನಿಭಾಯಿಸಬೇಕಾಗುತ್ತದೆ.

ಮುಂದೇನು? ಈಗಂತೂ ವಿದ್ಯುಚ್ಚಾಲಿತ ವಾಹನಗಳ (ಇ.ವಿ.) ಯುಗ. ಬ್ಯಾಟರಿ ತಂತ್ರಜ್ಞಾನದ ಬಗ್ಗೆ ಸಾಕಷ್ಟು ಸಂಶೋಧನೆಗಳಾಗುತ್ತಲೇ ಇವೆ. ಇವಿ ಮತ್ತು ಸ್ಮಾರ್ಟ್ ಸಾಧನ- ಎರಡೂ ಕಡೆ ಹೊಸ ಕ್ರಾಂತಿಯನ್ನು ಉಂಟುಮಾಡಬಲ್ಲ ಗ್ರಾಫೀನ್ ಬ್ಯಾಟರಿ ತಂತ್ರಜ್ಞಾನ ಅಳವಡಿಕೆ ಬಗ್ಗೆ ಈಗಾಗಲೇ ಸಂಶೋಧನೆಗಳು ನಡೆಯುತ್ತಿವೆ. ಇದೇನಾದರೂ ಯಶಸ್ವಿಯಾದಲ್ಲಿ, ಐವತ್ತು ದಿನಗಳ ಕಾಲವೂ ಬ್ಯಾಟರಿ ಚಾರ್ಜ್ ಹಿಡಿದಿಟ್ಟುಕೊಳ್ಳಬಲ್ಲ ವ್ಯವಸ್ಥೆ ರೂಪಿಸಬಹುದು ಎಂದು ಅಂದಾಜಿಸಲಾಗುತ್ತಿದೆ. ಸ್ಯಾಮ್‌ಸಂಗ್ ಮತ್ತು ಹುವಾವೆ ಮುಂತಾದ ಕಂಪನಿಗಳು ಈ ನಿಟ್ಟಿನಲ್ಲಿ ಸಂಶೋಧನೆಯಲ್ಲಿ ತೊಡಗಿಕೊಂಡಿವೆ.



ಕಟ್ಟಡಗಳ ನಿರ್ಮಾಣದಲ್ಲೂ ಕೃತಕ ಬುದ್ಧಿಮತ್ತೆ

ನೇಸರ ಕಾಡನಕುಪ್ಪೆ

ಸಾಮಾನ್ಯವಾಗಿ ನಿರ್ಮಾಣಕ್ಷೇತ್ರದಲ್ಲಿ ಚದರ ಅಡಿಗಳ ಲೆಕ್ಕಾಚಾರಕ್ಕೆ ಟೇಪನ್ನು ಹಿಡಿದು ಅಳತೆ ಮಾಡುವ, ಎತ್ತರ, ಉದ್ದ, ಅಗಲ, ಗಾತ್ರವನ್ನು ಪರಿಶೀಲಿಸುವ ಎಂಜಿನಿಯರುಗಳು, ಮೇಸ್ತ್ರಿಗಳನ್ನು ನೀವು ನೋಡಿರಬಹುದು. ಇತ್ತೀಚಿನ ದಿನಗಳಲ್ಲಿ ಲೇಸರ್ ಆಧಾರಿತ ಅಳತೆಯ ಮಾಪನಗಳೂ ಸಾಕಷ್ಟು ಬಂದಿವೆ. ಇವಿದ್ದರೂ ಭೌತಿಕವಾಗಿ ಅಗತ್ಯವುಳ್ಳ ಜಾಗದಲ್ಲಿ ಮನುಷ್ಯನ ಪ್ರಸ್ತುತಿ ಇರಲೇಬೇಕಾಗುತ್ತದೆ. ಆದರೆ, ಅದನ್ನು ಇಲ್ಲವಾಗಿಸಿ, ತನಗೆ ತಾನೇ ಅದೃಶ್ಯವಾಗಿ ಈ ಕೆಲಸ ಮಾಡುವ ಕಲೆಗಾರಿಕೆಯನ್ನು ಈಗ ಕೃತಕ ಬುದ್ಧಿಮತ್ತೆ ಕಂಡುಕೊಂಡಿದೆ!

ಕಟ್ಟಡ ನಿರ್ಮಾಣ ಬಹು ದುಬಾರಿ ಪ್ರಕ್ರಿಯೆ. ಪ್ರತಿ ಚದರ, ಇಂಚು, ಅಡಿಗಳನ್ನು ಲೆಕ್ಕ ಹಾಕಿ ಬಂಡವಾಳ ಹೂಡಿಕೆ, ಲಾಭ- ನಷ್ಟಗಳ ಲೆಕ್ಕಾಚಾರವನ್ನು ಹಾಕಬೇಕಾಗುತ್ತದೆ. ಈ ಲೆಕ್ಕಾಚಾರದಿಂದ ಸಿಗುವ ದತ್ತಾಂಶದ ಆಧಾರದ ಮೇಲೆ ಕಚ್ಚಾ ಸಾಮಗ್ರಿ, ಕೂಲಿಯಾಗಳುಗಳು, ಎಂಜಿನಿಯರುಗಳು ಇತ್ಯಾದಿ ಅಗತ್ಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಅದೂ ಅಲ್ಲದೇ, ಇತ್ತೀಚಿನ ದಿನಗಳಲ್ಲಿ ಗಗನಚುಂಬಿ ಕಟ್ಟಡಗಳನ್ನು ನಿರ್ಮಿಸುತ್ತಿರುವ ಕಾರಣ, ವಾಸ್ತುಶಿಲ್ಪದಲ್ಲಿ ಒಂದಿಂಚೂ ಹೆಚ್ಚು ಕಡಿಮೆ ಆಗದಂತೆ ನೋಡಿಕೊಂಡರೆ ಮಾತ್ರ ಸುರಕ್ಷಿತವಾಗಿ ಕಟ್ಟಡವೊಂದನ್ನು ನಿರ್ಮಿಸಬಹುದು; ಆಗ ಆ ಕಟ್ಟಡವೂ ಬಹುಕಾಲ ಬಾಳಿಕೆ ಬರಬಹುದು. ಈ ಸಂಕೀರ್ಣ ಪ್ರಕ್ರಿಯೆಯನ್ನು ಸರಳಗೊಳಿಸುವ ಉದ್ದೇಶದಿಂದ ಇಡೀ ಈ ಲೆಕ್ಕಾಚಾರದ ಕೆಲಸವನ್ನು ಕೃತಕ ಬುದ್ಧಿಮತ್ತೆಗೆ ಕೊಡಲಾಗಿದೆ. ಕೃತಕ ಬುದ್ಧಿಮತ್ತೆಯು ಸರಿಯಾಗಿ ಅಳೆದು, ತೂಗಿ ದತ್ತಾಂಶವನ್ನು ನೀಡುವುದರ ಜೊತೆಗೆ, ಕಟ್ಟಡ ನಿರ್ಮಾಣಕ್ಕೆ ಏನೇನು ಬೇಕು – ಬೇಡ ಎಂದೂ ನಿಖರವಾಗಿ ಹೇಳುವ ಜಾಣ್ಮೆಯನ್ನು ರೂಢಿಸಿಕೊಂಡಿದೆ.

ಅಮೆರಿಕದ ನ್ಯೂ ಜರ್ಸಿಯ ಹೊಬೊಕೆನ್‌ನಲ್ಲಿ ಇರುವ ಸ್ಟೀವನ್ಸ್ ಕ್ವಾಂಟಮ್ ವಿಜ್ಞಾನ ಮತ್ತು ಎಂಜಿನಿಯರಿಂಗ್ ಕೇಂದ್ರದ ವಿಜ್ಞಾನಿಗಳು ಈ ಸಂಶೋಧನೆಯನ್ನು ಮಾಡಿದ್ದಾರೆ. ವಿಜ್ಞಾನಿ ಯಾಂಗ್ ಮೆಂಗ್ ಸುವಾ ಅವರ ನೇತೃತ್ವದಲ್ಲಿ ರೂಪಿತಗೊಂಡಿರುವ ಈ ಸಂಶೋಧನೆಯು ನಿರ್ಮಾಣಕ್ಷೇತ್ರದಲ್ಲಿ ಹೊಸ ಮೈಲುಗಲ್ಲನ್ನೇ ಸ್ಥಾಪಿಸುತ್ತದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ.

ಸಾಮಾನ್ಯವಾಗಿ ಕಟ್ಟಡ ನಿರ್ಮಾಣದಲ್ಲಿ ಬಳಕೆಯಾಗುವ ಸಾಮಗ್ರಿಗಳಿಗಿಂತ ವ್ಯರ್ಥವಾಗುವುದೇ ಹೆಚ್ಚು. ಕಚ್ಚಾಸಾಮಗ್ರಿಗಳನ್ನು ಅನಗತ್ಯವಾಗಿ ಕೊಳ್ಳುವುದು, ಬಳಸುವುದು, ಕೊನೆಗೆ ವ್ಯರ್ಥ ಮಾಡುವುದು ಇದ್ದಿದ್ದೇ. ಇದು ಕೆಲವೊಮ್ಮೆ ಶೇ 30ಕ್ಕಿಂತಲೂ ಮೀರಿರುತ್ತದೆ ಎಂದು ಸಂಶೋಧನಾ ದತ್ತಾಂಶಗಳು ಹೇಳುತ್ತವೆ. ಎಂದರೆ ನೀವು 100 ರೂಪಾಯಿಯನ್ನು ನಿರ್ಮಾಣಕ್ಕೆ ಬಳಸುತ್ತಿದ್ದರೆ, ಅದರಲ್ಲಿ 30 ರೂಪಾಯಿ ಅನಗತ್ಯವಾಗಿ ವ್ಯರ್ಥವಾಗುತ್ತದೆ ಎಂದರ್ಥ. ಇದನ್ನು ತಡೆಗಟ್ಟಬಲ್ಲ ಬುದ್ಧಿಶಕ್ತಿಯನ್ನು ಈ ಹೊಸ ತಂತ್ರಜ್ಞಾನ ಒದಗಿಸುತ್ತದೆ.



ಕಾರ್ಯವಿಧಾನ: ಸಂಪೂರ್ಣ ಉಪಗ್ರಹ ಆಧಾರಿತವಾಗಿ ಈ ತಂತ್ರಜ್ಞಾನ ಕಾರ್ಯ ನಿರ್ವಹಿಸುತ್ತದೆ. ಎಂದರೆ, ಅತ್ಯುತ್ತಮ ಇಂಟರ್ನೆಟ್ ಸಂಪರ್ಕ ಇರುವ ಅಭಿವೃದ್ಧಿಶೀಲ ಹಾಗೂ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಾತ್ರ ಈ ತಂತ್ರಜ್ಞಾನ ಕಾರ್ಯನಿರ್ವಹಿಸಬಲ್ಲದು. ಉಪಗ್ರಹ ಆಧಾರಿತವಾಗಿ ನಿರ್ಮಾಣಕ್ಷೇತ್ರವನ್ನು ಮೊದಲು ವೀಕ್ಷಿಸುವ ಈ ಕೃತಕ ಬುದ್ಧಿಮತ್ತೆಯು ಕಟ್ಟಡ ನಿರ್ಮಾಣದ ನೀಲನಕ್ಷೆಯನ್ನು ಗಮನಿಸಿ ಎಷ್ಟು ಎತ್ತರ, ಅಗಲ, ದಪ್ಪ, ಉದ್ದವಾಗಿ ಕಟ್ಟಡದ ಅಡಿಪಾಯ, ಗೋಡೆಗಳು, ತಾರಸಿ – ಇತ್ಯಾದಿ ರಚನೆಗಳನ್ನು ನಿರ್ಮಿಸಬೇಕು ಎಂಬುದನ್ನು ಮೊದಲು ನೀಡುತ್ತದೆ. ಅಲ್ಲದೇ, ನಿರ್ಮಾಣ ಕ್ಷೇತ್ರದಲ್ಲಿ ಇಂತಷ್ಟೇ ಜಾಗದಲ್ಲಿ ನಿರ್ಮಾಣವಾಗಬೇಕು ಎಂದು ಅದೃಶ್ಯ ಗಡಿರೇಖೆಗಳನ್ನು ರಚಿಸಿಕೊಳ್ಳುತ್ತದೆ. ನಿಗದಿತ ಗಡಿಯ ಆಚೆ ಹೋಗದಂತೆ, ಒಳಗೂ ಬಾರದಂತೆ ನಿರ್ಮಾಣ ಶುರು ಮಾಡವಂತೆ ಸೂಚಿಸುತ್ತದೆ. ಎಂದರೆ, ಕಟ್ಟಡ ನಿರ್ಮಾಣದ ಕಾರ್ಯ ಶುರುವಾಯಿತು ಎಂದುಕೊಳ್ಳಿ. ನಿರ್ಮಾಣದ ಸಮಯದಲ್ಲಿ ಕಟ್ಟಡದ ಕಾರ್ಮಿಕರು ಅಥವಾ ಮೇಸ್ತ್ರಿಗಳು ಒಂದೇ ಒಂದು ಮಿಲಿ ಮೀಟರ್ ಆಚೀಚೆ ಗೋಡೆ ಕಟ್ಟಿದರೆ, ಮೇಲುಸ್ತುವಾರಿ ನೋಡಿಕೊಳ್ಳುತ್ತಿರುವ ಈ ಕೃತಕ ಬುದ್ಧಿಮತ್ತೆಯು ಎಚ್ಚರಿಕೆ ಗಂಟೆಯನ್ನು ಮೊಳಗಿಸುತ್ತದೆ. ಆಗ ಅದನ್ನು ಸರಿಪಡಿಸಿಕೊಳ್ಳುವ ಅವಕಾಶ ಸಿಗುತ್ತದೆ. ಹೀಗೆ, ನಿರ್ಮಾಣಕಾರ್ಯದ ಅಡಿಪಾಯದಿಂದ ಶುರುವಾಗಿ ಕೊನೆಯ ಅಂತಸ್ತಿನ ತಾರಸಿಯವರೆಗೂ ನಿರ್ಮಾಣಕಾರ್ಯದ ಮೇಲುಸ್ತುವಾರಿಯನ್ನು ಈ ಕೃತಕ ಬುದ್ಧಿಮತ್ತೆಯು ಉಪಗ್ರಹದ ಸಹಾಯದಿಂದ ನಡೆಸುತ್ತಿರುತ್ತದೆ. ಜೊತೆಗೆ, ನಿರ್ಮಾಣದ ಎಲ್ಲ ಹಂತದ ಫೋಟೊಗಳು, ವಿಡಿಯೊಗಳು ದಾಖಲಾಗಿರುತ್ತವೆ. ಹಾಗಾಗಿ, ನಿರ್ಮಾಣಕಾರ್ಯದಲ್ಲಿ ಪಾರದರ್ಶಕತೆ ಸಿಗುತ್ತದೆ. ಆದ್ದರಿಂದ ಕಟ್ಟಡದ ಮಾಲೀಕರಿಗೆ ನಿರ್ಮಾಣಕಾರ್ಯದಲ್ಲಿ ಯಾವುದೇ ಮೋಸವಾಗುತ್ತಿಲ್ಲ ಎಂಬ ಸ್ಪಷ್ಟತೆ ಸಿಗುತ್ತದೆ; ಮೋಸವಾದಲ್ಲಿ ಅದನ್ನು ಸಾಕ್ಷಿ ಸಮೇತವಾಗಿ ಸಾಬೀತು ಮಾಡುವ ಅವಕಾಶವೂ ಸಿಗುತ್ತದೆ. ಇದರಿಂದ ಕಟ್ಟಡ ನಿರ್ಮಾಣಕಾರ್ಯದಲ್ಲಿ ಕಾನೂನಾತ್ಮಕ ರಕ್ಷಣೆಯೂ ಕಟ್ಟಡ ಮಾಲೀಕರಿಗೆ ಅಥವಾ ಬಂಡವಾಳ ಹೂಡಿಕೆ ಮಾಡುವವರಿಗೆ ಸಿಗುತ್ತದೆ. ಇತ್ತೀಚಿನ ದಿನಗಳಲ್ಲಿ ಕಟ್ಟಡ ನಿರ್ಮಾಣವು ಐಷಾರಾಮಿಯಾಗಿಯೂ ವೈಜ್ಞಾನಿಕವಾಗಿ ನಿರ್ಮಾಣವಾಗಬೇಕೆಂಬ ನಿರೀಕ್ಷೆಯನ್ನು ಪೂರೈಸುವ ಅವಕಾಶ ಸಿಗುತ್ತದೆ. ನಿರ್ಮಾಣಕಾರ್ಯ ತ್ವರಿತವಾಗಿಯೂ ನಡೆಯುತ್ತದೆ. ಸುಮಾರು ಶೇ 10ರಷ್ಟು ನಿರ್ಮಾಣಸಮಯವನ್ನು ಉಳಿಸಬಹುದು. ಸಾಕಷ್ಟು ಬಂಡವಾಳವನ್ನೂ ಕಡಿಮೆ ಮಾಡಿಕೊಳ್ಳಬಹುದು ಎನ್ನುತ್ತಾರೆ, ವಿಜ್ಞಾನಿ ಸುವಾ.


ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ –ವಿಜ್ಞಾನ

ನಮ್ಮ ಪರಿಸರ

8) ಒಂದು ಪರಿಸರವ್ಯವಸ್ಥೆಯಲ್ಲಿ ಶಕ್ತಿಯ ಹರಿವನ್ನು ತೋರಿಸುವ ಚಿತ್ರವನ್ನು ಬರೆಯಿರಿ

ಉತ್ತರ:–



9) ಶಕ್ತಿಯ ಹರಿವು ಚಿತ್ರದಿಂದ ಯಾವ ವಿಷಯಗಳು ಸ್ಪಷ್ಟವಾಗುತ್ತದೆ.?

ಉತ್ತರ:– ಶಕ್ತಿಯ ಹರಿವು ಚಿತ್ರದಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತದೆ. ಮೊದಲನೆಯದಾಗಿ ಶಕ್ತಿಯ ಹರಿವು ಏಕಮುಖವಾಗಿರುತ್ತದೆ. ಸ್ವಪೋಷಕಗಳಿಂದ ಸೆರೆಹಿಡಿಯಲಾದ ಶಕ್ತಿಯು ಮನಃ ಸೌರಶಕ್ತಿಗೆ ಹಿಂದಿರುಗುವುದಿಲ್ಲ

ಮತ್ತು ಸಸ್ಯಾಹಾರಿಗಳಿಗೆ ಸೇರಿಹೋದ ಶಕ್ತಿಯು ಸ್ವಪೋಷಕರಿಗೆ ಹಿಂದೆ ಬರುವುದಿಲ್ಲ. ಇದು ವಿವಿಧ ಪೋಷಣಾಸ್ತರಗಳ ಮೂಲಕ ಕ್ರಮೇಣವಾಗಿ ಮುಂದೆ ಸಾಗಿದಂತೆ ಹಿಂದಿನ ಹಂತಗಳಿಗೆ ಸಿಗುವುದಿಲ್ಲ. ಎರಡನೆಯದಾಗಿ, ಪ್ರತಿಯೊಂದು ಪೋಷಣಾಸ್ತರದಲ್ಲಿ ಲಭ್ಯವಿರುವ ಶಕ್ತಿಯು ಪ್ರತಿ ಹಂತದಲ್ಲಿ ಶಕ್ತಿಯ ನಷ್ಟದಿಂದಾಗಿ ಕ್ರಮೇಣ ಕಡಿಮೆಯಾಗುತ್ತದೆ

10) ಯಾವ ವಿದ್ಯಮಾನವನ್ನು ಜೈವಿಕ ಸಂವರ್ಧನೆ (biological magnification) ಎನ್ನುವರು.?

ಉತ್ತರ:– ವಿವಿಧ ಕಾರಣಗಳಿಗಾಗಿ ನೀರು ಮಲಿನಗೊಳ್ಳುತ್ತದೆ. ಹಲವಾರು ಕೀಟನಾಶಕಗಳನ್ನು ಮತ್ತು ಇತರ ರಾಸಾಯನಿಕಗಳನ್ನು ಬಳಸುವುದು ಕೂಡಾ ಇದಕ್ಕೆ ಮುಖ್ಯ ಕಾರಣವಾಗಿದೆ. ಅವುಗಳು ನಮ್ಮ ಬೆಳೆಗಳನ್ನು ರೋಗಗಳಿಂದ ಮತ್ತು ಕೀಟಗಳಿಂದ ರಕ್ಷಿಸುತ್ತವೆ. ಆದರೆ, ಈ ರಾಸಾಯನಿಕಗಳು ನೀರಿನೊಂದಿಗೆ ಹರಿದುಹೋಗಿ ಮಣ್ಣಿನ ಒಳಗೆ ಇಂಗುತ್ತವೆ ಅಥವಾ ನೀರಿನ ಆಕರಗಳನ್ನು ಸೇರುತ್ತವೆ. ಮಣ್ಣಿನಿಂದ ಇವುಗಳನ್ನು ನೀರು ಮತ್ತು ಲವಣಾಂಶದೊಂದಿಗೆ ಗಿಡಗಳು ಹೀರಿಕೊಳ್ಳುತ್ತವೆ ಮತ್ತು ನೀರಿನ ಆಕರಗಳ ಮೂಲಕ ಇವುಗಳನ್ನು ಜಲಸಸ್ಯಗಳು ಮತ್ತು ಪ್ರಾಣಿಗಳು ಪಡೆದುಕೊಳ್ಳುತ್ತವೆ. ಅವುಗಳಲ್ಲಿ ಇದು ಆಹಾರ ಸರಪಳಿಯನ್ನು ಸೇರುವ ಒಂದು ಮಾರ್ಗವಾಗಿದೆ. ಈ ರಾಸಾಯನಿಕಗಳು ವಿಘಟನೆಗೆ ಒಳಗಾಗದ ಕಾರಣ ಇವುಗಳು ಪ್ರತಿ ಪೋಷಣಾಸ್ತರದಲ್ಲಿ ಸಂಗ್ರಹಿಸಲ್ಪಡುತ್ತವೆ. ಯಾವುದೇ ಆಹಾರ ಸರಪಳಿಯಲ್ಲಿ ಮಾನವರು ಉನ್ನತಮಟ್ಟವನ್ನು ಆಕ್ರಮಿಸಿಕೊಳ್ಳುವುದರಿಂದ ಈ ರಾಸಾಯನಿಕಗಳು ಗರಿಷ್ಠ ಸಾಂದ್ರತೆಯಲ್ಲಿ ನಮ್ಮ ದೇಹದಲ್ಲಿ ಸಂಗ್ರಹವಾಗುತ್ತವೆ. ಈ ವಿದ್ಯಮಾನವನ್ನು ಜೈವಿಕ ಸಂವರ್ಧನೆ (biological magnification) ಎನ್ನುವರು. ಇದಕ್ಕಾಗಿಯೇ ನಮ್ಮ ಆಹಾರ ಧಾನ್ಯಗಳಾದ ಗೋಧಿ ಮತ್ತು ಅಕ್ಕಿ, ತರಕಾರಿ ಮತ್ತು ಹಣ್ಣುಗಳು ಮತ್ತು ಮಾಂಸವೂ ಕೂಡಾ ವಿವಿಧ ಪ್ರಮಾಣದ ಕೀಟನಾಶಕಗಳ ಅವಶೇಷಾಂಶಗಳನ್ನು ಹೊಂದಿರುತ್ತವೆ. ಅವುಗಳನ್ನು ತೊಳೆಯುವ ಮತ್ತು ಇತರ ವಿಧಾನಗಳ ಮೂಲಕ ತೆಗೆದುಹಾಕಲು ಸಾಧ್ಯವಿಲ್ಲ.

11) ಓಝೋನ್ (O_3) ಎಂಬುದು ಆಕ್ಸಿಜನ್‌ನ ಎಷ್ಟು ಪರಮಾಣುಗಳಿಂದ ರೂಪುಗೊಂಡ ಒಂದು ಅಣುವಾಗಿದೆ. ?

ಉತ್ತರ:– ಮೂರು

12) ನಾವು ಸಾಮಾನ್ಯವಾಗಿ ಆಕ್ಸಿಜನ್ ಎಂದು ಉಲ್ಲೇಖಿಸುವ O2, ಉಸಿರಾಡುವ ಎಲ್ಲಾ ಜೀವಿಗಳ ಜೀವನಕ್ಕೆ ಅತ್ಯಗತ್ಯ ಹಾಗಾದರೆ O_3 ಓಝೋನ್ ಉಸಿರಾಡಲು ಯೋಗ್ಯವೇ?

ಉತ್ತರ:– ಅಲ್ಲ. ಅದೂ ವಿಷಕಾರಿ

13) ಓಝೋನ್ ಏಕೆ ಅಗತ್ಯ?

ಉತ್ತರ:– ವಾತಾವರಣದ ಉನ್ನತ ಮಟ್ಟದಲ್ಲಿ ಓಝೋನ್ ಒಂದು ಅತ್ಯಗತ್ಯ ಕಾರ್ಯವನ್ನು ನಿರ್ವಹಿಸುತ್ತದೆ. ಅದೇನೆಂದರೆ ಸೌರಬೆಳಕಿನಿಂದ ಬರುವ ನೇರಳಾತೀತ ವಿಕಿರಣದಿಂದ ಭೂಮಿಯ ಮೇಲ್ಮೈಯನ್ನು ರಕ್ಷಿಸುತ್ತದೆ.

14) ಭೂಮಿಯ ಮೇಲೆ ವಾಸಿಸುವ ಮಾನವರ ಮೇಲೆ ನೇರಳಾತೀತ ಕಿರಣಗಳು ಯಾವ ರೀತಿ ಹಾನಿಯನ್ನು ಮಾಡಬಲ್ಲವು?

ಉತ್ತರ:= ನೇರಳಾತೀತ ವಿಕಿರಣಗಳು ಮಾನವರಲ್ಲಿ ಚರ್ಮದ ಕ್ಯಾನ್ಸರ್ ಉಂಟುಮಾಡುತ್ತದೆ.

15) ಓಝೋನ್ ಹೇಗೆ ರೂಪುಗೊಳ್ಳುತ್ತದೆ

ಉತ್ತರ:– ಓಝೋನ್ ಎಂಬುದು ವಾತಾವರಣದ ಉನ್ನತಸ್ತರದಲ್ಲಿ ನೇರಳಾತೀತ ವಿಕಿರಣವು ಆಕ್ಸಿಜನ್ ಅಣು (O_2)ವಿನ ಜೊತೆ ವರ್ತಿಸಿ ಉಂಟಾದ ಒಂದು ಸಂಯುಕ್ತವಾಗಿದೆ. ಹೆಚ್ಚಿನ ತೀವ್ರತೆಯ ನೇರಳಾತೀತ ವಿಕಿರಣಗಳು ಕೆಲವು ಆಕ್ಸಿಜನ್ ಅಣುಗಳನ್ನು (O2), ಆಕ್ಸಿಜನ್ ಪರಮಾಣು(O)ಗಳಾಗಿ ವಿಭಜಿಸುತ್ತವೆ. ನಂತರ ಈ ಪರಮಾಣುಗಳು ಇತರ ಆಕ್ಸಿಜನ್ ಅಣುಗಳೊಂದಿಗೆ ಸೇರಿ ಓಝೋನ್ ರೂಪುಗೊಳ್ಳುತ್ತದೆ.

16) ಓಝೋನ್ ಕುಸಿತದ ಕುರಿತು ಬರೆಯಿರಿ

ಉತ್ತರ:– 1980ರ ದಶಕದಲ್ಲಿ ಓಝೋನ್ ಪ್ರಮಾಣವು ತೀವ್ರವಾಗಿ ಕುಸಿಯಲಾರಂಭಿಸಿತು. ಶೀತಲೀಕರಣ ಮತ್ತು ಅಗ್ನಿಶಾಮಕದಲ್ಲಿ ಬಳಸಲ್ಪಡುವ ಕ್ಲೋರೋಫ್ಲೋರೋಕಾರ್ಬನ್(CFC)ಗಳಂಥ ಸಂಶ್ಲೇಷಿತ ರಾಸಾಯನಿಕಗಳು ಈ ಕುಸಿತಕ್ಕೆ ಕಾರಣ ಎಂದು ಕಂಡುಕೊಳ್ಳಲಾಯಿತು. 1987ರಲ್ಲಿ ಸಂಯುಕ್ತ ರಾಷ್ಟ್ರಗಳ ಪರಿಸರ ಕಾರ್ಯಕ್ರಮ (United Nations Environment Programme - UNEP) ಸಿಎಫ್‌ಸಿಗಳ ಉತ್ಪಾದನೆಯನ್ನು 1986ರ ಮಟ್ಟಕ್ಕೆ ಸ್ಥಗಿತಗೊಳಿಸುವಂಥ ಒಪ್ಪಂದ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು. ಪ್ರಪಂಚದಾದ್ಯಂತ ಸಿಎಫ್‌ಸಿ – ಮುಕ್ತ ರೆಫ್ರಿಜರೇಟರ್‌ಗಳನ್ನು ಎಲ್ಲಾ ಉತ್ಪಾದನಾ ಕಂಪನಿಗಳು ತಯಾರಿಸುವುದು ಇದೀಗ ಕಡ್ಡಾಯವಾಗಿದೆ.

ಬಹು ಆಯ್ಕೆ ಪ್ರಶ್ನೆಗಳು:–

1. ಈ ಕೆಳಗಿನವುಗಳಲ್ಲಿ ಯಾವ ಗುಂಪುಗಳು ಜೈವಿಕ ವಿಘಟನೆಗೆ ಒಳಗಾಗುವ ವಸ್ತುಗಳನ್ನು ಮಾತ್ರ ಒಳಗೊಂಡಿದೆ?

(a) ಹುಲ್ಲು, ಪ್ಲಾಸ್ಟಿಕ್ ಹೂವುಗಳು ಮತ್ತು ಚರ್ಮ
(b) ಹುಲ್ಲು, ಮರ ಮತ್ತು ಪ್ಲಾಸ್ಟಿಕ್
(c) ಹಣ್ಣಿನ ಸಿಪ್ಪೆ, ಕೇಕ್ ಮತ್ತು ನಿಂಬೆರಸ
(d) ಕೇಕ್, ಮರ ಮತ್ತು ಸಿಂಥೆಟಿಕ್ ಹುಲ್ಲು ಉತ್ತರ:–ಸಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

EVOLUTION

18. Write brief note on vestigial organs in animals.


Ans:- (…..Contd)

e.g., Ostrich, Emu, Cassowary, Rhea. The extinct Dodo bird of Maritius was also flightless.

g) Cave Dwellers – They live in darkness. Eyes have little importance.

The same are reduced or absent, e.g., Proteus angineus (Cave Salamander). Cave Fish, Cave Cray Fish.

h) Wingless Beetles – Beetles living in wind swept islands (e.g., Moldavia) have either small reduced wings or are wingless.



19. Write brief note on vestigial organs in plants.

Ans:- Vestigial organs in plants–

(i) Scales – leaves are reduced to scales in a number of plants. Here, photosynthesis is performed by other structures, e.g., Ruscus, Asparagus. Scales also occur in place of leaves in parasitic plant of Cuscuta.

(ii) Staminodes – Some of the stamens are reduced and non-functional in a number of plants, e.g.,members of labitae, caesalpinioideae.

(iii) Pistillodes – They are nonfunctional and reduced pistils, e.g., ray florets of sunflower, male flowers of cucurbits.

20. What is Atavism?

Ans:- Atavism is the reappearance of a remote ancestral form of a trait which has otherwise become reduced and nonfunctional in the present generations. It confirms the retrogressive evolution.

Eg:- (1) Human tail – Some babies develop a small tail which is otherwise absent in human beings. The same is removed.

(2) Movement of Pinnae in Human beings – Some persons are able to move pinnae somewhat irregularly. It is caused by atavistic development of auricular muscles.

(3) Dense body hair – Some males have dense growth of body hair.

(4) Additional Mammae – A few persons come to have additional mammae in line with and below the normal ones.

(5) Large Canines – Enlarged canines occur occasionally in some persons.

(6) Citrus – The winged petiole is sometimes expanded further to form two lateral leaflets indicating that unfoliate leaf of Citrus is derived from trifoliate leaf.

(7) Extra Petals – In some ornamental flowers, the stamens and sometimes carpels get changed to petal like structures indicating that stamens and carpels are actually modified petals.

21. The scientists believe that evolution is gradual. But extinction, part of evolutionary story, are sudden and abrupt and also group specific. Comment whether a natural disaster can be the cause of extinction of species.

Ans:- Sudden, abrupt and group specific extinctions have occurred in nature due to –

a) Overpopulation of predators or competition from advanced descendants.

b) Genetic degeneration

c) Changes in environment like excessive cooling (glaciations) or warming, drought or excessive raining.

d) Natural calamities like floods, volcanoes, earthquakes, epidemics, etc. One theory of extinction of dinosaurs is the origin of giant crocodiles who devoured the dinosaurs and thereafter died down themselves due to absence of proper food.

MAN IN HEALTH AND DISEASES

1. What is Homeostasis?

Ans:- **Homeostasis is the condition in which the body's internal environment remains relatively constant, within limits.**

2. What is the normal blood sugar level in human beings?

Ans:- **80 –120 mg/l**

3. What is hyperglycemia?

Ans:- **If the blood sugar level in the body is more than the normal it is hyperglycemia.**

4. What is hypoglycemia?

Ans:- **If the blood sugar level in the body is lower than the normal it is hypoglycemia.**

5. What is Glycogenesis?

Ans:- **Glycogenesis is the conversion of glucose into glycogen.**

(Contd…..)

ಶಿವ ದೇಗುಲ ಕೆಡವಿ ಮಸೀದಿ ನಿರ್ಮಿಸಿದ ಆರೋಪ

ಉತ್ತರ ಪ್ರದೇಶದ ಶಾಹಿ ಜಾಮಾ ಮಸೀದಿಯ ಬಳಿಕ ಬದಾಂಯೂ ಜಿಲ್ಲೆಯ ಮಸೀದಿಯೊಂದು ಈಗ ಕಾನೂನು ಹೋರಾಟಕ್ಕೆ ಸಿಲುಕಿದೆ

ಮತ್ತೊಂದು ಮಸೀದಿ ವಿರುದ್ಧ ಅರ್ಜಿ

ಲಖನೌ: ಸಂಭಲ್ ಜಿಲ್ಲೆಯ ಚಂದೌಸಿಯಲ್ಲಿನ ಶಾಹಿ ಜಾಮಾ ಮಸೀದಿಯ ಬಳಿಕ ಉತ್ತರ ಪ್ರದೇಶದ ಬದಾಂಯೂ ಜಿಲ್ಲೆಯ ಮಸೀದಿಯೊಂದು ಈಗ ಕಾನೂನು ಹೋರಾಟಕ್ಕೆ ಸಿಲುಕಿದೆ.

ಮುಸ್ಲಿಂ ದೊರೆಗಳು ಶಿವ ದೇವಾಲಯವನ್ನು ಕೆಡವಿ ಮಸೀದಿ ನಿರ್ಮಿಸಿದ್ದಾರೆ ಎಂದು ಪ್ರತಿಪಾದಿಸಿ, ಅದರ ಮಾಲೀಕತ್ವವನ್ನು ಕೋರಿ ಹಿಂದೂ ಮಹಾಸಭಾ ಸಂಘಟನೆಯು ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ. ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಅಮಿತ್ ಕುಮಾರ್ ಅವರು ಮಂಗಳವಾರ ಅರ್ಜಿಯ ವಿಚಾರಣೆ ನಡೆಸಿದರು.

ಜಾಮಾ ಮಸೀದಿ ಇಂತೆಜಾಮಿಯಾ ಸಮಿತಿಯ ವಕೀಲ ಅನ್ವರ್ ಆಲಂ ಅವರು ಮಸೀದಿಯ ಪರವಾಗಿ ವಾದ ಮಂಡಿಸಿ, ಶಿವ ದೇವಾಲಯವನ್ನು ಕೆಡವಿ ಮಸೀದಿ ನಿರ್ಮಿಸಲಾಗಿದೆ ಎಂಬ ಪ್ರತಿಪಾದನೆಯನ್ನು ಅಲ್ಲಗಳೆದರು. ನ್ಯಾಯಾಲಯವು ಈ ಪ್ರಕರಣದ ಮುಂದಿನ ವಿಚಾರಣೆಯನ್ನು ಡಿಸೆಂಬರ್ 10ಕ್ಕೆ ನಿಗದಿಪಡಿಸಿತು.



ಅರ್ಜಿಯ ವಿಚಾರಣೆ ಹಿನ್ನೆಲೆಯಲ್ಲಿ ಬದಾಂಯೂ ಜಿಲ್ಲಾ ಸೆಷನ್ಸ್ ನ್ಯಾಯಾಲಯಕ್ಕೆ ಭದ್ರತೆ ಒದಗಿಸಲಾಯಿತು –ಪಿಟಿಐ ಚಿತ್ರ

ನೀಲಕಂಠ ದೇವಾಲಯವನ್ನು ಕೆಡವಿ ಜಾಮಾ ಮಸೀದಿ ನಿರ್ಮಿಸಲಾಗಿದೆ ಎಂದು ಹಿಂದೂ ಮಹಾಸಭಾದ ಮುಖಂಡ ಮುಕೇಶ್ ಪಟೇಲ್ ಎರಡು ವರ್ಷಗಳ ಹಿಂದೆ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ರಾಜ್ಯ ಸರ್ಕಾರದ ಪರ ವಕೀಲರು ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ತಮ್ಮ ವಾದ ಮಂಡಿಸಿದ್ದಾರೆ.

'ಮಸೀದಿ ಇರುವ ಸ್ಥಳದಲ್ಲಿ ನೀಲಕಂಠ ದೇವಾಲಯವಿತ್ತು ಎಂಬುದನ್ನು ಸಾಬೀತುಪಡಿಸಲು ಸಾಕಷ್ಟು ಪುರಾವೆಗಳಿವೆ. ವಿಗ್ರಹಗಳು ಮತ್ತು ಪ್ರಾಚೀನ ಕಾಲದ ಕಂಬಗಳು ಅಲ್ಲಿವೆ. ಮುಸ್ಲಿಂ ದೊರೆಗಳು ದೇವಾಲಯ ಕೆಡವಿ, ಶಿವಲಿಂಗವನ್ನು ಹೊರಗೆ ಎಸೆದಿದ್ದಾರೆ. ಶಿವಲಿಂಗವನ್ನು ಕಂಡ ವ್ಯಕ್ತಿಯೊಬ್ಬರು ಅದನ್ನು ಸಮೀಪದ ದೇವಸ್ಥಾನದಲ್ಲಿ ಇರಿಸಿದ್ದಾರೆ' ಎಂದು ಪಟೇಲ್ ಅವರು ಅರ್ಜಿಯಲ್ಲಿ ಹೇಳಿದ್ದಾರೆ. ದೆಹಲಿ ಸುಲ್ತಾನನಾಗಿದ್ದ ಕುತುಬುದ್ದೀನ್ ಐಬಕ್‌ನ ಕಾಲದಲ್ಲಿ ಮಸೀದಿಯನ್ನು ಕೆಡವಲಾಗಿದೆ ಎಂದಿದ್ದಾರೆ.

ಮಸೀದಿ ಪರ ವಕೀಲರು ಇದನ್ನು ಅಲ್ಲಗಳೆದಿದ್ದು, '850 ವರ್ಷಗಳಷ್ಟು ಹಳೆಯದಾದ ಮಸೀದಿ ಇದಾಗಿದ್ದು, ಅದಕ್ಕೂ ಮೊದಲು ಅಲ್ಲಿ ಯಾವುದೇ ದೇವಾಲಯ ಇರಲಿಲ್ಲ. ಗುಲಾಂ ರಾಜವಂಶದ ಸುಲ್ತಾನ್ ಶಂಸುದ್ದೀನ್ ಅಲ್ತಮಶ್ 1223ರಲ್ಲಿ ಮಸೀದಿ ನಿರ್ಮಿಸಿದ್ದಾನೆ' ಎಂದು ಹೇಳಿದ್ದಾರೆ.

ಉಭಯ ಸದನಗಳಲ್ಲಿ ನಡೆದ ಕಲಾಪ ● ಸಂಸತ್ ಆವರಣದಲ್ಲಿ 'ಇಂಡಿಯಾ' ಮೈತ್ರಿಕೂಟದ ಪ್ರತಿಭಟನೆ

ಸಂಸತ್ ಕಲಾಪ: ಪಟ್ಟು ಸಡಿಲಿಸಿದ ವಿಪಕ್ಷ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಉದ್ಯಮಿ ಗೌತಮ್ ಅದಾನಿ ಲಂಚ ಹಗರಣ, ಮಣಿಪುರ ಗಲಭೆ ಮತ್ತು ಸಂಭಲ್ ಹಿಂಸಾಚಾರದ ಬಗ್ಗೆ ಚರ್ಚೆಗೆ ವಿಪಕ್ಷಗಳು ಪಟ್ಟು ಹಿಡಿದ ಕಾರಣ ಗದ್ದಲಕ್ಕೆ ಕಾರಣವಾಗಿದ್ದ ಸಂಸತ್ತು, ಐದು ದಿನಗಳ ಬಳಿಕ ಮಂಗಳವಾರ ಸುಗಮ ಕಲಾಪಕ್ಕೆ ಸಾಕ್ಷಿಯಾಯಿತು.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ವಿವಿಧ ವಿಷಯಗಳನ್ನು ತಕ್ಷಣದಲ್ಲೇ ಚರ್ಚೆಗೆ ಕೈಗೆತ್ತಿಕೊಳ್ಳಬೇಕು ಎಂದು ಒತ್ತಾಯಿಸಿ 'ಇಂಡಿಯಾ' ಮೈತ್ರಿಕೂಟದ ಸಂಸದರು ನೋಟಿಸ್ ನೀಡಿದರಾದರೂ, ಬಿಗಿ ಪಟ್ಟು ಹಿಡಿದು ಕಲಾಪಕ್ಕೆ ಅಡ್ಡಿಪಡಿಸಲಿಲ್ಲ.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸಂವಿಧಾನದ ಕುರಿತು ಎರಡು ದಿನಗಳ ಚರ್ಚೆ ನಡೆಸಬೇಕು ಎಂಬ ವಿಪಕ್ಷಗಳ ಬೇಡಿಕೆಗೆ ಸರ್ಕಾರ ಸೋಮವಾರ ಸಮ್ಮತಿ ಸೂಚಿಸಿತ್ತು. ಇದರಿಂದ ಮಂಗಳವಾರದಿಂದ ಕಲಾಪ ಸುಗಮವಾಗಿ ನಡೆಯುವ ನಿರೀಕ್ಷೆ ಮೂಡಿತ್ತು.

ಬೆಳಿಗ್ಗೆ ಕಲಾಪ ಆರಂಭಕ್ಕೂ ಮುನ್ನ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಮತ್ತು ಮೈತ್ರಿಕೂಟದ ಇತರ ಪಕ್ಷಗಳ ಸದಸ್ಯರು ಅದಾನಿ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ ಭವನದ 'ಮಕರ ದ್ವಾರ'ದ ಬಳಿ ಪ್ರತಿಭಟನೆ ನಡೆಸಿದರು. 'ಮೋದಿ– ಅದಾನಿ ಏಕ್ ಹೈ' ಎಂದು ಬರೆದಿದ್ದ ಬ್ಯಾನರ್ ಹಿಡಿದಿದ್ದ ಸಂಸದರು, ಅದಾನಿ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಘೋಷಣೆಗಳನ್ನು ಕೂಗಿದರು.

'ಅದಾನಿ ವಿರುದ್ಧದ ಗಂಭೀರ ಆರೋಪಗಳ ಕುರಿತಂತೆ ಪ್ರಶ್ನೆಗಳನ್ನು ಎದುರಿಸಲು ಮೋದಿ ಸರ್ಕಾರ ಸಿದ್ಧವಿಲ್ಲ. ಏಕೆಂದರೆ ಹಗರಣದಲ್ಲಿ ಅವರೂ ಭಾಗಿಯಾಗಿದ್ದಾರೆ. ಸಂಸತ್ತು, ಅವರನ್ನು ಹೊಣೆಗಾರರನ್ನಾಗಿ ಮಾಡಬೇಕಾದ ವೇದಿಕೆಯಾಗಿದೆ' ಎಂದು ಕಾಂಗ್ರೆಸ್ ಸಂಸದ ಕೆ.ಸಿ. ವೇಣುಗೋಪಾಲ್ ಹೇಳಿದರು. ಸಂಸತ್ ಕಲಾಪದ ಆರಂಭದಲ್ಲಿ ವಿರೋಧ ಪಕ್ಷಗಳ ಸದಸ್ಯರು ಸಂಭಲ್ ಹಿಂಸಾಚಾರ ಸೇರಿದಂತೆ ವಿವಿಧ ವಿಷಯಗಳ ಕುರಿತ ಚರ್ಚೆಗೆ ಒತ್ತಾಯಿಸಿದರೂ, ಅದರಿಂದ ಕಲಾಪಕ್ಕೆ ಅಡ್ಡಿ ಉಂಟಾಗಲಿಲ್ಲ. ಲೋಕಸಭೆ ಮತ್ತು ರಾಜ್ಯಸಭೆಯು ದಿನದ ಕಲಾಪದ ಮೊದಲ ಗಂಟೆಯಲ್ಲೇ ಎರಡು ಸಲ ವಿಪಕ್ಷ ಸದಸ್ಯರ ಸಭಾತ್ಯಾಗಕ್ಕೆ ಸಾಕ್ಷಿಯಾದವು.

ಲೋಕಸಭೆಯಲ್ಲಿ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರು ಸಂಭಲ್ ವಿಷಯ ಪ್ರಸ್ತಾಪಿಸಿದರು. ಆದರೆ ಸ್ಪೀಕರ್ ಓಂ ಬಿರ್ಲಾ, 'ಇಂತಹ ವಿಷಯಗಳನ್ನು ಸಂಸದರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಹುದು' ಎಂದರು. ಇದರಿಂದ ತೃಪ್ತರಾಗದ ಕೆಲವು ಸಂಸದರು ಸ್ಪೀಕರ್ ಪೀಠದ ಮುಂಭಾಗಕ್ಕೆ ಧಾವಿಸಿದರು. ಆ ಬಳಿಕ ಕಲಾಪ ಬಹಿಷ್ಕರಿಸಿ ಹೊರನಡೆದರು. ರಾಹುಲ್ ಗಾಂಧಿ ಒಳಗೊಂಡಂತೆ ವಿರೋಧ ಪಕ್ಷಗಳ ಇತರ ಸಂಸದರೂ ಹೊರನಡೆದರು.

ಪ್ರಶ್ನೋತ್ತರ ವೇಳೆ ಆರಂಭವಾಗುತ್ತಿದ್ದಂತೆಯೇ, ಪ್ರತಿಭಟನೆನಿರತ ಸಂಸದರು ಸದನದೊಳಗೆ ಬಂದರು. ಆದರೆ, ಪಿಎಂ–ಕಿಸಾನ್ ಯೋಜನೆಗೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕುರಿತು ನೀಡಿದ ಉತ್ತರದಿಂದ ಅತೃಪ್ತರಾಗಿ ಮತ್ತೊಮ್ಮೆ ಹೊರನಡೆದರು.



ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ವಿಪಕ್ಷಗಳ ಸಂಸದರು ಸಂಸತ್ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ರಾಜ್ಯಸಭೆಯಲ್ಲೂ ಕಲಾಪ ಬಹಿಷ್ಕಾರ

ವಿರೋಧ ಪಕ್ಷಗಳ ಸದಸ್ಯರು ರಾಜ್ಯಸಭೆಯಲ್ಲೂ ಎರಡು ಸಲ ಕಲಾಪ ಬಹಿಷ್ಕರಿಸಿದರು. ಸಂಭಲ್ ವಿಷಯ ಪ್ರಸ್ತಾಪಿಸಿದ ಎಸ್‌ಪಿ ಸಂಸದ ರಾಮಗೋಪಾಲ್ ಯಾದವ್ ಅವರು ಸದನದಿಂದ ಹೊರನಡೆದರು. ಟಿಎಂಸಿ ಸದಸ್ಯರೂ ಅವರಿಗೆ ಸಾಥ್ ನೀಡಿದರು. ಪಶ್ಚಿಮ ಬಂಗಾಳದಲ್ಲಿ ರೋಹಿಂಗ್ಯಾ ಸಮುದಾಯದವರ ಉಪಸ್ಥಿತಿಯ ಬಗ್ಗೆ ಬಿಜೆಪಿ ಸಂಸದರು ನೀಡಿದ್ದ ಹೇಳಿಕೆಯನ್ನು ವಿರೋಧಿಸಿ ಟಿಎಂಸಿ ಸದಸ್ಯರು ಪ್ರತ್ಯೇಕವಾಗಿ ಸಭಾತ್ಯಾಗ ಮಾಡಿದರು.

ಪೂರ್ವಯೋಜಿತ: ಅಖಿಲೇಶ್

ಉತ್ತರ ಪ್ರದೇಶದ ಸಂಭಲ್‌ನಲ್ಲಿ ನಡೆದ ಹಿಂಸಾಚಾರ 'ಪೂರ್ವಯೋಜಿತ ಕೃತ್ಯ' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ.

ಲೋಕಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ಚಂದೌಸಿಯಲ್ಲಿನ ಶಾಹಿ ಜಾಮಾ ಮಸೀದಿಯಲ್ಲಿ ಸಮೀಕ್ಷೆ ನಡೆಸಲು ನ್ಯಾಯಾಲಯ ಆದೇಶಿಸಿರುವುದು ನಮ್ಮಲ್ಲಿನ 'ಗಂಗಾ– ಜಮುನಾ' ಭ್ರಾತೃತ್ವಕ್ಕೆ ಧಕ್ಕೆ ಉಂಟುಮಾಡಬಹುದು ಎಂದಿದ್ದಾರೆ.

'ಅಲ್ಲಿ ನಡೆದ ಘಟನೆ ಪೂರ್ವಯೋಜಿತ ಕೃತ್ಯ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ದೀರ್ಘ ಕಾಲದಿಂದ ಭ್ರಾತೃತ್ವಕ್ಕೆ ಹೆಸರು ಪಡೆದಿರುವ ಸ್ಥಳದಲ್ಲಿ ಕೋಮು ಸೌಹಾರ್ದವನ್ನು ಕದಡುವ ಉದ್ದೇಶದಿಂದ ಈ ಪಿತೂರಿ ಮಾಡಿವೆ' ಎಂದು ದೂರಿದ್ದಾರೆ.

ಸಂಭಲ್‌ಗೆ ಇಂದು ರಾಹುಲ್ ಭೇಟಿ

ಲಖನೌ (ಪಿಟಿಐ): ರಾಹುಲ್ ಗಾಂಧಿ ಮತ್ತು ಪಕ್ಷದ ಐವರು ಸಂಸದರು ಬುಧವಾರ ಸಂಭಲ್‌ಗೆ ಭೇಟಿ ನೀಡಲಿದ್ದಾರೆ ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರಾಯ್ ತಿಳಿಸಿದರು.

ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ಅವರೂ ನಿಯೋಗದೊಂದಿಗೆ ಸಂಭಲ್‌ಗೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಅವರು ಹೇಳಿದರು.

ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಉತ್ತರ ಪ್ರದೇಶ ಉಸ್ತುವಾರಿ ಅವಿನಾಶ್ ಪಾಂಡೆ ಅವರೂ ನಿಯೋಗದ ಜತೆಗೂಡಲಿದ್ದಾರೆ ಎಂದರು.

ಕೋರ್ಟ್ ಆದೇಶದ ಅನುಸಾರ ಶಾಹಿ ಜಾಮಾ ಮಸೀದಿಯಲ್ಲಿ ಸಮೀಕ್ಷೆ ನಡೆಯಬೇಕಿದ್ದ ಸಂದರ್ಭದಲ್ಲಿ ನವೆಂಬರ್ 24ರಂದು ಅಲ್ಲಿ ಹಿಂಸಾಚಾರ ನಡೆದಿತ್ತು.

ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ವಿಚಾರವಾಗಿ ಕೋರ್ಟ್ ಸೂಚನೆ

ಆಂತರಿಕ ದೂರು ಸಮಿತಿ ರಚಿಸಿ

ನವದೆಹಲಿ (ಪಿಟಿಐ): 'ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ಪರಿಹಾರ) ಕಾಯ್ದೆ– 2013' ಅನ್ನು ದೇಶದಾದ್ಯಂತ ಸಮರ್ಪಕವಾಗಿ ಅನುಷ್ಠಾನಕ್ಕೆ ಬರಬೇಕು ಎಂಬ ಉದ್ದೇಶದಿಂದ ಸುಪ್ರೀಂ ಕೋರ್ಟ್, ಎಲ್ಲ ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿ ರಚಿಸುವಂತೆ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ.

ಈ ಸಂಬಂಧ ಮಂಗಳವಾರ ಕೆಲವು ನಿರ್ದೇಶನಗಳನ್ನು ನೀಡಿರುವ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇದ್ದ ವಿಭಾಗೀಯ ಪೀಠವು, ಕಾಯ್ದೆಯನ್ನು ದೇಶದ ಎಲ್ಲೆಡೆ ಏಕರೂಪದಲ್ಲಿ ಅನುಷ್ಠಾನಕ್ಕೆ ತರಬೇಕು ಎಂದು ಹೇಳಿದೆ.



ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶದ ಸರ್ಕಾರಗಳು ಪ್ರತಿ ಜಿಲ್ಲೆಗೆ ಒಬ್ಬ ಅಧಿಕಾರಿಯನ್ನು ಡಿಸೆಂಬರ್ 31ಕ್ಕೆ ಮೊದಲು ನೇಮಕ ಮಾಡಬೇಕು. ಆ ಅಧಿಕಾರಿಯು ಸ್ಥಳೀಯ ದೂರು ಸಮಿತಿಯನ್ನು ಜನವರಿ 31ಕ್ಕೆ ಮೊದಲು ರಚಿಸಬೇಕು, ತಾಲ್ಲೂಕು ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದು ಕೋರ್ಟ್ ಸೂಚನೆ ನೀಡಿದೆ.

ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಯನ್ನು ರಚಿಸಲಾಗಿದೆಯೇ ಎಂಬ ಬಗ್ಗೆ ಜಿಲ್ಲಾಧಿಕಾರಿಗಳು/ಜಿಲ್ಲಾ ಮ್ಯಾಜಿಸ್ಟ್ರೇಟರು ಸಮೀಕ್ಷೆ ನಡೆಸಬೇಕು, ವರದಿಯನ್ನು ಸಲ್ಲಿಸಬೇಕು ಎಂದು ಕೋರ್ಟ್ ನಿರ್ದೇಶಿಸಿದೆ.

ತನ್ನ ಸೂಚನೆಗಳ ಪಾಲನೆಗೆ ಸುಪ್ರೀಂ ಕೋರ್ಟ್ ಮಾರ್ಚ್ 31ರವರೆಗೆ ಸಮಯಾವಕಾಶ ನೀಡಿದೆ, ಸೂಚನೆಗಳನ್ನು ಅನುಷ್ಠಾನಕ್ಕೆ ತರುವ ಕಾರ್ಯದ ಮೇಲೆ ಸರ್ಕಾರದ ಮುಖ್ಯ ಕಾರ್ಯದರ್ಶಿ ನಿಗಾ ಇರಿಸಬೇಕು ಎಂದು ಹೇಳಿದೆ.

ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಆರೋಪಗಳನ್ನು ತನಿಖೆ ಮಾಡಲು ಸಮಿತಿಗಳನ್ನು ಎಲ್ಲ ಸಚಿವಾಲಯ ಹಾಗೂ ಇಲಾಖೆಗಳಲ್ಲಿ ರಚಿಸಲಾಗಿದೆಯೇ ಎಂಬುದನ್ನು ಕಾಲಮಿತಿಯಲ್ಲಿ ಪರಿಶೀಲಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ 2023ರ ಮೇ ತಿಂಗಳಲ್ಲಿ ಕೋರ್ಟ್ ಸೂಚಿಸಿತ್ತು. ಇದರ ಅನುಷ್ಠಾನಕ್ಕೆ ಸಂಬಂಧಿಸಿದ ಒಂದು ಅರ್ಜಿಯ ವಿಚಾರಣೆ ನಡೆಸಿದ ಪೀಠವು ಈ ಸೂಚನೆಗಳನ್ನು ನೀಡಿದೆ.

2013ರ ಕಾಯ್ದೆಯ ಅನುಷ್ಠಾನದ ವಿಚಾರದಲ್ಲಿ ದೀರ್ಘ ಅವಧಿಯಿಂದ ಗಂಭೀರ ಲೋಪಗಳು ಉಳಿದಿರುವುದು ಆತಂಕ ಉಂಟುಮಾಡುವ ವಿಚಾರ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕೇಂದ್ರಕ್ಕೆ ₹50 ಸಾವಿರ ದಂಡ

ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನಾ ನಿಗ್ರಹ ಗಸ್ತು ಸಂದರ್ಭದಲ್ಲಿ ಮೃತಪಟ್ಟ ಯೋಧರೊಬ್ಬರ ಪತ್ನಿಗೆ ಪಿಂಚಣಿ (ಎಲ್‌ಎಫ್‌ಪಿ) ನೀಡುವಂತೆ ಸಶಸ್ತ್ರ ಪಡೆಗಳ ನ್ಯಾಯಮಂಡಳಿ ನೀಡಿದ್ದ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ₹50 ಸಾವಿರ ದಂಡ ವಿಧಿಸಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು, ವಿಧವೆಯನ್ನು ನ್ಯಾಯಾಲಯಕ್ಕೆ ಎಳೆದು ತರಬಾರದಿತ್ತು ಎಂದು ಹೇಳಿದೆ.

'ನಿರ್ಧಾರ ಕೈಗೊಳ್ಳುವ ಅಧಿಕಾರಿಗಳು ಕರ್ತವ್ಯದ ವೇಳೆ ಮೃತಪಟ್ಟ ಯೋಧನ ಪತ್ನಿಯ ವಿಚಾರದಲ್ಲಿ ಸಹಾನುಭೂತಿ ಹೊಂದಿರಬೇಕಿತ್ತು. ಹೀಗಾಗಿ ನಾವು ₹50 ಸಾವಿರ ದಂಡ ವಿಧಿಸುತ್ತಿದ್ದೇವೆ. ಈ ಮೊತ್ತವನ್ನು ಯೋಧನ ಪತ್ನಿಗೆ ನೀಡಬೇಕು' ಎಂದು ಪೀಠವು ಹೇಳಿದೆ. ಮೊತ್ತವನ್ನು ಇನ್ನು ಎರಡು ತಿಂಗಳಲ್ಲಿ ಪಾವತಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸೂಚಿಸಲಾಗಿದೆ.

ಯೋಧ ನಾಯ್ಕ್ ಇಂದರ್‌ಜೀತ್ ಸಿಂಗ್ ಅವರು 2013ರ ಜನವರಿಯಲ್ಲಿ ಗಸ್ತು ನಡೆಸುತ್ತಿದ್ದಾಗ ತೀರಾ ವಿಷಮ ಹವಾಮಾನ ಪರಿಸ್ಥಿತಿಯಲ್ಲಿ ಹೃದಯ ಸ್ತಂಭನದಿಂದಾಗಿ ಮೃತಪಟ್ಟಿದ್ದರು.

'ಗಡಿ: 3 ತತ್ವಗಳಡಿಯೇ ಮಾತುಕತೆ'

ಚೀನಾ ಜೊತೆ ಸಂಬಂಧ: ಲೋಕಸಭೆಯಲ್ಲಿ ಸಚಿವ ಎಸ್. ಜೈಶಂಕರ್ ಹೇಳಿಕೆ

ನವದೆಹಲಿ(ಪಿಟಿಐ): ಚೀನಾಗೆ ಹೊಂದಿಕೊಂಡಿರುವ ಗಡಿ ವಿಚಾರವಾಗಿ ಭಾರತದ ನಿಲುವು ದೃಢವಾಗಿದೆ. ಉಭಯ ದೇಶಗಳ ನಡುವಿನ ಮಾತುಕತೆ ಮೂರು ಪ್ರಮುಖ ತತ್ವಗಳಡಿಯೇ ನಡೆಯಬೇಕು ಎಂಬುದು ಭಾರತದ ಸ್ಪಷ್ಟ ನಿಲುವಾಗಿದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಮಂಗಳವಾರ ಹೇಳಿದ್ದಾರೆ.

ಲೋಕಸಭೆಯಲ್ಲಿ ಈ ಕುರಿತ ಚರ್ಚೆ ವೇಳೆ, ಅವರು ಈ ಹೇಳಿಕೆ ನೀಡಿದ್ದಾರೆ.

'ವಾಸ್ತವ ನಿಯಂತ್ರಣ ರೇಖೆಯನ್ನು(ಎಲ್‌ಎಸಿ) ಎರಡೂ ದೇಶಗಳು ಗೌರವಿಸಬೇಕು ಹಾಗೂ ಅದರ ಮೇಲೆ ನಿಗಾ ಇಡಬೇಕು ಎಂಬುದು ಮೊದಲ ತತ್ವ. ಗಡಿಯಲ್ಲಿನ ಯಥಾಸ್ಥಿತಿಯನ್ನು ಬದಲಿಸಲು ಚೀನಾ ಅಥವಾ ಭಾರತವಾಗಲಿ ಏಕಪಕ್ಷೀಯವಾಗಿ ಯತ್ನಿಸಬಾರದು ಎಂಬುದು ಎರಡನೇ ತತ್ವ ಹಾಗೂ ಉಭಯ ದೇಶಗಳು ಈ ಹಿಂದೆ ಆಗಿರುವ ಒಪ್ಪಂದಗಳನ್ನು ಪಾಲನೆ ಮಾಡಬೇಕು ಎಂಬುದು ಮೂರನೇ ತತ್ವವಾಗಿದೆ' ಎಂದು ಜೈಶಂಕರ್ ಸದನಕ್ಕೆ ತಿಳಿಸಿದ್ದಾರೆ.

'ಗಡಿ ವಿಚಾರದಲ್ಲಿ ಬಾಕಿ ಇರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಚೀನಾ ಜೊತೆ ಮಾತುಕತೆ ನಡೆಸಲು ಭಾರತ ಬದ್ಧವಾಗಿದೆ. ಚೀನಾ ಜೊತೆಗಿನ ಸಂಬಂಧವು ಆ ದೇಶ ಎಷ್ಟರ ಮಟ್ಟಿಗೆ ಎಲ್‌ಎಸಿ ಪಾವಿತ್ರ್ಯ ಗೌರವಿಸುತ್ತದೆ ಎಂಬುದನ್ನು ಅವಲಂಬಿಸಿದೆ' ಎಂದು ಜೈಶಂಕರ್ ಹೇಳಿದ್ದಾರೆ.

'ಪೂರ್ವ ಲಡಾಖ್ ಗಡಿಯಲ್ಲಿನ ಡೆಪ್ಸಾಂಗ್ ಮತ್ತು ಡೆಮ್‌ಚೊಕ್‌ಗಳಿಂದ ಉಭಯ ದೇಶಗಳು ಸೈನಿಕರನ್ನು ವಾಪಸು ಕರೆಸಿಕೊಳ್ಳುವ ಪ್ರಕ್ರಿಯೆ ಹಂತಹಂತವಾಗಿ ನಡೆದಿದ್ದರೂ, ಪೂರ್ಣ ಪ್ರಮಾಣದಲ್ಲಿ ಮುಗಿದಿದೆ. ಈಗ, ಕಾರ್ಯಸೂಚಿಯ ಭಾಗವಾಗಿರುವ ಉಳಿದ ವಿಚಾರಗಳ ಕುರಿತು ಮಾತುಕತೆ ಆರಂಭವನ್ನು ಭಾರತ ಎದುರು ನೋಡುತ್ತಿದೆ' ಎಂದು ಹೇಳಿದ್ದಾರೆ.

ಡೆಪ್ಸಾಂಗ್ ಮತ್ತು ಡೆಮ್‌ಚೊಕ್‌ನಲ್ಲಿ ಯೋಧರನ್ನು ಹಿಂದಕ್ಕೆ ಕರೆಯಿಸಿಕೊಳ್ಳುವ ವಿಚಾರದಲ್ಲಿ ಚೀನಾದೊಂದಿಗೆ ಅಕ್ಟೋಬರ್ 21ರಂದು ಮಾಡಿಕೊಂಡಿರುವ ಒಪ್ಪಂದ ಬಗ್ಗೆಯೂ ಜೈಶಂಕರ್ ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

ಜೈಶಂಕರ್ ಹೇಳಿದ್ದು...



- ಎಲ್‌ಎಸಿ ಉದ್ದಕ್ಕೂ ಸಂಘರ್ಷವನ್ನು ಕಡಿಮೆ ಮಾಡುವುದು ನಮ್ಮ ಮುಂದಿನ ಆದ್ಯತೆ. ಇದು ಗಡಿಯಲ್ಲಿ ಸೇನೆಯ ಹೆಚ್ಚುವರಿ ತುಕಡಿಗಳನ್ನು ನಿಯೋಜನೆಗೆ ಕಡಿವಾಣ ಹಾಕಲಿದೆ
- ಗಡಿ ವಿಚಾರವಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಉದ್ಭವಿಸಿದ್ದ ಉದ್ವಿಗ್ನತೆಯಿಂದ ಎರಡೂ ದೇಶಗಳು ಪಾಠ ಕಲಿತಿವೆ. ಇದು ಗಡಿ ನಿರ್ವಹಣೆಯಲ್ಲಿ ಮತ್ತಷ್ಟು ಎಚ್ಚರಿಕೆ ಅಗತ್ಯ ಎಂಬುದನ್ನು ಸಾರಿವೆ
- ಚೀನಾದೊಂದಿಗೆ ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಭಾರತ ಒತ್ತು ನೀಡುತ್ತದೆ. ಗಡಿಯಲ್ಲಿ ಶಾಂತಿ ಮತ್ತು ಸೌಹಾರ್ದ ನೆಲಸುವುದು ಈ ಉದ್ದೇಶ ಈಡೇರಿಕೆಗೆ ಪೂರಕವಾಗಲಿದೆ
- ದೇಶದ ಸುರಕ್ಷತೆ ಹಾಗೂ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಚೀನಾದೊಂದಿಗೆ ಭಾರತ ಮಾತುಕತೆ ನಡೆಸುವುದಕ್ಕೆ ಗಡಿಯಿಂದ ಸೇನೆ ಹಿಂದಕ್ಕೆ ಕರೆಸಿಕೊಂಡಿರುವ ನಡೆ ನೆರವಾಗಲಿದೆ
- ಸಿಬ್ಬಂದಿ ಹಾಗೂ ಶಸ್ತ್ರಾಸ್ತ್ರಗಳ ಸಾಗಣೆ ವಿಷಯದಲ್ಲಿ ಸಾಕಷ್ಟು ಸವಾಲುಗಳು ಎದುರಾಗಿದ್ದವು, ಕೋವಿಡ್–19 ಪಿಡುಗು ಕೂಡ ಇತ್ತು. ಈ ಎಲ್ಲ ಸವಾಲುಗಳನ್ನು ಮೆಟ್ಟಿನಿಂತು ಗಡಿ ರಕ್ಷಣೆ ಮಾಡಿದ ನಮ್ಮ ಸಶಸ್ತ್ರ ಪಡೆಗಳಿಗೆ ಶ್ರೇಯ ಸಲ್ಲಬೇಕು

ಉನ್ನಾವ್: ಸಂತ್ರಸ್ತೆಯ ತಂದೆ ಪೊಲೀಸ್ ವಶದಲ್ಲಿದ್ದಾಗ ಮೃತಪಟ್ಟ ಪ್ರಕರಣ

ಸಿಂಗ್ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸಲು ಸೂಚನೆ

ನವದೆಹಲಿ (ಪಿಟಿಐ): ಉನ್ನಾವ್ ಅತ್ಯಾಚಾರ ಪ್ರಕರಣದ ಸಂತ್ರಸ್ತೆಯ ತಂದೆ ಪೊಲೀಸ್ ವಶದಲ್ಲಿ ಇದ್ದಾಗ ಮೃತಪಟ್ಟ ಪ್ರಕರಣದಲ್ಲಿ ತನಗೆ ವಿಧಿಸಿರುವ 10 ವರ್ಷಗಳ ಜೈಲು ಶಿಕ್ಷೆಯನ್ನು ವೈದ್ಯಕೀಯ ನೆಲೆಯಲ್ಲಿ ಅಮಾನತಿನಲ್ಲಿ ಇರಿಸಬೇಕು ಎಂದು ಬಿಜೆಪಿಯ ಉಚ್ಚಾಟಿತ ಮುಖಂಡ ಕುಲದೀಪ್ ಸಿಂಗ್ ಸೆಂಗರ್ ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸಿಬಿಐ ಅಧಿಕಾರಿಗಳಿಗೆ ದೆಹಲಿ ಹೈಕೋರ್ಟ್ ಮಂಗಳವಾರ ಸೂಚಿಸಿದೆ.

ಸಿಂಗ್ ಆರೋಗ್ಯ ಸ್ಥಿತಿ ಕುರಿತು ವರದಿ ಸಲ್ಲಿಸುವಂತೆ ಜೈಲು ಅಧಿಕಾರಿಗಳಿಗೆ ಸೂಚನೆ ನೀಡಿರುವ ನ್ಯಾಯಮೂರ್ತಿ ಮನೋಜ್ ಕುಮಾರ್ ಒಹರಿ ಅವರು ವಿಚಾರಣೆಯನ್ನು ಜನವರಿ 13ಕ್ಕೆ ಮುಂದೂಡಿದ್ದಾರೆ.



ತನ್ನನ್ನು ದೋಷಿ ಎಂದು ಘೋಷಿಸಿರುವುದನ್ನು ಪ್ರಶ್ನಿಸಿ ಸಿಂಗ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ಬಾಕಿ ಇರುವಾಗ, ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಲು ಹೈಕೋರ್ಟ್ ಈ ವರ್ಷದ ಜೂನ್‌ನಲ್ಲಿ ನಿರಾಕರಿಸಿದೆ ಎಂದು ಸಿಬಿಐ ಪರ ವಕೀಲರು ಪೀಠಕ್ಕೆ ವಿವರ ನೀಡಿದರು.

ಆರೋಗ್ಯ ಹದಗೆಡುತ್ತಿರುವ ಕಾರಣಕ್ಕೆ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸುವಂತೆ ಕೋರಲಾಗುತ್ತಿದೆ ಎಂದು ಸಿಂಗ್ ಪರ ವಕೀಲರು ಹೇಳಿದರು. ಮೃತ ವ್ಯಕ್ತಿಯ ಪುತ್ರಿಯ ಮೇಲೆ ಅತ್ಯಾಚಾರ ಎಸಗಿದ್ದಕ್ಕಾಗಿ ಸಿಂಗ್‌ಗೆ ಈಗಾಗಲೇ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

ಉನ್ನಾವ್ ಅತ್ಯಾಚಾರ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯ ನೀಡಿದ ಆದೇಶ ಪ್ರಶ್ನಿಸಿ ಸಿಂಗ್ ಸಲ್ಲಿಸಿರುವ ಅರ್ಜಿಯು ಹೈಕೋರ್ಟ್‌ನಲ್ಲಿ ಬಾಕಿ ಇದೆ.

ದೇಗುಲ ನಿರ್ವಹಣೆಗೆ ನ್ಯಾಯಮೂರ್ತಿ ಆಡಳಿತಾಧಿಕಾರಿ

ನವದೆಹಲಿ (ಪಿಟಿಐ): ಕೇರಳದ ಓಚ್ಚಿರ ಪರಬ್ರಹ್ಮ ದೇವಸ್ಥಾನ ಮತ್ತು ಅದಕ್ಕೆ ಸಂಬಂಧಿಸಿದ ಸಂಸ್ಥೆಗಳ ನಿರ್ವಹಣೆಗೆ ಚುನಾವಣೆಯನ್ನು ಮುಕ್ತ ಹಾಗೂ ನ್ಯಾಯಸಮ್ಮತ ರೀತಿಯಲ್ಲಿ ನಡೆಸಲು ಕೇರಳ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ. ರಾಮಕೃಷ್ಣನ್ ಅವರನ್ನು ಸುಪ್ರೀಂ ಕೋರ್ಟ್ ಮಂಗಳವಾರ ನೇಮಕ ಮಾಡಿದೆ.

ಈ ದೇವಸ್ಥಾನವು ವಿಶಿಷ್ಟವಾಗಿದ್ದು, 21.25 ಎಕರೆ ಪ್ರದೇಶದಲ್ಲಿ ಇದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ, ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಆರ್. ಮಹಾದೇವನ್ ಅವರು ಇರುವ ತ್ರಿಸದಸ್ಯ ಪೀಠವು ಹೇಳಿದೆ.

'ಹೀಗಿರುವಾಗ ದೇವಸ್ಥಾನ ಮತ್ತು ಅದರ ಆಸ್ತಿಗಳನ್ನು ಕಾಳಜಿಯಿಂದ ರಕ್ಷಿಸುವುದು ಅಗತ್ಯ' ಎಂದು ಪೀಠವು ಹೇಳಿದೆ. ನ್ಯಾಯಮೂರ್ತಿ ರಾಮಕೃಷ್ಣನ್ ಅವರು ಆಡಳಿತದ ಮುಖ್ಯಸ್ಥರಾಗಿ, ಚುನಾವಣಾ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲಿದ್ದಾರೆ.

ಚುನಾವಣೆಯನ್ನು ನಾಲ್ಕು ತಿಂಗಳಲ್ಲಿ ನಡೆಸಬೇಕು ಎಂದು ಪೀಠ ಸೂಚಿಸಿದೆ.

ಮನಮೋಹನ್ 'ಸುಪ್ರೀಂ' ನ್ಯಾಯಮೂರ್ತಿ



ನವದೆಹಲಿ (ಪಿಟಿಐ): ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯನ್ನಾಗಿ ನೇಮಿಸಿ ಕೇಂದ್ರ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

61 ವರ್ಷದ ಮನಮೋಹನ್ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ ಮಾಡಿರುವ ಬಗ್ಗೆ ಕಾನೂನು ಮತ್ತು ನ್ಯಾಯ ಖಾತೆ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು 'ಎಕ್ಸ್'ನಲ್ಲಿ ಮಾಹಿತಿ ನೀಡಿದ್ದಾರೆ.

ಸುಪ್ರೀಂ ಕೋರ್ಟ್ ಕೊಲಿಜಿಯಂ ಮನಮೋಹನ್ ಅವರ ಹೆಸರನ್ನು ನವೆಂಬರ್ 28ರಂದು ಶಿಫಾರಸು ಮಾಡಿತ್ತು. ನ್ಯಾಯಮೂರ್ತಿ ಹಿಮಾ ಕೊಹ್ಲಿ ಮತ್ತು ಈ ಹಿಂದಿನ ಸಿಜೆಐ ಡಿ.ವೈ. ಚಂದ್ರಚೂಡ್ ಅವರ ನಿವೃತ್ತಿಯ ನಂತರ ಎರಡು ಹುದ್ದೆಗಳು ಖಾಲಿ ಇದ್ದವು. ಮನಮೋಹನ್ ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 33ಕ್ಕೆ ಏರಲಿದೆ. ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳ ಒಟ್ಟು ಹುದ್ದೆಗಳು 34 ಇದ್ದು ಒಂದು ಸ್ಥಾನವಷ್ಟೇ ಖಾಲಿ ಇರಲಿದೆ. ನ್ಯಾ.ಮನಮೋಹನ್ ಅವರು ದಿವಂಗತ ಜಗಮೋಹನ್ ಅವರ ಪುತ್ರ. ಜನಪ್ರಿಯ ಅಧಿಕಾರಿ ಯಾಗಿದ್ದ ಜಗಮೋಹನ್ ಅವರು ರಾಜಕೀಯ ಪ್ರವೇಶಿಸಿದ ಬಳಿಕ ಹಿಂದಿನ ಜಮ್ಮು ಮತ್ತು ಕಾಶ್ಮೀರ ರಾಜ್ಯದ ರಾಜ್ಯಪಾಲರಾಗಿ ಮತ್ತು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಆಗಿ ಸೇವೆ ಸಲ್ಲಿಸಿದ್ದರು.

ಆಯುಕ್ತರ ನೇಮಕ: ವಿಚಾರಣೆಯಿಂದ ಹಿಂದೆ ಸರಿದ ಸಿಜೆಐ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ (ಪಿಟಿಐ): ಮುಖ್ಯ ಚುನಾವಣಾ ಆಯುಕ್ತರು ಮತ್ತು ಆಯುಕ್ತರನ್ನು ನೇಮಕ ಮಾಡುವ ಸಮಿತಿಯಿಂದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಅವರನ್ನು ಹೊರಗಿಟ್ಟಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯಿಂದ ಸಿಜೆಐ ಸಂಜೀವ್ ಖನ್ನಾ ಅವರು ಹಿಂದೆಸರಿದಿದ್ದಾರೆ.

ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರೊಂದಿಗೆ ನ್ಯಾಯ ಪೀಠದಲ್ಲಿ ಕುಳಿತಿದ್ದ ಸಿಜೆಐ ಖನ್ನಾ ಅವರು, 'ಈಗ ಅರ್ಜಿಗಳ ವಿಚಾರಣೆ ನಡೆಸುವುದಿಲ್ಲ' ಎಂದು ನ್ಯಾಯಾಲಯದ ಎದುರು ಹಾಜರಿದ್ದ ವಕೀಲರಿಗೆ ತಿಳಿಸಿದರು.


ಸಂಜೀವ್ ಖನ್ನಾ

ಹಿರಿಯ ವಕೀಲ ಗೋಪಾಲ್ ಶಂಕರ ನಾರಾಯಣನ್ ಮತ್ತು ವಕೀಲ ಪ್ರಶಾಂತ್ ಭೂಷಣ್ ಅವರು, 'ನ್ಯಾಯಮೂರ್ತಿ ಖನ್ನಾ ನೇತೃತ್ವದ ಈ ಹಿಂದಿನ ನ್ಯಾಯಪೀಠವು ಅರ್ಜಿ ವಿಚಾರವಾಗಿ ಮಧ್ಯಂತರ ಆದೇಶ ಹೊರಡಿಸಿತ್ತು' ಎಂದು ಹೇಳಿದರು.

ನ್ಯಾ.ಖನ್ನಾ ಅವರು, 'ಆಗಿನ ಸಂದರ್ಭವೇ ಭಿನ್ನವಾಗಿತ್ತು. ಚಳಿಗಾಲದ ರಜೆಯ ನಂತರ ಬೇರೊಂದು ನ್ಯಾಯಪೀಠವು ಪ್ರಕರಣದ ವಿಚಾರಣೆ ನಡೆಸಲಿದೆ' ಎಂದು ಹೇಳಿದರು.

'ಅರ್ಜಿಯ ಕುರಿತು ನಿಗದಿತ ಸಮಯದ ಒಳಗಾಗಿ ಪ್ರತಿಕ್ರಿಯೆ ನೀಡಿ' ಎಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿದರು.

ಹನಗವಾಡಿ, ಮಂಜುದರ್ಶಿನಿಗೆ ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ


ಡಾ. ಸುರೇಶ್ ಹನಗವಾಡಿ

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 2024ನೇ ಸಾಲಿನ 'ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ'ಯನ್ನು ಮಂಗಳವಾರ ಪ್ರದಾನ ಮಾಡಿದ್ದು, ರಕ್ತ ಹೆಪ್ಪುಗಟ್ಟದೆ ಇರುವ ಸಮಸ್ಯೆಯಿಂದ ಬಳಲುತ್ತಿರುವ ದಾವಣಗೆರೆಯ ಡಾ. ಸುರೇಶ್ ಹನಗವಾಡಿ, ತಲಸ್ಸೇಮಿಯಾದಿಂದ ಬಳಲುತ್ತಿರುವ ಬೆಂಗಳೂರಿನ ಮಂಜುದರ್ಶಿನಿ ಜಿ. ಅವರು ಕೂಡ ಪ್ರಶಸ್ತಿಗೆ ಪಾತ್ರರಾದ 33 ಮಂದಿಯಲ್ಲಿ ಸೇರಿದ್ದಾರೆ.

'ಈ ಪ್ರಶಸ್ತಿಗಳು ದೂರಗಾಮಿ ಸಾಮಾಜಿಕ ಮಹತ್ವ ಹೊಂದಿವೆ. ಪ್ರಶಸ್ತಿಗೆ ಪಾತ್ರರಾದವರನ್ನು ಅನುಕರಿಸುವ ಮೂಲಕ ಇತರ ವ್ಯಕ್ತಿಗಳು ಹಾಗೂ ಸಂಸ್ಥೆಗಳು ಅಂಗವಿಕಲರ ಸಬಲೀಕರಣಕ್ಕೆ ನೆರವಾಗಬಹುದು' ಎಂದು ಮುರ್ಮು ಅವರು ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ಹೇಳಿದ್ದಾರೆ.

ಸುರೇಶ್ ಹನಗವಾಡಿ ಅವರಿಗೆ 'ಶ್ರೇಷ್ಠ ದಿವ್ಯಾಂಗಜನ' ವಿಭಾಗದಲ್ಲಿ ವೈಯಕ್ತಿಕ ಸಾಧನೆಗಾಗಿ, ರಕ್ತ ಹೆಪ್ಪುಗಟ್ಟದೆ ಇರುವ ಸಮಸ್ಯೆ ಎದುರಿಸುತ್ತಿರುವವರಿಗೆ ನೀಡುವ ಆರೈಕೆಯನ್ನು ಸುಧಾರಿಸಲು ನೀಡಿದ ಕೊಡುಗೆಗಾಗಿ ರಾಷ್ಟ್ರೀಯ ಪ್ರಶಸ್ತಿ ನೀಡಲಾಗಿದೆ. ಕರ್ನಾಟಕದಲ್ಲಿ ಈ ಸಮಸ್ಯೆಗೆ ಮೊದಲ ಚಿಕಿತ್ಸಾ ಕೇಂದ್ರ ಆರಂಭಿಸಿದ್ದು ಇವರ ಸಾಧನೆಗಳ ಪಟ್ಟಿಗೆ ಸೇರಿದೆ.

ಮಂಜುದರ್ಶಿನಿ ಅವರಿಗೆ 'ಶ್ರೇಷ್ಠ ದಿವ್ಯಾಂಗಜನ' ವಿಭಾಗದಲ್ಲಿ ವೈಯಕ್ತಿಕ ಸಾಧನೆಗಾಗಿ ರಾಷ್ಟ್ರೀಯ ಪ್ರಶಸ್ತಿ ನೀಡಲಾಗಿದೆ. ಮಂಜುದರ್ಶಿನಿ ಅವರು ಶೈಕ್ಷಣಿಕವಾಗಿ ಸಾಧನೆ ತೋರಿ, ಸ್ನಾತಕೋತ್ತರ ಪದವಿಯಲ್ಲಿ ಐದನೆಯ ರ‍್ಯಾಂಕ್ ಪಡೆದಿದ್ದಾರೆ. ಈಗ ಅವರು ರಾಜ್ಯ ಸರ್ಕಾರದಲ್ಲಿ ಉಪ ನೋಂದಣಾಧಿಕಾರಿ ಆಗಿ ಕೆಲಸ ಮಾಡುತ್ತಿದ್ದಾರೆ.

ಉಗ್ರನ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು– ಕಾಶ್ಮೀರದ ಗಗನ್‌ಗೀರ್ ಬಳಿಯ ಸುರಂಗ ನಿರ್ಮಾಣ ಸ್ಥಳದಲ್ಲಿ, ಕಳೆದ ಅಕ್ಟೋಬರ್‌ನಲ್ಲಿ ನಡೆದಿದ್ದ ಉಗ್ರರ ದಾಳಿಯಲ್ಲಿ ಭಾಗಿಯಾಗಿದ್ದ ಲಷ್ಕರ್–ಎ–ತಯಬಾ (ಎಲ್‌ಇಟಿ) ಸಂಘಟನೆಯ ಭಯೋತ್ಪಾದಕನೊಬ್ಬನನ್ನು ಹತ್ಯೆ ಮಾಡಲಾಗಿದೆ.

ಶ್ರೀನಗರದ ದಾಚೀಗಾಮ್ ಅರಣ್ಯದಲ್ಲಿ ಮಂಗಳವಾರ ನಡೆದ ಗುಂಡಿನ ಚಕಮಕಿಯಲ್ಲಿ ಜುನೈದ್ ಅಹಮದ್ ಭಟ್ ಮೃತಪಟ್ಟಿದ್ದಾನೆ.

ಉಗ್ರರು ಅಡಗಿರುವ ಖಚಿತ ಮಾಹಿತಿ ಮೇರೆಗೆ ಶೋಧ ಕೈಗೊಂಡಾಗ, ಭದ್ರತಾ ಪಡೆಗಳು ಹಾಗೂ ಉಗ್ರರ ನಡುವೆ ಗುಂಡಿನ ಕಾಳಗ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜಮ್ಮು– ಕಾಶ್ಮೀರದ ವಿವಿಧೆಡೆ ನಡೆದ ಭಯೋತ್ಪಾದಕ ಕೃತ್ಯಗಳಲ್ಲಿ ಜುನೈದ್ ಭಾಗಿಯಾಗಿದ್ದ ಎಂದು ಪೊಲೀಸರು 'ಎಕ್ಸ್'ನಲ್ಲಿ ಉಲ್ಲೇಖಿಸಿದ್ದಾರೆ.

'ದೆಹಲಿ ಚಲೋ' ಹೊರಟಿದ್ದ ಅನ್ನದಾತರು

ಪ್ರತಿಭಟನೆನಿರತ ರೈತರ ಬಂಧನ

ಪ್ರಜಾವಾಣಿ ವಾರ್ತೆ/ಪಿಟಿಐ

ನೊಯಿಡಾ (ಪಿಟಿಐ): ನೊಯಿಡಾದ ದಲಿತ್ ಪ್ರೇರಣ್ ಸ್ಥಲ್‌ನಲ್ಲಿ ಧರಣಿ ನಡೆಸುತ್ತಿದ್ದ 160 ರೈತರನ್ನು ಮಂಗಳವಾರ ಪೊಲೀಸರು ಬಂಧಿಸಿದ್ದಾರೆ. ಸೋಮವಾರ 'ದೆಹಲಿ ಚಲೋ' ಪ್ರತಿಭಟನಾ ಮೆರವಣಿಗೆ ಹೊರಟಿದ್ದ ರೈತರನ್ನು ಪೊಲೀಸರು ಇಲ್ಲಿಯೇ ತಡೆದಿದ್ದರು. ಬಳಿಕ, ರೈತರು ಧರಣಿ ಆರಂಭಿಸಿದ್ದರು.

ಸರ್ಕಾರ ಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ಸೂಕ್ತ ಪರಿಹಾರ ನೀಡಬೇಕು ಎನ್ನುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಉತ್ತರ ಪ್ರದೇಶದ ರೈತರು 'ದೆಹಲಿ ಚೊಲೋ' ಹೊರಟಿದ್ದರು. 'ಏಳು ದಿನಗಳ ಒಳಗೆ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು' ಎಂದು ರೈತರು ಸರ್ಕಾರಕ್ಕೆ ಸೋಮವಾರ ಗಡುವು ನೀಡಿದ್ದರು.

'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 170ರ ಅಡಿಯಲ್ಲಿ ರೈತರನ್ನು ಬಂಧಿಸಲಾಗಿದೆ' ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ (ಕಾನೂನು ಮತ್ತು ಸುವ್ಯವಸ್ಥೆ) ಶಿವ್‌ಹರಿ ಮೀನಾ ಮಾಹಿತಿ ನೀಡಿದರು. 'ಮುಂದೆ ನಡೆಯಬಹುದಾದ ಅಪರಾಧಗಳನ್ನು ತಡೆಯಲು ಪೊಲೀಸರು ವ್ಯಕ್ತಿಯನ್ನು ಬಂಧಿಸಬಹುದು' ಎಂದು ಸೆಕ್ಷನ್ 170 ಹೇಳುತ್ತದೆ.

'ಭಾರತೀಯ ಕಿಸಾನ್ ಪರಿಷತ್' ರೈತ ಸಂಘಟನೆಯ ಅಧ್ಯಕ್ಷ ಸುಖಬೀರ್ ಖಲೀಫಾ ಹಾಗೂ ಭಾರತೀಯ ಕಿಸಾನ್ ಯೂನಿಯನ್‌ನ (ಪಶ್ಚಿಮ ಉತ್ತರ ಪ್ರದೇಶ) ಅಧ್ಯಕ್ಷ ಪವನ್ ಕಟಾನಾ ಸೇರಿ ಹಲವು ರೈತ ಮಹಿಳೆಯರನ್ನೂ ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ನೊಯಿಡಾದ ಲುಕಸರ್ ಜೈಲಿಗೆ ಕೊಂಡೊಯ್ಯಲಾಗಿದೆ.

ಬಂಧನದಲ್ಲಿರುವ ಸುಖಬೀರ್ ಖಲೀಫಾ ಅವರು ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿ, 'ಬೇಡಿಕೆಗಳ ಈಡೇರಿಕೆಗಾಗಿ ನಮ್ಮ ಹೋರಾಟವು ಮುಂದುವರಿಯಲಿದೆ' ಎಂದರು. ಧರಣಿ ನಡೆಸುತ್ತಿರುವ ರೈತರು ತಮ್ಮೊಂದಿಗೆ ಹಾಸಿಗೆ, ಹೊದಿಕೆ, ಅಡುಗೆ ಸಾಮಗ್ರಿಗಳು, ಪಾತ್ರೆಗಳನ್ನು ತಂದಿದ್ದಾರೆ.


ಪ್ರತಿಭಟನೆನಿರತ ರೈತ ಮಹಿಳೆಯರನ್ನು ಪೊಲೀಸರು ಮಂಗಳವಾರ ಬಂಧಿಸಿದರು –ಎಎಫ್‌ಪಿ ಚಿತ್ರ

> ರೈತರ ಬಂಧನವನ್ನು ಖಂಡಿಸುತ್ತೇನೆ. ಈ ಬಗ್ಗೆ ಚರ್ಚಿಸಲು ಕೂಡಲೇ ಮುಜಾಫ್ಫರ್ ನಗರದಲ್ಲಿ ಪಂಚಾಯತ್ ಕರೆಯಲಾಗುವುದು
>
> **ನರೇಶ್ ಟಿಕಾಯತ್,** ಭಾರತೀಯ ಕಿಸಾನ್ ಯೂನಿಯನ್‌ನ ನಾಯಕ



ಸುಭಾಷಿತ

ವಿವೇಕಿಯ ನಾಲಿಗೆಯು ಹೃದಯದಲ್ಲಿ ಇರುತ್ತದೆ ಮತ್ತು ಅವಿವೇಕಿಯ ಹೃದಯವು ನಾಲಿಗೆಯಲ್ಲಿ ಇರುತ್ತದೆ.

–ಬೀಚಿ

ಕಾಂಗ್ರೆಸ್ ಪಕ್ಷಕ್ಕೆ ಸತತ ಸೋಲು ಒಳಗಿನ ಹುಳುಕು ಸರಿಪಡಿಸಲು ಸಕಾಲ

ಕಾಂಗ್ರೆಸ್ ಪಕ್ಷವು ಆತ್ಮಾವಲೋಕನ ಮಾಡಿಕೊಂಡಿದ್ದು ಮತ್ತು ತಪ್ಪುಗಳನ್ನು ತಿದ್ದಿಕೊಳ್ಳಲು ಮುಂದಾದ ನಿದರ್ಶನಗಳು ಬಹಳ ಕಡಿಮೆ; ಅತ್ಯಂತ ಹೀನಾಯ ಸೋಲು ಎದುರಾದಾಗಲೂ ನೆಪಗಳನ್ನು ಮುಂದಿಟ್ಟು ತಲೆದಂಡಕ್ಕೆ ಬಲಿಪಶುಗಳನ್ನು ಹುಡುಕಿದ್ದೇ ಹೆಚ್ಚು. ಹರಿಯಾಣ ಮತ್ತು ಮಹಾರಾಷ್ಟ್ರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭಾರಿ ಸೋಲು ಎದುರಾಗಿದೆ. ಜಮ್ಮು-ಕಾಶ್ಮೀರ ಮತ್ತು ಜಾರ್ಖಂಡ್‌ನಲ್ಲಿ ಸಿಕ್ಕ ಗೆಲುವಿನ ಶ್ರೇಯವು ಮೈತ್ರಿಕೂಟದಲ್ಲಿದ್ದ ಪ್ರಾದೇಶಿಕ ಪಕ್ಷಗಳಾದ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಜೆಎಂಎಂಗೆ ಸಲ್ಲಬೇಕು. ಹರಿಯಾಣದಲ್ಲಿ ಖಚಿತ ಎಂಬಂತಿದ್ದ ಗೆಲುವನ್ನು ಪಕ್ಷವು ಸೋಲಾಗಿ ಪರಿವರ್ತಿಸಿಕೊಂಡಿದೆ. ಮಹಾರಾಷ್ಟ್ರದಲ್ಲಿ ಇದ್ದ ಪೂರಕ ಪರಿಸ್ಥಿತಿಯನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ. ಸೋಲಿನ ಬಳಿಕ ನಾಯಕರು ಪ್ರತಿಕ್ರಿಯೆ ನೀಡಿದ್ದಾರೆ ಮತ್ತು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಾರಣಗಳನ್ನು ಕೊಟ್ಟಿದ್ದಾರೆ. ಆದರೆ, ಈ ನಾಯಕರಿಗೆ ಪಕ್ಷದ ಸದ್ಯದ ಸ್ಥಿತಿ ಕುರಿತು ಸರಿಯಾದ ಗ್ರಹಿಕೆಯೇ ಇಲ್ಲ ಎಂಬುದನ್ನು ಈ ಪ್ರತಿಕ್ರಿಯೆಗಳು ಮತ್ತು ಉಲ್ಲೇಖಿಸಿರುವ ಕಾರಣಗಳು ಸೂಚಿಸುತ್ತವೆ. ಈ ಪಕ್ಷವು ಸೋಲಿನಿಂದ ಏನನ್ನೂ ಕಲಿಯುವುದಿಲ್ಲ ಎಂಬುದರ ಸೂಚನೆಯೂ ಈ ಪ್ರತಿಕ್ರಿಯೆಗಳಲ್ಲಿ ಇದೆ.



ಒಗ್ಗಟ್ಟು ಇಲ್ಲದೇ ಇರುವುದಕ್ಕೆ ಕಾರಣವೇನು, ಈ ಪರಿಸ್ಥಿತಿ ಮುಂದುವರಿಯಲು ಬಿಟ್ಟಿದ್ದು ಏಕೆ ಎಂಬುದಕ್ಕೆ ನಾಯಕತ್ವವೇ ಉತ್ತರ ಹೇಳಬೇಕು

ವಿಧಾನಸಭೆಗೆ ಈಚೆಗೆ ಚುನಾವಣೆ ನಡೆದ ಎಲ್ಲ ನಾಲ್ಕು ರಾಜ್ಯಗಳಲ್ಲಿಯೂ ಪಕ್ಷದ ಸಾಧನೆ ಕಳಪೆ ಎಂಬುದನ್ನು ಖರ್ಗೆ ಅವರು ಒಪ್ಪಿಕೊಂಡಿದ್ದಾರೆ. ಒಗ್ಗಟ್ಟಿನ ಕೊರತೆ ಮತ್ತು ಪರಸ್ಪರರ ವಿರುದ್ಧ ಟೀಕಾಪ್ರಹಾರಗಳು ಸೋಲಿನ ಮುಖ್ಯ ಕಾರಣಗಳು. ಒಗ್ಗಟ್ಟು ಇಲ್ಲದೇ ಇರುವುದಕ್ಕೆ ಕಾರಣವೇನು, ಈ ಪರಿಸ್ಥಿತಿ ಮುಂದುವರಿಯಲು ಬಿಟ್ಟಿದ್ದು ಏಕೆ ಎಂಬುದಕ್ಕೆ ನಾಯಕತ್ವವೇ ಉತ್ತರ ಹೇಳಬೇಕು. ಸಂಘಟನೆಯನ್ನು ಬಲಪಡಿಸಬೇಕು ಎಂದು ಖರ್ಗೆ ಹೇಳಿದ್ದಾರೆ. ಆದರೆ, ಉದಯಪುರದಲ್ಲಿ 2022ರಲ್ಲಿ ನಡೆದ ಚಿಂತನ ಶಿಬಿರದಲ್ಲಿ ಪಕ್ಷದ ಬಲವರ್ಧನೆಗಾಗಿ ಕೈಗೊಂಡ ಹಲವು ನಿರ್ಧಾರಗಳು ಈಗಲೂ ಅನುಷ್ಠಾನ ಆಗಿಲ್ಲ. ನಾಯಕರು ಮತ್ತು ಪದಾಧಿಕಾರಿಗಳ ಸಾಧನೆಯನ್ನು ಮೌಲ್ಯಮಾಪನ ಮಾಡಲು ವ್ಯವಸ್ಥೆಯೇ ಇಲ್ಲ. ಈ ಎಲ್ಲವನ್ನೂ ಸರಿಪಡಿಸುವ ಹೊಣೆಗಾರಿಕೆ ಹೈಕಮಾಂಡ್‌ನ ಮೇಲೆಯೇ ಇದೆ. ಸೋಲಿನ ಬಹುಪಾಲು ಹೊಣೆಯನ್ನು ರಾಜ್ಯ ಮತ್ತು ಸ್ಥಳೀಯ ಮಟ್ಟದ ನಾಯಕರ ತಲೆಯ ಮೇಲೆ ಪಕ್ಷದ ಅಧ್ಯಕ್ಷರು ಹೊರಿಸಿದ್ದಾರೆ. ರಾಷ್ಟ್ರೀಯ ನಾಯಕತ್ವವನ್ನು ಸಮರ್ಥಿಸಿಕೊಂಡಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ರೂಪಿಸಿದ ಸಂಕಥನವು ಸರಿಯಾಗಿಯೇ 'ಇತ್ತು' ಎಂದು ಖರ್ಗೆ ಹೇಳಿದ್ದಾರೆ. ಸ್ಥಳೀಯವಾಗಿ ಸಂಕಥನವೊಂದನ್ನು ಕಟ್ಟಿ ಅದನ್ನು ಜನರಿಗೆ ತಲುಪಿಸುವುದು ರಾಜ್ಯದ ನಾಯಕರ ಹೊಣೆಯಾಗಿತ್ತು ಎಂಬುದು ಅವರ ವಾದವಾಗಿದೆ. ಸಂವಿಧಾನವು ಅಪಾಯದಲ್ಲಿದೆ ಎಂಬ ಸಂಕಥನವನ್ನು ರಾಹುಲ್ ಗಾಂಧಿ ಅವರು ಬಹಳ ಪ್ರಯಾಸಪಟ್ಟು ಕಟ್ಟಿದ್ದಾರೆ. ಆದರೆ, ಮಹಾರಾಷ್ಟ್ರ ಚುನಾವಣೆಯಲ್ಲಿ ಈ ಸಂಕಥನದ ಪರಿಣಾಮ ಏನು ಎಂಬುದನ್ನು ಅವರು ವಿವರಿಸಬೇಕು. ಚುನಾವಣೆಗೆ ಒಂದು ವರ್ಷಕ್ಕೆ ಮುಂಚೆಯೇ ರಾಜ್ಯ ಘಟಕಗಳು ಸಿದ್ಧತೆ ಆರಂಭಿಸಬೇಕು ಎಂದು ಖರ್ಗೆ ಅವರು ಹೇಳಿದ್ದಾರೆ. ಆದರೆ, ರಾಜ್ಯ ಘಟಕವು ಒಂದು ವರ್ಷಕ್ಕೆ ಮುಂಚೆಯೇ ಸಿದ್ಧತೆ ಆರಂಭಿಸುವುದನ್ನು ಕೇಂದ್ರ ನಾಯಕತ್ವವು ಹೇಗೆ ಖಚಿತಪಡಿಸುತ್ತದೆ? ಹರಿಯಾಣದಲ್ಲಿ ಸೋಲಿನ ಬಳಿಕವೂ ಮಹಾರಾಷ್ಟ್ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲಿಲ್ಲ ಎಂಬ ಟೀಕೆ ಇದೆ. ಪಕ್ಷದ ವರ್ಕಿಂಗ್ ಅನ್ನು ನಿಯಮಿತವಾಗಿ ಪರಿಶೀಲಿಸುವ ಕೆಲಸ ಕೂಡ ಆಗಿರಲಿಲ್ಲ.

ಎರಡು ರಾಜ್ಯಗಳ ಸೋಲಿಗೆ ಉತ್ತರದಾಯಿತ್ವ ಅಥವಾ ಹೊಣೆಗಾರಿಕೆಯನ್ನು ನಿಗದಿ ಮಾಡಲಾಗಿದೆಯೇ ಎಂಬ ಪ್ರಶ್ನೆಯನ್ನು ಈಗ ಕೇಳಿಕೊಳ್ಳಬೇಕಿದೆ. ಹರಿಯಾಣದಲ್ಲಿ ಸೋಲಿಗೆ ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಕಾರಣ ಎಂದು ಪಕ್ಷವು ಆಕ್ಷೇಪಣೆ ಹೇಳಿತ್ತು. ಮಹಾರಾಷ್ಟ್ರ ವಿಚಾರದಲ್ಲಿಯೂ ಸೋಲಿನ ಬಳಿಕ ಇವಿಎಂ ಕಾರಣವಾಗಿರಬಹುದು ಎಂಬ ಸಂದೇಹವನ್ನು ಕಾಂಗ್ರೆಸ್ ವ್ಯಕ್ತಪಡಿಸಿದೆ. ಹೀಗೆ ಮಾಡುವುದು ಪಕ್ಷಕ್ಕೆ ಶೋಭೆ ತರುವುದಿಲ್ಲ. ತನ್ನೊಳಗಿನ ಸಮಸ್ಯೆಗಳನ್ನು ಕಾಣಬೇಕಿದ್ದರೆ ಆತ್ಮಾವಲೋಕನವೇ ಸೂಕ್ತ. ಅದುಬಿಟ್ಟು, ಈ ಸಮಸ್ಯೆಗಳನ್ನು ಇವಿಎಂನಲ್ಲಿ ಹುಡುಕಲಾಗದು. ಚುನಾವಣಾ ಆಯೋಗದ ಪಾತ್ರವನ್ನೂ ದೂಷಿಸಲಾಗಿದೆ. ಆಯೋಗವು ಸತ್ಯ ಹರಿಶ್ಚಂದ್ರನ ಮೌಲ್ಯಗಳ ಪ್ರತಿಪಾದಕ ಅಲ್ಲ ಎಂಬುದು ನಿಜ. ಆದರೆ, ಕಾಂಗ್ರೆಸ್ ಪಕ್ಷವು ತನ್ನೊಳಗೆ ಇರುವ ಹುಳುಕುಗಳನ್ನು ಕಂಡಿಲ್ಲದಂತೆ ನಟಿಸುವುದರಿಂದ ಯಾವ ಉಪಯೋಗವೂ ಆಗುವುದಿಲ್ಲ.

ಚನ್ನಪಟ್ಟಣ ವಿದ್ಯಮಾನ: 'ಅಪ್ಪ– ಮಗನ ಸೋಲು' ಎಂಬುದರ ಆಚೆಗೂ ವಿಶ್ಲೇಷಿಸಬೇಕಿದೆ

ಜನಪರ ಹೋರಾಟ, ಸ್ಮೃತಿ, ವಿಸ್ಮೃತಿ



ವಿಶ್ಲೇಷಣೆ

ಕಿರಣ್ ಎಂ. ಗಾಜನೂರು

ಕರ್ನಾಟಕದ ರಾಜಕೀಯ, ಅದರಲ್ಲೂ ಚುನಾವಣಾ ರಾಜಕೀಯ 'ಜನ ತಮ್ಮ ಹಕ್ಕುಗಳನ್ನು ಚಲಾಯಿಸುವ ಮೂಲಕ ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವ ಸಾಂವಿಧಾನಿಕ ಪ್ರಕ್ರಿಯೆ' ಎನ್ನುವ ಅರ್ಥವನ್ನು ಮೀರಿ, ರಾಜಕೀಯ ಪಕ್ಷಗಳ ಪಾಲಿಗೆ ಪ್ರಭಾವಿ ನಾಯಕರ ಪ್ರತಿಷ್ಠೆಯ ಪ್ರಶ್ನೆಯಾಗಿ, ಕೆಲವು ಮಾಧ್ಯಮಗಳ ಪಾಲಿಗೆ ಕದನಕಣ, ರಣರಂಗದಂತಹ ನಿರೂಪಣೆಯಾಗುವ ಸ್ಥಿತಿಯನ್ನು ತಲುಪಿ ಬಹಳ ಕಾಲವಾಗಿದೆ. ಮೊನ್ನೆ ನಡೆದ ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆ ಮತ್ತು ಅದರ ಸುತ್ತಲಿನ ಸಂಕಥನವು ರಾಜಕೀಯ ನಾಯಕರ ಪ್ರತಿಷ್ಠಿತ ಚುನಾವಣೆಗಳ ಸಾಲಿಗೆ ಹೊಸ ಸೇರ್ಪಡೆಯಾಗಿದೆ ಅಷ್ಟೆ.

ಹಾಗೆ ನೋಡುವುದಾದರೆ, ಚನ್ನಪಟ್ಟಣದ ಚುನಾವಣಾ ಫಲಿತಾಂಶವು ಹಲವಾರು ಪ್ರತಿಕ್ರಿಯೆಗಳನ್ನು ಹುಟ್ಟುಹಾಕಿದೆ. ಕೆಲವರು ಇದು ಜೆಡಿಎಸ್‌ನ ಸ್ವಯಂಕೃತ ಅಪರಾಧ ಎಂದರೆ, ಇನ್ನು ಕೆಲವರು ಇದು ಅತಿಯಾದ ಕುಟುಂಬ ರಾಜಕಾರಣಕ್ಕೆ ಜನ ನೀಡಿದ ಪ್ರತಿಕ್ರಿಯೆ ಎನ್ನುವ ಅರ್ಥದಲ್ಲಿ ವಿಶ್ಲೇಷಿಸಿದ್ದಾರೆ. ಸಾಮಾಜಿಕ ಜಾಲತಾಣ ಮತ್ತು ಟ್ರೋಲ್ ಪೇಜ್‌ಗಳಂತೂ ಈ ಸೋಲನ್ನು ಪುರಾಣದ ಅರ್ಜುನ ಮತ್ತು ಬಬ್ರುವಾಹನನಿಗೆ ಹೋಲಿಸಿ, ಅತ್ಯಂತ ಕಳಪೆ ರಾಜಕೀಯ ವ್ಯಂಗ್ಯದ ಮಾದರಿಯೊಂದನ್ನು ಜನರ ಮುಂದಿಟ್ಟು ವಿಕೃತಿ ಮೆರೆದಿವೆ.

ಇಂತಹ ಹೊತ್ತಿನಲ್ಲಿಯೇ ನಾವು ಚನ್ನಪಟ್ಟಣದಲ್ಲಿನ ರಾಜಕೀಯ ವಿದ್ಯಮಾನವನ್ನು ಟ್ರೋಲ್ ಸೇನೆ ಮುಂದಿಟ್ಟ ಜೆಡಿಎಸ್ ಎಂಬ ಪಕ್ಷ ಅಥವಾ ಅಪ್ಪ-ಮಗನ ಸೋಲು ಎಂಬ ಸರಳೀಕೃತ ಅರ್ಥದಲ್ಲಿ ನೋಡಬೇಕೆ ಅಥವಾ ಭಾರತದಲ್ಲಿ ಪ್ರಾದೇಶಿಕ ಪಕ್ಷಗಳನ್ನು ನಿರ್ನಾಮಗೊಳಿಸುತ್ತಿರುವ 1990ರ ನಂತರದ ರಾಜಕಾರಣದ ಭಾಗವಾಗಿ ನೋಡಬೇಕೆ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ. ನನಗೆ ಅನ್ನಿಸುವಂತೆ, ಚನ್ನಪಟ್ಟಣ ಎಂಬ ರಾಜಕೀಯ ವಿದ್ಯಮಾನವನ್ನು 'ಅಪ್ಪ-ಮಗನ ಸೋಲು' ಎಂಬುದರ ಆಚೆಗೂ ವಿಶ್ಲೇಷಣೆ ಮಾಡುವುದು ಕರ್ನಾಟಕದ ರಾಜಕೀಯ ಭವಿಷ್ಯದ ದೃಷ್ಟಿಯಿಂದ ಮುಖ್ಯವಾದುದು ಅನ್ನಿಸುತ್ತದೆ.

ಭಾರತದ ಚುನಾವಣಾ ರಾಜಕಾರಣದಲ್ಲಿ 1977ರ ಲೋಕಸಭಾ ಚುನಾವಣೆ ಬಹಳ ಮಹತ್ವವಾದದ್ದು. ಏಕೆಂದರೆ, ಕೇಂದ್ರದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ರಾಜಕೀಯ ಶಕ್ತಿಯು ಆಡಳಿತದ ಚುಕ್ಕಾಣಿ ಹಿಡಿದಿತ್ತು. ಈ ಬೆಳವಣಿಗೆಯು ಪ್ರಾದೇಶಿಕ ಪಕ್ಷಗಳ ಉಗಮಕ್ಕೆ, ಅದಕ್ಕಿಂತಲೂ ಮಿಗಿಲಾಗಿ 'ಪ್ರಾದೇಶಿಕ ಅಸ್ಮಿತೆ'ಗಳನ್ನು ಆಧರಿಸಿ ಹೊಸ ರಾಜಕೀಯ ತಾತ್ವಿಕತೆಯೊಂದಕ್ಕೆ ನಾಂದಿ ಹಾಡಿತ್ತು. ಯಾವುದೇ ರಾಜಕೀಯ ಪಕ್ಷ ತನ್ನ ರಾಜಕೀಯ ಅಸ್ತಿತ್ವವನ್ನು ತಾನು ನಿರ್ವಹಿಸಿದ್ದ ಜನಪರ ಹೋರಾಟವೊಂದರ ಸ್ಮೃತಿಯ ಮೇಲೆ ಕಟ್ಟಿಕೊಂಡಿರುತ್ತದೆ. ಉದಾಹರಣೆಗೆ, ಕಾಂಗ್ರೆಸ್ ಪಕ್ಷವು ದೇಶದ ಸ್ವಾತಂತ್ರ್ಯ ಹೋರಾಟವನ್ನು ತನ್ನ ಬುನಾದಿ ಮಾಡಿಕೊಂಡಿದ್ದರೆ, ಬಿಜೆಪಿಯು ರಾಮಜನ್ಮಭೂಮಿ ಹೋರಾಟವನ್ನು ತನ್ನ ಅಸ್ಮಿತೆ ಆಗಿಸಿಕೊಂಡಿದೆ, ಎಡಪಕ್ಷಗಳು ದುಡಿಯುವ ಜನರ ಪರವಾದ ಹೋರಾಟವನ್ನು ತಮ್ಮ ಅಸ್ಮಿತೆಯಾಗಿ ಜನಸಮೂಹದ ಮುಂದಿಡುತ್ತವೆ.

ರಾಷ್ಟ್ರೀಯ ಪಕ್ಷಗಳು ಜನರ ಮುಂದಿಡುತ್ತಿದ್ದ ಈ ಬೃಹತ್ ಚಾರಿತ್ರಿಕ ಹೋರಾಟಗಳ ಸ್ಮೃತಿಗಳನ್ನು ಒಡೆದದ್ದು 1980ರ ದಶಕದಿಂದ ಆರಂಭವಾದ 'ಪ್ರಾದೇಶಿಕ ಅಸ್ಮಿತೆ ಮತ್ತು ಹಕ್ಕಿನ ಪ್ರಶ್ನೆಗಳು'. ಈ ಪ್ರಶ್ನೆಗಳು ರಾಜ್ಯಗಳ ಭಾಷಾ ಚಳವಳಿಯ ಪ್ರಶ್ನೆಗಳಾಗಿ, ಸಮಾಜೋ ಆರ್ಥಿಕ ಹಿಂದುಳಿದಿರುವಿಕೆಯ ಪ್ರಶ್ನೆಗಳಾಗಿ, ಉತ್ತರ- ದಕ್ಷಿಣದ ನಡುವಿನ ಸಂಪನ್ಮೂಲಗಳ ಅಸಮಾನ ಹಂಚಿಕೆಯ ಪ್ರಶ್ನೆಗಳಾಗಿ ಹಲವಾರು ಪ್ರಾದೇಶಿಕ ಜನಪರ ಹೋರಾಟಗಳಿಗೆ ನಾಂದಿ ಹಾಡಿವೆ. ಇದರ ಪರಿಣಾಮವಾಗಿ, 'ಪ್ರಾದೇಶಿಕ ಅಸ್ಮಿತೆಗಳನ್ನು ಹಕ್ಕುಗಳನ್ನಾಗಿ ಮಂಡಿಸುವ' ಹೊಸ ಪ್ರಾದೇಶಿಕ ಪಕ್ಷಗಳ ಯುಗವೊಂದು ಆರಂಭವಾಗಿತ್ತು. ಅದರಲ್ಲೂ 1996- 2014ರ ತನಕದ 'ದೆಹಲಿಯ ರಾಜಕೀಯ'ವನ್ನು ಪ್ರಾದೇಶಿಕ ಪಕ್ಷಗಳ ನೆರವಿಲ್ಲದೇ ಊಹಿಸಿಕೊಳ್ಳುವುದು ಸಾಧ್ಯವಿಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿತ್ತು. ಈ ವಿದ್ಯಮಾನವನ್ನು ರಾಜಕೀಯ ವಿಶ್ಲೇಷಕರು 'ಸಮ್ಮಿಶ್ರ ಸರ್ಕಾರಗಳ ಯುಗ' ಎಂದೇ ಗುರುತಿಸುತ್ತಾರೆ.

ಈ ಹಂತದಲ್ಲಿ ಕರ್ನಾಟಕದ ಪ್ರಾದೇಶಿಕ ಅಸ್ಮಿತೆಯನ್ನು ಇಲ್ಲಿನ ಭಾಷಾ ಚಳವಳಿ, ರೈತ ಹೋರಾಟ, ಬಹಳ ಮುಖ್ಯವಾಗಿ ಹಿಂದುಳಿದ ವರ್ಗಗಳ ಚಳವಳಿಯಂತಹ ಜನಪರ ಹೋರಾಟಗಳ ಸ್ಮೃತಿಯ ಮೇಲೆ ಕಟ್ಟುವ ಬೆಳವಣಿಗೆಗಳು ಆರಂಭವಾದವು. ಈ ಅಸ್ಮಿತೆಗೆ ಬಸವಾದಿ ಶರಣರು, ಸೂಫಿಗಳು, ದಾಸರು, ಕವಿಗಳಿಂದ ಜಾತ್ಯತೀತ ರಾಜಕೀಯ ತಾತ್ವಿಕತೆಯನ್ನು ಬಸಿದುಕೊಳ್ಳಲಾಯಿತು. ಈ ಕಾಲದಲ್ಲಿ ಹಳೆಮೈಸೂರು ಭಾಗದಲ್ಲಿದ್ದ ರೈತ ಹೋರಾಟ ಮತ್ತು ಭಾಷಾ ಚಳವಳಿಯ ಭಾಗವಾಗುವ ಮೂಲಕ ಎಚ್.ಡಿ.ದೇವೇಗೌಡ ರಾಜಕೀಯ ನಾಯಕರಾಗಿ ಬೆಳೆದುನಿಂತರು. ಇದರ ಅರ್ಥ ಅವರ 'ಪ್ರಾದೇಶಿಕ ರಾಜಕೀಯ'ಕ್ಕೆ ಈ ನಾಡಿನ ಭಾಷೆ, ರೈತ ಚಳವಳಿಗಳ ತಾತ್ವಿಕತೆ ವ್ಯಾಪಕವಾಗಿ ಒದಗಿಬಂದವು. ಮುಂದೆ ಜೆಡಿಎಸ್ ಪಕ್ಷದ ತಾತ್ವಿಕತೆಯನ್ನು ಈ ಹೋರಾಟಗಳು ಪ್ರಭಾವಿಸಿದವು. ಭಾಷೆ ಮತ್ತು ರೈತ ಹೋರಾಟದ ಜೊತೆ ಜೊತೆಗೆ ದೇವೇಗೌಡರು 1992ರಲ್ಲಿ ಬಾಬರಿ ಮಸೀದಿ ಧ್ವಂಸವನ್ನು ಕಟುವಾಗಿ ವಿಮರ್ಶಿಸಿದ್ದರು. ಆ ಮೂಲಕ, ಮಸೀದಿ ಧ್ವಂಸದ ಕಾರಣದಿಂದ ಅಭದ್ರತೆಯಿಂದ ಕುಸಿದಿದ್ದ ದೊಡ್ಡಸಂಖ್ಯೆಯ ಅಲ್ಪಸಂಖ್ಯಾತ ವರ್ಗಕ್ಕೆ ದೇವೇಗೌಡರು ಆಸರೆಯಾಗಿ ಕಂಡಿದ್ದರು. ಈ ಬೆಳವಣಿಗೆಯಿಂದ ಉತ್ತರ ಕರ್ನಾಟಕದಲ್ಲೂ ಪಕ್ಷದ ಬೇರುಗಳು ನಿಧಾನವಾಗಿ ಹಬ್ಬಿಕೊಳ್ಳುತ್ತಿದ್ದವು.

ಹಾಗಂತ ದೇವೇಗೌಡರ ರಾಜಕೀಯವು ವಿಮರ್ಶಾತೀತವಲ್ಲ. ಜೆಡಿಎಸ್ ಪಕ್ಷದಿಂದ ಸಿದ್ದರಾಮಯ್ಯ ಸೇರಿದಂತೆ ಹಲವು ಪ್ರಮುಖ ನಾಯಕರ ನಿರ್ಗಮನ, ಬಿಜೆಪಿ ಜೊತೆಗಿನ ಜೆಡಿಎಸ್ ಸಖ್ಯ, ಪಕ್ಷದ ಮೇಲೆ ಕುಟುಂಬದ ಆಧಿಪತ್ಯ ಸೇರಿದಂತೆ ಕೆಲವು ಬೆಳವಣಿಗೆಗಳನ್ನು ಉಲ್ಲೇಖಿಸಿ ಪಕ್ಷದ 'ಜಾತ್ಯತೀತ' ನಿಲುವನ್ನು ರಾಜಕೀಯ ವಿಶ್ಲೇಷಕರು ಕಟುವಾದ ವಿಮರ್ಶೆಗೆ ಗುರಿಯಾಗಿಸಿದ್ದಾರೆ. ಈ ವಿಮರ್ಶೆಗಳಲ್ಲಿ ಹುರುಳಿರುವುದೂ ಉಂಟು.



ಇಂದಿನ ಜೆಡಿಎಸ್ ಎಂದರೆ ಏನು? ಅದಕ್ಕಿರುವ ಜನಪರ ಹೋರಾಟಗಳ ಸ್ಮೃತಿ ಯಾವುದು? ಯಾವ ಹೋರಾಟಗಳನ್ನು ಆಧರಿಸಿ ಅದು ಜನರನ್ನು ಸೆಳೆಯುತ್ತದೆ ಎಂದು ಪ್ರಶ್ನಿಸಿಕೊಂಡರೆ ಸ್ಪಷ್ಟ ಉತ್ತರಗಳು ಕಾಣಸಿಗುವುದಿಲ್ಲ. ಜೆಡಿಎಸ್ ಚರಿತ್ರೆಯು ನಾಡಿನ ಭಾಷೆ, ಅಲ್ಪಸಂಖ್ಯಾತರು, ರೈತಪರ ಹೋರಾಟಗಳ ಸ್ಮೃತಿಯಿಂದ ತುಂಬಿರಬೇಕಾಗಿತ್ತು. ಆದರೆ ಕುಮಾರಸ್ವಾಮಿಯವರು ಪ್ರವರ್ಧಮಾನಕ್ಕೆ ಬಂದ ನಂತರದ ಜೆಡಿಎಸ್ ನಿಧಾನವಾಗಿ ತನ್ನ ಸ್ಮೃತಿಯನ್ನೇ ಮರೆಯುತ್ತಿರುವಂತಿದೆ. ಈಗ ಅವರು ರಾಷ್ಟ್ರೀಯ ಪಕ್ಷವೊಂದರ ಜೊತೆ ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಂಡಿರುವುದರಿಂದ ಅವರ ಭಾಷೆಯೂ ಬದಲಾಗಿದೆ. ಅವರ ಮಗ ನಿಖಿಲ್ ಕುಮಾರಸ್ವಾಮಿ ಅವರು 'ನನ್ನ ಸೋಲಿಗೆ ಒಂದು ಕೋಮು ಕಾರಣ' ಎಂದು ಬಾಲಿಶ ಹೇಳಿಕೆ ನೀಡಿದ್ದನ್ನು ಇದರ ಭಾಗವಾಗಿಯೇ ನಾವು ಗಮನಿಸಬೇಕಿದೆ.


ಸಂಕ್ಷಿಪ್ತವಾಗಿ ಹೇಳುವುದಾದರೆ, ವರ್ತಮಾನದ ಜೆಡಿಎಸ್ ಕಳೆದುಕೊಂಡಿರುವುದು ತನ್ನ ತಾತ್ವಿಕತೆಯನ್ನು ಮತ್ತು ಪಕ್ಷ ಮುನ್ನಡೆಸಬೇಕಾದ ಜನಪರ ಹೋರಾಟಗಳ ಸ್ಮೃತಿಗಳನ್ನು. ಅವುಗಳನ್ನು ಮರುಸ್ಥಾಪಿಸದ ವಿನಾ ನಿಖಿಲ್ ಜಾಗದಲ್ಲಿ ದೇವೇಗೌಡರು ಚುನಾವಣೆಗೆ ಸ್ಪರ್ಧಿಸಿದರೂ ಜನಬೆಂಬಲ ಪಡೆಯುವುದು ಕಷ್ಟವಿದೆ.

ಸ್ವಾತಂತ್ರ್ಯದ ಆರಂಭದ ಕಾಲದಲ್ಲಿ ಚುನಾವಣೆಗಳು ಒಂದು ಪಕ್ಷ ಮತ್ತು ಅದರ ಬೆಂಬಲಿತ ಭೂಮಾಲೀಕರ ಆಣತಿಯಲ್ಲಿದ್ದವು. ನಂತರ ಅವು ಜಾತಿಕೇಂದ್ರಿತ ನಾಯಕತ್ವದ ತೆಕ್ಕೆಗೆ ಸರಿದವು. 1990ರ ದಶಕದ ನಂತರದ ಚುನಾವಣೆಗಳು ಹಣದ ಹಿಡಿತಕ್ಕೆ ಸಿಲುಕಿದವು. ಇಂದು ಕಾರ್ಪೊರೇಟ್ ಸಂಸ್ಥೆಗಳ ಧಣಿಗಳು ಚುನಾವಣೆಗಳನ್ನು ನಿರ್ವಹಿಸುತ್ತಿರುವ ವಿಶ್ಲೇಷಣೆಗಳು ನಮ್ಮ ನಡುವೆ ಇವೆ. ಈ ಬದಲಾವಣೆಯ ಭಾಗವಾಗಿಯೇ ನಾವು 'ಒಂದು ದೇಶ ಒಂದು ಚುನಾವಣೆ' ಎಂಬ ಸಂಕಥನವನ್ನು ಗಮನಿಸಬೇಕಿದೆ. ಇಂತಹ ಸಂದಿಗ್ಧ ಸ್ಥಿತಿಯನ್ನು ದಾಟಲು ಭಾರತೀಯ ಪ್ರಜಾಪ್ರಭುತ್ವದಲ್ಲಿ ಪ್ರಾದೇಶಿಕ ತಾತ್ವಿಕತೆಗೆ ಮಾತ್ರ ಸಾಧ್ಯವಿದೆ. ಆದ್ದರಿಂದ ಜೆಡಿಎಸ್ ಸೇರಿದಂತೆ ದೇಶದ ಎಲ್ಲಾ ಪ್ರಾದೇಶಿಕ ಪಕ್ಷಗಳ ಇಂದಿನ ಸ್ಥಿತಿಯು ಪಕ್ಷಗಳ ಸೋಲಷ್ಟೇ ಅಲ್ಲ! ಬದಲಾಗಿ, ರಾಜಕೀಯ ಹೋರಾಟವಾಗಿ 'ಪ್ರಾದೇಶಿಕ ಅಸ್ಮಿತೆ'ಗೆ ಆದ ತುಸು ಹಿನ್ನಡೆ ಅನ್ನುವ ಅರ್ಥದಲ್ಲಿಯೂ ವಿಶ್ಲೇಷಣೆ ನಡೆಸಬೇಕಿದೆ.

ಕುಮಾರಸ್ವಾಮಿ ಮತ್ತು ಜೆಡಿಎಸ್ ಪಕ್ಷ ಈ ದಿಸೆಯಲ್ಲಿ ಯೋಚಿಸಬಹುದೇ? ಪಕ್ಷದ ಯುವಪೀಳಿಗೆ ತಮ್ಮದೇ ಪಕ್ಷ ಹಾದುಬಂದ ದಾರಿಯನ್ನು, ತಾತ್ವಿಕ ನೆನಪುಗಳನ್ನು ಅವಲೋಕಿಸಿ ಬೇರುಗಳನ್ನು ಗಟ್ಟಿಗೊಳಿಸಿಕೊಳ್ಳುವ ಬದ್ಧತೆ ತೋರುವುದೇ? 'ನಾಡು-ನುಡಿ' ಕೇಂದ್ರಿತ, ಜಾತ್ಯತೀತ ರಾಜಕೀಯ ಹೋರಾಟವೊಂದರ ಕಲ್ಲುಮುಳ್ಳಿನ ಹಾದಿಯನ್ನು ಅವರು ಎದುರುಗೊಳ್ಳುವರೇ?

ಲೇಖಕ: ಸಹಾಯಕ ಪ್ರಾಧ್ಯಾಪಕ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

ಚುರುಮುರಿ



ಒಳ ಸ್ವೆಟರು!

• ಚಂದ್ರಕಾಂತ ವಡ್ಡು

ಸದಸ್ಯರ ಕ್ಷೀಣ ಹಾಜರಾತಿಯಿಂದ ಬೈ-ಟು ಬಳಗದ ಅಡ್ಡಾ, ಚುನಾವಣೆಯಲ್ಲಿ ಸೋತ ಅಭ್ಯರ್ಥಿಯ ಮನೆಯಂತಾಗಿತ್ತು. ಸೈಕ್ಲೋನ್ ಚಳಿಯಲ್ಲಿ ನಡುಗುತ್ತಲೇ ಕೆಲವರು ಆತ್ಮಾವಲೋಕನ ನಡೆಸಿದ್ದರು.

'ಹಿಂದೆ ಕಮ್ಯುನಿಸ್ಟರು ಚೀನಾದಲ್ಲಿ ಮಳೆಯಾದರೆ ಭಾರತದಲ್ಲಿ ಕೊಡೆ ಹಿಡಿಯುತ್ತಿದ್ದರು. ಈಗ ಚೆನ್ನೈಯಲ್ಲಿ ಚಂಡಮಾರುತ ಬೀಸಿದರೆ ಕರ್ನಾಟಕದಲ್ಲಿ ಸ್ವೆಟರ್ ಧರಿಸುವಂತಾಗಿದೆ'.

'ಇದನ್ನೇ ನೆಪ ಮಾಡಿಕೊಂಡು ವಾಕಿಂಗು, ಟಾಕಿಂಗು ತಪ್ಪಿಸಿದರೆ ಹೇಗೆ? ಬೆಳಗ್ಗೆ ಹೊರ ಸ್ವೆಟರು, ಸಂಜೆ ಒಳ ಸ್ವೆಟರು ಧರಿಸಿದರೆ ಆಯ್ತಪ್ಪ'.

'ಬಣ್ಣಬಣ್ಣದ ಉಣ್ಣೇ ಸ್ವೆಟರು ಗೊತ್ತು, ಇದ್ಯಾವುದು ಒಳ ಸ್ವೆಟರು?'

'ಇದೇನೂ ಹೊಸ ಮ್ಯಾಟರು ಅಲ್ಲ. ಶಿಗ್ಗಾವಿ, ಚನ್ನಪಟ್ಟಣ ಚುನಾವಣೆಯ ಒಳ ಹೊಡೆತದ ಗುಟುರು ಇದ್ದಂತೆ. ಹೊರಗೆ ಕಾಣಿಸೋದೇ ಇಲ್ಲ, ಒಳಗೇ ಕುಳಿತು ಬೆಚ್ಚನೆಯ ಫಲಿತಾಂಶ ನೀಡುತ್ತದೆ!'

'ಓಹೋ... ನಮ್ಮ ಕಡೆ ಇದಕ್ಕೆ 'ಪೆಗ್ ಸ್ವೆಟರ್' ಅಂತ ಕರೀತಾರೆ. ಇದು ಹೊನ್ನಾಳಿ ಹೊಡೆತ ಇದ್ದಂತೆ. ಹೆಚ್ಚಾದರೆ ಹೊನ್ನಾಳಿ ಹೋರಿ ಥರ ತಿವಿಯುತ್ತದೆ'.

'ಚಳಿ ತರುವ ಬಿರುಗಾಳಿಯಂತೆ ಆಗಾಗ ರಾಜಕಾರಣದಲ್ಲಿ ಬೆವರುಗಾಳಿ ಬೀಸುವುದುಂಟು. ಫೆಂಜಲ್ ಚಂಡಮಾರುತಕ್ಕೆ ಸಾಟಿಯಾಗಿ ಯತ್ನಾಳ್ ಮೊಂಡಮಾರುತ ಆರ್ಭಟಿಸುತ್ತಿಲ್ಲವೇ? ಮೋಡದ ಮಳೆ, ಮುಡಾದ ಗಾಳಿ ನಿಂತರೂ ಯತ್ನಾಳ್ ಮರದ ಹನಿ ನಿಲ್ಲುವ ಲಕ್ಷಣವೇ ಇಲ್ಲ!'

'ಹೌದು, ಈ ಯತ್ನಾಳ್ ಜಿಟಿಜಿಟಿಗೆ ದವಳಗಿರಿ ನಿವಾಸಿಗಳು ಬೆವರು ಸುರಿಸುತ್ತಿದ್ದಾರಂತೆ'.


'ಹಾಸನದಲ್ಲಿ ಅಪ್ಪಳಿಸಲಿದ್ದ 'ಸ್ವಾಭಿಮಾನಿ' ಹೆಸರಿನ ಪ್ರಚಂಡ ಮಾರುತವನ್ನು ದೆಹಲಿ ಹವಾಮಾನ ಇಲಾಖೆಯವರು ತಡೆಹಿಡಿದು 'ಜನಕಲ್ಯಾಣ' ಮಂದಮಾರುತದ ಮುನ್ಸೂಚನೆ ನೀಡಿದ್ದಾರೆ'.

'ಒಂದೊಂದಾಗಿ ಬೀಸುತ್ತಿರುವ ಚಂಡ, ಮೊಂಡ, ಮಂದ, ಪ್ರಚಂಡ ಮಾರುತಗಳ ನೆಪದಲ್ಲಿ ಬೆಳಗಾವಿ ಅಧಿವೇಶನಶಾಲೆಗೆ ಶಾಸಕ ವಿದ್ಯಾರ್ಥಿಗಳ ಗೈರು ತಪ್ಪಿದ್ದಲ್ಲ' ತಿಂಗಳೇಶ ಮಂಗಳ ಹಾಡಿದ.

ದಿನದ ಟ್ವೀಟ್

ಕಾರಂತರ ನೆನಪಿನಲ್ಲಿ...

ಕಡಲ ತೀರದ ಭಾರ್ಗವ ಕೋಟ ಶಿವರಾಮ ಕಾರಂತರನ್ನು ಕನ್ನಡಿಗರು ಮರೆಯೋದು ಹೇಗೆ ಹೇಳಿ... ಅವರ ಹುಟ್ಟೂರಲ್ಲಿ, ಅವರ ನೆನಪಿನಲ್ಲಿ ಥೀಮ್ ಪಾರ್ಕ್ ಕಟ್ಟಲಾಗಿದೆ. ಅದನ್ನೊಮ್ಮೆ ನೋಡಿ ಕಣ್ತುಂಬಿಕೊಳ್ಳಿ.



ರೋಹಿತ್ ಆರ್.

ಕಿಡಿನುಡಿ

ಬೆಂಗಳೂರಿನ ಕಸದ ಗಾಡಿಗಳ ಚಾಲಕರು ಮತ್ತು ಕ್ಲೀನರ್‌ಗಳಿಗೆ ಸರ್ಕಾರದ ಜೊತೆ ತಕರಾರಿಲ್ಲ, ಅವರಿಗೆ ಸಮಸ್ಯೆ ಇರುವುದು ತಮ್ಮ ವಾಹನಗಳ ಮಾಲೀಕರ ಜೊತೆ. ಕಸದ ಲಾರಿಗಳು ಮತ್ತು ವಾಹನಗಳ ಮಾಲೀಕರು ಇಲ್ಲಿ ದೊಡ್ಡ ದಾದಾಗಳಂತೆ ಆಗಿದ್ದಾರೆ (ಮಾಜಿ ಕಾರ್ಪೊರೇಟರ್‌ಗಳ ಕುಟುಂಬದವರು ಮತ್ತು ಅವರ ಸ್ನೇಹಿತರು). ಇವರು, ಇದೇ ರೀತಿ ಇತರರಿಗೆ ಗುತ್ತಿಗೆ ಪಡೆಯಲು ಅವಕಾಶ ಮಾಡಿಕೊಡುವುದಿಲ್ಲ.



ಲಕ್ಷ್ಮಣ್

25 ವರ್ಷಗಳ ಹಿಂದೆ

ಶನಿವಾರ, 4-12-1999

• **ಕರ್ನಾಟಕದ ಒತ್ತಡಕ್ಕೆ ಮಣಿಯದಿರಲು ಆಗ್ರಹ**

ನವದೆಹಲಿ, ಡಿ. 3– ಆಲಮಟ್ಟಿ ಅಣೆಕಟ್ಟು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡುವವರೆಗೆ ಕರ್ನಾಟಕದ ಒತ್ತಾಯಕ್ಕೆ ಮಣಿದು ಯಾವುದೇ ನಿರ್ಧಾರ ಕೈಗೊಳ್ಳಬಾರದು ಎಂದು ಆಂಧ್ರ ಪ್ರದೇಶದ ಸರ್ವ ಪಕ್ಷಗಳ ನಿಯೋಗ ಇಂದು ಪ್ರಧಾನಿ ಅವರನ್ನು ಒತ್ತಾಯಿಸಿತು.

ಸಂಸತ್ ಭವನದ ಸಭಾಂಗಣವೊಂದರಲ್ಲಿ ಆಂಧ್ರ ಪ್ರದೇಶದ ನಿಯೋಗದ ಭೇಟಿಯನ್ನು ಮುಗಿಸಿ ಹೊರಬಂದ ಪ್ರಧಾನಿ ವಾಜಪೇಯಿ ಈ ಪ್ರಕರಣದ ಬಗೆಗೆ ವರದಿಗಾರರ ಜತೆ ಮಾತನಾಡಲು ನಿರಾಕರಿಸಿದರು. ಆದರೆ ಕೇಂದ್ರವು ಕೃಷ್ಣಾ ಕಣಿವೆಯ ಯಾವುದೇ ರಾಜ್ಯದ ಪಕ್ಷಪಾತಿಯಾಗುವುದಿಲ್ಲ ಎಂದು ಚುಟುಕಾಗಿ ಉತ್ತರಿಸಿದರು.

ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು, ಆಲಮಟ್ಟಿ ಅಣೆಕಟ್ಟು ಎತ್ತರದ ಪ್ರಕರಣ ಈಗ ನ್ಯಾಯಾಲಯದ ಮುಂದೆ ಇರುವುದರಿಂದ, ಈ ವಿಷಯದಲ್ಲಿ ಕೇಂದ್ರ ಯಾವುದೇ ತೀರ್ಮಾನ ಕೈಗೊಳ್ಳಬಾರದು ಎಂದು ತಾವು ಪ್ರಧಾನಿಯವರನ್ನು ಒತ್ತಾಯಿಸಿದ್ದಾಗಿ ತಿಳಿಸಿದರು.

• **ಚಂದ್ರಬಾಬು ಕೈಯಲ್ಲಿ ಕೇಂದ್ರ ಸರ್ಕಾರದ ಕೀಲಿ– ದೇವೇಗೌಡ ಟೀಕೆ**

ರಾಯಚೂರು, ಡಿ. 3– ಅಧಿಕಾರ ಉಳಿಸಿಕೊಳ್ಳಲು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಆಣತಿಯಂತೆ ನಡೆದುಕೊಳ್ಳುತ್ತಿರುವ ಕೇಂದ್ರ ಸರ್ಕಾರವು ಕರ್ನಾಟಕದ ಹಿತಾಸಕ್ತಿಯನ್ನು ಬಲಿ ಕೊಡುತ್ತಿದೆ ಎಂದು ಮಾಜಿ ಪ್ರಧಾನಿ ದೇವೇಗೌಡ ಅವರು ಇಂದು ಇಲ್ಲಿ ಬಲವಾಗಿ ಟೀಕಿಸಿದರು.

ಪಕ್ಷದ ಸಭೆಯಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಬಂದ ಅವರು ವರದಿಗಾರರೊಂದಿಗೆ ಮಾತನಾಡಿ, 29 ಸಂಸತ್ ಸದಸ್ಯರನ್ನು ಹೊಂದಿರುವ ತೆಲುಗುದೇಶಂ ಮುಖಂಡ ಚಂದ್ರಬಾಬು ನಾಯ್ಡು ಅವರು ಕೇಂದ್ರ ಸರ್ಕಾರದ ಕೀಲಿಕೈ ಹೊಂದಿದ್ದಾರೆ. ಅವರ ಬಳಿಯೇ ಕೇಂದ್ರದ 'ರಿಮೋಟ್ ಕಂಟ್ರೋಲ್' ಇರುವುದು ಎಂದು ಹೇಳಿದರು.

50 ವರ್ಷಗಳ ಹಿಂದೆ

ಬುಧವಾರ, 4-12-1974

• **ಹಣ ಕೊಡದ ಸರ್ಕಾರದ ವಿರುದ್ಧ ಕಂಟ್ರಾಕ್ಟರುಗಳ ಧರಣಿ**

ಬೆಂಗಳೂರು, ಡಿ. 3– ಅಪರೂಪದ ಧರಣಿ, ಕೆಲಸಗಾರರಿಂದಲ್ಲ ಕಂಟ್ರಾಕ್ಟರುಗಳಿಂದ. ಮಾಡಿದ ಕೆಲಸಕ್ಕೆ ಸರ್ಕಾರ ಹಣ ಕೊಟ್ಟಿಲ್ಲ ಅನ್ನುವುದು ಕಂಟ್ರಾಕ್ಟರುಗಳ ದೂರು. ಕೊಡಲು ಹಣವಿಲ್ಲ ಅನ್ನುವುದು ಸರ್ಕಾರದ ಉತ್ತರ.

ನಗರದ ಆನಂದರಾವ್ ಸರ್ಕಲ್ ಬಳಿಯ ಮುಖ್ಯ ಎಂಜಿನಿಯರ್ ಕಾರ್ಯಾಲಯದ ಮುಂದೆ ಸುಮಾರು ಹದಿನೈದು ಮಂದಿ ಮಂಗಳವಾರ ಧರಣಿ ನಡೆಸಿದರು.

ತಾವು ಮಾಡಿದ ಕಾಮಗಾರಿಗಳಿಗಾಗಿ ಮೂರು– ನಾಲ್ಕು ತಿಂಗಳುಗಳಿಂದ ಹಣ ಕೊಟ್ಟಿಲ್ಲ, ಮನವಿಗಳೆಲ್ಲಾ ವಿಫಲವಾದವೆಂದು ಕಂಟ್ರಾಕ್ಟರುಗಳು ನೆಲ ಊರಿ ಕೂತರು. ತಮ್ಮ ಸಮಸ್ಯೆಯ ತೀವ್ರತೆಯತ್ತ ಸರ್ಕಾರದ, ಸಾರ್ವಜನಿಕರ ಗಮನ ಸೆಳೆಯುವುದು ಧರಣಿಯ ಉದ್ದೇಶ. ಇವರೆಲ್ಲಾ ಮೂರು ಮತ್ತು ನಾಲ್ಕನೇ ದರ್ಜೆ ಕಂಟ್ರಾಕ್ಟರುಗಳು.

• **ಸಭೆಯಲ್ಲೇ ಸತ್ಯಾಗ್ರಹ ಮೊರಾರ್ಜಿ ಬೆದರಿಕೆ**

ನವದೆಹಲಿ, ಡಿ. 3– ಆಮದು ಲೈಸೆನ್ಸ್ ಹಗರಣ ಕುರಿತ ಸಿಬಿಐ ವರದಿಯನ್ನು ಸಭೆಯ ಮುಂದೆ ಸರ್ಕಾರ ಮಂಡಿಸದಿದ್ದರೆ, ತಾವು ಲೋಕಸಭೆಯ ಒಳಗಡೆ ಸತ್ಯಾಗ್ರಹ ಹೂಡುವುದಾಗಿ ಮೊರಾರ್ಜಿ ದೇಸಾಯಿ ಅವರು ಇಂದು ಬೆದರಿಕೆ ಹಾಕಿದರು.

ಸಂಗತ

ತುರ್ತು ಸ್ಪಂದನ: ವ್ಯಾಖ್ಯಾನ ಬದಲಾಗಲಿ

ಅನಾಹುತಗಳಾದಾಗ ಮಾತ್ರ ತುರ್ತಾಗಿ ಸ್ಪಂದಿಸಬೇಕು ಎಂಬ ಭಾವನೆಯಿಂದ ಪೊಲೀಸರು ಹೊರಬಂದು ಮುಂಜಾಗ್ರತಾ ಕ್ರಮಗಳಿಗೆ ಆದ್ಯತೆ ನೀಡಬೇಕಿದೆ

• ಚನ್ನು ಹಿರೇಮಠ

ತುರ್ತು ನೆರವಿನ ಅಗತ್ಯ ಇರುವವರಿಗಾಗಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ತುರ್ತು ಸ್ಪಂದನ ಬೆಂಬಲ ವ್ಯವಸ್ಥೆ'ಯಡಿ (ಇಆರ್‌ಎಸ್‌ಎಸ್- 112) ನಾಗರಿಕರು ಕರೆ ಮಾಡಿದ ಕೆಲವೇ ಸಮಯದಲ್ಲಿ ಪೊಲೀಸರು ಧಾವಿಸಿ ನೆರವು ನೀಡಿದ ಹಲವಾರು ನಿದರ್ಶನಗಳಿವೆ. ಆದರೆ, ಈ ವ್ಯವಸ್ಥೆಯಲ್ಲಿ ಕೆಲವು ನ್ಯೂನತೆಗಳಿವೆ. ಅವುಗಳನ್ನು ನಿವಾರಿಸಿದರೆ ಇನ್ನೂ ಪರಿಣಾಮಕಾರಿಯಾಗಿ ಅದು ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಲು ಸಾಧ್ಯವಾಗುತ್ತದೆ.

ಇತ್ತೀಚೆಗೆ ಹುಬ್ಬಳ್ಳಿಯಿಂದ ಬೆಳಗಾವಿಗೆ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ತೆರಳುತ್ತಿದ್ದಾಗ, ಲಾರಿ ಚಾಲಕನೊಬ್ಬ ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತ, ಅತ್ಯಂತ ವೇಗವಾಗಿ ಮತ್ತು ಅಪಾಯಕಾರಿಯಾಗಿ ವಾಹನ ಚಲಾಯಿಸುತ್ತಿದ್ದ. ಏನಾದರೂ ಅನಾಹುತ ಮಾಡಿಯೇ ತೀರುತ್ತಾನೆ ಎನಿಸುವಂತಿತ್ತು ಅವನ ಚಾಲನೆ. ಇದರಿಂದ ಆತಂಕಗೊಂಡು, 112ಕ್ಕೆ ಕರೆ ಮಾಡಿ, ಕ್ರಮ ಕೈಗೊಳ್ಳಲು ಕೋರಿದೆ. ಸುಮಾರು ಅರ್ಧ ಗಂಟೆಯಲ್ಲಿ ಕಿತ್ತೂರು ಠಾಣಾ ವ್ಯಾಪ್ತಿಯ ಸಬ್‌ಇನ್‌ಸ್ಪೆಕ್ಟರ್ ಗಸ್ತುವಾಹನದಲ್ಲಿ ಬಂದು, 'ಏನಾದರೂ ತೊಂದರೆಯಾಗಿದೆಯೇ?' ಎಂದು ಅತ್ಯಂತ ಕಳಕಳಿಯಿಂದ ವಿಚಾರಿಸಿದರು.

ನಾವು ಸುರಕ್ಷಿತವಾಗಿ ಇದ್ದುದನ್ನು ಮನಗಂಡು, ಲಾರಿಯ ಸಂಖ್ಯೆ ಪಡೆದುಕೊಂಡರು. ಇಂತಹ ಬೇಜವಾಬ್ದಾರಿಯ ಚಾಲಕರಿಂದ ಇಬ್ಬರು ಸಬ್‌ಇನ್‌ಸ್ಪೆಕ್ಟರ್‌ಗಳು ಇದೇ ಹೆದ್ದಾರಿಯಲ್ಲಿ ಜೀವ ತೆತ್ತು, ಮುಖ್ಯ ಕಾನ್‌ಸ್ಟೆಬಲ್ ಕಣ್ಣು ಕಳೆದುಕೊಂಡಿದ್ದಾಗಿ ನೋವು ತೋಡಿಕೊಂಡರು. 'ನಿಮ್ಮಂತಹ ನಾಗರಿಕರು ನಮಗೆ ಮಾಹಿತಿ ನೀಡುವುದರಿಂದ ಎಷ್ಟೋ ಅವಘಡಗಳನ್ನು ತಪ್ಪಿಸಲು ನಮಗೆ ನೆರವಾಗುತ್ತದೆ' ಎಂದು ಶ್ಲಾಘಿಸಿದರು. ನಮ್ಮದೊಂದು ಭಾವಚಿತ್ರ ತೆಗೆದುಕೊಂಡು, 'ನೀವಿನ್ನು ಹೊರಡಬಹುದು. ನಾವು ಲಾರಿ ಚಾಲಕನನ್ನು ವಶಕ್ಕೆ ಪಡೆದು ಕ್ರಮ ಜರುಗಿಸುತ್ತೇವೆ' ಎಂದರು. 'ಲಾರಿ ಅದಾಗಲೇ ಮುಂದೆ ಸಾಗಿಹೋಗಿದೆ, ಹೇಗೆ ಕ್ರಮ ಕೈಗೊಳ್ಳಲು ಸಾಧ್ಯ' ಎಂದಾಗ, 'ನಮ್ಮ ಗಡಿ ಇಲ್ಲಿಗೇ ಮುಕ್ತಾಯವಾಗುತ್ತದೆ. ಮುಂದಿನ ಠಾಣಾಧಿಕಾರಿಗೆ ಮಾಹಿತಿ ಹೋಗಿದೆ. ನೀವೇನೂ ಯೋಚಿಸಬೇಡಿ' ಎಂದು ನಮ್ಮನ್ನು ಬೀಳ್ಕೊಟ್ಟರು.

ನಾವು ಅಷ್ಟಕ್ಕೇ ಸುಮ್ಮನಾಗದೆ, ಏನು ಕ್ರಮ ಕೈಗೊಳ್ಳಲಾಗುತ್ತದೆ ಎನ್ನುವುದನ್ನು ಗಮನಿಸಲು ಲಾರಿಯ ಬೆಂಬತ್ತಿದೆವು. ಮುಗುಟಖಾನ ಹುಬ್ಬಳ್ಳಿಯಲ್ಲಿ 112ರ ಒಂದು ಗಸ್ತುವಾಹನ ಇತ್ತು. ಅಲ್ಲಿದ್ದವರು ನಮ್ಮ ದೂರಿನ ಬಗ್ಗೆ ಏನೂ ಅರಿಯದವರಂತೆ ಇದ್ದರು. ನಂತರ ಬೆಳಗಾವಿ ಹೊರವಲಯದ ಕಾಕತಿಯಲ್ಲಿ ನಿಂತಿದ್ದ ಮತ್ತೊಂದು ಗಸ್ತುವಾಹನದವರು ತಮಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರು. ಆಗ ನಾವು ಕಿತ್ತೂರಿನ ಗಸ್ತುವಾಹನದ ಸಿಬ್ಬಂದಿಗೆ ಕರೆ ಮಾಡಿದ ನಂತರವಷ್ಟೇ ಅವರು ಇಲ್ಲಿನವರಿಗೆ ಲಾರಿಯ ಬಗ್ಗೆ ಮಾಹಿತಿ ನೀಡಿದ್ದು! ನಾವು ನಮ್ಮ ಅಮೂಲ್ಯವಾದ ಸಮಯ ವ್ಯಯಿಸಿ, ಕಿತ್ತೂರಿನಿಂದ ಸುಮಾರು 45 ಮೈಲಿ ದೂರದ ಹತ್ತರಗಿ ಸುಂಕ ವಸೂಲಾತಿ ಕೇಂದ್ರದವರೆಗೂ ಹಿಂಬಾಲಿಸಿದ್ದೆವು. ಆದರೆ ಪೊಲೀಸರು ದೂರುದಾರರಾದ ನಮ್ಮ ಭಾವಚಿತ್ರ ತೆಗೆದುಕೊಂಡು, ಅಲ್ಲಿಗೆ ಸಮಸ್ಯೆ ಪರಿಹಾರವಾಯಿತು ಎಂಬಂತೆ ಪ್ರಕರಣ ಕೈಬಿಟ್ಟಿದ್ದರು!

ಲಾರಿ ಚಾಲಕ ಮದ್ಯಪಾನ ಮಾಡಿ ವಾಹನ ಚಲಾಯಿಸುತ್ತಿದ್ದಾನೆಯೇ, ಚಾಲನಾ ಪರವಾನಗಿ ಹೊಂದಿದ್ದಾನೆಯೇ ಎಂಬಂತಹ ಅಂಶಗಳ ಬಗ್ಗೆ ಪೊಲೀಸರು ಆತನನ್ನು ವಿಚಾರಿಸಬಹುದಿತ್ತು. ಕನಿಷ್ಠಪಕ್ಷ ನೂರು ರೂಪಾಯಿಯಾದರೂ ದಂಡ ವಿಧಿಸಿದ್ದಿದ್ದರೆ ನಮ್ಮ ಶ್ರಮಕ್ಕೆ ಬೆಲೆ ಬರುತ್ತಿತ್ತು. ಮೇಲಾಗಿ, ಚಾಲಕ ಮತ್ತೆ ಇಂತಹ ತಪ್ಪುಗಳಿಗೆ ಅವಕಾಶ ನೀಡಲು ಸಾಧ್ಯ ಆಗುತ್ತಿರಲಿಲ್ಲ. ದಂಡಿಸದಿದ್ದರೂ ಕನಿಷ್ಠ ನಿಯಮ ಪಾಲನೆಯ ಬಗ್ಗೆ ಆತನಲ್ಲಿ ಅರಿವು ಮೂಡಿಸಬಹುದೆಂಬ ಆಶಯ ನಮ್ಮದಾಗಿತ್ತು. ಯಾವುದೇ ಒಂದು ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯದಿದ್ದರೆ ಇಷ್ಟೆಲ್ಲ ವ್ಯವಸ್ಥೆಯ ಫಲಶ್ರುತಿ ಪರಿಣಾಮಕಾರಿ ಆಗಿರುವುದಿಲ್ಲ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.



ಜೊತೆಗಿದ್ದ ನನ್ನ ಮಡದಿ, ಮಕ್ಕಳು 'ನೀವು ಸುಮ್ಮನೆ ಗುಡ್ಡಕ್ಕೆ ಕಲ್ಲು ಹೊರುತ್ತಿದ್ದೀರಿ. ಯಾವ ಪೊಲೀಸರೂ ಏನೂ ಮಾಡುವುದಿಲ್ಲ. ಕಿವಿಯ ಮೇಲೆ ಹೂ ಇಟ್ಟು ಕಳಿಸಿದರು. ಇನ್ನೂ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಂದು ನೀವು ಲಾರಿಯ ಹಿಂದೆ ಹಿಂದೆ ಹೋಗುತ್ತಿದ್ದೀರಿ. ಹೀಗಾದರೆ ನಾವು ಊರು ಮುಟ್ಟುವುದು ಯಾವಾಗ?' ಎಂದು ಕಿಚಾಯಿಸಿದರು!

ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗುವ ಎಲ್ಲ ವಾಹನಗಳ ತಪಾಸಣೆ ಅಸಾಧ್ಯ. ಆದರೆ ನಿರ್ದಿಷ್ಟ ಮಾಹಿತಿ ಅಥವಾ ದೂರುಗಳಿದ್ದಾಗಲೂ ಸೂಕ್ತ ಕ್ರಮ ಕೈಗೊಳ್ಳದಿದ್ದರೆ, ನಂತರದಲ್ಲಿ ನಡೆಸುವ ವಿಚಾರಣೆ, ದಂಡ, ಶಿಕ್ಷೆಯಂತಹವು ನಿಷ್ಪ್ರಯೋಜಕ.

ಏನಾದರೂ ಅನಾಹುತವಾದಾಗ ಮಾತ್ರ ತುರ್ತಾಗಿ ಸ್ಪಂದಿಸಬೇಕು ಎಂಬ ಭಾವನೆಯಿಂದ ಪೊಲೀಸರು ಹೊರಬರಬೇಕಿದೆ. ಮುಂಜಾಗ್ರತಾ ಕ್ರಮಗಳು ಬಹಳಷ್ಟು ದುರಂತಗಳನ್ನು ತಪ್ಪಿಸಬಲ್ಲವು. ವೇಗದ, ಅಜಾಗರೂಕ ವಾಹನ ಚಾಲನೆಯಿಂದಲೇ ಬಹಳಷ್ಟು ಅಮಾಯಕರು ಪ್ರಾಣ ತೆರುತ್ತಿರುವ ಇಂದಿನ ದಿನಗಳಲ್ಲಿ, ಬರೀ ಸಮಯಾನುಸಾರ ಸ್ಪಂದಿಸುವುದಲ್ಲದೆ, ಸೂಕ್ತ ಕ್ರಮಕ್ಕೂ ನಿಶ್ಚಿತ ವ್ಯವಸ್ಥೆಯನ್ನು ಮಾಡಬೇಕು. ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ವೇಗ ನಿಯಂತ್ರಣ, ಸರ್ವೇಕ್ಷಣೆ ಪರಿಣಾಮಕಾರಿಯಾಗಿ ನಡೆದು, ಅಪಘಾತದಿಂದ ಸಂಭವಿಸುತ್ತಿದ್ದ ಸಾವು, ನೋವಿನ ಪ್ರಮಾಣ ಕಡಿಮೆಯಾಗಿರುವುದೇ ಇದಕ್ಕೆ ನಿದರ್ಶನ. ಈ ದಿಸೆಯಲ್ಲಿ ಅಧಿಕಾರಿಗಳು ತರಬೇತಿ, ಯೋಜನೆ ರೂಪಿಸಿ ತುರ್ತು ಸ್ಪಂದನ ಬೆಂಬಲ ವ್ಯವಸ್ಥೆಗೆ ಬಲ ತುಂಬಲಿ.

ವಾಚಕರ ವಾಣಿ

ಪಾಶ್ ಸಮಿತಿ: ಹೀಗೆಲ್ಲ ಆಗಬಹುದು...!

ಚಲನಚಿತ್ರ ನಿರ್ದೇಶಕಿ, ನಿರ್ಮಾಪಕಿ ಕವಿತಾ ಲಂಕೇಶ್ ಅವರ ಅಧ್ಯಕ್ಷತೆಯಲ್ಲಿ ಲೈಂಗಿಕ ದೌರ್ಜನ್ಯ ತಡೆ ಸಮಿತಿ (ಪಾಶ್) ರಚಿಸಿದ್ದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಮಂಡಳಿಯ ಚುನಾವಣೆಯ ಕಾರಣ ನೀಡಿ ಸಮಿತಿ ರಚನೆಯನ್ನು ತಡೆಹಿಡಿದಿದೆ ಎಂದು ವರದಿಯಾಗಿದೆ (ಪ್ರ.ವಾ., ಡಿ. 3). ಈ ಸಮಿತಿಯ ರಚನೆಗೆ ಕನ್ನಡ ಚಿತ್ರರಂಗದ ಬಹುತೇಕರು ಆರಂಭದಿಂದಲೂ ವಿರೋಧ ವ್ಯಕ್ತಪಡಿಸಿದ್ದರು. ಅದರಿಂದ ಬೆಳ್ಳಿಪರದೆಗೆ ಕಲ್ಲು ಬೀರಿದಂತೆ ಆಗುತ್ತದೆ ಎನ್ನುವ ಕಾಳಜಿ ಅವರಿಗೆ ಇದ್ದಿರಬಹುದು!

'ಪಾಶ್ ಸಮಿತಿ ರಚನೆಗೆ ಹಿಂದೆ ವಿರೋಧ ವ್ಯಕ್ತಪಡಿಸಿದ್ದವರೇ ಇಂದು ತಮ್ಮನ್ನು ಸಮಿತಿಯ ಸದಸ್ಯರನ್ನಾಗಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಹೀಗಾದರೆ ಮುಂದೆ ಏನಾಗಬಹುದು ಎಂದು ಯೋಚಿಸಿ' ಎಂದಿದ್ದಾರೆ ಕವಿತಾ ಲಂಕೇಶ್. ಕುರಿ ಕಾಯಲು ತೋಳ ನೇಮಿಸಿದಂತೆ, ಕೋಳಿ ಕೇಳಿ ಮೆಣಸು ಅರೆದಂತೆ, ಬೇಲಿಯೇ ಎದ್ದು ಹೊಲ ಮೇಯ್ದಂತೆ, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡಂತೆ... ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಎಲ್ಲವೂ ಆಗಬಹುದು!

ಮುಳ್ಳೂರು ಪ್ರಕಾಶ್, ಮೈಸೂರು

ಮಹಾರಾಷ್ಟ್ರ ಫಲಿತಾಂಶ: ಸೈದ್ಧಾಂತಿಕ ಭೇದದ ಫಲ?

ಮಹಾರಾಷ್ಟ್ರದ ಚುನಾವಣಾ ಫಲಿತಾಂಶ ಕುರಿತ ತಮ್ಮ ಲೇಖನದಲ್ಲಿ (ಪ್ರ.ವಾ., ಡಿ. 3) ಯೋಗೇಂದ್ರ ಯಾದವ್, 'ಇವಿಎಂಗಳನ್ನು ದೂರುವುದು ಈಗ ದುಡುಕಿನ ನಿಲುವಾದರೂ ಅವುಗಳ ವಿಶ್ವಾಸಾರ್ಹತೆ ಬಗ್ಗೆ ಪ್ರಶ್ನೆಗಳು ಏಳುವುದನ್ನು ತಡೆಯುವುದಂತೂ ಅಸಾಧ್ಯ' ಎಂದಿದ್ದಾರೆ. ಆದರೆ ಜಾರ್ಖಂಡ್ ವಿಧಾನಸಭಾ ಚುನಾವಣೆ, ವಯನಾಡ್ ಹಾಗೂ ಕರ್ನಾಟಕದ ಉಪಚುನಾವಣೆಗಳ ಫಲಿತಾಂಶವನ್ನು ಅವರು ಏಕೆ ಪರಿಗಣಿಸುವುದಿಲ್ಲ? ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಹಾಗೂ ಶಿವಸೇನಾದ ಉದ್ಧವ್ ಠಾಕ್ರೆ ಅವರ ನಡುವಿನ ಮೈತ್ರಿಯು ಬರೀ ಅಧಿಕಾರದ ಸಲುವಾಗಿ ಇತ್ತು ಎನ್ನುವುದನ್ನು ಏಕೆ ಹೇಳುವುದಿಲ್ಲ? ಇವೆರಡೂ ಪಕ್ಷಗಳ ನಡುವೆ ಇರುವ ಸೈದ್ಧಾಂತಿಕ ಭಿನ್ನತೆ ಎದ್ದುಕಾಣುವಂತಹದ್ದು. ಇದು ಜನರಿಗೆ ಇಷ್ಟವಾಗಿಲ್ಲದೇ ಹೋಗಿರಬಹುದು ಅಲ್ಲವೇ?

ಗುರು ಜಗಳೂರು, ಹರಿಹರ

ಬೇಕಾಗಿದೆ ಸುಸ್ಥಿರ ಜನಬಲ

'ಭಾರತೀಯ ಸಮಾಜ ಉಳಿಯಬೇಕಾದರೆ ಪ್ರತಿ ದಂಪತಿ ಕನಿಷ್ಠ ಮೂವರು ಮಕ್ಕಳನ್ನು ಹೊಂದಬೇಕು' ಎಂಬ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಕರೆಯು ಬರೀ ಒಂದು ಮತ ಸಮುದಾಯದವರನ್ನು ದೃಷ್ಟಿಯಲ್ಲಿ ಇಟ್ಟುಕೊಂಡಿರುವುದನ್ನು ಚಾವಲ್ಮನೆ ಸುರೇಶ್ ನಾಯಕ್ ಸರಿಯಾಗಿ ಗುರುತಿಸಿದ್ದಾರೆ (ವಾ.ವಾ., ಡಿ. 3). ಪ್ರಧಾನ ಮಂತ್ರಿಯವರ ಆರ್ಥಿಕ ಸಲಹಾ ಮಂಡಳಿ ಸಿದ್ಧಪಡಿಸಿದ ಭಾರತದ ವಿವಿಧ ರಿಲಿಜನ್‌ಗಳ ಫಲವಂತಿಕೆ ದರದ ಬಗೆಗಿನ ವರದಿಯಲ್ಲೂ ಇದೇ ವಿಚಾರ ಪ್ರಸ್ತಾಪಿಸಲಾಗಿದ್ದು, ಆ ವರದಿಯನ್ನು ಅಲ್ಪಸಂಖ್ಯಾತರ ವಿರೋಧಿ ಎಂದು ರಾಜಕೀಯವಾಗಿ ವಿಶ್ಲೇಷಿಸಲಾಗಿದೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರೂ ತಮ್ಮ ರಾಜ್ಯದ ಮಹಿಳೆಯರು ಹೆಚ್ಚು ಮಕ್ಕಳನ್ನು ಹಡೆಯಬೇಕು ಎಂದು ಇತ್ತೀಚೆಗೆ ಕರೆ ಕೊಟ್ಟಿದ್ದರು. ಇವೆಲ್ಲವೂ ರಾಜಕೀಯಪ್ರೇರಿತ.

ಆದರೆ, 'ಒಂದು ಮಗುವಿಗೇ ಗುಣಮಟ್ಟದ ಶಿಕ್ಷಣ, ಆರೋಗ್ಯ ಸೌಕರ್ಯ ಒದಗಿಸಲು ಜನ ಹೆಣಗಾಡುತ್ತಿದ್ದಾರೆ... ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ... ಆದ್ದರಿಂದಲೇ ಸರ್ಕಾರವು ಕುಟುಂಬ ಯೋಜನೆ ಜಾರಿಗೆ ತಂದು ಹಲವಾರು ವರ್ಷಗಳೇ ಸಂದುಹೋಗಿವೆ' ಎಂದು ಪತ್ರದಲ್ಲಿ ಹೇಳಿರುವುದು ಹಳೆಯ ಮತ್ತು ಸವೆದುಹೋದ ಮಾಹಿತಿ. ಜಗತ್ತಿನಾದ್ಯಂತ ಅನೇಕ ದೇಶಗಳಲ್ಲಿ ಇಂದು, ಫಲವಂತಿಕೆ ದರದಲ್ಲಿ ಆಗಿರುವ ಕುಸಿತದಿಂದ ಉಂಟಾಗಿರುವ ಆರ್ಥಿಕ ಮತ್ತು ಸಾಮಾಜಿಕ ಬಿಕ್ಕಟ್ಟುಗಳಿಂದ ಚೇತರಿಸಿಕೊಳ್ಳಲಾಗದೇ ಒದ್ದಾಡುತ್ತಿರುವ ಸಮುದಾಯಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಭಾರತದಲ್ಲಿ, ಅದರಲ್ಲೂ ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಫಲವಂತಿಕೆ ದರವು ಮರುಪೂರಣ ದರಕ್ಕಿಂತ (ರಿಪ್ಲೇಸ್‌ಮೆಂಟ್ ಫರ್ಟಿಲಿಟಿ ರೇಟ್) ಕಡಿಮೆಯಾಗಿದೆ.

ಇಂತಹ ಬದಲಾವಣೆಯಿಂದ ಆಗುವ ದೂರಗಾಮಿ ಪರಿಣಾಮಗಳನ್ನು ಅರ್ಥಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಅನೇಕ ದೇಶಗಳಲ್ಲಿ ಚರ್ಚಿಸುತ್ತಿದ್ದಾರೆ. ಮಕ್ಕಳೆಂದರೆ ಶಾಲೆಗೆ ಕಳಿಸಲು, ಪೌಷ್ಟಿಕ ಆಹಾರ ಕೊಡಲು, ಆರೋಗ್ಯ ಕೊಡಲು ಹುಟ್ಟಿಸುವ ಸರಕಲ್ಲ. ಮನುಷ್ಯನ ಜೀವಿತಾವಧಿ ಹಿಗ್ಗುತ್ತಿದೆ. ಸಾಯುವತನಕ ಬಲಹೀನರು ಗೌರವದಿಂದ ಬದುಕಲು ಸಹಾಯ ಮಾಡಬಲ್ಲ, ಮನುಷ್ಯ ಸತ್ತ ಮೇಲೆ ನಾಡನ್ನು ಕಾಯಲು ಇರುವ ವ್ಯವಸ್ಥೆಯನ್ನು ಉತ್ತಮವಾಗಿ ನಡೆಸುವಂಥ ಹೊಸ ನೀರಿನ ಜನಬಲ ಬೇಕು. ಆ ಜನಬಲ ಸುಸ್ಥಿರವಾಗಿರಬೇಕು. ಅದಕ್ಕೆ ಈಗ ಇರುವ ಫಲವಂತಿಕೆ ದರ ಪೂರಕವಾಗಿಲ್ಲ ಎನ್ನುವ ದಿಟವನ್ನು ಒಪ್ಪಿಕೊಂಡು, ಫಲವಂತಿಕೆ ದರವು ಸುಸ್ಥಿರ ಮಟ್ಟಕ್ಕೇರಲು ಯಾವ ಕ್ರಮ ಬೇಕು ಎನ್ನುವುದೂ ಚರ್ಚೆಯಾಗಲಿ. ಯಾರು ಯಾಕೆ ಯಾವ ಕರೆಯನ್ನು ಯಾರಿಗೆ ಕೊಟ್ಟರು ಎನ್ನುವುದು ನಿಜ ಸಮಸ್ಯೆಯನ್ನು ಮರೆಮಾಚುವ ಎಡಪಂಥ, ಬಲಪಂಥಗಳ ನಡುವಿನ ತಿಕ್ಕಾಟ ಮಾತ್ರವೇ ಆಗಿದೆ.

ಶ್ರೀಕಂಠ, ಬೆಂಗಳೂರು

ಒತ್ತಡದ ಬದುಕು: ನಿರ್ವಹಣೆ ಕಲಿಯಿರಿ

ಶಿಕ್ಷಕ ವೃತ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಒತ್ತಡ ಹೆಚ್ಚೆಂದೂ, ಈ ಒತ್ತಡದ ಕಾರಣದಿಂದ ಹೃದಯಾಘಾತದಂತಹ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿವೆಯೆಂದೂ ಸದಾಶಿವ್ ಸೊರಟೂರು ಆತಂಕ ವ್ಯಕ್ತಪಡಿಸಿದ್ದಾರೆ (ಸಂಗತ, ಡಿ. 3). ಬಹುಶಃ ಒತ್ತಡರಹಿತ ವೃತ್ತಿಗಳು ಯಾವುವೂ ಇಲ್ಲ. ಅದರಲ್ಲೂ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುವವರಿಗೆ ಕೆಲಸದ ಒತ್ತಡ ಅಷ್ಟೇ ಅಲ್ಲ, ಸಮಯಕ್ಕೆ ಸರಿಯಾಗಿ ಊಟವೂ ಇಲ್ಲ, ನಿದ್ದೆಯೂ ಇಲ್ಲ. ಹಾಗಾಗಿ, ಒತ್ತಡ ನಿರ್ವಹಣೆ ಮಾಡುವುದು ಹೇಗೆ ಎಂಬುದನ್ನು ತಿಳಿದುಕೊಂಡು, ಅದರಂತೆ ಕಾರ್ಯನಿರ್ವಹಿಸುವುದನ್ನು ಕಲಿಯಬೇಕು. ಅದಕ್ಕಾಗಿಯೇ ಸರ್ಕಾರಿ ನೌಕರರಿಗೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಈ ಕುರಿತು ಆಗಾಗ್ಗೆ ತರಬೇತಿ ನೀಡಲಾಗುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಬಹುತೇಕ ಶಿಕ್ಷಕರು ತಾವು ಕೆಲಸ ಮಾಡುವ ಶಾಲೆಯಿರುವ ಊರುಗಳಲ್ಲಿ ವಾಸ ಮಾಡುವುದಿಲ್ಲ. ಅವರು ಪಕ್ಕದ ಪಟ್ಟಣಗಳಲ್ಲಿ ವಾಸ್ತವ್ಯ ಹೂಡುತ್ತಾರೆ. ಇದು ಅವರ ಬಹಳಷ್ಟು ಸಮಸ್ಯೆಗಳಿಗೆ ಕಾರಣವಾಗಿರುತ್ತದೆ. ಇದನ್ನು ಶಿಕ್ಷಕರು ಅರ್ಥ ಮಾಡಿಕೊಂಡು, ಶಾಲೆಗಳು ಇರುವ ಊರುಗಳಲ್ಲಿ ವಾಸ ಮಾಡಲು ಪ್ರಾರಂಭಿಸಿದರೆ, ಕೆಲವು ಸಮಸ್ಯೆಗಳು ಪರಿಹಾರವಾಗುತ್ತವೆ, ತನ್ಮೂಲಕ ಅವರ ಒತ್ತಡವೂ ಕಡಿಮೆಯಾಗುತ್ತದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಷ್ಟ್ರಪತಿ ಆಡಳಿತ ಜಾರಿ ಏಕಿಲ್ಲ?

ಮಹಾರಾಷ್ಟ್ರ

ವಿಧಾನಸಭೆಯ ಅವಧಿ ಮುಗಿದರೂ ರಚನೆಯಾಗದ ಹೊಸ ಸರ್ಕಾರ

ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯಲ್ಲಿ ಅನಿರೀಕ್ಷಿತ ಫಲಿತಾಂಶ ಬಂದು ಮಹಾಯುತಿ ಮೈತ್ರಿಕೂಟ ಸ್ಪಷ್ಟ ಬಹುಮತ ಪಡೆದಿದ್ದರೂ ಸರ್ಕಾರ ರಚನೆ ಸಾಧ್ಯವಾಗಿಲ್ಲ. 14ನೇ ವಿಧಾನಸಭೆಯ ಅವಧಿ ನ.26ಕ್ಕೇ ಮುಗಿದಿದ್ದರೂ ಇನ್ನೂ ಹೊಸ ಸರ್ಕಾರ ರಚನೆಯಾಗದಿರುವುದರಿಂದ ಬಿಕ್ಕಟ್ಟಿನ ಸ್ಥಿತಿ ಸೃಷ್ಟಿಯಾಗಿದ್ದು, ರಾಷ್ಟ್ರಪತಿ ಆಡಳಿತ ಜಾರಿ ಮಾಡಬೇಕು ಎನ್ನುವ ಒತ್ತಾಯ ಕೇಳಿಬರುತ್ತಿದೆ. ವಿಶೇಷ ಅಂದರೆ, ರಾಜ್ಯದಲ್ಲಿ ಈ ಹಿಂದೆ ಇಂಥ ಸಂದರ್ಭದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಾದ ನಿದರ್ಶನಗಳಿವೆ. ಅದೇ ರೀತಿ, ವಿಧಾನಸಭೆಯ ಅವಧಿ ಮುಗಿದ ನಂತರವೂ ರಾಷ್ಟ್ರಪತಿ ಆಳ್ವಿಕೆ ಜಾರಿ ಆಗದೆ ಹೊಸ ಸರ್ಕಾರಗಳು ರಚನೆಯಾಗಿವೆ

ಸಂವಿಧಾನ ಏನು ಹೇಳುತ್ತದೆ?

ಸಂವಿಧಾನದ 356ನೇ ವಿಧಿಯು ರಾಜ್ಯಗಳಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ಕುರಿತಾಗಿ ಪ್ರಸ್ತಾಪಿಸುತ್ತದೆ. 1935ರ ಭಾರತ ಸರ್ಕಾರ ಕಾಯ್ದೆಯ 93ನೇ ಸೆಕ್ಷನ್‌ನಿಂದ ಸ್ಫೂರ್ತಿ ಪಡೆದು ಸಂವಿಧಾನದಲ್ಲಿ ಈ ವಿಧಿಯನ್ನು ಸೇರಿಸಲಾಗಿದೆ. ಅದರ ಪ್ರಕಾರ, ರಾಜ್ಯಗಳಲ್ಲಿ ಸಂವಿಧಾನ ಬಿಕ್ಕಟ್ಟು ಸೃಷ್ಟಿಯಾದ ಸಂದರ್ಭದಲ್ಲಿ ರಾಜ್ಯಪಾಲರು ನೀಡುವ ವರದಿಯ ಆಧಾರದಲ್ಲಿ ಅಥವಾ ರಾಜ್ಯ ಸರ್ಕಾರವು ಸಂವಿಧಾನದ ನಿಯಮಗಳಿಗೆ ಬದ್ಧವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದು ಮನವರಿಕೆಯಾದಲ್ಲಿ ರಾಷ್ಟ್ರಪತಿ ಅವರು ರಾಷ್ಟ್ರಪತಿ ಆಡಳಿತವನ್ನು ಹೇರಬಹುದು.

ಸರ್ಕಾರ ರಚನೆಗೆ ಸಾಧ್ಯವಿರುವ ಎಲ್ಲ ಯತ್ನಗಳೂ ವಿಫಲವಾಗಿ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಯಾದರೆ ಮಾತ್ರ ರಾಜ್ಯಪಾಲರು ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡಬಹುದು.

ರಾಷ್ಟ್ರಪತಿ ಆಡಳಿತ ಹೇರಿದ ನಂತರ ಕೇಂದ್ರ ಸರ್ಕಾರವು ರಾಜ್ಯಪಾಲರ ಮೂಲಕ ರಾಜ್ಯದಲ್ಲಿ ಆಡಳಿತ ನಡೆಸುತ್ತದೆ.

ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ 'ಮಹಾಯುತಿ' ಮೈತ್ರಿಕೂಟ ಪೂರ್ಣ ಬಹುಮತ ಪಡೆದಿದ್ದರೂ ಸರ್ಕಾರ ಇನ್ನೂ ರಚನೆಯಾಗಿಲ್ಲ. ಹೀಗಾಗಿ, ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿ ಮಾಡಬೇಕು ಎಂದು ಶಿವಸೇನಾದ (ಉದ್ಧವ್ ಠಾಕ್ರೆ ಬಣ) ಮುಖಂಡರಾದ ಸಂಜಯ್ ರಾವುತ್, ಆದಿತ್ಯ ಠಾಕ್ರೆ ಸೇರಿದಂತೆ ಹಲವರು ಒತ್ತಾಯಿಸಿದ್ದಾರೆ.

ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯ ಫಲಿತಾಂಶ ಬಂದಿದ್ದು ನವೆಂಬರ್ 23ರಂದು. ಮುಖ್ಯಮಂತ್ರಿ ಆಗಿದ್ದ ಏಕನಾಥ್ ಶಿಂದೆ ನವೆಂಬರ್ 26ಕ್ಕೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. 14ನೇ ವಿಧಾನಸಭೆಯ ಅವಧಿ ನವೆಂಬರ್ 26ಕ್ಕೆ ಅಂತ್ಯವಾಗಿತ್ತು. ಸಾಮಾನ್ಯವಾಗಿ, ವಿಧಾನಸಭೆಯ ಅವಧಿ ಅಂತ್ಯವಾಗುವುದರ ಒಳಗೇ ಹೊಸ ಸರ್ಕಾರ ರಚನೆಯಾಗುತ್ತದೆ. ಶಿಷ್ಟಾಚಾರದ ಪ್ರಕಾರ, ಅಂದೇ ನೂತನ ಮುಖ್ಯಮಂತ್ರಿಯ ಪ್ರಮಾಣ ವಚನ ನಡೆಯಬೇಕಿತ್ತು. ಆದರೆ, ನಿರೀಕ್ಷೆಯಂತೆ ಸರ್ಕಾರ ರಚನೆ ಮಾಡಲು ಮಹಾಯುತಿ ಕೂಟವು ಮುಂದೆ ಬರಲಿಲ್ಲ. ಕಾರಣ, ಮುಖ್ಯಮಂತ್ರಿ ಯಾರಾಗಬೇಕು ಎನ್ನುವ ಬಿಕ್ಕಟ್ಟು.

ಫಲಿತಾಂಶ ಬಂದು ವಾರ ಕಳೆದರೂ ಸರ್ಕಾರ ರಚನೆಯಾಗದಿರುವುದರಿಂದ ರಾಜಕೀಯ ಅಸ್ಥಿರತೆ ತಲೆದೋರಿದ್ದು, ಇದನ್ನೇ ಆಧಾರವಾಗಿಟ್ಟುಕೊಂಡು ರಾಷ್ಟ್ರಪತಿ ಆಡಳಿತ ಹೇರಬೇಕು ಎನ್ನುವುದು ಮಹಾ ವಿಕಾಸ ಆಘಾಡಿ (ಎಂವಿಎ) ಮುಖಂಡರ ವಾದ. ಸದ್ಯಕ್ಕೆ, ಏಕನಾಥ್ ಶಿಂದೆ ಅವರನ್ನೇ ಉಸ್ತುವಾರಿ ಮುಖ್ಯಮಂತ್ರಿ ಆಗಿ ಮುಂದುವರಿಯುವಂತೆ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಸೂಚಿಸಿದ್ದಾರೆ.

1990ರ ನಂತರ ಮಹಾರಾಷ್ಟ್ರದಲ್ಲಿ ಯಾವ ಪಕ್ಷವೂ ಏಕಾಂಗಿಯಾಗಿ ಸರ್ಕಾರ ರಚನೆಗೆ ಅಗತ್ಯವಾದ ಬಹುಮತ ಪಡೆದಿಲ್ಲ. ಮೈತ್ರಿ ಮಾಡಿಕೊಳ್ಳುವುದು ಸರ್ಕಾರ ರಚನೆಗೆ ಅಲ್ಲಿ ಅನಿವಾರ್ಯವಾಗಿದೆ. ಹೀಗೆ ಮೈತ್ರಿ ಅನಿವಾರ್ಯವಾಗಿರುವುದರಿಂದ ಹಲವು ಬಾರಿ ಸಮಸ್ಯೆ ತಲೆದೋರಿ, ವಿಧಾನಸಭೆ ಅವಧಿ ಮುಗಿದರೂ ಹೊಸ ಸರ್ಕಾರಗಳು ರಚನೆಯಾಗದೇ ಬಿಕ್ಕಟ್ಟು ಸೃಷ್ಟಿಯಾಗುತ್ತಿದೆ.

2019ರಲ್ಲಿಯೂ ಇಂಥದ್ದೇ ಸ್ಥಿತಿ ಉದ್ಭವವಾಗಿತ್ತು. ಬಿಜೆಪಿ 105 ಸ್ಥಾನಗಳನ್ನು ಗಳಿಸುವುದರೊಂದಿಗೆ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಶಿವಸೇನಾ (56) ಸ್ಥಾನ ಪಡೆದಿತ್ತು. ಮುಖ್ಯಮಂತ್ರಿ ಯಾರಾಗಬೇಕು ಎನ್ನುವ ವಿಚಾರದಲ್ಲಿ ಒಮ್ಮತ ಮೂಡದೇ ಹಲವು ದಿನ ಅನಿಶ್ಚಿತತೆ ಮುಂದುವರಿದಿತ್ತು. ಕೊನೆಗೆ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿ ಆಡಳಿತ ಜಾರಿಯಾಗಿತ್ತು. ಅಲ್ಪಾವಧಿಯ (11 ದಿನ) ರಾಷ್ಟ್ರಪತಿ ಆಡಳಿತದ ನಂತರ ದಿಢೀರ್ ಬೆಳವಣಿಗೆಯಲ್ಲಿ 2019ರ ನವೆಂಬರ್ 23ರಂದು ದೇವೇಂದ್ರ ಫಡಣವೀಸ್ ಮುಖ್ಯಮಂತ್ರಿ ಆಗಿ, ಎನ್‌ಸಿಪಿಯ ಅಜಿತ್ ಪವಾರ್ ಉಪಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಹೊಸ ಸರ್ಕಾರ ರಚನೆಯಾಗಿತ್ತು. ಆದರೆ, ಕೇವಲ ಐದೇ ದಿನಗಳಲ್ಲಿ ಆ ಸರ್ಕಾರ ಪತನಗೊಂಡಿತು.

ನಂತರ ರಚನೆಯಾಗಿದ್ದು ಎಂವಿಎ ಕೂಟದ ಸರ್ಕಾರ. ಉದ್ಧವ್ ಠಾಕ್ರೆ ಮುಖ್ಯಮಂತ್ರಿ ಆದರು. ಅದರೊಂದಿಗೆ ರಾಜಕೀಯ ಅಸ್ಥಿರತೆ ಕೊನೆಗೊಂಡಿತ್ತು. ಮತ್ತೆ, ಮೇ 2022ರಲ್ಲಿ ಮತ್ತೊಂದು ಬಿಕ್ಕಟ್ಟು ಕಾಣಿಸಿಕೊಂಡಿತು. ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ನಡೆದು ಬಿಜೆಪಿ ತನ್ನ ಸಾಮರ್ಥ್ಯಕ್ಕಿಂತ ಒಂದು ಸ್ಥಾನವನ್ನು ಹೆಚ್ಚುವರಿಯಾಗಿ ಗೆದ್ದುಕೊಂಡಿತ್ತು. ಶಿವಸೇನಾ ಶಾಸಕರಾಗಿದ್ದ ಏಕನಾಥ್ ಶಿಂದೆ ಕೆಲವು ಶಾಸಕರೊಂದಿಗೆ ಪಕ್ಷದ ನಾಯಕತ್ವದ ವಿರುದ್ಧ ಬಂಡೆದ್ದಿದ್ದರು. ಪರಿಣಾಮವಾಗಿ, ಉದ್ಧವ್ ರಾಜೀನಾಮೆ ನೀಡಿ, ಏಕನಾಥ್ ಶಿಂದೆ ಅವರೇ ಮುಖ್ಯಮಂತ್ರಿ ಆಗಿ ಜೂನ್ 30 2022ರಂದು ಪ್ರಮಾನ ವಚನ ಸ್ವೀಕರಿಸಿದರು. ಜುಲೈ 2023ರಲ್ಲಿ ಎನ್‌ಸಿಪಿಯಿಂದ ಹೊರಬಂದ ಅಜಿತ್ ಪವಾರ್, ಶಿಂದೆ ನೇತೃತ್ವದ ಸರ್ಕಾರ ಸೇರುವ ಮೂಲಕ ಉಪಮುಖ್ಯಮಂತ್ರಿ ಆಗಿದ್ದರು.

ಮೂರು ಬಾರಿ ರಾಷ್ಟ್ರಪತಿ ಆಡಳಿತ: ಮಹಾರಾಷ್ಟ್ರದಲ್ಲಿ ರಾಜಕೀಯ ಅಸ್ಥಿರತೆ ತಲೆದೋರುವುದು, ವಿಧಾನಸಭೆಯ ಅವಧಿ ಮುಗಿದ ನಂತರ ಹೊಸ ಸರ್ಕಾರ ರಚನೆಯಾಗುವುದು, ರಾಷ್ಟ್ರಪತಿ ಆಡಳಿತ ಜಾರಿಯಾಗುವುದು ಇದ್ಯಾವುದೂ ಹೊಸದಲ್ಲ. 1960ರಲ್ಲಿ ರಾಜ್ಯ ರಚನೆಯಾದಾಗಿನಿಂದ ಇದುವರೆಗೆ ಮೂರು ಬಾರಿ ರಾಷ್ಟ್ರಪತಿ ಆಡಳಿತ ಹೇರಲಾಗಿದೆ. 1980ರ ಫೆಬ್ರುವರಿ 17ರಂದು ಶರದ್ ಪವಾರ್ ಅವರ ಸರ್ಕಾರ ವಜಾ ಮಾಡಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಲಾಗಿತ್ತು. ಜೂನ್ 9ರವರೆಗೂ ಅದು ಜಾರಿಯಲ್ಲಿತ್ತು. ತುರ್ತು ಪರಿಸ್ಥಿತಿಯ ನಂತರ ಅಧಿಕಾರಕ್ಕೆ ಏರಿದ್ದ ಇಂದಿರಾಗಾಂಧಿ ಕಾಂಗ್ರೆಸ್ಸೇತರ ಸರ್ಕಾರಗಳ ವಿರುದ್ಧ ಮುಯ್ಯಿ ತೀರಿಸಿಕೊಳ್ಳಲು ಶರದ್ ಪವಾರ್ ಸರ್ಕಾರ ವಜಾ ಮಾಡಿದ್ದರು ಎನ್ನಲಾಗಿತ್ತು. ಎರಡನೇ ಬಾರಿ 2014ರಲ್ಲಿ (ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 31) ಕಾಂಗ್ರೆಸ್ ಸರ್ಕಾರದಿಂದ ಎನ್‌ಸಿಪಿ ಹೊರನಡೆದ ಪರಿಣಾಮ ಪೃಥ್ವಿರಾಜ್ ಚೌಹಾಣ್ ಸರ್ಕಾರ ಪತನಗೊಂಡು ರಾಷ್ಟ್ರಪತಿ ಆಡಳಿತ ಜಾರಿ ಆಗಿತ್ತು. 2019ರಲ್ಲಿ (ನವೆಂಬರ್ 12ರಿಂದ 23ರವರೆಗೆ) ಮೂರನೇ ಬಾರಿ ಹೇರಲಾಗಿತ್ತು. ಈಗ ಮತ್ತೆ ರಾಷ್ಟ್ರಪತಿ ಆಡಳಿತದ ಒತ್ತಾಯ ಕೇಳಿಬರುತ್ತಿದೆ.

ಮಹಾರಾಷ್ಟ್ರದಲ್ಲಿ ಈ ಹಿಂದೆ ಎರಡು ಬಾರಿ ವಿಧಾನಸಭೆಯ ಅವಧಿ ಅಂತ್ಯವಾದ ನಂತರ ಹೊಸ ಸರ್ಕಾರಗಳು ರಚನೆಯಾದ ನಿದರ್ಶನಗಳಿವೆ. ಆಗ ರಾಷ್ಟ್ರಪತಿ ಆಡಳಿತ ಹೇರಿರಲಿಲ್ಲ. ಆದರೆ, 2019ರಲ್ಲಿ ಸರ್ಕಾರ ರಚನೆ ತಡವಾದ ಕಾರಣಕ್ಕೆ ರಾಷ್ಟ್ರಪತಿ ಆಡಳಿತ ಹೇರಲಾಗಿತ್ತು.

ಚುನಾವಣಾ ಫಲಿತಾಂಶ ಘೋಷಣೆಯಾದ ನಂತರ ಹೆಚ್ಚು ಸ್ಥಾನ ಪಡೆದ ಪಕ್ಷಗಳು, ಹೆಚ್ಚು ಶಾಸಕರ ಬೆಂಬಲ ಇರುವವರು ಸರ್ಕಾರ ರಚನೆಗೆ ಶಕ್ತಿ ಇರುವುದಾಗಿ ಪ್ರತಿಪಾದನೆ ಮಾಡುತ್ತಾರೆ. ಆಗ ರಾಜ್ಯಪಾಲರು ತಮ್ಮ ವಿವೇಚನೆಯಂತೆ ಯಾವುದಾದರೊಂದು ಕೂಟಕ್ಕೆ ಅವಕಾಶ ನೀಡುತ್ತಾರೆ. ನಂತರ ಬಹುಮತ ಸಾಬೀತು ಮಾಡಲು ನಿರ್ದಿಷ್ಟ ಕಾಲಾವಕಾಶ ನೀಡುತ್ತಾರೆ. ಇಲ್ಲವೇ ರಾಜ್ಯಪಾಲರೇ ತಮ್ಮ ವಿವೇಚನಾಧಿಕಾರ ಬಳಸಿ ಅತಿ ದೊಡ್ಡ ಪಕ್ಷವನ್ನು ಸರ್ಕಾರ ರಚನೆಗೆ ಆಹ್ವಾನಿಸಬಹುದು. ಸರ್ಕಾರ ರಚನೆ ಆಗುವುದು ಅನುಮಾನವಿದ್ದು, ಅಸ್ಥಿರ ಸ್ಥಿತಿ ಇದೆ ಎಂದು ಅವರಿಗೆ ಅನ್ನಿಸಿದರೆ, ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡಬಹುದು.

ಆಧಾರ: ಪಿಟಿಐ



ಪಕ್ಷಗಳ ಬಲಾಬಲ


145 ಸರಳ ಬಹುಮತ | 288 ಒಟ್ಟು ಸ್ಥಾನಗಳು | 235 | 50 | 3

ಮಹಾಯುತಿ 235	
ಬಿಜೆಪಿ	132
ಶಿವಸೇನಾ	57
ಎನ್‌ಸಿಪಿ	41
ಜೆಎಸ್‌ಎಸ್	2
ಆರ್‌ವೈಎಸ್‌ಪಿ	1
ಆರ್‌ಎಸ್‌ಪಿ	1
ಪಕ್ಷೇತರ	1

ಮಹಾ ವಿಕಾಸ್ ಆಘಾಡಿ 50	
ಶಿವಸೇನಾ ಉದ್ಧವ್ ಠಾಕ್ರೆ ಬಣ	20
ಕಾಂಗ್ರೆಸ್	16
ಎನ್‌ಸಿಪಿ ಶರದ್ ಪವಾರ್ ಬಣ	10
ಎಸ್‌ಪಿ	2
ಸಿಪಿಎಂ	1
ಪಿಡಬ್ಲ್ಯುಪಿಐ	1

ಇತರರು 3	
ಎಐಎಂಐಎಂ	1
ಆರ್‌ಎಸ್‌ವಿಎ	1
ಪಕ್ಷೇತರ	1

ಅಂತಹ ಸನ್ನಿವೇಶ ಉದ್ಭವಿಸಿಲ್ಲ



ಮಹಾರಾಷ್ಟ್ರದಲ್ಲಿ ಮಹಾಯುತಿಗೆ ಸ್ಪಷ್ಟ ಬಹುಮತ ಇದೆ. ಸದ್ಯದ ಸ್ಥಿತಿಯಲ್ಲಿ ರಾಷ್ಟ್ರಪತಿ ಆಡಳಿತ ಹೇರುವಂತಹ ಯಾವುದೇ ಸನ್ನಿವೇಶ ಉದ್ಭವ ಆಗಿಲ್ಲ. ಯಾವುದೇ ಪಕ್ಷಕ್ಕೆ ಬಹುಮತ ಇಲ್ಲ ಎಂದಾಗ ಸಂವಿಧಾನದ 356ನೇ ವಿಧಿಯಡಿ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡಲಾಗುತ್ತದೆ. ಅಷ್ಟೇ ಅಲ್ಲ, ಇದಕ್ಕಾಗಿ ರಾಜ್ಯಪಾಲರು ವರದಿಯನ್ನೂ ಕಳುಹಿಸಿಕೊಡಬೇಕು.

ಎಸ್.ಪಿ.ಶಂಕರ್, ರಾಜ್ಯ ಹೈಕೋರ್ಟ್‌ನ ಹಿರಿಯ ವಕೀಲ

'ಸುಪ್ರೀಂ' ಚಾರಿತ್ರಿಕ ತೀರ್ಪು

ಸಂವಿಧಾನದ 356ನೇ ವಿಧಿ ದುರ್ಬಳಕೆ ಮಾಡುವುದರ ವಿರುದ್ಧ ಎಸ್.ಆರ್.ಬೊಮ್ಮಾಯಿ ಪ್ರಕರಣದಲ್ಲಿ 1994ರಲ್ಲಿ ಸುಪ್ರೀಂ ಕೋರ್ಟ್ ಚಾರಿತ್ರಿಕ ತೀರ್ಪು ನೀಡಿದ್ದು, 'ಸರ್ಕಾರ ರಚನೆಗೆ ಸಂಖ್ಯಾಬಲ ನಿರ್ಧಾರ ವಿಧಾನಸಭೆಯಲ್ಲೇ ಆಗಬೇಕೇ ವಿನಾ ಬೇರೆಲ್ಲೂ ಅಲ್ಲ. ಅದು ರಾಜ್ಯಪಾಲರು ಅಥವಾ ರಾಷ್ಟ್ರಪತಿಯವರ ವೈಯಕ್ತಿಕ ಅಭಿಪ್ರಾಯ ಅಲ್ಲ. ಬಹುಮತ ಸಾಬೀತು ಪಡಿಸಲು ಅವಕಾಶ ಇದ್ದರೆ ಅದಕ್ಕೆ ತಡೆ ಒಡ್ಡಬಾರದು' ಎಂದು ಸ್ಪಷ್ಟವಾಗಿ ಹೇಳಿತ್ತು.

ಇದೇ ಮೊದಲಲ್ಲ

ಸರ್ಕಾರದ ಅವಧಿ ಮುಕ್ತಾಯಗೊಂಡು ಹೊಸ ಸರ್ಕಾರ ರಚನೆಗೆ ಹೆಚ್ಚು ಸಮಯ ತೆಗೆದುಕೊಂಡಿದ್ದು ಮಹಾರಾಷ್ಟ್ರದಲ್ಲಿ ಇದೇ ಮೊದಲೇನಲ್ಲ

- ಮಹಾರಾಷ್ಟ್ರದ 10ನೇ ವಿಧಾನಸಭೆಯ ಅವಧಿ 2004ರ ಅಕ್ಟೋಬರ್ 19ಕ್ಕೆ ಮುಕ್ತಾಯವಾಗಿತ್ತು. ಆದರೆ, 11ನೇ ವಿಧಾನಸಭೆ ರಚನೆ ಆಗಿದ್ದು 15 ದಿನಗಳ ನಂತರ. ನವೆಂಬರ್ 1ರಂದು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು
- 11ನೇ ವಿಧಾನಸಭೆ ಅವಧಿ 2009ರ ನವೆಂಬರ್ 3ರಂದು ಕೊನೆಗೊಂಡಿದ್ದರೂ ನಾಲ್ಕು ದಿನಗಳ ನಂತರ 12ನೇ ವಿಧಾನಸಭೆ ರಚನೆ ಆಯಿತು. ಅಂದರೆ, ನವೆಂಬರ್ 7ರಂದು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂತು



ಛತ್ರಪತಿ ಶಿವಾಜಿ ಯಾದ ರಿಷಬ್ ಶೆಟ್ಟಿ

'ಕಾಂತಾರ' ಸಿನಿಮಾದ ಪ್ರೀಕ್ವೆಲ್ ಶೂಟಿಂಗ್ ನಡೆಯುತ್ತಿರುವ ಸಂದರ್ಭದಲ್ಲೇ ತಮ್ಮ ಮುಂದಿನ ಎರಡು ಪ್ಯಾನ್ ಇಂಡಿಯಾ ಸಿನಿಮಾಗಳನ್ನು ನಟ ರಿಷಬ್ ಶೆಟ್ಟಿ ಘೋಷಿಸಿಕೊಂಡಿದ್ದಾರೆ.

ಪ್ರಶಾಂತ್ ವರ್ಮಾ ನಿರ್ದೇಶಿಸಲಿರುವ 'ಜೈ ಹನುಮಾನ್' ಸಿನಿಮಾದಲ್ಲಿನ ತಮ್ಮ 'ಹನುಮಂತ'ನ ಪಾತ್ರವನ್ನು ಇತ್ತೀಚೆಗಷ್ಟೇ ಪರಿಚಯಿಸಿದ್ದ ರಿಷಬ್, 'ಛತ್ರಪತಿ ಶಿವಾಜಿ'ಯಾಗಿ ತೆರೆ ಮೇಲೆ ಬರಲಿದ್ದಾರೆ.

ಸಂದೀಪ್ ಸಿಂಗ್ ನಿರ್ದೇಶನದ ಚೊಚ್ಚಲ ಸಿನಿಮಾ 'ದಿ ಪ್ರೈಡ್ ಆಫ್ ಭಾರತ್ ಛತ್ರಪತಿ ಶಿವಾಜಿ ಮಹಾರಾಜ್' ಕಳೆದ ಫೆಬ್ರುವರಿ 16ರಂದು ಘೋಷಣೆಯಾಗಿತ್ತು. ಇದರಲ್ಲಿ ಶಿವಾಜಿಯ ಪಾತ್ರವನ್ನು ಯಾರು ಮಾಡುತ್ತಾರೆ ಎನ್ನುವ ಕುತೂಹಲವಿತ್ತು. ಇದೀಗ ಅದಕ್ಕೆ ತೆರೆಬಿದಿದ್ದು, ಶಿವಾಜಿ ಮಹಾರಾಜ್ ಆಗಿ ರಿಷಬ್ ಕಾಣಿಸಿಕೊಳ್ಳಲಿದ್ದಾರೆ.


ಈ ಸಿನಿಮಾ 2027ರ ಜ.21ರಂದು ವಿಶ್ವದಾದ್ಯಂತ ಬಿಡುಗಡೆಯಾಗಲಿದೆ. ರಣದೀಪ್ ಹೂಡ ನಿರ್ದೇಶಿಸಿ, ಮುಖ್ಯಭೂಮಿಕೆಯಲ್ಲಿದ್ದ 'ಸ್ವಾತಂತ್ರ್ಯ ವೀರ್ ಸಾವರ್ಕರ್' ನಿರ್ಮಾಪಕರಲ್ಲಿ ಸಂದೀಪ್ ಸಿಂಗ್ ಒಬ್ಬರಾಗಿದ್ದರು. ಶಿವಾಜಿ ಮಹಾರಾಜ್ ಪತ್ನಿ ರಾಣಿ ಸಾಯಿ ಭೋಂಸಲೆ ಪಾತ್ರದಲ್ಲಿ ಖ್ಯಾತ ಗಾಯಕಿ ಆಶಾ ಭೋಂಸ್ಲೆ ಅವರ ಮೊಮ್ಮಗಳಾದ ಝಾನೈ ಭೋಂಸ್ಲೆ ನಟಿಸಲಿದ್ದಾರೆ. ಹಿಂದಿ, ಮರಾಠಿ, ಕನ್ನಡ, ತಮಿಳು ಸೇರಿ ಆರು ಭಾಷೆಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ.

ಪ್ರೇಮಕಥೆಯ ಮುಗಿಲ ಮಲ್ಲಿಗೆ

ಕೆ.ಬಾಲಚಂದರ್ ಬರೆದು ನಿರ್ದೇಶಿಸಿ, ಸರಿತಾ, ಅಶೋಕ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ 'ಮುಗಿಲ ಮಲ್ಲಿಗೆ' ನಾಲ್ಕು ದಶಕಗಳ ಹಿಂದೆ ತೆರೆಕಂಡು ಸೂಪರ್ ಹಿಟ್ ಆಗಿತ್ತು. ಇದೀಗ ಅದೇ ಶೀರ್ಷಿಕೆಯನ್ನು ಹೊಂದಿರುವ ಚಿತ್ರವೊಂದು ಸೆಟ್ಟೇರಿ ಮೊದಲನೇ ಹಂತದ ಚಿತ್ರೀಕರಣ ಮುಗಿಸಿದೆ. ಆರ್.ಕೆ.ಗಾಂಧಿ ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ.

'ಈ ಹಿಂದೆ ತೆಲುಗಿನಲ್ಲಿ 'ರುದ್ರಾಕ್ಷಪುರಂ', 'ಪ್ರೇಮಭಿಕ್ಷ' ಸಿನಿಮಾಗಳನ್ನು ನಿರ್ದೇಶಿಸಿದ್ದೆ. ಕನ್ನಡದಲ್ಲಿ ಮೊದಲ ಸಿನಿಮಾ. ತನ್ನ ತಮ್ಮನ ಸಾವಿಗೆ ಕಾರಣಳಾದ ನಾಯಕಿಯ ಮೇಲೆ ಸೇಡು ತೀರಿಸಿಕೊಳ್ಳಲು ಹೊರಟ ಖಳನಾಯಕನೊಂದಿಗೆ ನಾಯಕ ಹೇಗೆ ಹೋರಾಡಿ ನಾಯಕಿಯನ್ನು ಉಳಿಸಿಕೊಳ್ಳುತ್ತಾನೆ ಎಂಬುದೇ ಚಿತ್ರದ ಕಥಾವಸ್ತು. ಹೊಸಕೋಟೆ ಸುತ್ತ ಮುತ್ತ ಚಿತ್ರೀಕರಣ ನಡೆಸಲಾಗಿದೆ' ಎಂದರು ನಿರ್ದೇಶಕರು.

ಎವಿಆರ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ನಾಗರಾಜ್ ರೆಡ್ಡಿ ಬಂಡವಾಳ ಹೂಡಿದ್ದಾರೆ. ಈ ಹಿಂದೆ 'ಕಮರೊಟ್ಟು ಚೆಕ್ ಪೋಸ್ಟ್', 'ಒಲವೇ ಮಂದಾರ -2' ಚಿತ್ರಗಳಲ್ಲಿ ನಟಿಸಿದ್ದ ಸನತ್ ಚಿತ್ರದ ನಾಯಕ. ಸಹನಾ ಗೌಡ ನಾಯಕಿ. ಈ ಚಿತ್ರಕ್ಕೆ ಅನಿರುದ್ಧ ಶಾಸ್ತ್ರಿ ಸಂಗೀತ, ಅಭಿನಂದನ್ ಶೆಟ್ಟಿ ಅವರ ಛಾಯಾಚಿತ್ರಗ್ರಹಣ, ವಿನಯ್ ಜಿ. ಆಲೂರು ಸಂಕಲನವಿದೆ. ಬಲ ರಾಜವಾಡಿ ಸೇರಿದಂತೆ ಅನೇಕ ಕಲಾವಿದರು ತಾರಾಗಣದಲ್ಲಿದ್ದಾರೆ.



ಸಹನಾ ಗೌಡ, ಸನತ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಮಹಾರಾಷ್ಟ್ರದಲ್ಲಿ ಮಹಾಯುತಿ ಮೈತ್ರಿಕೂಟಕ್ಕೆ ಭರ್ಜರಿ ಬಹುಮತ ಸಿಕ್ಕಿದ ನಂತರ ಇವಿಎಂ ಬಗ್ಗೆ ಚರ್ಚೆಯಾಗುತ್ತಿದೆ. ಇವಿಎಂಗಳನ್ನು ತಿರುಚಲು ಸಾಧ್ಯ ಎಂಬ ಚರ್ಚೆಯೂ ನಡೆಯುತ್ತಿದ್ದು, ಚುನಾವಣೆಗಳಲ್ಲಿ ಇವಿಎಂ ಬದಲಿಗೆ ಮತಪತ್ರಗಳನ್ನು ಬಳಸಬೇಕು ಎಂದು ವಿಪಕ್ಷಗಳು ಒತ್ತಾಯಿಸಲು ಆರಂಭಿಸಿವೆ. ಇದೇ ಸಮಯದಲ್ಲಿ ಎವಿಎಂ ವಿರುದ್ಧ ಮಹಾರಾಷ್ಟ್ರದಲ್ಲಿ ಬೃಹತ್ ಪ್ರತಿಭಟನೆ ನಡೆದಿದೆ ಎಂದು ಹೇಳಿಕೊಂಡು ಜಾಲತಾಣಗಳಲ್ಲಿ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. 'ಇವಿಎಂಗಳನ್ನು ತೆಗೆದು ಹಾಕಿ, ಬಿಜೆಪಿ ಬೇಡ, ಪ್ರತಿಭಟನೆ ಶುರುವಾಗಿದೆ, ಮಹಾರಾಷ್ಟ್ರದ ಫಲಿತಾಂಶ ಜನರಿಗೆ ಇಷ್ಟವಾಗಿಲ್ಲ' ಎಂದು ಹೇಳಿಕೊಂಡು ಪೋಸ್ಟ್ ಮಾಡಲಾಗುತ್ತಿದೆ. ಆದರೆ, ವಿಡಿಯೊ ಮಹಾರಾಷ್ಟ್ರದ್ದಲ್ಲ.

✓ ವಿಡಿಯೊ ತುಣುಕನ್ನು ಕೀ ಫ್ರೇಮ್‌ಗಳಾಗಿ ವಿಂಗಡಿಸಿ, ಗೂಗಲ್ ಲೆನ್ಸ್‌ನಲ್ಲಿ ರಿವರ್ಸ್ ಇಮೇಜ್ ವಿಧಾನದಲ್ಲಿ ಹುಡುಕಾಡಿದಾಗ, 'ಎಕ್ಸ್'ನಲ್ಲಿ ಈ ವರ್ಷದ ಫೆಬ್ರುವರಿಯಲ್ಲಿ ಹಂಚಿಕೊಂಡ ವಿಡಿಯೊ ಸಿಕ್ಕಿತು. ಅದು ದೆಹಲಿಯಲ್ಲಿ ನಡೆದಿದ್ದ ಇವಿಎಂ ವಿರುದ್ಧದ ಪ್ರತಿಭಟನೆಯದ್ದಾಗಿತ್ತು. ಮತ್ತಷ್ಟು ಜಾಲಾಡಿದಾಗ ದೆಹಲಿಯ ಜಂತರ್ ಮಂತರ್‌ನಲ್ಲಿ ಜ.31ರಂದು ಭಾರತ್ ಮುಕ್ತಿ ಮೋರ್ಚಾ, ಎಡಿ ಸಂಘಟನ್ ಮತ್ತು ಐಟಿ ಸಂಘಟನ್ ಸಂಸ್ಥೆಗಳು ಇವಿಎಂ ವಿರುದ್ಧ ಜಂಟಿಯಾಗಿ ಹಮ್ಮಿಕೊಂಡಿದ್ದ ಪ್ರತಿಭಟನೆಯ ವಿಡಿಯೊ ಎಂಬುದು ಖಚಿತವಾಯಿತು. ದೆಹಲಿಯಲ್ಲಿ ನಡೆದಿದ್ದ ಪ್ರತಿಭಟನೆಯ ವಿಡಿಯೊವನ್ನು ಮಹಾರಾಷ್ಟ್ರದ ವಿಡಿಯೊ ಎಂದು ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ನುಡಿ ಬೆಳಗು 80

ನಿಸರ್ಗಕ್ಕೆ ಹೊಂದಿಕೊಂಡು ಬದುಕಬೇಕು!



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

'ನಾವು ಭೂಮಿಯ ಮೇಲೆ ಇಡುವ ಒಂದೊಂದು ಹೆಜ್ಜೆ ಭೂಮಿಗೆ ಮುತ್ತುಕೊಟ್ಟಂತೆ ಇರಬೇಕು' ಎಂದು ಒಬ್ಬ ಬೌದ್ಧ ಸನ್ಯಾಸಿ ಹೇಳ್ತಾರೆ. ಭೂಮಿಯ ಮೇಲೆ ನಾವು ಸಂವೇದನಾಶೀಲರಾಗಿರಬೇಕು. ಒಂದು ಬಳ್ಳಿ ದೇವನಿಗೆ, 'ದೇವಾ ನಿನ್ನ ಋಣ ಹ್ಯಾಂಗ್ ತೀರಿಸಲಿ, ನಿನ್ನ ಪೂಜಾ ಹ್ಯಾಂಗ್ ಮಾಡಲಿ. ನನ್ನ ಪಕ್ಕ ತೇಗ, ಬೀಟೆ ಮುಂತಾದ ಮರಗಳಿದಾವೆ. ನಾನೊಂದು ಸಣ್ಣ ಬಳ್ಳಿ. ಆದರೆ, ಆ ಮರಗಳಿಗೆ ಆಹಾರ, ಗಾಳಿ ಬೆಳಕು ಎಷ್ಟು ಕೊಟ್ಟೀಯಲ್ಲ ಅಷ್ಟೇ ಬೆಳಕು ಗಾಳಿ ನನಗೂ ಕೊಟ್ಟಿದ್ದೀಯಲ್ಲ. ಅದಕ್ಕೆ ನಾನು ನಿನಗೆ ಏನ್ ಕೊಡಲಿ. ಅದಕ್ಕೆ ನಾನು ನನ್ನ ಹೃದಯವನ್ನೇ ಹೂವಾಗಿ ಅರಳಿಸಿ ನಿನಗೆ ಕೊಟ್ಟೀನಿ' ಎಂದು ಹೇಳಿತಂತೆ.

ಮುಸುರೆ ನೀರು ಕುಡಿದ ಆಕಳು ಅಮೃತದಂತಹ ಹಾಲು ಕೊಡತೈತಿ. ಅದನ್ನು ಕುಡಿದ ಮನುಷ್ಯ ಭೂಮಿಗೆ ವಿಷ ಕೊಟ್ಟ. ಇದು ವಿಪರ್ಯಾಸ. ಒಬ್ಬ ಊದಿನಕಡ್ಡಿಗೆ 'ದೇವರು ನಿನ್ನನ್ನು ಯಾವಾಗಲೂ ಮಗ್ಗಲಲ್ಲೇ ಇಟಕೊಳ್ಳುತ್ತಾನ. ನನ್ನ ಹೊರಗಿಟ್ಟಾನಲ್ಲ ಯಾಕೆ?. ಒಳಕ್ಕೆ ಬರಬೇಕು ಅಂದ್ರೆ ಸ್ನಾನ ಮಾಡಿ ಬಾ ಅಂತಾನ' ಎಂದು ಕೇಳಿದ. ಅದಕ್ಕೆ ಊದಿನಕಡ್ಡಿ, 'ನಾನು ನನ್ನ ಮೈ ಸುಟಗೊಂಡು ಇಡೀ ಮನೆಯಲ್ಲಾ ಸುವಾಸನೆ ಬೀರುವಂಗೆ ಮಾಡುತ್ತೀನಿ. ಅದಕ್ಕೆ ನನ್ನನ್ನು ಪಕ್ಕದಲ್ಲೇ ಇಟಗೊಂಡಾನ. ನೀನು ಮಂದಿ ಮನಿ ಸುಟ್ಟು ಸಂತೋಷ ಪಡುತಿ ಅದಕ್ಕೆ ನಿನ್ನ ಹೊರಗಿಟ್ಟಾನ' ಅಂತಾ ಉತ್ತರಿಸಿತಂತೆ.

ನಿಸರ್ಗಕ್ಕೆ ಪೂರಕವಾಗಿ ನಾವು ಬದುಕಬೇಕು. ದೇವರು ಕೊಟ್ಟ ಜೀವನವನ್ನು ಎಷ್ಟು ಚೆನ್ನಾಗಿ ಬದುಕಿ ಹೋದವರು ಬೇಕಾದಷ್ಟು ಮಂದಿ ಇದ್ದಾರ. ಇದೇ ಗಾಳಿ, ಇದೇ ಬೆಳಕು, ಇದೇ ಭೂಮಿ, ಇದೇ ಬಯಲು ಇವುಗಳನ್ನೇ ಬಳಸಿಕೊಂಡು ಬದುಕನ್ನು ಸಾರ್ಥಕ ಪಡಿಸಿಕೊಂಡರು. ನಮ್ಮಲ್ಲಿ ಮಿಲ್ಕ್ ಮ್ಯಾನ್ ಆಫ್ ಇಂಡಿಯಾ, ಮಿಸೈಲ್ ಮ್ಯಾನ್ ಆಫ್ ಇಂಡಿಯಾ, ಫಾರೆಸ್ಟ್ ಮ್ಯಾನ್ ಆಫ್ ಇಂಡಿಯಾದಂತಹ ಜನ ಇದ್ದಾರೆ. ಆದರೆ ನಾವು? ನಾವು ಬರೀ ಮೊಬೈಲ್ ಮ್ಯಾನ್‌ಗಳಾಗಿದ್ದೇವೆ.

ಭಾರತದ ರಾಷ್ಟ್ರ ಚಿಹ್ನೆ ನೋಡಿ ಪ್ರಾಣಿ ಚಿತ್ರ ಹಾಕ್ಯಾರೆ. ಬ್ಯಾಂಕುಗಳೂ ತಮ್ಮ ಚಿಹ್ನೆಗಳಿಗೆ ಪ್ರಾಣಿ ಚಿತ್ರ ಹಾಕಿಕೊಂಡಿವೆ. ಎಲ್ಯಾರು ಮನುಷ್ಯನ ಚಿತ್ರ ಹಾಕ್ಯಾರೇನು? ನಮ್ಮ ಜಗತ್ತು ಬಹಳ ಸಣ್ಣದು. ಅವರ ಜಗತ್ತು ಬಹಳ ದೊಡ್ಡದು. ಅವರು ಬದುಕಿದ ರೀತಿ ಹೇಗೆ? ಈ ದೇಶ ಅಪ್ರತಿಮ ವ್ಯಕ್ತಿಗಳು ಕಂಡಿದೆ. ದೇಶಕ್ಕಾಗಿ ಬದುಕನ್ನು ಅರ್ಪಿಸಿದ ವ್ಯಕ್ತಿಗಳಿದ್ದರು.

ದೇವರಿಗಾಗಿ, ನಿಸರ್ಗಕ್ಕಾಗಿ ಬದುಕನ್ನು ಅರ್ಪಿಸೋದು ದಿವ್ಯಾರಾಧನೆ. ನಾವು ದೇವರಲ್ಲಿ ಕೇಳುವ ಭಿಕ್ಷುಕರಾದವೇ ಹೊರತು ಅವನನ್ನು ಆರಾಧಿಸುವ ಪರಿ ನಮಗೆ ಬರಲಿಲ್ಲ. ದೇವರನ್ನು ಗರ್ಭಗುಡಿಗೆ ಸೀಮಿತಗೊಳಿಸಬಾರದು. ಶರಣರು ಜಗದಗಲ, ಮುಗಿಲಗಲ ದೇವರನ್ನು ನೋಡಿದರು. ಪ್ರತಿಯೊಂದರಲ್ಲಿಯೂ ನಿನ್ನ ದಿವ್ಯಾನುಭೂತಿ ಅಂತ ಅಕ್ಕಮಹದೇವಿ ಹೇಳುತ್ತಾಳೆ. ಕವಿ ರವೀಂದ್ರರು ಹೇಳುತ್ತಾರೆ. ಸುಮ್ಮನೆ ದೇವರ ಗುಡಿಗೆ ಹೋಗಿ ಒಂದೆರಡು ಬಾಡುವ ಹೂವು ಹಾಕಿದರೆ ಋಣ ಮುಕ್ತಿಯಾಗಲ್ಲ. ಬಾಡದ ಹೂವಾಗಿರುವ ನಿನ್ನ ಹೃದಯ ಪುಷ್ಪವನ್ನೇ ಅವನ ಪಾದಕ್ಕೆ ಅರ್ಪಿಸಬೇಕು. ದೇವರಿಗೆ ಪುಷ್ಪ ಅರ್ಪಿಸುವುದಕ್ಕೆ ಬದಲು ಮನೆಯಲ್ಲಿ ಎಲ್ಲರೊಂದಿಗೆ ಪ್ರೇಮದಿಂದ ಇದ್ದರೆ ನಿನ್ನ ಮನೆಯೇ ದೇವಾಲಯ ಆಗತೈತಿ. ಪ್ರೇಮದಿಂದ ಮನೆ ಕಟ್ಟಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಡಿಸೆಂಬರ್ 4, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ತೃತೀಯ ಗಂ. 13-11 ನಕ್ಷತ್ರ: ಪೂರ್ವಾಷಾಢ ಗಂ. 17-15 ಯೋಗ: ಗಂಡ ಗಂ. 13-56 ಕರಣ: ಗರ ಗಂ. 13-11, ವೃಶ್ಚಿಕ ಮಾಸದ 18 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 1.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-43 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 01 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 6, 10

ಮೇಷ: ಪರೋಪಕಾರದ ವ್ಯಕ್ತಿತ್ವಕ್ಕೆ ತಕ್ಕ ಪ್ರತಿಫಲ ಹೊಂದುವಿರಿ. ಸಂಗೀತದಲ್ಲಿನ ಆಸಕ್ತಿಗೆ ಮನೆಯವರಿಂದ ಪ್ರೋತ್ಸಾಹ ಸಿಗಲಿದೆ. ಸಂಪಾದನೆ ಕಡಿಮೆಯಿದ್ದರೂ ಚಿಂತೆ ಇರದು.

ವೃಷಭ: ರೈತಾಪಿ ವರ್ಗದವರಿಗೆ ಹವಾಮಾನದಿಂದ ಅಥವಾ ಕಾಡುಪ್ರಾಣಿಗಳಿಂದ ಕೃಷಿಕಾರ್ಯಗಳಿಗೆ ತೊಂದರೆಗಳ ಆಗಲಿದೆ. ಯಾವುದೇ ರೀತಿಯ ದಿಟ್ಟ ನಿಲುವನ್ನು ತೆಗೆದುಕೊಳ್ಳಲು ಸಮಂಜಸ ಸಮಯವಲ್ಲ.

ಮಿಥುನ: ಕೆಲಸ ಕಾರ್ಯಗಳು ವಿಳಂಬನೀತಿಯನ್ನು ತೊರೆದು ಸರಾಗವಾಗಿ ನಡೆದು ಆರ್ಥಿಕವಾಗಿ ಮುನ್ನಡೆ ಸಾಧಿಸುವಿರಿ. ಜವಾಬ್ದಾರಿಯನ್ನು ನಿಭಾಯಿಸಲು ಹೆಚ್ಚಿನ ಶ್ರಮಪಡಬೇಕಾಗಿಲ್ಲ. ಅನಿವಾರ್ಯವಾಗಿ ಪ್ರಯಾಣ ಕಂಡುಬರುವುದು.

ಕರ್ಕಾಟಕ: ಸಮಸ್ಯೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ರಾಜಿ ಸಂಧಾನದ ಅಥವಾ ಷರತ್ತುಗಳ ಮೂಲಕ ಬಗೆಹರಿಸಿ. ಗೃಹೋಪಕರಣ ಖರೀದಿ ಅಥವಾ ಕೆಲವಾರು ಯೋಜನೆಗಳಲ್ಲಿ ಎಡವಿದ ಅನುಭವ ನಿಮಗೆ ಉಂಟಾಗಲಿದೆ.

ಸಿಂಹ: ಕೌಟುಂಬಿಕವಾದ ಜಟಿಲ ಸಮಸ್ಯೆಗಳು ಬಗೆಹರಿದು ಮನೆಯವರಿಗೆಲ್ಲ ನೆಮ್ಮದಿ ಉಂಟಾಗುವುದು. ಬೆಂಬಲಕ್ಕೆ ನಿಲ್ಲುವ ಗೆಳೆಯನೊಬ್ಬ ಸಿಗಲಿದ್ದಾನೆ. ಸಾಧಕರ ಮನೋಕಾಮನೆಗಳು ಪೂರ್ಣಗೊಳ್ಳುವಂಥ ದಿನ.

ಕನ್ಯಾ: ವೃತ್ತಿಪರ ಕೆಲಸ ಕಾರ್ಯದಲ್ಲಿ ನಿರ್ದಾಕ್ಷಿಣ್ಯವಾಗಿ ವ್ಯವಹರಿಸುವುದನ್ನು ಅಭ್ಯಾಸ ಮಾಡಿಕೊಳ್ಳಿ. ವಿದ್ಯಾಭ್ಯಾಸದಲ್ಲಿ ಮಕ್ಕಳ ಅಸಡ್ಡೆಯು ಪ್ರಗತಿಗೆ ಮಾರಕವಾಗಲಿದೆ. ವಾಣಿಜ್ಯೋದ್ಯಮಿಗಳು ಭದ್ರತೆಯ ಬಗ್ಗೆ ಗಮನ ಹರಿಸಿ.

ತುಲಾ: ಸಂಶೋಧನಾ ವಿದ್ಯಾರ್ಥಿಗಳು ಕಲಿತಿರುವ ವಿಷಯಗಳನ್ನು ಪ್ರಾಯೋಗಿಕವಾಗಿ ಬಳಕೆಗೆ ತರಲು ಸುದಿನ. ಹಿರಿಯರು ಅಭ್ಯುದಯಕ್ಕಾಗಿ ಮಾರ್ಗದರ್ಶನ ನೀಡುವರು. ನೌಕರಿಯಲ್ಲಿ ಉತ್ತಮ ಸ್ಥಿತಿ ಹೊಂದುವಿರಿ.

ವೃಶ್ಚಿಕ: ಕಾರ್ಮಿಕರ ಸಮಸ್ಯೆಗಳಿಗೆ ಹೆಚ್ಚಿನ ಪ್ರತಿಕ್ರಿಯೆ ನೀಡಿ ಅವರ ಮನಸ್ಸಿನಲ್ಲಿ ಉತ್ತಮ ಸ್ಥಾನವನ್ನು ಸಂಪಾದಿಸಿಕೊಳ್ಳುವ ವ್ಯಕ್ತಿತ್ವವಿರಲಿ. ಲೇವಾದೇವಿ ವ್ಯವಹಾರ ನಡೆಸುವವರಿಗೆ ಸಂಕಷ್ಟದ ಪರಿಸ್ಥಿತಿ ಎದುರಾಗಲಿದೆ.

ಧನು: ಬದುಕಿನಲ್ಲಿ ಹೊಸ ವ್ಯಕ್ತಿಯ ಪ್ರವೇಶವಾಗಲಿದೆ. ಅವರಿಂದ ಸಿಗುವ ಸಲಹೆ, ಸಹಕಾರ ಮರೆಯಲಾಗದಂತೆ ಇರಲಿದೆ. ಹೂಗಳ ರಫ್ತು ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭ ಪಡೆಯಬಹುದು.

ಮಕರ: ನಿಯಮಿತ ಕೆಲಸಕ್ಕೆ ಸೂಕ್ತ ಪ್ರಶಂಸೆ ಸಿಗಲಿದೆ. ಜ್ಞಾನದ ಕೊರತೆಯಿಂದಾಗಿ ವಸ್ತು ನಷ್ಟವಾಗಬಹುದು. ಧರ್ಮ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು.

ಕುಂಭ: ಬಹುದಿನಗಳಿಂದ ಮನಸ್ಸಿನಲ್ಲಿರುವ ಕನಸುಗಳು, ಆಸೆಗಳು ಈಡೇರಲಿವೆ. ಈಶ್ವರನ ಸೇವೆಯಿಂದ ಕೆಲಸಕಾರ್ಯಗಳು ಕೂಡಿ ಬರುವುವು. ಉದರ ವೇದನೆ ಇರುವುದು.


ಮೀನ: ಕಥೆಗಾರರು, ಕಾದಂಬರಿಕಾರರು ಅನುಭವಕ್ಕೆ ಬರುವ ಘಟನೆಗಳನ್ನೆ ಬರವಣಿಗೆಯಲ್ಲಿ ತರುವ ಪ್ರಯತ್ನವನ್ನು ನಡೆಸಬಹುದು. ಅವಶ್ಯಕತೆಗೆ ಮೀರಿ ಕೆಲಸ ಮಾಡಬೇಕಾದ ಸಮಸ್ಯೆ ನಿಮಗಿಲ್ಲ.

ಪದಬಂಧ 5881

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪರಿವರ್ತನೆಯ ಯುಗ (4)
3.ಗೋವಿನ ಹತ್ತಿರವಿರುವ ಕೊಳಲು (4)
5.ಈತ ತಿರುಪೆ ಬೇಡುವವನು (3)
7.ಪತ್ರ ಬರೆದಿರುವ ಸ್ನೇಹಿತ (2)
9.ತೋರಿಕೆಯ ಹೋರಾಟ (5)
12.ಒಂದು ಸ್ಥಳದ ಬಗ್ಗೆ ಹೇಳುವ ಸಾಂಪ್ರದಾಯಿಕ ಕಥೆ (5)
14.ತರಾತುರಿಯಿಂದ ಖರೀದಿಸಿರುವ ನೀರಾವರಿ ಭೂಮಿ (2)
17.ನಾಯಕನ ಹತ್ತಿರವಿರುವ ಹಾಡುಗಾರ (3)
19.ತಾಳ್ಮೆಗೊಂದು ಪರ್ಯಾಯ ಪದ (4)
20.ಸರಿ ರಾತ್ರಿಯಲ್ಲಿ ಕಾಣಿಸುತ್ತಿರುವ ಸಮುದ್ರ (4)

ಮೇಲಿಂದ ಕೆಳಕ್ಕೆ
1.ಗಿಡಮರಗಳೇನೂ ಬೆಳೆಯದ ಬಂಜರು ಭೂಮಿ (4)
2.ಈಕೆ ಮನ್ಮಥನ ಪತ್ನಿ (2)
3.ಕಪಿಯನ್ನು ನೋಡುತ್ತಿರುವ ಗಿಳಿ (2)
4.ವಿಧ್ವಂಸವನ್ನು ತಡೆಗಟ್ಟುತ್ತಿರುವ ಪಂಡಿತ (3)
6.ನವುರಾದ ಸಣ್ಣ ಚಕ್ಕೆ ಉಲ್ಟಾ ಆಗಿದೆ (3)
8.ಮಿತ್ರರ ನ್ಯಾಯ ತೀರ್ಮಾನ ಮಾಡುವವನು (3)
9.ಹುರಿಯಾಳು ತೋರಿಸಿದ ಉತ್ಸಾಹ (3)
10.ಕಾರನ್ನೇರುವವನ ಉದ್ದೇಶ (3)
11.ಪರಿಣಿತನಿಂದ ಕಲಿತಿರುವ ಲೆಕ್ಕ (3)
13.ಕರ್ಣನ ಇನ್ನೊಂದು ಹೆಸರು (3)
15.ರೀತಿ ನಿಯಮದಂತೆ ಸಿಕ್ಕಿರುವ ಸೋಡಿ (4)
16.ಪ್ರಸವದ ಸಮಯದಲ್ಲಿ ಆಗಿರುವ ಸುಸ್ತು (3)
17.ಗಾಂಪನ ಬಾಯಲ್ಲಿ ಹೇಳಿಸಿದ ಹಾಡು (2)
18.ಸರೀಕನ ಮನೆಯಲ್ಲಿರುವ ಗಲೀಜು (2)



5880ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುಧಾರಕ 3.ವನಸ್ಪತಿ 5.ದಹನ 7.ನಗು 9.ಮಂಕ 11.ಲಾಕ್ಷಣಿಕ 12.ಪರಪಂಚ 13.ನಾರಿ 14.ನೆಮ 16.ಅರಸ 18.ಕರೆಯೋಲೆ 19.ವಿದ್ಯಮಾನ

ಮೇಲಿಂದ ಕೆಳಕ್ಕೆ: 1.ಸುಮ್ಮಾನ 2.ಕದ 3.ವನ 4.ತಿರುಕ 6.ಹಸ್ತಕ 8.ಗುಲಾಮಗಿರಿ 9.ಮಂತ್ರಾಲೋಚನೆ 12.ಪದರ 13.ನಾಸಿಕ 15.ಮದನ 16.ಅಲೆ 17.ಸವಿ

ಸುಡೊಕು 6266

	2	8		6	7	4		
3								
	7	1		4	8		6	
	4						8	
8		9		7	1			6
	5		8		4		9	
2				9			3	
4		3		5	2			8
	1		4			5	2	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6265 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,276
ಇಂದಿನ ಅಂತ್ಯ	24,457
▲	181
ದಿನದ ಗರಿಷ್ಠ	24,481

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹635
12 ಕ್ಕೆ	₹82
ಮೈಸೂರು	
100ಕ್ಕೆ	₹637

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹209-689
ದ್ವಿತಳಿ (ಬಿ.ವಿ)	₹295-826

ಮುದ್ರೆಮನೆ ಕಾಫಿ

(50 ಕೆಜಿಗೆ)



ಎಪಿ	₹21250
ಎಸಿ	₹11600
ಆರ್‌ಪಿ	₹20000
ಆರ್‌ಸಿ	₹11050


ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹182

(ಪ್ರತಿ ಕೆ.ಜಿಗೆ)

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹5000-6600
ಮಧ್ಯಮ	₹3000-5000
ಸಣ್ಣ	₹2000-3000

ಬ್ಯಾಂಕಿಂಗ್ ಕಾಯ್ದೆ ತಿದ್ದುಪಡಿ ಮಸೂದೆಗೆ ಲೋಕಸಭೆ ಅಸ್ತು

ಖಾತೆಗೆ ನಾಲ್ವರು ನಾಮಿನಿ

ನವದೆಹಲಿ (ಪಿಟಿಐ): ಬ್ಯಾಂಕ್ ಖಾತೆ ಹೊಂದಿರುವವರು ನಾಲ್ವರನ್ನು ನಾಮನಿರ್ದೇಶನ ಮಾಡಲು ಅವಕಾಶ ನೀಡುವುದು ಸೇರಿದಂತೆ ಹಲವು ಅಂಶಗಳನ್ನು ಹೊಂದಿರುವ ಬ್ಯಾಂಕಿಂಗ್ ಕಾಯ್ದೆಗಳ (ತಿದ್ದುಪಡಿ) ಮಸೂದೆಯನ್ನು ಲೋಕಸಭೆ ಮಂಗಳವಾರ ಅಂಗೀಕರಿಸಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಮಸೂದೆಯನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಕಳೆದ ಆರು ದಶಕದಿಂದಲೂ ಕಂಪನಿಗಳ ನಿರ್ದೇಶಕರ ಆಸ್ತಿ ಮೌಲ್ಯದ ಮಿತಿ ಹೆಚ್ಚಿಸಿರಲಿಲ್ಲ. ಮಿತಿಯನ್ನು ಹೆಚ್ಚಳ ಮಾಡುವ ಅವಕಾಶವನ್ನು ಹಾಗೂ 'ಗಣನೀಯ ಹಿತಾಸಕ್ತಿ' ಅನ್ನು ಮರುವ್ಯಾಖ್ಯಾನ ಮಾಡುವ ಪ್ರಸ್ತಾವವನ್ನು ಮಸೂದೆ ಒಳಗೊಂಡಿದೆ.

ಯಾವುದೇ ಕಂಪನಿಯಲ್ಲಿ ನಿರ್ದೇಶಕರು ₹5 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಆಸ್ತಿಯ ಒಡೆತನ ಹೊಂದಿದ್ದರೆ ಅದನ್ನು 'ಗಣನೀಯ ಹಿತಾಸಕ್ತಿ' ಎಂದು ನಿರ್ಧರಿಸಲಾಗುತ್ತದೆ. ಅಂತಹ ನಿರ್ದೇಶಕರಿಗೆ ಸಾಲ ನೀಡಲು ಆಡಳಿತ ಮಂಡಳಿಯ ಅನುಮೋದನೆ ಪಡೆಯುವುದು ಕಡ್ಡಾಯ.

ಪ್ರಸ್ತಾವಿತ ತಿದ್ದುಪಡಿಯು, ನಿರ್ದೇಶಕರು ₹2 ಕೋಟಿ ಮೊತ್ತದ ಷೇರುಗಳ ಒಡೆತನ ಅಥವಾ ಮಾಲೀಕತ್ವ ಹೊಂದಲು ಅವಕಾಶ ನೀಡುತ್ತದೆ.

ನಾಮನಿರ್ದೇಶನ ವಿಚಾರವಾಗಿ ನಡೆದ ಚರ್ಚೆ ವೇಳೆ ಉತ್ತರಿಸಿದ ಸಚಿವೆ ನಿರ್ಮಲಾ ಸೀತಾರಾಮನ್, 'ಠೇವಣಿದಾರರು ಒಬ್ಬರ ನಂತರ ಮತ್ತೊಬ್ಬರಂತೆ ನಾಲ್ವರನ್ನು ನಾಮನಿರ್ದೇಶನ ಮಾಡಬಹುದು ಇಲ್ಲವೇ ಒಟ್ಟಿಗೇ ಈ ಪ್ರಕ್ರಿಯೆ ಪೂರ್ಣಗೊಳಿಸುವ ಸೌಲಭ್ಯ ಇರಲಿದೆ' ಎಂದರು.



ಪ್ರಸ್ತಾವಿತ ತಿದ್ದುಪಡಿಗಳು ಬ್ಯಾಂಕಿಂಗ್ ಕ್ಷೇತ್ರಕ್ಕೆ ಬಲತುಂಬಲಿವೆ. ಗ್ರಾಹಕರಿಗೆ ಹೆಚ್ಚು ಅನುಕೂಲ ಹಾಗೂ ಹೂಡಿಕೆದಾರರ ರಕ್ಷಣೆಗೆ ಒತ್ತು ನೀಡಿವೆ

ನಿರ್ಮಲಾ ಸೀತಾರಾಮನ್
ಕೇಂದ್ರ ಹಣಕಾಸು ಸಚಿವೆ

'ಲಾಕರ್ ಹೊಂದಿರುವವರು, ಒಂದು ಬಾರಿ ಮಾತ್ರ ನಾಮನಿರ್ದೇಶನ ಮಾಡಬಹುದಾಗಿದೆ' ಎಂದೂ ಹೇಳಿದರು.

'ನಮ್ಮ ಬ್ಯಾಂಕುಗಳು ಸುರಕ್ಷಿತವಾಗಿರಬೇಕು, ಸ್ಥಿರತೆ ಹೊಂದಿರಬೇಕು ಎಂಬ ದಿಸೆಯಲ್ಲಿ ಚಿಂತನೆ ನಡೆದಿತ್ತು. ಈ ಕಾರ್ಯಕ್ಕೆ 10 ವರ್ಷಗಳ ಬಳಿಕ ಫಲ ಸಿಗುತ್ತಿದೆ' ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

ಸಹಕಾರ ಬ್ಯಾಂಕ್‌ಗಳ ನಿರ್ದೇಶಕರ (ಅಧ್ಯಕ್ಷ ಮತ್ತು ಪೂರ್ಣಕಾಲಿಕ ನಿರ್ದೇಶಕರನ್ನು ಹೊರತುಪಡಿಸಿ) ಅಧಿಕಾರದ ಅವಧಿಯು ಪ್ರಸ್ತುತ 8 ವರ್ಷ ಇದೆ. ಈ ಅವಧಿಯನ್ನು 10 ವರ್ಷಕ್ಕೆ ಹೆಚ್ಚಿಸುವ ಪ್ರಸ್ತಾವವನ್ನು ಈ ಮಸೂದೆ ಒಳಗೊಂಡಿದೆ.

ಕೇಂದ್ರ ಸಹಕಾರ ಬ್ಯಾಂಕ್‌ನ ನಿರ್ದೇಶಕರು, ರಾಜ್ಯ ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿಯಲ್ಲಿ ಸೇವೆ ಸಲ್ಲಿಸಲು ಅವಕಾಶ ನೀಡುವುದು ಸೇರಿದಂತೆ ಹಲವಾರು ಅಂಶಗಳನ್ನು ತಿದ್ದುಪಡಿ ಮಸೂದೆ ಒಳಗೊಂಡಿದೆ.

₹85,520 ಕೋಟಿ ಲಾಭ: ನಿರ್ಮಲಾ

ನವದೆಹಲಿ (ಪಿಟಿಐ): ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ₹85,520 ಕೋಟಿ ಲಾಭ ಗಳಿಸಿವೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ದೇಶದ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಸುರಕ್ಷತೆ, ಸ್ಥಿರ ಮತ್ತು ಆರೋಗ್ಯದಾಯಕವಾಗಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದ ಅವರು, 2023-24ರಲ್ಲಿ ₹1.41 ಲಕ್ಷ ಕೋಟಿ ದಾಖಲೆಯ ಲಾಭ ಗಳಿಸಿದ್ದವು ಎಂದು ಹೇಳಿದ್ದಾರೆ.

ಪ್ರಧಾನಮಂತ್ರಿ ಜನ್‌ಧನ್ ಖಾತೆಗಳಲ್ಲಿ ಒಟ್ಟು ಠೇವಣಿ ₹2.37 ಲಕ್ಷ ಕೋಟಿಯಷ್ಟಿದೆ. 2014ರಲ್ಲಿ ಸರಾಸರಿ ಈ ಖಾತೆಗಳಲ್ಲಿನ ಬ್ಯಾಲೆನ್ಸ್ ₹1,065 ಆಗಿತ್ತು. ಅದು ಈಗ ₹4,397ಕ್ಕೆ ಏರಿದೆ ಎಂದು ಸಚಿವರು ತಿಳಿಸಿದರು.

'ಬ್ಯಾಂಕ್‌ಗಳ ವಿಲೀನ ಇಲ್ಲ'

ನವದೆಹಲಿ (ಪಿಟಿಐ): 'ಸಾರ್ವಜನಿಕ ವಲಯದ ಬ್ಯಾಂಕ್‌ಗಳ ವಿಲೀನದ ಪ್ರಸ್ತಾವ ಸರ್ಕಾರದ ಮುಂದಿಲ್ಲ' ಎಂದು ಕೇಂದ್ರ ಸರ್ಕಾರವು ರಾಜ್ಯಸಭೆಗೆ ಮಂಗಳವಾರ ತಿಳಿಸಿದೆ.

ಈ ಬ್ಯಾಂಕ್‌ಗಳ ಆರ್ಥಿಕ ಸ್ಥಿತಿಯ ಸದೃಢತೆಗೆ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸರ್ಕಾರ ಕೈಗೊಂಡಿರುವ ಸುಧಾರಣೆಗಳು ಸಕಾರಾತ್ಮಕವಾದ ಹಲವು ಬದಲಾವಣೆಗಳಿಗೆ ಕಾರಣವಾಗಿವೆ. ಇದರಿಂದ ಬ್ಯಾಂಕ್‌ನ ಸಮರ್ಪಕ ಬಂಡವಾಳ ಅನುಪಾತ (ಸಿಎಆರ್) ಮತ್ತು ವಸೂಲಾಗದ ಸಾಲದ ಪ್ರಮಾಣದಲ್ಲಿ ಸುಧಾರಣೆಯಾಗಿದೆ ಎಂದು ಚೌಧರಿ ಹೇಳಿದರು.


ಗುಜರಾತ್: 12,803 ಜಿಎಸ್‌ಟಿ ವಂಚನೆ ಪ್ರಕರಣ ದಾಖಲು



ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿ ನಾಲ್ಕು ಹಣಕಾಸು ವರ್ಷಗಳಲ್ಲಿ 12,803 ಜಿಎಸ್‌ಟಿ ವಂಚನೆ ಪ್ರಕರಣಗಳು ದಾಖಲಾಗಿವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯಸಭೆಗೆ ಮಂಗಳವಾರ ತಿಳಿಸಿದ್ದಾರೆ.

2021-22ರ ಹಣಕಾಸು ವರ್ಷದಿಂದ 2024-25ರ ಅಕ್ಟೋಬರ್ 31ರ ವರೆಗೆ ಕೇಂದ್ರ ತೆರಿಗೆ ಅಧಿಕಾರಿಗಳು 12,803 ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಂಚನೆ ಪ್ರಕರಣಗಳನ್ನು ದಾಖಲಿಸಿದ್ದಾರೆ. ಒಟ್ಟು 101 ಜನರನ್ನು ಬಂಧಿಸಲಾಗಿದೆ ಎಂದು ಗುಜರಾತ್‌ನಲ್ಲಿ ಜಿಎಸ್‌ಟಿ ವಂಚನೆಗೆ ಸಂಬಂಧಿಸಿದ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಅಕ್ಷಯ್ ಆರ್, ಮೈಸೂರು

- **ಪ್ರಶ್ನೆ: ನಾನು ಖಾಸಗಿ ಕಂಪನಿಯ ನೌಕರ. ವಯಸ್ಸು 35. ನಾನು ಕಂಪನಿ ಕಡೆಯಿಂದ ಇನ್ಶೂರೆನ್ಸ್ ಸೌಲಭ್ಯದ ಲಾಭ ಪಡೆಯುತ್ತಿದ್ದೇನೆ. ಆದರೆ ನನ್ನ ತಂದೆ - ತಾಯಿ ಈ ಸೌಲಭ್ಯಕ್ಕೆ ಅರ್ಹರಲ್ಲ. ಹೀಗಾಗಿ ಅವರನ್ನೂ ಒಳಗೊಳ್ಳುವಂತೆ ಇನ್ನೊಂದು ಇನ್ಶೂರೆನ್ಸ್ ಪಡೆಯುವ ಯೋಜನೆ ಮಾಡಿದ್ದೇನೆ. ಎಲ್ಲರ ಕಂತು (ಪ್ರೀಮಿಯಂ) ಸೇರಿಸಿದರೆ ಇದು ಸುಮಾರು ₹50 ಸಾವಿರಕ್ಕೂ ಅಧಿಕ ಆಗುವ ಅಂದಾಜು ಇದೆ. ನನ್ನ ಸಂದೇಹ ಇಲ್ಲಿರುವುದೇನೆಂದರೆ, ಈ ₹50 ಸಾವಿರದ ಬದಲು ಅದೇ ಮೊತ್ತವನ್ನು ಎಲ್ಲಾದರೂ ಹೂಡಿಕೆ ಮಾಡಿ, ಅಕಸ್ಮಾತ್ ಯಾವುದೇ ಆರೋಗ್ಯ ಸಮಸ್ಯೆ ಇದ್ದಾಗ ಆ ಮೊತ್ತ ಉಪಯೋಗಿಸಬಹುದಲ್ಲ. ಯಾವುದೇ ಆರೋಗ್ಯ ಸಮಸ್ಯೆ ಇಲ್ಲದಿದ್ದಾಗ ಕಟ್ಟುವ ಪ್ರೀಮಿಯಂ ಅನಗತ್ಯ ನಷ್ಟ ಹಾಗೂ ನಮ್ಮ ಉಳಿತಾಯದ ಪಾಲನ್ನು ಕಡಿಮೆಗೊಳಿಸುತ್ತದೆ ಎಂಬುದು ನನ್ನ ಸಂದೇಹ. ಈ ವಿಚಾರದಲ್ಲಿ ನಿಮ್ಮ ಅಭಿಪ್ರಾಯ ಏನು. ಇನ್ಶೂರೆನ್ಸ್ ಮಾಡಿಸಲೇ ಅಥವಾ ಹೂಡಿಕೆ ಮಾಡಲೇ ?**

ಉತ್ತರ: ನಿಮ್ಮ ಉಳಿತಾಯದ ಯೋಜನೆಯ ಬಗೆಗಿನ ಕಾಳಜಿ ಸರಿಯಾದುದೇ. ಆದರೆ ಆ ರೀತಿ ಸಂಗ್ರಹವಾಗುವ ಹಾಗೂ ವೃದ್ಧಿಯಾಗುವ ಮೊತ್ತ ಇಂದಿನ ದಿನಗಳಲ್ಲಿ ತಗಲುವ ವೈದ್ಯಕೀಯ ತಪಾಸಣಾ ಖರ್ಚಿಗೆ ತುಲನೆ ಮಾಡಿದರೆ ಯಾವ ಗಣನೆಗೂ ಬರುವುದಿಲ್ಲ. ದೇಶದ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೌಲಭ್ಯ ಪಡೆಯಲು ಪ್ರತಿ ದಿನಕ್ಕೆ ಸರಾಸರಿ ₹50ರಿಂದ ₹60 ಸಾವಿರ ವೆಚ್ಚ ತಗಲುತ್ತದೆ. ಇಂತಹ ಸಂದರ್ಭದಲ್ಲಿ ದುರದೃಷ್ಟವಶಾತ್ ವೈದ್ಯಕೀಯ ಅಗತ್ಯತೆಯ ಅನಿವಾರ್ಯ ಎದುರಾದರೆ ಒಂದು ವರ್ಷದ ಪ್ರೀಮಿಯಂ ಉಳಿಸಿದ ಮೊತ್ತ ಒಂದೇ ದಿನದ ಖರ್ಚಿಗೂ ಸಾಕಾಗಲಾರದು.

ಹೀಗಾಗಿ ಸಮಸ್ಯೆ ಬರಲಿ - ಬರದಿರಲಿ ಈ ಮೊತ್ತವನ್ನು ಯಾವುದೇ ಲೆಕ್ಕಾಚಾರವಿಲ್ಲದೆ ಪ್ರತ್ಯೇಕವಾಗಿಡುವುದು ಇಂದಿನ ದಿನದ ಅನಿವಾರ್ಯವಾಗಿದೆ. ಈ ಕಂತು ಕಟ್ಟುವ ಸಲುವಾಗಿ ನೀವು ಪ್ರತ್ಯೇಕವಾಗಿ ಉಳಿತಾಯ ಮಾಡಿ. ಆ ಮೊತ್ತದಿಂದ ಸಹಜವಾಗಿ ನಿಮಗೆ ಕೆಲವು ವರ್ಷದಲ್ಲಿ ಲಾಭ ಬರುತ್ತದೆ. ಈ ಮೊತ್ತವನ್ನೇ ಪ್ರೀಮಿಯಂ ಪಾವತಿಸಲೂ ಬಳಸಿಕೊಳ್ಳಿ. ಇನ್ನೂ ಒಂದು ವಿಚಾರವೆಂದರೆ, ಹೂಡಿಕೆ ಹಾಗೂ ಆರೋಗ್ಯ ವಿಮೆ ಪ್ರತ್ಯೇಕವಾದ ಎರಡು ವಿಚಾರಗಳು. ನೀವು ನಿಮ್ಮ ನಿರ್ಧಾರ ತಡ ಮಾಡಿದಂತೆ ಅನನುಕೂಲತೆಯೇ ಅಧಿಕ. ಇದಕ್ಕಾಗಿ ವಿಮಾ ಸಲಹೆಗಾರರ ನೆರವು ಪಡೆದು ನಿಮ್ಮ ಅಂದಾಜಿನಂತೆ ಏನು ಸಮಂಜಸವೋ ಆ ಮೊತ್ತಕ್ಕೆ ಸರಿಯಾಗಿ ಪ್ರೀಮಿಯಂ ಹಾಗೂ ವಿಮಾ ಮೊತ್ತ ನಿರ್ಧರಿಸಿ.

ಲೋಕೇಶ್ ಎನ್.ಆರ್, ಕೋಲಾರ

- **ಪ್ರಶ್ನೆ: ನಾನು ಕೆಲವು ವರ್ಷಗಳಿಂದ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಇವುಗಳಲ್ಲಿ ಡೆಟ್ ಫಂಡ್, ಈಕ್ವಿಟಿ ಫಂಡ್, ಸೇವಿಂಗ್ಸ್ ಫಂಡ್ ಮಾತ್ರವಲ್ಲದೆ, ರಿಟೈರ್‌ಮೆಂಟ್ ವಿಭಾಗದ ಹೂಡಿಕೆಗಳೂ ಇವೆ. ಎಲ್ಲ ಹೂಡಿಕೆಗಳೂ ಮ್ಯೂಚುವಲ್ ಫಂಡ್‌ಗಳೇ ಆಗಿವೆ. ಇತ್ತೀಚೆಗೆ ಬ್ರೋಕರ್ ಮೂಲಕ ಪೋರ್ಟ್ ಫೋಲಿಯೋ ರಿಟರ್ನ್ಸ್ ತಿಳಿಯಲು ಅಗತ್ಯ ಮಾಹಿತಿ ಪಡೆದುಕೊಂಡೆ. ಇದರಲ್ಲಿ ವಾರ್ಷಿಕವಾಗಿ ಸರಾಸರಿ ಶೇ 30ಕ್ಕಿಂತ ಅಧಿಕ ಲಾಭ ನೀಡಿದ ಫಂಡ್ ಇವೆ. ಶೇ 5 ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಅಥವಾ ಕೆಲವೊಂದು ನಷ್ಟದಲ್ಲಿರುವ ಸೆಕ್ಟೋರಲ್, ಥೀಮ್ಯಾಟಿಕ್, ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಫಂಡ್‌ಗಳು ಕೂಡ ಇವೆ. ನನಗೆ ಸಿಕ್ಕಿದ ವರದಿಯಂತೆ, ನಾನು ಈ ಹಂತದಲ್ಲಿ ಹೆಚ್ಚಿನ ಮೊತ್ತವನ್ನು ಈ ಕಡಿಮೆ ಆದಾಯ ನೀಡುತ್ತಿರುವ ಫಂಡ್‌ಗಳಲ್ಲಿ ಹೊಂದಿದ್ದೇನೆ. ಡೆಟ್ ಫಂಡ್‌ಗಳು ಸರಾಸರಿ ಶೇ 6.50ರಷ್ಟು ನಿರೀಕ್ಷಿತ ಆದಾಯ ನೀಡಿವೆ. ಅದರ ಮೇಲೆ ತೆರಿಗೆ ಬೇರೆ ಇದೆ. ಅತ್ಯಧಿಕ ಆದಾಯ ನೀಡಿದ ಹೂಡಿಕೆಗಳು ಒಟ್ಟಾರೆ ಪೋರ್ಟ್ ಫೋಲಿಯೋದ ಶೇ 10-20 ಮಾತ್ರ ಇವೆ. ನನ್ನ ಪ್ರಶ್ನೆ ಏನೆಂದರೆ, ನಾನು ಹೆಚ್ಚಿನ ಲಾಭ ಪಡೆಯಲು ಡೆಟ್ ಫಂಡ್‌ಗಳನ್ನು ಈಕ್ವಿಟಿಗೆ ವರ್ಗಾಯಿಸಬಹುದೇ? ನಷ್ಟ ಹೊಂದಿದ ಈಕ್ವಿಟಿ ವಿಭಾಗದ ಹೂಡಿಕೆಗಳನ್ನು ಎಸ್‌ಐಪಿಯಿಂದ ಮುಕ್ತಗೊಳಿಸಿ ಹಣ ಹಿಂಪಡೆಯಲೇ. ನನಗೆ ಸದ್ಯ ಯಾವುದೇ ಹಣದ ಅಗತ್ಯ ಇಲ್ಲ, ಆದರೆ ಈ ರೀತಿ ಲಾಭ ಗಳಿಸದೆ ಇರುವ ಸ್ಥಿತಿಯನ್ನು ಒಪ್ಪಿಕೊಳ್ಳಲು ತುಸು ಬೇಸರವಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯ ಹಾಗೂ ಸಲಹೆ ನೀಡಿ.**

ಉತ್ತರ: ನಿಮ್ಮ ಈ ಹಂತದ ಸಮಸ್ಯೆಗೆ ಪೂರ್ವ ನಿರ್ಧರಿತ ಹೂಡಿಕೆಗೆ ಸಂಬಂಧಿತ ವಿಶ್ಲೇಷಣೆಯ ಕೊರತೆ ಅಥವಾ ಅಸಂಕಲ್ಪಿತ ಹೂಡಿಕೆ ಕಾರಣವಾಗಿರಬಹುದು. ಇಂತಹ ಸಂದರ್ಭದಲ್ಲಿ ನಿಮ್ಮ ಸಂಪೂರ್ಣ ಹೂಡಿಕೆಯ ಪುನರವಲೋಕನ ಅಗತ್ಯ. ನೀವು ಈಗಾಗಲೇ ಅಗತ್ಯ ಮಾಹಿತಿ ಹೊಂದಿದ್ದೀರಿ. ಈ ಬಗ್ಗೆ ತಜ್ಞ ಹೂಡಿಕೆದಾರರನ್ನು ಸಂಪರ್ಕಿಸಿ ವೈಯಕ್ತಿಕ ಸಲಹೆ ಪಡೆದುಕೊಳ್ಳಿ.

ನೀವು ಮೇಲೆ ಉಲ್ಲೇಖಿಸಿರುವ ವಿವಿಧ ಹೂಡಿಕೆಗಳ ಮರುಹೂಡಿಕೆ (ಉದಾ: ಕಂಪನಿಗಳ ಷೇರು, ಸರ್ಕಾರಿ ಬಾಂಡ್ ಇತ್ಯಾದಿ) ಹಾಗೂ ಆಯಾ ವರ್ಗದ ಫಂಡ್‌ಗಳು ಮಾರುಕಟ್ಟೆಗೆ ಸ್ಪಂದಿಸುವ ಗುಣಾಂಕವೂ (ಬೀಟಾ ಅಂಕ) ಪ್ರತ್ಯೇಕವಾಗಿದೆ. ಅಧಿಕ ಗುಣಾಂಕ ಹೊಂದಿದ ಫಂಡ್‌ಗಳು ಮಾರುಕಟ್ಟೆ ಏರಿಳಿತಗಳಿಗೆ ಅಷ್ಟೇ ತ್ವರಿತವಾಗಿ ಸ್ಪಂದಿಸುತ್ತವೆ ಹಾಗೂ ಈ ವಿಚಾರ ಲಾಭ ನಷ್ಟದ ದೃಷ್ಟಿಯಿಂದ ಪ್ರಮುಖ ಪಾತ್ರವಹಿಸುತ್ತದೆ. ನಿಮ್ಮ ನಿರ್ಧಾರ ಗುಣಾಂಕದ ಪರಿಗಣನೆಯೂ ಇರಲಿ.

ನಿರಂತರವಾಗಿ ಅಧಿಕ ಲಾಭ ಗಳಿಸಿರುವ ಹೂಡಿಕೆಗಳಿಗೆ ನಿಮ್ಮ ಪ್ರಸ್ತುತ ಲಾಭದಾಯಕವಲ್ಲದ ಹೂಡಿಕೆಗಳನ್ನು ಹಂತ ಹಂತವಾಗಿ ವರ್ಗಾಯಿಸುವುದು ಕೂಡ ಸೂಕ್ತ ನಿರ್ಧಾರವೆ. ನಿಮಗೆ ಸದ್ಯದ ಹಂತದಲ್ಲಿ ಯಾವುದೇ ಹಣ ಅಗತ್ಯವಾಗಿ ಬೇಕಾಗಿಲ್ಲದ ಕಾರಣ, ಅಂತಹ ಫಂಡ್‌ಗಳನ್ನು ದೀರ್ಘಾವಧಿ ಹೂಡಿಕೆಗಳಿಗೆ ವರ್ಗಾಯಿಸಬಹುದು. ನಷ್ಟದಲ್ಲಿರುವ ಹೂಡಿಕೆಗಳನ್ನು ಗೊತ್ತು ಮಾಡಿ ಈ ಬಗ್ಗೆ ಪರಾಮರ್ಶೆ ನಡೆಸಿ. ಕೆಲವೊಮ್ಮೆ ಫಂಡ್ ಚೆನ್ನಾಗಿ ಲಾಭ ನೀಡಿದ್ದರೂ ನೀವು ಖರೀದಿಸಿದ ಸಮಯ-ಸಂದರ್ಭ ಅಕಾಲಿಕವಾಗಿರಬಹುದು. ಇದಕ್ಕಾಗಿ ಹಂತ ಹಂತದ ಹೂಡಿಕೆ ಸೂಕ್ತ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

'ಸಿ.ಎಂ ಪತ್ನಿಗೆ ನಿವೇಶನ; ಹಲವು ಅಕ್ರಮ'

ಒಂದನೇ ಪುಟದಿಂದ...

'ಸ್ಥಳ ಪರಿಶೀಲನೆಯನ್ನು ಸರಿಯಾಗಿ ನಡೆಸಿಲ್ಲ. ವಿವಾದಿತ ಜಮೀನಿನಲ್ಲಿ ಕಟ್ಟಡಗಳು ಇದ್ದರೂ, ಕಟ್ಟಡಗಳು ಇಲ್ಲ ಎಂದು ವರದಿ ನೀಡಿದ್ದಾರೆ ಸ್ಥಳ ಪರಿಶೀಲನೆ ನಡೆದ ಸಂದರ್ಭದಲ್ಲಿ ಕಟ್ಟಡಗಳು ಇದ್ದವು ಎಂಬುದನ್ನು ಉಪಗ್ರಹ ನಕ್ಷೆಗಳು ತೋರಿಸುತ್ತವೆ. ಆದರೆ ಅದನ್ನು ಅಧಿಕಾರಿಗಳು ಉಲ್ಲೇಖಿಸಿಲ್ಲ' ಎಂದು ವಿವರಿಸಿದೆ.

'ಸಿದ್ದರಾಮಯ್ಯ ಅವರ ಆಪ್ತ ಸಹಾಯಕ ಎಸ್.ಜಿ.ದಿನೇಶ್ ಕುಮಾರ್ ಅಲಿಯಾಸ್ ಸಿ.ಟಿ.ಕುಮಾರ್‌ಗೆ ಮುಡಾ ಕಚೇರಿಯಲ್ಲಿ ಹೆಚ್ಚು ಪ್ರಭಾವವಿದ್ದು, ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಮಾಡುವಲ್ಲಿ ಅದನ್ನು ಬಳಸಿಕೊಂಡಿದ್ದಾರೆ. ಜತೆಗೆ ಹಲವರ ಸಹಿಗಳನ್ನು ನಕಲು ಮಾಡಿದ್ದಾರೆ' ಎಂದು ಇ.ಡಿ ಹೇಳಿದೆ.

'ಪಾರ್ವತಿ ಅವರು ಪರಿಹಾರಕ್ಕಾಗಿ 2014ರ ಜೂನ್ 14ರಂದು ಸಲ್ಲಿಸಿದ್ದ ಅರ್ಜಿಯನ್ನು ತಿದ್ದಲಾಗಿದೆ. ಅರ್ಜಿಯಲ್ಲಿನ ಕೆಲವು ಪದಗಳಿಗೆ ವೈಟನರ್ ಹಚ್ಚಿದ್ದು, ಆ ಬದಲಾವಣೆಗಳನ್ನು ದೃಢೀಕರಿಸಿಲ್ಲ. ಅವರ ಅರ್ಜಿಗಳನ್ನು ನಿವೇಶನ ಹಂಚಿಕೆ ವಿಭಾಗಕ್ಕೆ ಕಳುಹಿಸಿಲ್ಲ. ಬದಲಿಗೆ ಮುಡಾ ಆಯುಕ್ತರಾಗಿದ್ದ ಡಿ.ಬಿ. ನಟೇಶ್ ಸ್ವತಃ ತಾವೇ ನಿರ್ವಹಣೆ ಮಾಡಿದ್ದಾರೆ. ಅವರು ಅನುಕೂಲ ಮಾಡಿಕೊಟ್ಟಿರುವುದನ್ನು ಇದು ಸೂಚಿಸುತ್ತದೆ' ಎಂದು ಇ.ಡಿ ವಿವರಿಸಿದೆ.

'ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಆದ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ಮಗ ಮತ್ತು ಶಾಸಕರಾಗಿದ್ದ ಯತೀಂದ್ರ, ಮುಡಾ ಸದಸ್ಯರಾಗಿ ದ್ದರು. ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿದ್ದರು' ಎಂಬುದನ್ನು ಇ.ಡಿ ಪುನರುಚ್ಚರಿಸಿದೆ.

₹700 ಕೋಟಿ ಅಕ್ರಮದ ಮೊತ್ತ

ಒಂದನೇ ಪುಟದಿಂದ...

'ಮುಡಾವು 5,000 ಅತಿಭದ್ರತೆಯ ಬಾಂಡ್ ಪತ್ರಗಳ ಮೂಲಕ ನಿವೇಶನ ಹಂಚಿಕೆ ಪತ್ರಗಳನ್ನು ನೀಡಿದೆ. ಆದರೆ ಇವುಗಳಲ್ಲಿ 1,946 ಪತ್ರಗಳು ನಾಪತ್ತೆಯಾಗಿವೆ. ಮುಡಾದ ಹಿಂದಿನ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ಅವರ ಆಪ್ತ ಸಹಾಯಕ ಪ್ರಶಾಂತ್ ರಾಜ್ ಎಂಬಾತ ಈ ಪತ್ರಗಳನ್ನು ವಾಪಸ್ ಪಡೆದಿದ್ದಾನೆ. ಇದು ಸಂಪೂರ್ಣ ಅಕ್ರಮ' ಎಂದು ಇ.ಡಿ ವಿವರಿಸಿದೆ.

'ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಲು ಜಿ.ಟಿ.ದಿನೇಶ್ ಕುಮಾರ್ ಈ ಪತ್ರಗಳನ್ನು ಬಳಸಿಕೊಂಡಿರುವ ಶಂಕೆಯಿದೆ' ಎಂದು ಹೇಳಿದೆ.

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ವಿಚಾರಣೆ

ಒಂದನೇ ಪುಟದಿಂದ...

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಮುಡಾ ನಿವೇಶನ ಹಂಚಿಕೆಯಲ್ಲಿ ₹5,000 ಕೋಟಿ ಅಕ್ರಮ ಎಸಗಿದ್ದಾರೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಆರೋಪಿಸಿದ್ದರು. ಈ ಸಂಬಂಧ ಇ.ಡಿ ತನಿಖಾಧಿಕಾರಿಗಳಿಗೆ 500 ಪುಟಗಳಷ್ಟು ದಾಖಲೆಗಳನ್ನು ಸಲ್ಲಿಸಿದ್ದರು.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-33500
ಹಳತು	44000-50000
ಶಿವಮೊಗ್ಗ	
ಬೆಟ್ಟೆ	52114-57629
ಗೊರಬಲು	17209-34699
ಹೊಸತು	29619-49799
ರಾಶಿ	31400-49899
ಸರಕು	48000-80210
ಸಾಗರ	
ಬಿಳಿಗೋಟು	24689-24729
ಚಾಲಿ	32299-32729
ಕೆಂಪುಗೋಟು	24989-25989
ರಾಶಿ	30009-47829
ಸಿಪ್ಪೆಗೋಟು	7799-16399
ಸಿದ್ದಾಪುರ	
ಬಿಳಿಗೋಟು	24799-27899
ಚಾಲಿ	32099-36600
ಕೋಕ	19109-23899
ಕೆಂಪುಗೋಟು	18899-21019
ರಾಶಿ	42689-47699
ತಟ್ಟಿಬೆಟ್ಟೆ	28609-42689
ಶಿರಸಿ	
ಬೆಟ್ಟೆ	30899-39609
ಬಿಳಿಗೋಟು	22369-29716
ಚಾಲಿ	32099-37969
ಕೆಂಪುಗೋಟು	22299-22369
ಪುತ್ತೂರು	
ಹೊಸತು	25000-33500
ಹಳತು	36000-50000

ಅಬಕಾರಿ, ನೋಂದಣಿ, ಗಣಿ ಇಲಾಖೆಗಳಿಗೆ ಸಿ.ಎಂ ತಾಕೀತು

ತೆರಿಗೆ ಸಂಗ್ರಹ: ವಾಣಿಜ್ಯ ಇಲಾಖೆಯೇ ಮೊದಲು

ಪ್ರಜಾವಾಣಿ ವಾರ್ತೆ

ಇಲಾಖೆ	ತೆರಿಗೆ ಸಂಗ್ರಹದ ಗುರಿ (₹ ಕೋಟಿಗಳಲ್ಲಿ)	ಸಾಧನೆ (ನವೆಂಬರ್‌ವರೆಗೆ)	ಶೇಕಡಾವಾರು ಪ್ರಗತಿ
ವಾಣಿಜ್ಯ ತೆರಿಗೆ	56,317	53,103	94
ಅಬಕಾರಿ	38,525	23,600	61.26
ನೋಂದಣಿ ಮತ್ತು ಮುದ್ರಾಂಕ	26,000	15,160.97	58
ಗಣಿ ಮತ್ತು ಭೂವಿಜ್ಞಾನ	9,000	4862	54.02

ಬೆಂಗಳೂರು: ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಮೂಲಕ ನಿಗದಿತ ಅವಧಿಯ ಒಳಗೆ ತೆರಿಗೆ ಸಂಗ್ರಹದ ಗುರಿ ಸಾಧಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಬಕಾರಿ, ನೋಂದಣಿ ಮತ್ತು ಮುದ್ರಾಂಕ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ನಡೆದ ನಾಲ್ಕು ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅವರು ಮಾತನಾಡಿದರು.

ತೆರಿಗೆ ಸಂಗ್ರಹಣೆಯಲ್ಲಿ ವಾಣಿಜ್ಯ ತೆರಿಗೆ ಇಲಾಖೆ ನಿರೀಕ್ಷೆಗೂ ಮೀರಿ ಗುರಿ ಸಾಧಿಸಿದೆ. ನವೆಂಬರ್ ಅಂತ್ಯದವರೆಗೆ ಶೇ 94ರಷ್ಟನ್ನು ಸಾಧಿಸಿದೆ. ನಿಗದಿ ಮಾಡಲಾಗಿದ್ದ ₹56,317 ಕೋಟಿಯಲ್ಲಿ ₹53,103 ಕೋಟಿ ಸಂಗ್ರಹವಾಗಿದೆ. ಮಾರ್ಚ್ ಅಂತ್ಯದವರೆಗೆ ₹84,475 ಕೋಟಿ ಗುರಿ ನೀಡಲಾಗಿದೆ. ಉಳಿದ ಇಲಾಖೆಗಳು ಅದೇ ಮಾದರಿಯಲ್ಲಿ ಸಾಗಬೇಕು ಎಂದರು.

2023-24ರಲ್ಲಿ ಒಟ್ಟು ತೆರಿಗೆ ಸಂಗ್ರಹಣೆ ₹70,575 ಕೋಟಿ ಇತ್ತು. ಈ ಬಾರಿ ಉತ್ತಮ ಸಾಧನೆ ಮಾಡಿದ್ದರೂ, ತೆರಿಗೆ ಸೋರಿಕೆ ಪತ್ತೆ ಹಚ್ಚಿ ತೆರಿಗೆ ಸಂಗ್ರಹವನ್ನು ಇನ್ನಷ್ಟು ಹೆಚ್ಚಿಸಬೇಕು. ಬೆಂಗಳೂರು ವಿಭಾಗದಲ್ಲಿ ಹೆಚ್ಚಿನ ನಿಗಾ ವಹಿಸಬೇಕು. ಮಲೆನಾಡು ಮತ್ತು ಮೈಸೂರು ವಿಭಾಗದಲ್ಲಿ ತೆರಿಗೆ ಸಂಗ್ರಹ ನಿಗದಿತ ಗುರಿಗಿಂತ ಕಡಿಮೆ ಇದೆ. ವಿಶೇಷ ಅಭಿಯಾನದ ಮೂಲಕ ಎಲ್ಲಾ ವಿಭಾಗಗಳು ಮುಂದಿನ ನಾಲ್ಕು ತಿಂಗಳಲ್ಲಿ ಕಡ್ಡಾಯವಾಗಿ ಗುರಿ ಸಾಧಿಸಬೇಕು ಎಂದು ತಾಕೀತು ಮಾಡಿದರು.

ಜಿಎಸ್‌ಟಿ ಸಂಗ್ರಹವನ್ನೂ ಹೆಚ್ಚಿಸಬೇಕು. ಲೆಕ್ಕಪರಿಶೋಧನೆ ಮತ್ತು ನ್ಯಾಯನಿರ್ಣಯದಿಂದ ಪ್ರಸ್ತುತ ಹಣಕಾಸು ಸಾಲಿನಲ್ಲಿ ₹4,671 ಕೋಟಿ ತೆರಿಗೆ ಸಂಗ್ರಹ ಗುರಿ ಇದೆ. ನವೆಂಬರ್ ಅಂತ್ಯದವರೆಗೆ ₹3,076.86 ಕೋಟಿ ಸಂಗ್ರಹಿಸಲಾಗಿದೆ. ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ಸ್ವೀಕರಿಸಿದ ಮನವಿಗಳನ್ನು ವಿಲೇವಾರಿ ಮಾಡಿ ತೆರಿಗೆ ಸಂಗ್ರಹ ಕೈಗೊಳ್ಳಬೇಕು. ರಾಜ್ಯ ಜಿಎಸ್‌ಟಿ ಸಂಗ್ರಹದಲ್ಲಿ ಶೇ 15ರ ಬೆಳವಣಿಗೆಯ ದರ ಸಾಧಿಸಿದೆ. ನವೆಂಬರ್ ಅಂತ್ಯದವರೆಗೆ ₹13,722 ಕೋಟಿ ಜಿಎಸ್‌ಟಿ ಸಂಗ್ರಹಿಸಲಾಗಿದ್ದು, ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ ಎಂದು ಹೇಳಿದರು.

ಅಬಕಾರಿ ರಾಜಸ್ವ ಸಂಗ್ರಹ ಹೆಚ್ಚಿಸಲು ಜಾಗೃತ ದಳ ಇನ್ನಷ್ಟು ಚುರುಕಾಗಿ ಕಾರ್ಯನಿರ್ವಹಿಸಬೇಕು. ಮುದ್ರಣ ಇಲಾಖೆಯಲ್ಲಿ ಕಾನೂನು ಬಾಹಿರ ನೋಂದಣಿಗಳಿಗೆ ಕಡಿವಾಣ ಹಾಕಿ, ರಾಜಸ್ವ ಸಂಗ್ರಹವನ್ನು ವ್ಯವಸ್ಥಿತಗೊಳಿಸಬೇಕು. ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಎಲ್ಲಾ ಆಸ್ತಿಗಳನ್ನೂ ಗುರುತಿಸಿ, ತೆರಿಗೆ ವ್ಯಾಪ್ತಿಗೆ ತರಲು ಕ್ರಮ ಕೈಗೊಳ್ಳಬೇಕು. ಇ-ಖಾತಾ ನೀಡುವ ಪ್ರಕ್ರಿಯೆಯಲ್ಲಿನ ತೊಡಕುಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಗಣಿ ರಾಜಸ್ವದಲ್ಲಿ ಕಳೆದ ವರ್ಷಕ್ಕಿಂತ ಶೇ 10ರಷ್ಟು ಹೆಚ್ಚಿನ ಬೆಳವಣಿಗೆ ದರ ಸಾಧಿಸಲಾಗಿದೆ. ಉಪ ಖನಿಜದಿಂದ ಹೆಚ್ಚುವರಿಯಾಗಿ ರಾಜಸ್ವ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿದೆ. ಅರಣ್ಯ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಮನ್ವಯದಿಂದ ಕಾರ್ಯ ನಿರ್ವಹಿಸಿದರೆ ಇನ್ನಷ್ಟು ಪ್ರಗತಿ ಸಾಧಿಸಬಹುದು ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ದಕ್ಷಿಣ ಕೊರಿಯಾದಲ್ಲಿ ಸೇನಾಡಳಿತ ಜಾರಿ

ಸೋಲ್ (ಎಪಿ): ದೇಶದ ವಿರೋಧ ಪಕ್ಷಗಳು ಸಂಸತ್ ಅನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿವೆ ಎಂದು ಆರೋಪಿಸಿರುವ ದಕ್ಷಿಣ ಕೊರಿಯಾದ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರು ದೇಶದಲ್ಲಿ ಮಂಗಳವಾರದಿಂದಲೇ 'ತುರ್ತು ಸೇನಾ ಆಡಳಿತ'ವನ್ನು ಜಾರಿಗೊಳಿಸಿದ್ದಾರೆ.

'ದೇಶ ವಿರೋಧಿ ಕೃತ್ಯದ ಮೂಲಕ ಸರ್ಕಾರವನ್ನು ಅಸ್ಥಿರಗೊಳಿಸಲು ಉತ್ತರ ಕೊರಿಯಾ ಯತ್ನಿಸುತ್ತಿದೆ' ಎಂದು ಈ ವೇಳೆ ಆರೋಪಿಸಿದ್ದಾರೆ.

'ದೇಶದ ಪರಿಸ್ಥಿತಿ ಅತ್ಯಂತ ಕ್ಲಿಷ್ಟಕರ ಸ್ಥಿತಿ ತಲುಪಿರುವುದರಿಂದ ಸಾಂವಿಧಾನಿಕ ಆದೇಶವನ್ನು ಪ್ರಕಟಿಸಲಾಗಿದೆ' ಎಂದು ದೇಶವನ್ನು ಉದ್ದೇಶಿಸಿ ಟೆಲಿವಿಷನ್ ಮೂಲಕ ತಿಳಿಸಿದ್ದಾರೆ.

ಮಲೇಷ್ಯಾದಲ್ಲಿ ಪ್ರವಾಹ: 30ಕ್ಕೂ ಹೆಚ್ಚು ಮಂದಿ ಸಾವು

ಕೊತಾ ಭಾರು (ಮಲೇಷ್ಯಾ, ಎಪಿ): ಅತಿವೃಷ್ಟಿ ಹಾಗೂ ಪ್ರವಾಹದಿಂದಾಗಿ ಮಲೇಷ್ಯಾದ ದಕ್ಷಿಣ ಥಾಯ್ಲೆಂಡ್‌ನಲ್ಲಿ 30ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಸಾವಿರಾರು ಜನರು ನಿರ್ವಸತಿಗರಾಗಿದ್ದಾರೆ ಎಂದು ಮಂಗಳವಾರ ಇಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ.

ಭಾರತಕ್ಕೆ ಯುದ್ಧ ಉಪಕರಣ ಮಾರಾಟಕ್ಕೆ ಅಮೆರಿಕ ಒಪ್ಪಿಗೆ

ವಾಷಿಂಗ್ಟನ್ (ಪಿಟಿಐ): ಭಾರತಕ್ಕೆ 1.17 ಬಿಲಿಯನ್ ಡಾಲರ್ ಮೌಲ್ಯದ (ಅಂದಾಜು ₹10 ಸಾವಿರ ಕೋಟಿ) ಹೆಲಿಕಾಪ್ಟರ್ ಸಾಧನಗಳನ್ನು ಹಾಗೂ ಸಂಬಂಧಪಟ್ಟ ಕೆಲವು ಬಿಡಿಭಾಗಗಳನ್ನು ಮಾರಾಟ ಮಾಡಲು ಅಮೆರಿಕದ ಜೋ ಬೈಡನ್ ನೇತೃತ್ವದ ಆಡಳಿತವು ಒಪ್ಪಿಗೆ ನೀಡಿದೆ. ಈ ಕುರಿತು ಆಡಳಿತವು ಅಮೆರಿಕದ ಸಂಸತ್ತಿಗೆ ಮಾಹಿತಿ ನೀಡಿದೆ.

ಈ ಪ್ರಸ್ತಾವಿತ ಮಾರಾಟವು, ಜಲಾಂತರ್ಗಾಮಿಗಳಿಂದ ಭಾರತವು ಇಂದು ಎದುರಿಸುತ್ತಿರುವ ಮತ್ತು ಮುಂದೆ ಎದುರಿಸಬಹುದಾದ ಬೆದರಿಕೆಗಳನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೆಚ್ಚು ಮಾಡಲಿದೆ ಎಂದು ರಕ್ಷಣಾ ಸಹಕಾರ ಸಂಸ್ಥೆಯು ಸಂಸತ್ತಿಗೆ ನೀಡಿರುವ ವಿವರಣೆಯಲ್ಲಿ ಹೇಳಿದೆ.

ಭಾರತೀಯ ರಾಯಭಾರಿಗೆ ಬಾಂಗ್ಲಾ ಎಚ್ಚರಿಕೆ

ತ್ರಿಪುರಾದಲ್ಲಿರುವ ಹೈಕಮಿಷನ್ ಕಚೇರಿ ಮೇಲೆ ದಾಳಿ • ಬಾಂಗ್ಲಾ ಜೊತೆ ರಚನಾತ್ಮಕ ಸಂಬಂಧಕ್ಕೆ ಒತ್ತು – ವರ್ಮಾ

ಢಾಕಾ (ಪಿಟಿಐ): ತ್ರಿಪುರಾದಲ್ಲಿರುವ ಬಾಂಗ್ಲಾದೇಶ ಹೈಕಮಿಷನ್ ಮೇಲೆ ದಾಳಿ ನಡೆದ ಬೆನ್ನಲ್ಲೇ, ಬಾಂಗ್ಲಾದೇಶ ವಿದೇಶಾಂಗ ಇಲಾಖೆಯು ಭಾರತದ ಹೈಕಮಿಷನರ್ ಪ್ರಣಯ್ ವರ್ಮಾ ಅವರನ್ನು ಕರೆಸಿ ತೀವ್ರವಾದ ಪ್ರತಿಭಟನೆ ದಾಖಲಿಸಿದೆ.



ಪ್ರಣಯ್

'ವರ್ಮಾ ಅವರು ಬಂದ ವೇಳೆ ನಮ್ಮ ಕಳವಳವನ್ನು ಅವರ ಮುಂದೆ ತಿಳಿಸಿದ್ದೇವೆ' ಎಂದು ವಿದೇಶಾಂಗ ಇಲಾಖೆ ತಿಳಿಸಿದೆ.

ಅಗರ್ತಲಾದಲ್ಲಿನ ಬಾಂಗ್ಲಾದೇಶದ ಹೈಕಮಿಷನ್ ಮೇಲೆ ದಾಳಿ ನಡೆದ ಬಳಿಕ ವಿದೇಶಾಂಗ ಇಲಾಖೆ ಕಚೇರಿಗೆ ಬರುವಂತೆ ಭಾರತದ ರಾಯಭಾರಿಗೆ ಸೂಚಿಸಲಾಗಿತ್ತು ಎಂದು ಇಲಾಖೆಯ ಸಲಹೆಗಾರ ಮೊಹಮ್ಮದ್ ತೌಹಿದ್ ಹೊಸೈನ್ ತಿಳಿಸಿದರು.

'ಬಾಂಗ್ಲಾದೇಶದ ಜೊತೆಗೆ ಭಾರತವು 'ನಿರಂತರ ಹಾಗೂ ರಚನಾತ್ಮಕ ಸಂಬಂಧ'ವನ್ನು ಎದುರು ನೋಡುತ್ತಿದ್ದು, ದ್ವಿಪಕ್ಷೀಯ ಸಂಬಂಧ ವೃದ್ಧಿ ದಿಸೆಯಲ್ಲಿ ಯಾವುದೇ ಒಂದು ವಿಚಾರ ಮಾತ್ರ ಮುಖ್ಯವಾಗಬಾರದು' ಎಂದು ವರ್ಮಾ ಈ ವೇಳೆ ತಿಳಿಸಿದರು.

'ನಾವು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಜೊತೆಗೆ ಕೆಲಸ ಮಾಡಲು ಉತ್ಸುಕರಾಗಿದ್ದೇವೆ ಎಂದು ವರ್ಮಾ ತಿಳಿಸಿದರು' ಎಂದು ಸಭೆಯ ಬಳಿಕ ಹಂಗಾಮಿ ವಿದೇಶಾಂಗ ಕಾರ್ಯದರ್ಶಿ ರಿಯಾಜ್ ಹಮೀದುಲ್ಲಾ ತಿಳಿಸಿದರು.

'ಶಾಂತಿ, ಭದ್ರತೆ ಹಾಗೂ ಅಭಿವೃದ್ಧಿ ನಿಟ್ಟಿನಲ್ಲಿ ಬಾಂಗ್ಲಾದೇಶದ ಜೊತೆಗೂಡಿ ಕೆಲಸ ಮಾಡಲು ಭಾರತ ಉತ್ಸುಕವಾಗಿದೆ' ಎಂದು ವರ್ಮಾ ಬಾಂಗ್ಲಾದೇಶಕ್ಕೆ ಸ್ಪಷ್ಟಪಡಿಸಿದರು.

ಹಿಂದೂ ಸಂಘಟನೆಯ ಮುಖಂಡ, ಚಿನ್ಮಯಿ ಕೃಷ್ಣದಾಸ್ ಬಂಧನ ಖಂಡಿಸಿ ಜನರ ಗುಂಪೊಂದು ತ್ರಿಪುರಾದ ಅಗರ್ತಲಾದಲ್ಲಿರುವ ಬಾಂಗ್ಲಾದೇಶ ಕಾನ್ಸುಲೇಟ್‌ನ ಸಹಾಯಕ ಹೈ ಕಮಿಷನರ್ ವಿರುದ್ಧ ವಾಗ್ದಾಳಿ ನಡೆಸಿ, ಆವರಣದ ಒಳಗೆ ಪ್ರವೇಶಿಸಲು ಯತ್ನಿಸಿತ್ತು. ಈ ಘಟನೆಗೆ ಭಾರತವು 'ತೀವ್ರ ವಿಷಾದ' ವ್ಯಕ್ತಪಡಿಸಿದೆ.

'ಭಾರತದ ವೈಫಲ್ಯ': ಅಗರ್ತಲಾದ ಸಹಾಯಕ ಹೈಕಮಿಷನ್ ಕಚೇರಿ ಮೇಲಿನ ದಾಳಿಯು 'ಭಾರತದ ವೈಫಲ್ಯ' ಎಂದು ಮಧ್ಯಂತರ ಸರ್ಕಾರದ ಪ್ರಭಾವಿ ಸಲಹೆಗಾರ ಆಸಿಫ್ ನಜ್ರುಲ್ ಅವರು ಮಂಗಳವಾರ ಹೇಳಿದ್ದಾರೆ.

'ಸ್ನೇಹವು ಸಮಾನತೆ ಮತ್ತು ಪರಸ್ಪರ ಗೌರವ ಆಧರಿಸಿದೆ ಎಂದು ನಂಬಿದ್ದೇವೆ. ಶೇಖ್ ಹಸೀನಾ ಅವರ ಸರ್ಕಾರವು ಚುನಾವಣೆ ಇಲ್ಲದೆ ಅಧಿಕಾರ ಪಡೆಯಲು ಭಾರತದ ಪರವಾದ ನೀತಿಯನ್ನು ಅನುಸರಿಸುತ್ತಿತ್ತು. ಇದು ಹಸೀನಾ ಅವರ ಬಾಂಗ್ಲಾದೇಶ ಅಲ್ಲ ಎಂಬುದನ್ನು ಭಾರತ ಮೊದಲು ಅರ್ಥ ಮಾಡಿಕೊಳ್ಳಬೇಕು' ಎಂದು ಕಾನೂನು ಸಚಿವಾಲಯದ ಸಲಹೆಗಾರರೂ ಆಗಿರುವ ಆಸಿಫ್ ನಜ್ರುಲ್ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.

ಟಿ.ವಿ ವಾಹಿನಿಗಳ ನಿಷೇಧ ಕೋರಿ ಅರ್ಜಿ

ಭಾರತದ ಟಿ.ವಿ ವಾಹಿನಿಗಳ ಪ್ರಸಾರವನ್ನು ನಿಷೇಧಿಸಬೇಕು ಎಂದು ಕೋರಿ ಬಾಂಗ್ಲಾದೇಶದ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿದೆ. ಭಾರತದ ಟಿ.ವಿ ವಾಹಿನಿಗಳಲ್ಲಿ ಪ್ರಚೋದನಾತ್ಮಕ ಸುದ್ದಿಗಳನ್ನು ಬಿತ್ತರಿಸಲಾಗುತ್ತಿದೆ ಎಂದು ಆರೋಪಿಸಿ ಈ ಅರ್ಜಿ ಸಲ್ಲಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ವಕೀಲ ಇಖ್ಲಾಸ್ ಉದ್ದೀನ್ ಭುಯಿಯಾಂ ಅವರು ಅರ್ಜಿ ಸಲ್ಲಿಸಿದ್ದು, ಸೋಮವಾರ ಈ ವಿಷಯವನ್ನು ದೃಢಪಡಿಸಿದ್ದಾರೆ ಎಂದು 'ದಿ ಢಾಕಾ ಟ್ರಿಬ್ಯೂನ್' ವರದಿ ಮಾಡಿದೆ.

ಕೃಷ್ಣದಾಸ್‌ಗೆ ಸಿಗದ ಜಾಮೀನು

ದೇಶದ್ರೋಹ ಎಸಗಿದ ಆರೋಪದ ಮೇಲೆ ಬಂಧಿತರಾಗಿರುವ ಹಿಂದೂ ಮುಖಂಡ ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಅವರಿಗೆ ಮಂಗಳವಾರವೂ ಜಾಮೀನು ದೊರೆಯಲಿಲ್ಲ. ಬಾಂಗ್ಲಾದ ನ್ಯಾಯಾಲಯವು ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು 2025ರ ಜನವರಿ 2ಕ್ಕೆ ನಿಗದಿಪಡಿಸಿತು.

ಚಿನ್ಮಯಿ ಕೃಷ್ಣದಾಸ್ ಅವರ ಪರವಾಗಿ ವಾದ ಮಾಡಲು ಯಾವ ವಕೀಲರೂ ಹಾಜರಾಗಲಿಲ್ಲ. ಹೀಗಾಗಿ ಪ್ರಕರಣದ ವಿಚಾರಣೆಯನ್ನು ಮೆಟ್ರೊಪಾಲಿಟನ್ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಸೈಫುಲ್ ಇಸ್ಲಾಂ ಅವರು ಮುಂದೂಡಿದರು. ಚಿನ್ಮಯಿ ಕೃಷ್ಣದಾಸ್ ಅವರ ಪರವಾಗಿ ಪ್ರಮಾಣಪತ್ರ ಸಲ್ಲಿಸಿದ್ದ ವಕೀಲ ಸುಭಾಷಿ ಶರ್ಮ ಅವರೂ ಪ್ರತಿಕ್ರಿಯೆಗೆ ಸಿಗಲಿಲ್ಲ.

ಮಂಗಳವಾರ ಜಾಮೀನು ಅರ್ಜಿಯ ವಿಚಾರಣೆ ನಡೆದ ಸಂದರ್ಭದಲ್ಲಿ ನ್ಯಾಯಾಲಯದ ಆವರಣದಲ್ಲಿ ಬಿಗಿ ಭದ್ರತೆ ನಿಯೋಜಿಸಲಾಗಿತ್ತು. ಚಿನ್ಮಯಿ ಕೃಷ್ಣ ದಾಸ್ ಅವರು ನ್ಯಾಯಾಲಯಕ್ಕೆ ಬರಲಿಲ್ಲ. ವಕೀಲರ ಸಂಘದ ಮುಖಂಡರೊಬ್ಬರ ನೇತೃತ್ವದಲ್ಲಿ ಆವರಣದಲ್ಲಿ ಪ್ರತಿಭಟನೆ ಕೂಡ ನಡೆಯಿತು.

ವಕೀಲರ ಮೇಲೆ ಹಲ್ಲೆ: ಆರೋಪ

'ವಕೀಲ ರಮಣ ರಾಯ್ ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸಿ. ಅವರು ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಿನ್ಮಯಿ ಕೃಷ್ಣದಾಸ್ ಪರವಾಗಿ ವಾದ ಮಂಡಿಸಲು ಮುಂದಾಗಿದ್ದೇ ಅವರು ಮಾಡಿದ ತಪ್ಪು' ಎಂದು ಇಸ್ಕಾನ್‌ನ ಕೋಲ್ಕತ್ತ ಶಾಖೆಯ ವಕ್ತಾರ ರಾಧಾರಮಣ ದಾಸ್ ಅವರು ಸೋಮವಾರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.

'ಚಿನ್ಮಯಿ ಕೃಷ್ಣದಾಸ್ ಅವರ ಪರವಾಗಿ ವಾದ ಮಂಡನೆಗೆ ಮುಂದಾಗುವ ವಕೀಲರ ರಕ್ಷಣೆಗೆ ಬಾಂಗ್ಲಾ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದರು.

ಚಿನ್ಮಯಿ ಕೃಷ್ಣದಾಸ್ ಪರವಾಗಿ ವಾದ ಮಂಡಿಸದೇ ಇರಲೆಂದೇ ಸುಮಾರು 70 ವಕೀಲರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು 'ಸಮ್ಮಿಲಿತ್ ಸನಾತನಿ ಜಾಗರಣ ಜೋತೆ' ಆರೋಪಿಸಿರುವುದಾಗಿ 'ಎನ್‌ಡಿಟಿವಿ' ವರದಿ ಮಾಡಿದೆ.

ರಾಜತಾಂತ್ರಿಕ ಸೇವೆ ಸ್ಥಗಿತ

ಅಗರ್ತಲಾದಲ್ಲಿರುವ ಬಾಂಗ್ಲಾದೇಶದ ಅಸಿಸ್ಟೆಂಟ್ ಹೈಕಮಿಷನ್ ಕಚೇರಿಯಲ್ಲಿ, ವೀಸಾ ಸೇರಿದಂತೆ ಎಲ್ಲ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. 'ಎಂಥದ್ದೇ ಸಂದರ್ಭದಲ್ಲೂ ರಾಜತಾಂತ್ರಿಕ ಕಚೇರಿಗಳನ್ನು ಗುರಿಯಾಗಿಸಬಾರದು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.



ಅಗರ್ತಲಾದಲ್ಲಿರುವ ಬಾಂಗ್ಲಾದೇಶದ ಅಸಿಸ್ಟೆಂಟ್ ಹೈಕಮಿಷನ್ ಕಚೇರಿ ಸುತ್ತ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ –ಎಪಿ/ಪಿಟಿಐ ಚಿತ್ರ

ಅಗರ್ತಲಾ: ಏಳು ಮಂದಿ ಬಂಧನ

ಅಗರ್ತಲಾ (ಪಿಟಿಐ): ಅಗರ್ತಲಾದಲ್ಲಿರುವ ಬಾಂಗ್ಲಾದೇಶದ ಅಸಿಸ್ಟೆಂಟ್ ಹೈಕಮಿಷನ್ ಕಚೇರಿ ಮೇಲಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಮತ್ತು ಏಳು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದರು.

'ಮೂವರು ಸಬ್ ಇನ್‌ಸ್ಪೆಕ್ಟರ್‌ಗಳನ್ನು ಅಮಾನತು ಮಾಡಲಾಗಿದೆ ಮತ್ತು ನಿರ್ಲಕ್ಷ್ಯ ಧೋರಣೆ ಆರೋಪದ ಕಾರಣ ಉಪ ಪೊಲೀಸ್ ವರಿಷ್ಠಾಧಿಕಾರಿಯೊಬ್ಬರಿಗೆ ಪೊಲೀಸ್ ಕೇಂದ್ರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುವಂತೆ ಸೂಚಿಸಲಾಗಿದೆ. ಬಂಧಿತ ಏಳೂ ಮಂದಿ, ಪ್ರತಿಭಟನೆ ಆಯೋಜಿಸಿದ್ದ ಹಿಂದೂ ಸಂಘರ್ಷ ಸಮಿತಿಯ ಸದಸ್ಯರು' ಎಂದು ಪಶ್ಚಿಮ ತ್ರಿಪುರಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಕುಮಾರ್ ತಿಳಿಸಿದರು.

'ಘಟನೆ ಸಂಬಂಧ ನ್ಯೂ ಕ್ಯಾಪಿಟಲ್ ಕಾಂಪ್ಲೆಕ್ಸ್ ಠಾಣೆಯಲ್ಲಿ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದಾರೆ' ಎಂದು ಹೇಳಿದರು.

'ಬಾಂಗ್ಲಾದವರಿಗೆ ಆತಿಥ್ಯ ನೀಡಲ್ಲ'

ಬಾಂಗ್ಲಾದೇಶದಲ್ಲಿ ಭಾರತದ ರಾಷ್ಟ್ರಧ್ವಜಕ್ಕೆ ಅವಮಾನಿಸಲಾಗಿದೆ. ಹೀಗಾಗಿ ಬಾಂಗ್ಲಾದ ಅತಿಥಿಗಳಿಗೆ ಯಾವುದೇ ಆತಿಥ್ಯ ನೀಡುವುದಿಲ್ಲ ಎಂದು ತ್ರಿಪುರಾ ಹೋಟೆಲ್ ಮತ್ತು ರೆಸ್ಟೋರೆಂಟ್ ಮಾಲೀಕರ ಸಂಘ ಘೋಷಿಸಿದೆ.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಸೈಕತ್ ಬಂಡೋಪಾಧ್ಯಾಯ ಅವರು, 'ಸೋಮವಾರ ನಡೆದ ತುರ್ತು ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

ಭದ್ರತೆ ಹೆಚ್ಚಳ: ದಾಳಿ ಬೆನ್ನಲ್ಲೇ ರಾಜತಾಂತ್ರಿಕ ಕಚೇರಿಯ ಸುತ್ತ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಕೇಂದ್ರೀಯ ಮೀಸಲು ಪೊಲೀಸ್ ಪಡೆ ಮತ್ತು ತ್ರಿಪುರಾ ರಾಜ್ಯ ರೈಫಲ್ಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮಹಾರಾಷ್ಟ್ರ: ನೂತನ ಮುಖ್ಯಮಂತ್ರಿ ಪ್ರಮಾಣ ವಚನ ನಾಳೆ

ಉಪಮುಖ್ಯಮಂತ್ರಿ: ಶಿಂದೆ ಒಪ್ಪಿಗೆ?

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಹಂಗಾಮಿ ಮುಖ್ಯಮಂತ್ರಿ ಹಾಗೂ ಶಿವಸೇನಾ (ಶಿಂದೆ ಬಣ) ಮುಖ್ಯಸ್ಥ ಏಕನಾಥ ಶಿಂದೆ ಅವರು ನೂತನ 'ಮಹಾಯುತಿ' ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಹುದ್ದೆಯನ್ನು ಒಪ್ಪಿಕೊಂಡಂತೆ ತೋರುತ್ತಿದೆ.

ಮುಖ್ಯಮಂತ್ರಿ ಸ್ಥಾನಕ್ಕೆ ಬಿಜೆಪಿಯ ದೇವೇಂದ್ರ ಫಡಣವೀಸ್ ಹೆಸರು ಮುಂಚೂಣಿಯಲ್ಲಿದ್ದು, ಅವರು ನೂತನ ಸರ್ಕಾರ ರಚನೆಗೆ 'ಅಂತಿಮ ಸ್ಪರ್ಶ' ನೀಡುವ ನಿಟ್ಟಿನಲ್ಲಿ ಸರಣಿ ಸಭೆ ನಡೆಸಿದ್ದಾರೆ.

ಎನ್‌ಸಿಪಿ ಮುಖ್ಯಸ್ಥ ಅಜಿತ್ ಪವಾರ್ ಅವರು ಸೋಮವಾರ ಮತ್ತು ಮಂಗಳವಾರ ನವದೆಹಲಿಯಲ್ಲಿದ್ದುಕೊಂಡು, ಬಿಜೆಪಿ ವರಿಷ್ಠರ ಜತೆ ಮಾತುಕತೆ ನಡೆಸಿದ್ದಾರೆ. ನೂತನ ಸರ್ಕಾರದಲ್ಲಿ ಪ್ರಮುಖ ಖಾತೆಗಳನ್ನು ಪಡೆಯಲು ಎನ್‌ಸಿಪಿ ಮತ್ತು ಶಿವಸೇನಾ ತೀವ್ರ ಕಸರತ್ತು ನಡೆಸಿವೆ.

ಫಡಣವೀಸ್ ಅವರು ಮಂಗಳವಾರ ರಾತ್ರಿ, ಮುಖ್ಯಮಂತ್ರಿ ಅವರ ಅಧಿಕೃತ ನಿವಾಸ 'ವರ್ಷಾ'ದಲ್ಲಿ ಶಿಂದೆ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಕಳೆದ ವಾರ ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ನಡೆದ ಸಭೆಯ ಬಳಿಕ ಇವರಿಬ್ಬರು ಭೇಟಿಯಾಗಿದ್ದು ಇದೇ ಮೊದಲು.

ನವದೆಹಲಿಯಿಂದ ಬಂದ ಬಳಿಕ ಸತಾರಾದಲ್ಲಿನ ಗ್ರಾಮಕ್ಕೆ ತೆರಳಿದ್ದ ಶಿಂದೆ, ಅಲ್ಲಿಂದ ಠಾಣೆಯ ತಮ್ಮ ನಿವಾಸದಲ್ಲಿ ವಿಶ್ರಾಂತಿ ಪಡೆದಿದ್ದರು.

ಫಡಣವೀಸ್ ಆಪ್ತರೂ ಆಗಿರುವ ಶಾಸಕ ಗಿರೀಶ್ ಮಹಾಜನ್ ಅವರು ಸೋಮವಾರ ರಾತ್ರಿ ಶಿಂದೆ ಅವರನ್ನು ಭೇಟಿಯಾಗಿ, ನೂತನ ಸರ್ಕಾರದ ಭಾಗವಾಗಲು ಮತ್ತು ಉಪ ಮುಖ್ಯಮಂತ್ರಿ ಹುದ್ದೆಯನ್ನು ಒಪ್ಪಿಕೊಳ್ಳುವಂತೆ ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸಮಾರಂಭಕ್ಕೆ ಭರದ ಸಿದ್ಧತೆ: ನೂತನ ಮುಖ್ಯಮಂತ್ರಿಯ ಹೆಸರು ಘೋಷಣೆಯಾಗದಿದ್ದರೂ, ಡಿಸೆಂಬರ್ 5ರಂದು ನಡೆಯಲಿರುವ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಆಜಾದ್ ಮೈದಾನದಲ್ಲಿ ಸಿದ್ಧತೆಗಳು ಭರದಿಂದ ಸಾಗಿವೆ.

ಗುರುವಾರ ಸಂಜೆ 5.30ಕ್ಕೆ ಪ್ರಮಾಣ ವಚನ ಸಮಾರಂಭ ನಡೆಯಲಿದ್ದು, ಫಡಣವೀಸ್ ಅವರು ಮುಖ್ಯಮಂತ್ರಿಯಾಗಿ ಹಾಗೂ ಶಿಂದೆ ಮತ್ತು ಅಜಿತ್ ಪವಾರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ.

ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಬುಧವಾರ ನಿಗದಿಯಾಗಿದ್ದು, ನೂತನ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ಕುತೂಹಲಕ್ಕೆ ತೆರೆಬೀಳಲಿದೆ.

ದಿನದ ಬೆಳವಣಿಗೆ

- ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ಶಿಂದೆ ಭೇಟಿಯಾದ ಫಡಣವೀಸ್
- ತಮ್ಮ ನಿವಾಸದಲ್ಲಿ ಬಿಜೆಪಿ ಮುಖಂಡರು, ಸಚಿವ ಸ್ಥಾನದ ಆಕಾಂಕ್ಷಿಗಳ ಜತೆ ಫಡಣವೀಸ್ ಸರಣಿ ಸಭೆ
- ಪ್ರಮಾಣ ವಚನ ಸಮಾರಂಭದ ಸಿದ್ಧತೆ ಪರಿಶೀಲಿಸಿದ 'ಮಹಾಯುತಿ' ನಾಯಕರು

ಶಿಂದೆ ಆರೋಗ್ಯ ತಪಾಸಣೆ

ಹಂಗಾಮಿ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಮಂಗಳವಾರ ಠಾಣೆಯ ಜುಪಿಟರ್ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

'ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಲು ಆಸ್ಪತ್ರೆಗೆ ಬಂದಿದ್ದೇನೆ. ನನ್ನ ಆರೋಗ್ಯ ಚೆನ್ನಾಗಿಯೇ ಇದೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ತಾಜ್ ಮಹಲ್‌ಗೆ ಬಾಂಬ್ ಬೆದರಿಕೆ

ಆಗ್ರಾ (ಪಿಟಿಐ): ತಾಜ್ ಮಹಲ್ ಸ್ಫೋಟಿಸುವ ಬೆದರಿಕೆಯು ಇ-ಮೇಲ್ ಮೂಲಕ ಉತ್ತರ ಪ್ರದೇಶ ಪ್ರವಾಸೋದ್ಯಮ ಇಲಾಖೆಯ ಕಚೇರಿಗೆ ಮಂಗಳವಾರ ಬಂದಿದ್ದು, ಅದು ಹುಸಿ ಎನ್ನುವುದು ಬಳಿಕ ಗೊತ್ತಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ ಹಾಗೂ ಇನ್ನಿತರ ತಂಡಗಳನ್ನು ಸ್ಥಳಕ್ಕೆ ಕರೆಸಿ ಶೋಧ ನಡೆಸಲಾಯಿತು. ಯಾವುದೇ ಅನುಮಾನಾಸ್ಪದ ವಸ್ತು ಪತ್ತೆಯಾಗಿಲ್ಲ ಎಂದು ತಾಜ್ ಮಹಲ್‌ನ ಭದ್ರತೆ ವಹಿಸಿಕೊಂಡಿರುವ ಎಸಿಪಿ ಸೈಯದ್ ಅರೀಬ್ ಅಹ್ಮದ್ ತಿಳಿಸಿದ್ದಾರೆ.

ಬಾಂಬ್ ಬೆದರಿಕೆಯ ಇ-ಮೇಲ್ ಬಂದ ಕೂಡಲೇ ಆಗ್ರಾ ಪೊಲೀಸ್ ಮತ್ತು ಎಎಸ್‌ಐ ಗಮನಕ್ಕೆ ತರಲಾಯಿತು ಎಂದು ಉತ್ತರ ಪ್ರದೇಶ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕಿ ದೀಪ್ತಿ ವತ್ಸಾ ತಿಳಿಸಿದ್ದಾರೆ.

ಈ ಹಿಂದೆ, 2021ರ ಮಾರ್ಚ್‌ನಲ್ಲಿ ತಾಜ್‌ಮಹಲ್‌ಗೆ ಇದೇ ರೀತಿ ಬಾಂಬ್ ಬೆದರಿಕೆಯ ಹುಸಿ ಕರೆ ಬಂದಿತ್ತು. ಸಿಐಎಸ್‌ಎಫ್ ಮತ್ತು ತಾಜ್ ಸುರಕ್ಷಾ ಪೊಲೀಸ್ ಸಿಬ್ಬಂದಿ ತಾಜ್ ಮಹಲ್ ಆವರಣವನ್ನು ಪರಿಶೀಲಿಸಿದ್ದರು.

ಸಚಿವರಿಗೆ ಕೆಸರು ಎರಚಿದ ಸಂತ್ರಸ್ತರು

ಪ್ರಜಾವಾಣಿ ವಾರ್ತೆ

₹2,000	₹5ಲಕ್ಷ	12	14
ವಿಲ್ಲುಪುರಂ, ಕಡಲೂರು ಮತ್ತು ಕಳ್ಳಕುರಿಚ್ಚಿ ಜಿಲ್ಲೆಗಳ ಕುಟುಂಬದ ಪ್ರತಿಯೊಬ್ಬರಿಗೂ ಘೋಷಿಸಿರುವ ಪರಿಹಾರ ಮೊತ್ತ	ಮಳೆ ಕಾರಣದಿಂದ ಮೃತಪಟ್ಟ ಕುಟುಂಬದವರಿಗೆ ಘೋಷಿಸಿರುವ ಪರಿಹಾರ ಮೊತ್ತ	ಮೃತಪಟ್ಟ ಒಟ್ಟು ಜನರ ಸಂಖ್ಯೆ	ಪ್ರವಾಹ ಪೀಡಿತ ಜಿಲ್ಲೆಗಳ ಸಂಖ್ಯೆ

ಚೆನ್ನೈ: 'ಫೆಂಜಲ್' ಚಂಡಮಾರುತದಿಂದ ತತ್ತರಿಸಿದ ಬದುಕು... ದ್ವೀಪದಂತಾದ ಗ್ರಾಮಗಳು... ತಲುಪದ ಅಗತ್ಯ ವಸ್ತುಗಳು... ವಿಲ್ಲುಪುರಂ ಜಿಲ್ಲೆಯ ಹಲವು ಗ್ರಾಮಗಳಲ್ಲಿನ ಸಂತ್ರಸ್ತರ ಎರಡು ದಿನಗಳ ತಾಳ್ಮೆಯ ಕಟ್ಟೆಯು ಮಂಗಳವಾರ ಒಡೆಯಿತು. ಯೋಗಕ್ಷೇಮ ವಿಚಾರಿಸಲು ಬಂದ ಸಚಿವರಿಗೆ ಕೆಸರು ಎರಚುವುದರ ಮೂಲಕ ಸಂತ್ರಸ್ತರು ತಮ್ಮ ಆಕ್ರೋಶ ಹೊರಹಾಕಿದರು.

ಮಳೆಯಿಂದ ಅರಸೂರ್ ಹಾಗೂ ಇರುವೇಲ್‌ಪಟ್ಟು ಗ್ರಾಮಗಳು ತೀವ್ರ ಹಾನಿಗೆ ಒಳಗಾಗಿವೆ. ಈ ಗ್ರಾಮಗಳಿಗೆ ಭೇಟಿ ನೀಡಿದ ಅರಣ್ಯ ಸಚಿವ ಕೆ. ಪೊನ್ಮುಡಿ ಹಾಗೂ ವಿಲ್ಲುಪುರಂ ಜಿಲ್ಲೆಯ ಇತರೆ ಅಧಿಕಾರಿಗಳು ಜನರ ಆಕ್ರೋಶಕ್ಕೆ ಗುರಿಯಾದರು.

ಗ್ರಾಮಗಳಿಗೆ ಭೇಟಿ ನೀಡಿದ್ದ ವೇಳೆ ಸಚಿವ ಪೊನ್ಮುಡಿ ಸೇರಿ ಯಾವ ಅಧಿಕಾರಿಯೂ ಕಾರಿನಿಂದ ಇಳಿಯಲಿಲ್ಲ. ಇದರಿಂದ ಕುಪಿತಗೊಂಡ ಸಂತ್ರಸ್ತರು, ಕಾರಿನತ್ತ ಕೆಸರು ಎರಚಿದರು.

ಈ ಘಟನೆ ಕುರಿತು ತಮಿಳುನಾಡು ಘಟಕದ ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ಅವರು ಪ್ರತಿಕ್ರಿಯಿಸಿದ್ದಾರೆ. 'ಈ ಘಟನೆಯು ಡಿಎಂಕೆ ಸರ್ಕಾರದ ಕುರಿತು ಜನರಲ್ಲಿ ಇರುವ ಆಕ್ರೋಶ ತೋರಿಸುತ್ತದೆ' ಎಂದಿದ್ದಾರೆ. ಈ ಘಟನೆಯನ್ನು 'ರಾಜಕೀಯ ಪ್ರೇರಿತ' ಎಂದು ಡಿಎಂಕೆ ಹೇಳಿದೆ.



ತಕ್ಷಣ ಪರಿಹಾರ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿ ಪ್ರವಾಹ ಪೀಡಿತ ಪ್ರದೇಶಗಳ ನಿವಾಸಿಗಳು ಅರಸೂರ್‌ನಲ್ಲಿ ಪ್ರತಿಭಟಿಸಿದರು –ಪಿಟಿಐ ಚಿತ್ರ

ತಮಿಳುನಾಡಿನಲ್ಲಿ ಪ್ರವಾಹ ಸ್ಥಿತಿ ಉಂಟಾಗಿರುವ ಕಾರಣ ಅಗತ್ಯವಾಗಿ ನೀಡಬೇಕಾದ ಎಲ್ಲ ಸಹಕಾರವನ್ನು ಕೇಂದ್ರ ಸರ್ಕಾರ ನೀಡಲಿದೆ

ನರೇಂದ್ರ ಮೋದಿ, ಪ್ರಧಾನಿ (ದೂರವಾಣಿ ಕರೆ ಮೂಲಕ ಸ್ಥಿತಿಗತಿ ವಿಚಾರಣೆ)

ತಮಿಳುನಾಡಿನಲ್ಲಿ 'ಫೆಂಜಲ್' ತೀವ್ರ ಹಾನಿ ಉಂಟು ಮಾಡಿದೆ. ಪರಿಹಾರ ಕಾರ್ಯಗಳಲ್ಲಿ ಆಡಳಿತದೊಂದಿಗೆ ಕಾಂಗ್ರೆಸ್ ಕಾರ್ಯಕರ್ತರು ಕೈಜೋಡಿಸಬೇಕು

ರಾಹುಲ್ ಗಾಂಧಿ
ಲೋಕಸಭೆ ವಿರೋಧ ಪಕ್ಷದ ನಾಯಕ

ದಲಿತರ ಪ್ರತಿಭಟನೆ

ಪ್ರವಾಹದಿಂದ ನಿರಾಶ್ರಿತರಾಗಿದ್ದ ಅಯ್ಯಂಪಾಳಯಂ ಗ್ರಾಮದ ದಲಿತ ಸಮುದಾಯಕ್ಕೆ ಸೇರಿದ ನಿವಾಸಿಗಳನ್ನು ಮದುವೆ ಮಂಟಪವೊಂದರಲ್ಲಿ ಇರಿಸಲಾಗಿತ್ತು. ಆದರೆ, ತಮ್ಮನ್ನು ಮಂಟಪದಿಂದ ಹೊರದಬ್ಬಲಾಗಿದೆ ಎಂದು ದಲಿತರು ಆರೋಪಿಸಿದ್ದಾರೆ. ತಮಗೆ ಆಹಾರ, ನೀರು ಮತ್ತು ಉಳಿದುಕೊಳ್ಳಲು ಸೂಕ್ತ ಸ್ಥಳ ನೀಡುವಂತೆ ಒತ್ತಾಯಿಸಿ ಅವರು ಪ್ರತಿಭಟನೆ ನಡೆಸಿದ್ದಾರೆ. ನಮ್ಮ ಕಷ್ಟಗಳನ್ನು ಸರ್ಕಾರ ಆಲಿಸಬೇಕು ಎಂದು ಒತ್ತಾಯಿಸಿ ಡಿಎಂಕೆ ಶಾಸಕ ಅಣ್ಣಿಯೂರ್ ಸಿವಾ ಅವರಿಗೆ ಜನರು ಘೇರಾವ್ ಹಾಕಿದ್ದಾರೆ.

'ರಾಧೆ–ರಾಧೆ ಜಪಿಸಬೇಕು'

ಲಖನೌ: 'ಭಾರತದಲ್ಲಿ ವಾಸಿಸಲು ಬಯಸುವವರು ರಾಧೆ-ರಾಧೆ ಎಂದು ಜಪಿಸಬೇಕು' ಎಂದು ಉತ್ತರ ಪ್ರದೇಶದ ಸಚಿವ ಮಯಂಕೇಶ್ವರ್ ಶರಣ್ ಸಿಂಗ್ ನೀಡಿರುವ ಹೇಳಿಕೆ ವಿವಾದವನ್ನು ಹುಟ್ಟುಹಾಕಿದೆ.

ಸಚಿವರ ಈ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿರುವ ವಿರೋಧ ಪಕ್ಷಗಳು, 'ಬಿಜೆಪಿಯು ದೇಶದ ಸಾಮಾಜಿಕ ವಾತಾವರಣವನ್ನು ಹಾಳುಮಾಡಲು ಪ್ರಯತ್ನಿಸುತ್ತಿದೆ' ಎಂದಿವೆ.

ರಾಮ್ ಕಥಾ ಪಾರ್ಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಭಿಕರಿಂದ ಮೂರು ಬಾರಿ 'ರಾಧೆ-ರಾಧೆ' ಎಂದು ಸಚಿವರು ಹೇಳಿಸಿದ್ದಾರೆ. ಇದರ ವಿಡಿಯೊ ತುಣುಕು ಜಾಲತಾಣಗಳಲ್ಲಿ ಹರಿದಾಡಿದೆ.

'ಬಿಜೆಪಿಯು ಕೋಮು ಸೌಹಾರ್ದಕ್ಕೆ ಭಂಗ ತರಲು ಬಯಸುತ್ತಿದೆ. ಸಚಿವರನ್ನು ಸಂಪುಟದಿಂದ ವಜಾಗೊಳಿಸಬೇಕು' ಎಂದು ಎಸ್‌ಪಿ ನಾಯಕರೊಬ್ಬರು ಒತ್ತಾಯಿಸಿದ್ದಾರೆ.

'ದರ್ಗಾಕ್ಕೆ ಹೋಗಬೇಡಿ, ಅಲ್ಲಿ ಜಿಹಾದಿಗಳನ್ನು ಸಮಾಧಿ ಮಾಡಲಾಗಿದೆ. ಅವರು ಹಿಂದೂ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದ್ದಾರೆ' ಎಂದು ಈ ಹಿಂದೆ ಬಿಜೆಪಿ ಶಾಸಕ ನಂದ್ ಕಿಶೋರ್ ಗುರ್ಜರ್ ಹೇಳಿಕೆ ನೀಡಿದ್ದರು.

ಪಿಂಕ್‌ಬಾಲ್ ಎದುರಿಸುವ ಸವಾಲು

ಅಡಿಲೇಡ್ ಓವಲ್‌ನಲ್ಲಿ ಮುಸ್ಸಂಜೆ ಹೊತ್ತಿನಲ್ಲಿ ಭಾರತದ ಆಟಗಾರರ ಅಭ್ಯಾಸ

● ಮಧು ಜವಳಿ

ಅಡಿಲೇಡ್: ಸಂಜೆ ಸೂರ್ಯ ಮುಳುಗುವ ಹೊತ್ತಿನಲ್ಲಿ ಕ್ರೀಡಾಂಗಣದಲ್ಲಿ ಹೊನಲು ಬೆಳಕು ಪ್ರಖರವಾಗುತ್ತದೆ. ಭಾರತ ತಂಡವು ನೆಟ್ಸ್ ಅಭ್ಯಾಸ ಮಾಡಲು ಇದೇ ಸಮಯವನ್ನು ಆಯ್ಕೆ ಮಾಡಿಕೊಂಡಿದೆ.

ಹಗಲು–ರಾತ್ರಿ ಪಂದ್ಯದಲ್ಲಿ ಸಹಜ ಬೆಳಕು ಮಂದವಾಗುತ್ತ, ವಿದ್ಯುದ್ದೀಪಗಳು ಚೆಲ್ಲುವ ಹೊನಲು ಬೆಳಕು ಹೆಚ್ಚುತ್ತ ಹೋಗುವ ಈ ಹೊತ್ತು ಬ್ಯಾಟರ್‌ಗಳಿಗೆ ಸವಾಲಿನದ್ದು. ಮಂಗಳವಾರ ಮುಸ್ಸಂಜೆ ಅಡಿಲೇಡ್ ಓವಲ್‌ನಲ್ಲಿ ಚೆಲ್ಲಿದ್ದ ಇಂತಹದೇ ಬೆಳಕಿನಲ್ಲಿ ಭಾರತದ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಅವರು ಪುಲ್ ಶಾಟ್‌ಗಳನ್ನು ಆಡಿದರು. ಮೂವರು ಥ್ರೋಡೌನ್ ಪರಿಣತರ ಎಸೆತಗಳನ್ನು ಎದುರಿಸಿದರು. ಆ ಮೂವರು ಕೂಡ ಸೈಡ್ ಆರ್ಮ್ ಸಲಕರಣೆಯ ಮೂಲಕ ಶಾರ್ಟ್ ಪಿಚ್ ಎಸೆತಗಳನ್ನು ಪ್ರಯೋಗಿಸುತ್ತಿದ್ದರು.



ಯಶಸ್ವಿ ಜೈಸ್ವಾಲ್

ಕೆಲಹೊತ್ತಿನ ನಂತರ ಯಶಸ್ವಿ ಅವರು ಆ ಮೂವರಲ್ಲಿ ಒಬ್ಬರಿಗೆ ಮಾತ್ರ ಶಾರ್ಟ್ ಪಿಚ್ ಎಸೆತ ಹಾಕಲು ಹೇಳಿದರು. ಉಳಿದಿಬ್ಬರು ಬೇರೆ ಬೇರೆ ಲೆಂಗ್ತ್ ಎಸೆತಗಳನ್ನು ಹಾಕಿದರು. ಎಡಗೈ ಬ್ಯಾಟರ್ ಯಶಸ್ವಿ ಅವರು ಈಚೆಗೆ ನಡೆದ ಪಿಎಂ ಇಲೆವನ್ ಎದುರಿನ ಅಭ್ಯಾಸ ಪಂದ್ಯದಲ್ಲಿ ಪಿಂಕ್ ಬಾಲ್ ಎಸೆತಗಳನ್ನು ಎದುರಿಸುವಲ್ಲಿ ಹೆಚ್ಚು ಸಫಲರಾಗಿರಲಿಲ್ಲ. ಆದ್ದರಿಂದ ಅಂತಹದೇ ಎಸೆತಗಳನ್ನು ಪದೇ ಪದೇ ಅಭ್ಯಾಸ ಮಾಡಲು ಒತ್ತು ನೀಡಿದರು.

ಪಿಂಕ್ ಬಾಲ್ ಟೆಸ್ಟ್ ಮಾದರಿಯು ಕ್ರಿಕೆಟ್‌ಗೆ ಮಹತ್ವದ ಅಧ್ಯಾಯವಾಗಿ ಸೇರ್ಪಡೆಯಾಗಿದೆ. ಆದರೆ ಇದು ಆಟಗಾರರಿಗೆ ಕೆಲವು ಸವಾಲುಗಳನ್ನೂ ಒಡ್ಡಿದೆ. ಇಲ್ಲಿಯವರೆಗೆ 22 ಪಿಂಕ್ ಬಾಲ್ ಟೆಸ್ಟ್ ಪಂದ್ಯಗಳು ನಡೆದಿವೆ. 2009ರ ನವೆಂಬರ್‌ನಲ್ಲಿ ಮೊದಲ ಪಂದ್ಯವು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ನಡುವಣ ನಡೆದಿತ್ತು. ಇದುವರೆಗೂ ಈ ಮಾದರಿಯಲ್ಲಿರುವ ಕೆಲವು ಸವಾಲುಗಳು ಬ್ಯಾಟರ್, ಬೌಲರ್ ಗಳು, ವಿಕೆಟ್‌ಕೀಪರ್ ಮತ್ತು ಫೀಲ್ಡರ್ ಗಳಿಗೆ ಕಗ್ಗಂಟಾಗಿಯೇ ಉಳಿದಿವೆ.

ಇಳಿಸಂಜೆ ಹೊತ್ತಿನಲ್ಲಿ ನೈಸರ್ಗಿಕ ಬೆಳಕು ಸರಿದು, ಕೃತಕ ಬೆಳಕು ಚೆಲ್ಲುವ ಹೊತ್ತಿನಲ್ಲಿ ಚೆಂಡು ಹೆಚ್ಚು ಸ್ವಿಂಗ್ ಆಗುವುದರಿಂದ ಬ್ಯಾಟರ್‌ಗಳಿಗೆ ಕಠಿಣ ಪರಿಸ್ಥಿತಿ ಎದುರಾಗುತ್ತದೆ. ಚೆಂಡಿನ ಚಲನೆಯನ್ನು ಗುರುತಿಸುವುದು ಮತ್ತು ಊಹಿಸುವುದರಲ್ಲಿ ಲೆಕ್ಕಾಚಾರ ತಪ್ಪಾಗುವ ಸಾಧ್ಯತೆಗಳು ಹೆಚ್ಚು. ಇದರಿಂದಾಗಿ ಬ್ಯಾಟರ್‌ಗಳು ಔಟಾಗುವ ಆತಂಕ ಇರುತ್ತದೆ.

ಇದೇ ಹೊತ್ತಿನಲ್ಲಿ ವಿಕೆಟ್‌ಕೀಪರ್ ಮತ್ತು ಫೀಲ್ಡರ್‌ಗಳಿಗೂ ಚೆಂಡಿನ ಚಲನೆ, ವೇಗಗಳನ್ನು ನಿಖರವಾಗಿ ಗುರುತಿಸುವುದು ಕಷ್ಟವಾಗುತ್ತದೆ. ಇದರಿಂದಾಗಿ ವಿಕೆಟ್‌ಕೀಪರ್ ಮತ್ತು ಫೀಲ್ಡರ್‌ಗಳು ಮಿಸ್ ಫೀಲ್ಡ್ ಮಾಡುವ ಸಾಧ್ಯತೆಗಳು ಹೆಚ್ಚು. ಕ್ಯಾಚ್ ಕೈಚೆಲ್ಲುವ ಆತಂಕವೂ ಇರುತ್ತದೆ.

'ಸಂಜೆ ಬೆಳಕು ಬದಲಾಗುವ ಹೊತ್ತಿನಲ್ಲಿ ಚೆಂಡಿನ ವೇಗ ಊಹಿಸುವುದು ಕಷ್ಟ. ಈ ಸವಾಲನ್ನು ನಿಭಾಯಿಸಲು ಪಂದ್ಯದ ಪ್ರತಿಯೊಂದು ಅವಧಿಯಲ್ಲಿಯೂ ತ್ವರಿತವಾಗಿ ಹೊಂದಿಕೊಳ್ಳಬೇಕು. ನಾವು ಮೂರು ಅವಧಿಯಲ್ಲಿ ಇದನ್ನು ಅಭ್ಯಾಸ ಮಾಡುತ್ತಿದ್ದೇವೆ.

ನಿನ್ನೆ (ಸೋಮವಾರ), ಇಂದು (ಮಂಗಳವಾರ) ಹೊನಲು ಬೆಳಕಿನಡಿಯಲ್ಲಿ ತಾಲೀಮು ಮಾಡುತ್ತೇವೆ. ನಾಳೆಯೂ ಮಾಡುತ್ತೇವೆ' ಎಂದು ಆಸ್ಟ್ರೇಲಿಯಾ ವಿಕೆಟ್‌ಕೀಪರ್ ಅಲೆಕ್ಸ್ ಕ್ಯಾರಿ ಹೇಳಿದರು.

ಪಿಂಕ್ ಬಾಲ್ ಕೇವಲ ಬ್ಯಾಟರ್, ಫೀಲ್ಡರ್‌ಗಳಿಗಷ್ಟೇ ಅಲ್ಲ. ಬೌಲರ್‌ಗಳಿಗೂ ಕೆಲವೊಂದು ಸವಾಲುಗಳನ್ನು ಒಡ್ಡುತ್ತದೆ.

'ಕೆಂಪುವರ್ಣದ ಚೆಂಡಿಗಿಂತ ಪಿಂಕ್ ಬಾಲ್ ಭಿನ್ನವಾಗಿದೆ. ಸಿಂಥೆಟಿಕ್ ಮಾದರಿಯಂತಿದೆ. ಕೆಲವು ಗೊಂದಲಗಳು ಆಗುತ್ತವೆ. ಆದರೆ ಅದನ್ನು ಪರಿಹರಿಸಿಕೊಳ್ಳಲು ಕಠಿಣ ತಾಲೀಮು ಮತ್ತು ಪಂದ್ಯದಲ್ಲಿ ಅಪಾರ ಏಕಾಗ್ರತೆಯನ್ನು ಸಾಧಿಸುವುದು ಮುಖ್ಯ' ಎಂದು ಕ್ಯಾನ್‌ಬೆರಾದಲ್ಲಿ ಅಭ್ಯಾಸ ಪಂದ್ಯದ ನಂತರ ಭಾರತದ ವೇಗಿ ಮೊಹಮ್ಮದ್ ಸಿರಾಜ್ ಸುದ್ದಿಗಾರರಿಗೆ ಹೇಳಿದ್ದರು.

ಕಳೆದ ಎಲ್ಲ ಪಿಂಕ್ ಬಾಲ್ ಟೆಸ್ಟ್‌ಗಳ ಫಲಿತಾಂಶಗಳನ್ನು ನೋಡಿದರೆ ಬೌಲರ್‌ಗಳೇ ಪಾರಮ್ಯ ಮೆರೆದಿದ್ದಾರೆ. ಕಳೆದ 22 ಪಂದ್ಯಗಳಲ್ಲಿಯೂ ಫಲಿತಾಂಶ ಹೊರಹೊಮ್ಮಿರುವುದು ವಿಶೇಷ. ಅದರಲ್ಲಿ ಐದು ಟೆಸ್ಟ್‌ಗಳು ಮಾತ್ರ ಐದನೇ ದಿನದವರೆಗೂ ನಡೆದಿವೆ. ಎರಡು ಪಂದ್ಯಗಳು ಎರಡನೇ ದಿನವೇ ಮುಕ್ತಾಯವಾಗಿವೆ.

ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಏಳನೇ ಸುತ್ತು

ಎಡವಿದ ಗುಕೇಶ್: ಮತ್ತೆ ಪಂದ್ಯ ಡ್ರಾ

ಸಿಂಗಪುರ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ. ಗುಕೇಶ್ ಮತ್ತು ಹಾಲಿ ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ನಡುವಣ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಏಳನೇ ಸುತ್ತಿನ ಪಂದ್ಯ ಮಂಗಳವಾರ ಸುದೀರ್ಘವಾಗಿ ನಡೆದು ಡ್ರಾ ಆಯಿತು.

ಇದು ಸತತ ನಾಲ್ಕನೇ ಹಾಗೂ ಒಟ್ಟಾರೆ ಐದನೇ ಡ್ರಾ. ಈ ಪಂದ್ಯದಲ್ಲಿ 72 ನಡೆಗಳು ದಾಖಲಾದವು. ಪಂದ್ಯದ ನಂತರ ಇಬ್ಬರೂ ತಲಾ 3.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಮೊದಲು 7.5 ಪಾಯಿಂಟ್ಸ್ ತಲುಪಿದವರು ಕಿರೀಟ ಮುಡಿಗೇರಿಸಿಕೊಳ್ಳುವರು.

ಬಿಳಿ ಕಾಯಿಗಳಲ್ಲಿ ಆಡಿದ ಗುಕೇಶ್ ಬಳಿ ಅಂತಿಮವಾಗಿ ಕಿಂಗ್ ಹಾಗೂ ಬಿಷಪ್ ಉಳಿದಿದ್ದವು. ಚೀನಾದ ಆಟಗಾರನ ಬಳಿ ಕಿಂಗ್ ಮಾತ್ರ ಉಳಿದಿತ್ತು. ಈ ಪಂದ್ಯ ಐದು ಗಂಟೆ ಮತ್ತು 22 ನಿಮಿಷ ನಡೆಯಿತು.

ಅತ್ಯಂತ ಕಿರಿಯ ಚಾಲೆಂಜರ್ ಎನಿಸಿರುವ ಗುಕೇಶ್ ಒಂದು ಹಂತದಲ್ಲಿ ಗೆಲುವಿನ ಹೊಸ್ತಿಲಲ್ಲಿದ್ದರು. ಆದರೆ, ಅವರ ತಪ್ಪಾದ ಲೆಕ್ಕಾಚಾರದಿಂದಾಗಿ ಪಂದ್ಯ ಡ್ರಾನತ್ತ ತಿರುಗಿತು.


32 ವರ್ಷ ವಯಸ್ಸಿನ ಲಿರೆನ್ ಮೊದಲ ಪಂದ್ಯವನ್ನು, 18 ವರ್ಷ ವಯಸ್ಸಿನ ಗುಕೇಶ್ ಮೂರನೇ ಪಂದ್ಯವನ್ನು ಗೆದ್ದುಕೊಂಡಿದ್ದರು. ಉಳಿದ ಐದು ಪಂದ್ಯಗಳಲ್ಲೂ ಇಬ್ಬರೂ ಪಾಯಿಂಟ್ ಹಂಚಿಕೊಂಡಿದ್ದಾರೆ.

14 ಪಂದ್ಯಗಳ ಫೈನಲ್‌ನ ಅರ್ಧಹಾದಿ ಈಗ ಮುಗಿದಿದೆ. ಗುರುವಾರ 8ನೇ ಪಂದ್ಯದಲ್ಲಿ ಗುಕೇಶ್ ಕಪ್ಪು ಕಾಯಿಯಲ್ಲಿ ಆಡಲಿದ್ದಾರೆ.



ಎಂಟನೇ ಸುತ್ತಿನ ಪಂದ್ಯದ ವೇಳೆ ಡಿ. ಗುಕೇಶ್ ಮತ್ತು ಡಿಂಗ್ ಲಿರೆನ್ ಹಸ್ತಲಾಘವ ಮಾಡಿದರು –ಎಕ್ಸ್ ಚಿತ್ರ

ನಾರ್ವೆ ಚೆಸ್ ಟೂರ್ನಿ ಆಡಲಿರುವ ಅರ್ಜುನ್ ಇರಿಗೇಶಿ



ಸ್ಟಾವೆಂಜರ್ (ನಾರ್ವೆ): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ಪ್ರತಿಷ್ಠಿತ ನಾರ್ವೆ ಚೆಸ್ ಟೂರ್ನಿಗೆ ಪದಾರ್ಪಣೆ ಮಾಡಲಿದ್ದಾರೆ. ಈ ಟೂರ್ನಿ ಮುಂದಿನ ವರ್ಷದ ಮೇ 26 ರಿಂದ ಜೂನ್ 6ರವರೆಗೆ ನಡೆಯಲಿದೆ.

ಇತ್ತೀಚೆಗಷ್ಟೇ ಅರ್ಜುನ್ ಅವರು, ವಿಶ್ವನಾಥನ್ ಆನಂದ್ ನಂತರ 2800 ರೇಟಿಂಗ್ ದಾಟಿದ ಭಾರತದ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ ಭಾಜನರಾಗಿದ್ದರು.

21 ವರ್ಷ ವಯಸ್ಸಿನ ಈ ಆಟಗಾರ ಪ್ರಸ್ತುತ ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ಈ ಟೂರ್ನಿಯಲ್ಲಿ ವಿಶ್ವದ ಆರು ಅಗ್ರ ಆಟಗಾರರು ಮತ್ತು ಆಟಗಾರ್ತಿಯರು ಭಾಗವಹಿಸಲಿದ್ದಾರೆ. ಪುರುಷರ ಮತ್ತು ಮಹಿಳಾ ವಿಭಾಗದ ವಿಜೇತರಿಗೆ ಸಮಾನ ಬಹುಮಾನ ನೀಡಲಾಗುತ್ತಿದೆ. ಡಬಲ್ ರೌಂಡ್‌ರಾಬಿನ್ ಲೀಗ್ (ಎದುರಾಳಿ ಆಟಗಾರರ ವಿರುದ್ಧ ತಲಾ ಎರಡು ಬಾರಿ ಆಡುವ) ಮಾದರಿಯಲ್ಲಿ ನಡೆಯುತ್ತದೆ.

ನ್ಯೂಜಿಲೆಂಡ್‌ಗೆ ಡಬ್ಲ್ಯುಟಿಸಿ ಪಾಯಿಂಟ್ ಕಡಿತ

ದುಬೈ (ಪಿಟಿಐ): ನ್ಯೂಜಿಲೆಂಡ್ ಕ್ರಿಕೆಟ್ ತಂಡಕ್ಕೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪ್ರವೇಶಿಸುವ ಹಾದಿ ಈಗ ಕಡುಕಠಿಣವಾಗಿದೆ. ಏಕೆಂದರೆ ದಂಡ ಶಿಕ್ಷೆಗೆ ಒಳಗಾಗಿರುವ ತಂಡವು 3 ಡಬ್ಲ್ಯುಟಿಸಿ ಪಾಯಿಂಟ್ ಕಳೆದುಕೊಂಡಿದೆ.

ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ನಿಗದಿಯ ಅವಧಿಯಲ್ಲಿ ಓವರ್‌ಗಳನ್ನು ಪೂರೈಸದ ಕಾರಣಕ್ಕೆ ಪಾಯಿಂಟ್ಸ್ ಕಳೆದುಕೊಂಡಿದೆ. ಇದರಿಂದಾಗಿ ಪಾಯಿಂಟ್ ಪಟ್ಟಿಯಲ್ಲಿ ಕುಸಿತ ಕಂಡಿದೆ.

ಇದು ಭಾರತಕ್ಕೆ ಸಂತಸದ ಸುದ್ದಿಯಾಗಿದೆ. ರೋಹಿತ್ ಶರ್ಮಾ ಬಳಗವು ಸದ್ಯ ಡಬ್ಲ್ಯುಟಿಸಿ ಪಾಯಿಂಟ್ ಪಟ್ಟಿಯಲ್ಲಿ 61.11 ರ ಪಾಯಿಂಟ್ಸ್ ಪರ್ಸಂಟೇಜ್‌ನಲ್ಲಿ ಅಗ್ರಸ್ಥಾನದಲ್ಲಿದೆ. ನ್ಯೂಜಿಲೆಂಡ್ ತಂಡದ ಶೇಕಡಾವಾರು ಪಾಯಿಂಟ್‌ಗಳು 47.92ರಷ್ಟಾಗಿದೆ. ಇಂಗ್ಲೆಂಡ್ ಎದುರು ಉಳಿದಿರುವ ಇನ್ನೆರಡು ಪಂದ್ಯಗಳಲ್ಲಿ ಗೆದ್ದರೂ ನ್ಯೂಜಿಲೆಂಡ್ ಶೇಕಡಾವಾರು ಲೆಕ್ಕವು 55.36ಕ್ಕೇರಬಹುದು.

ಜೂನಿಯರ್ ಹಾಕಿ: ಫೈನಲ್‌ಗೆ ಭಾರತ

ಮಸ್ಕತ್ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಪುರುಷರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಮಂಗಳವಾರ 3–1 ಗೋಲುಗಳಿಂದ ಮಲೇಷ್ಯಾ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತು.

ಟೂರ್ನಿಯಲ್ಲಿ ಅಜೇಯವಾಗಿರುವ ಭಾರತ, ಬುಧವಾರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಪಾಕಿಸ್ತಾನವನ್ನು ಎದುರಿಸಲಿದೆ. ಮತ್ತೊಂದು ಸೆಮಿಫೈನಲ್‌ನಲ್ಲಿ ಪಾಕಿಸ್ತಾನವು 4–2ರಿಂದ ಜಪಾನ್ ತಂಡವನ್ನು ಮಣಿಸಿತು. ಪಾಕ್ ತಂಡವೂ ಟೂರ್ನಿಯಲ್ಲಿ ಅಜೇಯವಾಗಿ ಉಳಿದಿದೆ.

ಭಾರತದ ಪರ ದಿಲ್‌ರಾಜ್ ಸಿಂಗ್ (10ನೇ ನಿಮಿಷ), ರೋಹಿತ್ (45ನೇ ನಿ) ಮತ್ತು ಶಾರದಾ ನಂದ ತಿವಾರಿ (52ನೇ) ಅವರು ತಲಾ ಒಂದು ಗೋಲು ದಾಖಲಿಸಿದರು. ಅಜೀಮುದ್ದೀನ್ ಕಮರುದ್ದೀನ್ (57) ಅವರು ಮಲೇಷ್ಯಾ ಪರ ಏಕೈಕ ಗೋಲು ತಂದಿತ್ತರು.



ಭಾರತ ಮತ್ತು ಮಲೇಷ್ಯಾ ತಂಡಗಳ ನಡುವೆ ಪೈಪೋಟಿ –ಎಕ್ಸ್ ಚಿತ್ರ

ಭಾರತ ಈ ಹಿಂದೆ 2004, 2008, 2015 ಮತ್ತು 2023ರಲ್ಲಿ ಪ್ರಶಸ್ತಿ ಗೆದ್ದುಕೊಂಡಿತ್ತು. ಸತತ ಮೂರನೇ ಬಾರಿ ಫೈನಲ್ ಪ್ರವೇಶಿಸಿರುವ ಭಾರತ, ಐದನೇ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದೆ.

ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್: ಶ್ರೇಯಸ್ ಗೋಪಾಲ್ ಹ್ಯಾಟ್ರಿಕ್

ಕರ್ನಾಟಕದ ಕ್ವಾರ್ಟರ್‌ಫೈನಲ್ ಕನಸು ಭಗ್ನ


ಇಂದೋರ್: ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರ ಪಾಲಿಗೆ ಮಂಗಳವಾರವು ಸ್ಮರಣೀಯ ದಿನವಾಯಿತು. ಆದರೆ, ಕರ್ನಾಟಕ ತಂಡಕ್ಕೆ ಮಾತ್ರ ಗೆಲುವು ಒಲಿಯಲಿಲ್ಲ.

ಎಮರಾಲ್ಡ್ ಹೈಸ್ಕೂಲ್ ಮೈದಾನ ದಲ್ಲಿ ನಡೆದ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಬರೋಡಾ ತಂಡವು ಕರ್ನಾಟಕದ ಎದುರು 4 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸುವ ಮಯಂಕ್ ಅಗರವಾಲ್ ಬಳಗದ ಕನಸು ಕಮರಿತು.

ಬಿ ಗುಂಪಿನಲ್ಲಿ ಕರ್ನಾಟಕ ತಂಡವು ಆಡಿರುವ 6 ಪಂದ್ಯಗಳಲ್ಲಿ 3 ಗೆದ್ದು, 3ರಲ್ಲಿ ಸೋತಿದೆ. 12 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ಸೌರಾಷ್ಟ್ರ, ಗುಜರಾತ್ ಮತ್ತು ಬರೋಡಾ ತಂಡಗಳು ತಲಾ 20 ಅಂಕ ಗಳಿಸಿವೆ. ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿವೆ.

ಎಲ್ಲ ತಂಡಗಳಿಗೂ ಗುಂಪು ಹಂತದಲ್ಲಿ ತಲಾ ಒಂದು ಪಂದ್ಯ ಬಾಕಿಯಿದೆ. ಕರ್ನಾಟಕವು ಗುಜರಾತ್ ತಂಡವನ್ನು ಡಿ 5ರಂದು ಎದುರಿಸಲಿದೆ.

ಕರ್ನಾಟಕ ತಂಡವು ಈ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿತು. ಇನಿಂಗ್ಸ್ ಆರಂಭಿಸಿದ ಮನೀಷ್ ಪಾಂಡೆ (10; 6ಎ, 6X1) ಮತ್ತು ಮಯಂಕ್ ಅಗರವಾಲ್ (1; 3ಎ) ಬೇಗನೇ ಔಟಾದರು. ಅಭಿನವ್ ಮನೋಹರ್ (56; 34ಎ, 6X6) ಶ್ರೀಜಿತ್ (22; 9ಎ, 6X3) ಹಾಗೂ ಸ್ಮರಣ್ (38ರನ್) ಅವರ ನೆರವಿನಿಂದ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 169 ರನ್ ಗಳಿಸಿತು.



ಶ್ರೇಯಸ್ ಗೋಪಾಲ್

ಅದಕ್ಕುತ್ತರವಾಗಿ ಬರೋಡಾ ತಂಡವು 18.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 172 ರನ್ ಗಳಿಸಿ ಜಯಿಸಿತು. ಕರ್ನಾಟಕದ ಮಟ್ಟಿಗೆ ಶ್ರೇಯಸ್ ಗೋಪಾಲ್ ಅವರ ಹ್ಯಾಟ್ರಿಕ್ ಒಂದೇ ಸಂತಸ ತಂದ ಸಂಗತಿ.

ಇನಿಂಗ್ಸ್‌ನ 11ನೇ ಓವರ್‌ನಲ್ಲಿ ಬರೋಡಾ ತಂಡದ ಶಾಶ್ವತ್ ರಾವತ್ (63; 37ಎ, 4X7, 6X2), ಹಾರ್ದಿಕ್ ಪಾಂಡ್ಯ ಮತ್ತು ಕೃಣಾಲ್ ಪಾಂಡ್ಯ ಅವರ ವಿಕೆಟ್‌ಗಳನ್ನು ಸತತ ಮೂರು ಎಸೆತಗಳಲ್ಲಿ ಉರುಳಿಸಿದರು. ಈ ಹಂತದಲ್ಲಿ ಬರೋಡಾ ತಂಡದ ಮೊತ್ತವು 4 ವಿಕೆಟ್‌ಗಳಿಗೆ 102 ರನ್‌ಗಳಾಗಿತ್ತು. ಇದು ಕರ್ನಾಟಕದಲ್ಲಿ ಗೆಲುವಿನ ಆಸೆ ಮೂಡಿಸಿತ್ತು.

ಆದರೆ, ಕೊನೆಯ ಹಂತದಲ್ಲಿ ವಿಷ್ಣು ಸೋಳಂಕಿ (ಔಟಾಗದೆ 28) ಹಾಗೂ ಶಿವಾಲಿಕ್ ಶರ್ಮಾ (22; 21ಎ) ಅವರಿಬ್ಬರೂ ಕರ್ನಾಟಕ ಬೌಲರ್‌ಗಳನ್ನು ದಂಡಿಸಿದರು. ತಮ್ಮ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 169 (ಕೆ.ಎಲ್. ಶ್ರೀಜಿತ್ 22, ಸ್ಮರಣ್ ರವಿಚಂದ್ರನ್ 38, ಅಭಿನವ್ ಮನೋಹರ್ ಔಟಾಗದೆ 56, ಕೃಣಾಲ್ ಪಾಂಡ್ಯ 19ಕ್ಕೆ2, ಅತೀಥ್ ಶೇಟ್ 45ಕ್ಕೆ2) ಬರೋಡಾ: 18.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 172 (ಶಾಶ್ವತ್ ರಾವತ್ 63, ಭಾನು ಪನಿಯಾ 42, ಶಿವಾಲಿಕ್ ಶರ್ಮಾ 22, ವಿಷ್ಣು ಸೋಳಂಕಿ ಔಟಾಗದೆ 28, ಶ್ರೇಯಸ್ ಗೋಪಾಲ್ 19ಕ್ಕೆ4) **ಫಲಿತಾಂಶ:** ಬರೋಡಾ ತಂಡಕ್ಕೆ 4 ವಿಕೆಟ್‌ಗಳ ಜಯ.

ಕ್ರಿಕೆಟ್ ನಾಳೆಯಿಂದ

ಬೆಂಗಳೂರು: ನಗರದ ರಾಮಯ್ಯ ತಾಂತ್ರಿಕ ಕಾಲೇಜಿನ ಆತಿಥ್ಯದಲ್ಲಿ 23ನೇ ವರ್ಷದ ಡಾ.ಎಂ.ಎಸ್.ರಾಮಯ್ಯ ಸ್ಮಾರಕ ರಾಜ್ಯ ಮಟ್ಟದ ಅಂತರ ಎಂಜಿನಿಯರಿಂಗ್ ಕಾಲೇಜುಗಳ ಕ್ರಿಕೆಟ್ ಟೂರ್ನಿ ಇದೇ 5ರಂದು 12ರವರೆಗೆ ಆಯೋಜಿಸಲಾಗಿದೆ ಕಾಲೇಜಿನ ಪ್ರಕಟಣೆ ತಿಳಿಸಿದ್ದಾರೆ.


ರಾಣಾ ದಾಳಿ: ವಿಂಡೀಸ್ ತತ್ತರ

ಕಿಂಗ್‌ಸ್ಟನ್, ಜಮೈಕಾ (ಪಿಟಿಐ): ವೇಗಿ ನಹೀದ್ ರಾಣಾ (61ಕ್ಕೆ5) ಅವರ ಅಮೋಘ ಬೌಲಿಂಗ್ ಬಲದಿಂದ ಬಾಂಗ್ಲಾದೇಶ ತಂಡವು ಇಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ವೆಸ್ಟ್ ಇಂಡೀಸ್‌ಗೆ ಪ್ರಬಲ ತಿರುಗೇಟು ನೀಡಿತು.ಅಲ್ಲದೇ ವಿಂಡೀಸ್ ಬಳಗಕ್ಕೆ ಕಠಿಣ ಗುರಿಯೊಡ್ಡುವತ್ತಲೂ ಮುಂದಡಿ ಇಟ್ಟಿದೆ.

ಬಾಂಗ್ಲಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 164 ರನ್‌ಗಳ ಸಾಧಾರಣ ಮೊತ್ತಕ್ಕೆ ಆಲೌಟ್ ಆಗಿತ್ತು. ಆದರೆ ವಿಂಡೀಸ್ ಬ್ಯಾಟರ್‌ಗಳು ವಿಫಲರಾದರು. ರಾಣಾ ಅವರ ಬೌಲಿಂಗ್ ಮುಂದೆ ತತ್ತರಿಸಿದರು. ಇದರಿಂದಾಗಿ ತಂಡವು ಕೇವಲ 146 ರನ್‌ಗಳಿಗೆ ಕುಸಿಯಿತು. ಬಾಂಗ್ಲಾ 18 ರನ್‌ಗಳ ಅಲ್ಪ ಮುನ್ನಡೆ ಪಡೆಯಿತು. ಎರಡನೇ ಇನಿಂಗ್ಸ್ ಆರಂಭಿಸಿರುವ ಬಾಂಗ್ಲಾ ತಂಡವು ಮೂರನೇ ದಿನದಾಟದ ಅಂತ್ಯಕ್ಕೆ 41.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 193 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 71.5 ಓವರ್‌ಗಳಲ್ಲಿ 164. ವೆಸ್ಟ್ ಇಂಡೀಸ್: 65 ಓವರ್‌ಗಳಲ್ಲಿ 146 (ಕ್ರೇಗ್ ಬ್ರೇಥ್‌ವೇಟ್ 39, ಕೀಸಿ ಕಾರ್ಟಿ 40, ಹಸನ್ ಮೆಹಮೂದ್ 19ಕ್ಕೆ2, ನಹೀದ್ ರಾಣಾ 61ಕ್ಕೆ5). ಎರಡನೇ ಇನಿಂಗ್ಸ್: ಬಾಂಗ್ಲಾದೇಶ: 41.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 193 (ಶಾದ್ಮನ್ ಇಸ್ಲಾಂ 46, ಶಹಾದತ್ ಹುಸೇನ್ 28, ಮೆಹದಿ ಹಸನ್ ಮಿರಾಜ್ 42, ಲಿಟನ್ ದಾಸ್ 25, ಜಾಕಿರ್ ಅಲಿ ಬ್ಯಾಟಿಂಗ್ 29, ಶೆಮರ್ ಜೋಸೆಫ್ 70ಕ್ಕೆ2)

ಸ್ಕ್ವಾಷ್ ಕ್ರೀಡೆಯ ದಂತಕತೆ ರಾಜ್ ಮನಚಂದಾ ಇನ್ನಿಲ್ಲ



ನವದೆಹಲಿ (ಪಿಟಿಐ): ಸ್ಕ್ವಾಷ್ ಕ್ರೀಡೆಯ ದಂತಕತೆ ರಾಜ್ ಮನಚಂದಾ (79) ಇಲ್ಲಿ ಭಾನುವಾರ ನಿಧನರಾದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

1977ರಿಂದ 1982ರವರೆಗೆ ರಾಷ್ಟ್ರೀಯ ಚಾಂಪಿಯನ್ ಆಗಿದ್ದ ಅವರು, ಸರ್ವಿಸಸ್‌ಗಾಗಿ 11 ಪ್ರಶಸ್ತಿ ಜಯಿಸಿದ್ದರು. ಭಾರತದ ಸ್ಕ್ವಾಷ್ ಕ್ರೀಡೆಯ ಇತಿಹಾಸದಲ್ಲಿ ಗುರುತಿಸಬಹುದಾದ ದಿಗ್ಗಜ ಆಟಗಾರರಲ್ಲಿ ಅವರೂ ಪ್ರಮುಖರಾಗಿದ್ದಾರೆ. 1983ರಲ್ಲಿ ಅವರಿಗೆ ಅರ್ಜುನ ಪ್ರಶಸ್ತಿ ಸಂದಿದೆ.

1981ರಲ್ಲಿ ಕರಾಚಿಯಲ್ಲಿ ನಡೆದ ಏಷ್ಯನ್ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದ ಭಾರತ ತಂಡವನ್ನು ಅವರು ಮುನ್ನಡೆಸಿದ್ದರು. 1984ರಲ್ಲಿ ಜೋರ್ಡಾನ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದು ಅವರ ಅತ್ಯುತ್ತಮ ವೈಯಕ್ತಿಕ ಪ್ರದರ್ಶನವಾಗಿದೆ. ಅಲ್ಲಿ ಅವರ ನೇತೃತ್ವದ ಭಾರತ ತಂಡವು ಕಂಚಿನ ಪದಕ ಗೆದ್ದುಕೊಂಡಿತು.

ಏಷ್ಯನ್ ಹ್ಯಾಂಡ್‌ಬಾಲ್ ಚಾಂಪಿಯನ್‌ಷಿಪ್

ಭಾರತ ವನಿತೆಯರ ಶುಭಾರಂಭ

ನವದೆಹಲಿ (ಪಿಟಿಐ): ಆತಿಥೇಯ ಭಾರತ ಮಹಿಳೆಯರ ತಂಡವು 20ನೇ ಏಷ್ಯನ್ ಹ್ಯಾಂಡ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿತು.

ಇಲ್ಲಿನ ಇಂದಿರಾ ಗಾಂಧಿ ಅರೇನಾದಲ್ಲಿ ಮಂಗಳವಾರ ಆರಂಭಗೊಂಡ ಟೂರ್ನಿಯ ರೋಚಕ ಪಂದ್ಯದಲ್ಲಿ ಭಾರತ 31–28ರಿಂದ ಹಾಂಗ್‌ಕಾಂಗ್ ತಂಡವನ್ನು ಮಣಿಸಿತು. ವಿರಾಮದ ವೇಳೆ 6 (16–10) ಪಾಯಿಂಟ್ಸ್‌ಗಳ ಮುನ್ನಡೆ ಪಡೆದಿದ್ದ ಆತಿಥೇಯ ತಂಡಕ್ಕೆ ಉತ್ತರಾರ್ಧದಲ್ಲಿ ಎದುರಾಳಿ ತಂಡವು ಪ್ರಬಲ ಪೈಪೋಟಿ ನೀಡಿತು.

ದಿನದ ಇತರ ಪಂದ್ಯಗಳಲ್ಲಿ ಜಪಾನ್ 34–14ರಿಂದ ಇರಾನ್ ತಂಡವನ್ನು; ಕಜಕಸ್ತಾನ 28–26ರಿಂದ ಚೀನಾ ತಂಡವನ್ನು; ಕೊರಿಯಾ 47–5ರಿಂದ ಸಿಂಗಪುರ ತಂಡವನ್ನು ಮಣಿಸಿದವು.

ಭಾರತದಲ್ಲಿ ಮೊದಲ ಬಾರಿ ಏಷ್ಯನ್ ಟೂರ್ನಿ ಆಯೋಜನೆಗೊಂಡಿದ್ದು, ಒಟ್ಟು ಎಂಟು ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸುತ್ತಿವೆ.

ದೀಕ್ಷಾ ಕುಮಾರಿ ನಾಯಕತ್ವದಲ್ಲಿ 25 ಮಂದಿಯ ಭಾರತ ತಂಡವು ಏಷ್ಯಾದ ಅಗ್ರ ತಂಡಗಳೊಂದಿಗೆ ಸೆಣಸಲಿದೆ. ಜಪಾನ್, ಇರಾನ್ ಮತ್ತು ಹಾಂಗ್‌ಕಾಂಗ್ ತಂಡದೊಂದಿಗೆ ಭಾರತವು ಬಿ ಗುಂಪಿನಲ್ಲಿ ಸ್ಥಾನ ಪಡೆದಿದೆ.

ಭಾರತವು ಬುಧವಾರ ಇರಾನ್ ವಿರುದ್ಧ; ಶುಕ್ರವಾರ ಜಪಾನ್ ವಿರುದ್ಧ ಸೆಣಸಲಿದೆ. ಎರಡು ಗುಂಪುಗಳಲ್ಲಿ ಅಗ್ರಸ್ಥಾನ ಪಡೆಯುವ ಎರಡು ತಂಡಗಳು ಸೆಮಿಫೈನಲ್‌ಗೆ ಮುನ್ನಡೆಯಲಿವೆ.



ಬೆಂಗಳೂರು ಬುಲ್ಸ್ ರೇಡರ್‌ನನ್ನು ಹಿಡಿಯಲು ಯತ್ನಿಸಿದ ಗುಜರಾತ್ ಜೈಂಟ್ಸ್ ಆಟಗಾರರು –ಎಕ್ಸ್ ಚಿತ್ರ

ಟೈ ಪಂದ್ಯದಲ್ಲಿ ಬುಲ್ಸ್–ಜೈಂಟ್ಸ್

ಪುಣೆ: ಸತತ ಎಂಟು ಪಂದ್ಯಗಳನ್ನು ಸೋತ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಮಂಗಳವಾರದ ರೋಚಕ ಹಣಾಹಣಿಯಲ್ಲಿ 34–34ರಿಂದ ಗುಜರಾತ್ ಜೈಂಟ್ಸ್ ಜೊತೆ 'ಟೈ' ಸಾಧಿಸಿತು.

ಪುಣೆ ಲೆಗ್‌ನ ಮೊದಲ ಪಂದ್ಯದ ವಿರಾಮದ ವೇಳೆ ಬುಲ್ಸ್ ತಂಡವು ಎರಡು (15–13) ಪಾಯಿಂಟ್ಸ್ ಮುನ್ನಡೆ ಪಡೆದಿತ್ತು. ಆದರೆ, ಉತ್ತರಾರ್ಧದಲ್ಲಿ ರೇಡಿಂಗ್‌ನಲ್ಲಿ ಮಿಂಚಿದ ಜೈಂಟ್ಸ್, ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು. ಎರಡೂ ತಂಡಗಳು ಒಂದೊಂದು ಬಾರಿ ಆಲೌಟ್ ಆದವು.

ಬುಲ್ಸ್‌ನ ನಿತಿನ್ ರಾವಲ್ ಟ್ಯಾಕಲ್‌ನಲ್ಲಿ ಏಳು ಅಂಕ ಗಳಿಸಿದರೆ, ನಾಯಕ ಪ್ರದೀಪ್ ನರ್ವಾಲ್ ಮತ್ತು ಸುಶೀಲ್ ರೇಡಿಂಗ್‌ನಲ್ಲಿ ತಲಾ ಆರು ಪಾಯಿಂಟ್ಸ್ ಗಳಿಸಿದರು. ಜೈಂಟ್ಸ್ ಪರ ರಾಕೇಶ್ ಸುಂಗ್ರೋಯಾ (7) ಮತ್ತು ನೀರಜ್ ಕುಮಾರ್ (5) ಮಿಂಚಿದರು.

ಬುಲ್ಸ್ 16 ಪಂದ್ಯಗಳಲ್ಲಿ 19 ಅಂಕ ಗಳಿಸಿ ಪಾಯಿಂಟ್ ಪಟ್ಟಿಯಲ್ಲಿ 12ನೇ ಸ್ಥಾನದಲ್ಲಿ ಮುಂದುವರಿದಿದೆ. ಜೈಂಟ್ಸ್ ತಂಡವು (29) 10ನೇ ಸ್ಥಾನದಲ್ಲಿದೆ.

ದಿನದ ಮತ್ತೊಂದು ಪಂದ್ಯದಲ್ಲಿ ಯು ಮುಂಬಾ 43–29ರಿಂದ ಪುಣೇರಿ ಪಲ್ಟನ್ ತಂಡವನ್ನು ಮಣಿಸಿತು.

ಕ್ರಿಕೆಟ್ ದಿಗ್ಗಜ ಬ್ರಾಡ್ಮನ್ ಕ್ಯಾಪ್‌ಗೆ ₹ 2.63 ಕೋಟಿ ಮೌಲ್ಯ

ಸಿಡ್ನಿ (ಪಿಟಿಐ): ಕ್ರಿಕೆಟ್ ದಿಗ್ಗಜ, ಆಸ್ಟ್ರೇಲಿಯಾದ ಸರ್ ಡಾನ್ ಬ್ರಾಡ್ಮನ್ ಅವರು ಧರಿಸುತ್ತಿದ್ದ ಬ್ಯಾಗಿ ಗ್ರೀನ್ ಕ್ಯಾಪ್ ₹ 2.63 ಕೋಟಿ ಮೌಲ್ಯ ಗಿಟ್ಟಿಸಿದೆ.

ಮಂಗಳವಾರ ನಡೆದ ಹರಾಜು ಪ್ರಕ್ರಿಯೆಯಲ್ಲಿ ಈ ಐತಿಹಾಸಿಕ ಮಹತ್ವದ ಕ್ಯಾಪ್ ಭಾರಿ ಬೇಡಿಕೆ ಪಡೆಯಿತು.



ಆಸ್ಟ್ರೇಲಿಯಾದ ಡಾನ್ ಬ್ರಾಡ್ಮನ್ ಅವರ ಕ್ಯಾಪ್ –ಎಎಫ್‌ಪಿ ಚಿತ್ರ

ಬ್ರಾಡ್ಮನ್ ಧರಿಸಿದ್ದ ಈ ಕ್ಯಾಪ್ ಸುಮಾರು 80 ವರ್ಷ ಹಳೆಯದು. 1947–48ರಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ಪ್ರವಾಸ ಮಾಡಿತ್ತು. ಅದು ಬ್ರಾಡ್ಮನ್ ಅವರು ತವರಿನಲ್ಲಿ ಆಡಿದ ಕೊನೆಯ ಟೆಸ್ಟ್ ಸರಣಿಯಾಗಿತ್ತು. ಸರಣಿಯನ್ನು ಆಸ್ಟ್ರೇಲಿಯಾ ತಂಡವು 4–0ಯಿಂದ ಜಯಿಸಿತ್ತು. ಬ್ರಾಡ್ಮನ್ ಅವರು ಸರಣಿಯಲ್ಲಿ 3 ಶತಕ ಮತ್ತು ಒಂದು ದ್ವಿಶತಕ ಸಹಿತ 715 ರನ್‌ಗಳನ್ನು ಗಳಿಸಿದ್ದರು. ಆರು ಇನಿಂಗ್ಸ್‌ಗಳಲ್ಲಿ 178.75ರ ಸರಾಸರಿಯಲ್ಲಿ ರನ್ ಪೇರಿಸಿದ್ದರು.

ಖರೀದಿದಾರರು ತಮ್ಮ ಮೌಲ್ಯವನ್ನು ಪ್ರಕಟಿಸುವ ಮುನ್ನ ಕ್ಯಾಪ್ ಬೆಲೆಯು ₹ 2.14 ಕೋಟಿ ಆಗಿತ್ತು ಎಂದು ಬಾನ್‌ಹ್ಯಾಮ್ಸ್ ಅಕ್ಷನ್ ಹೌಸ್ ತಿಳಿಸಿತು.

'ಕ್ಯಾಪ್ ಬಣ್ಣವು ಸೂರ್ಯನ ಶಾಖಕ್ಕೆ ಮಸುಕಾಗಿದೆ. ಕೀಟಗಳಿಂದಾಗಿ ಸಣ್ಣಪುಟ್ಟ ಡ್ಯಾಮೇಜ್ ಇದೆ. ಅಂಚುಗಳು ಸವೆದಿವೆ' ಎಂದು ಹರಾಜಿಗೂ ಮುನ್ನ ಪ್ರಕಟಿಸಲಾಗಿತ್ತು.

ಬ್ರಾಡ್ಮನ್ 52 ಟೆಸ್ಟ್‌ಗಳಿಂದ 6996 ರನ್ ಗಳಿಸಿದ್ದರು. 1948ರಲ್ಲಿ ಕೊನೆಯ ಅಂತರರಾಷ್ಟ್ರೀಯ ಪಂದ್ಯವಾಡಿದ್ದರು. ದಾಖಲೆಯ 99.94 ಸರಾಸರಿ ಅವರದ್ದು.

ಬ್ರಾಡ್ಮನ್ ಅವರು 2001ರಲ್ಲಿ ನಿಧನರಾಗಿದ್ದರು. ಆಗ ಅವರಿಗೆ 92 ವರ್ಷ ವಯಸ್ಸಾಗಿತ್ತು.

ಅಂಧ ಮಹಿಳಾ ಟಿ20 ವಿಶ್ವಕಪ್: ಭಾರತ ಆತಿಥ್ಯ

ನವದೆಹಲಿ (ಪಿಟಿಐ): ಅಂಧ ಮಹಿಳೆಯರ ಪ್ರಥಮ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಭಾರತವು ಆತಿಥ್ಯ ವಹಿಸಲಿದೆ. ಮುಂದಿನ ವರ್ಷ ನಡೆಯಲಿರುವ ಈ ಟೂರ್ನಿಯಲ್ಲಿ ಪಾಕಿಸ್ತಾನ ತಂಡವು ಹೈಬ್ರಿಡ್ ಮಾದರಿಯಲ್ಲಿ ತನ್ನ ಪಂದ್ಯಗಳನ್ನು ಆಡಲಿದೆ. ವಿಶ್ವ ಅಂಧರ ಕ್ರಿಕೆಟ್ ಕೌನ್ಸಿಲ್ (ಡಬ್ಲ್ಯುಬಿಸಿಸಿ) ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಈ ನಿರ್ಧಾರ ಪ್ರಕಟಿಸಲಾಯಿತು.

ಶ್ರೀಲಂಕಾ ಅಥವಾ ನೇಪಾಳದಲ್ಲಿ ಪಾಕ್ ತಂಡದ ಪಂದ್ಯಗಳು ನಡೆಯುವ ಸಾಧ್ಯತೆ ಇದೆ. ಪಾಕಿಸ್ತಾನದಲ್ಲಿ ನಡೆಯಲಿರುವ ಅಂಧ ಪುರುಷರ ಕ್ರಿಕೆಟ್ ವಿಶ್ವಕಪ್ ಟೂರ್ನಿಯಿಂದ ಭಾರತ ತಂಡವು ಈಚೆಗೆ ಹಿಂದೆ ಸರಿದಿತ್ತು. ಅದಕ್ಕೆ ಪ್ರತ್ಯುತ್ತರವಾಗಿ ಪಾಕ್ ಮಹಿಳಾ ತಂಡವನ್ನು ಭಾರತಕ್ಕೆ ಕಳುಹಿಸದಿರುವ ನಿರ್ಧಾರವನ್ನು ಆ ದೇಶದ ಮಂಡಳಿಯು ತೆಗೆದುಕೊಂಡಿದೆ.

ಸೋಮವಾರ ನಡೆದ ಈ ಸಭೆಯಲ್ಲಿ ಭಾರತ, ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ಪ್ರತಿನಿಧಿಗಳು ವರ್ಚುವಲ್ ಆಗಿ ಹಾಜರಿದ್ದರು.

'ಭಾರತಕ್ಕೆ ಈ ಟೂರ್ನಿಯ ಆತಿಥ್ಯ ವಹಿಸಲು ಹೋದ ವರ್ಷವೇ ಅನುಮತಿ ನೀಡಲಾಗಿದೆ. ಪಾಕ್ ಆಟಗಾರರಿಗೆ ಭಾರತಕ್ಕೆ ತೆರಳಲು ವೀಸಾ ತೊಂದರೆ ಆಗಬಹುದು. ಆದ್ದರಿಂದ ಹೈಬ್ರಿಡ್ ಮಾಡೆಲ್ ಕುರಿತು ಆಗಲೇ ನಿರ್ಧರಿಸಲಾಗಿತ್ತು.

ಪಾಕಿಸ್ತಾನ ತಂಡವು ತನ್ನ ಎಲ್ಲ ಪಂದ್ಯಗಳನ್ನೂ ತಟಸ್ಥ ತಾಣದಲ್ಲಿ ಆಡುವುದು' ಎಂದು ಭಾರತ ಅಂಧರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ಅಧ್ಯಕ್ಷ ಜಿ.ಕೆ. ಮಹಾಂತೇಶ್ ಹೇಳಿದ್ದಾರೆ.

'ಪಾಕ್ ತಂಡವು ನೇಪಾಳ ಅಥವಾ ಶ್ರೀಲಂಕಾದಲ್ಲಿ ಪಂದ್ಯಗಳನ್ನು ಆಡಬಹುದು. ಅವರ ವಿರುದ್ಧದ ಪಂದ್ಯದಲ್ಲಿ ಆಡಲು ಭಾರತ ತಂಡವೂ ನೇಪಾಳ ಅಥವಾ ಲಂಕಾಗೆ ತೆರಳುವುದು' ಎಂದೂ ಅವರು ತಿಳಿಸಿದ್ದಾರೆ.

ಈ ಸಭೆಯಲ್ಲಿ ಭಾರತದ ರಜನೀಶ್ ಹೆನ್ರಿ ಮತ್ತು ಕೆ.ಎನ್.ಚಂದ್ರಶೇಖರ್ ಅವರನ್ನು ಡಬ್ಲ್ಯುಬಿಸಿಸಿಗೆ ಕ್ರಮವಾಗಿ ಮಹಾಪ್ರಧಾನ ಕಾರ್ಯದರ್ಶಿ ಮತ್ತು ಹಣಕಾಸು ನಿರ್ದೇಶಕರಾಗಿ ನೇಮಕ ಮಾಡುವ ಕುರಿತು ಚರ್ಚೆ ನಡೆಯಿತು.

ರಾಷ್ಟ್ರೀಯ ಕುಸ್ತಿ: ರಾಜ್ಯ ಪ್ರತಿನಿಧಿಸಲು ರೈಲ್ವೇಸ್‌ನ ಪೈಲ್ವಾನರಿಗೆ ಅವಕಾಶ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ನಡೆಯಲಿರುವ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ರಾಜ್ಯಗಳನ್ನು ಪ್ರತಿನಿಧಿಸಲು ರೈಲ್ವೆ ಕ್ರೀಡಾ ಅಭಿವೃದ್ಧಿ ಮಂಡಳಿಯ (ಆರ್‌ಎಸ್‌ಪಿಬಿ) ಪೈಲ್ವಾನರಿಗೆ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅನುಮತಿ ನೀಡಿದೆ.

ಡಬ್ಲ್ಯುಎಫ್‌ಐನ ನಿರ್ಣಾಯಕ ಅಂಗಸಂಸ್ಥೆಗಳಲ್ಲಿ ಒಂದಾದ ರೈಲ್ವೇಸ್, ಈ ಹಿಂದೆ ಫೆಡರೇಷನ್ ಆಯೋಜಿಸಿದ್ದ ಅನೇಕ ಟೂರ್ನಿಗಳಿಗೆ ತನ್ನ ಕುಸ್ತಿಪಟುಗಳನ್ನು ಕಳುಹಿಸಿಕೊಟ್ಟಿತ್ತು. ಆದರೆ, ಈ ಬಾರಿ ಡಬ್ಲ್ಯುಎಫ್‌ಐ ಅಮಾನತುಗೊಂಡಿರುವುದರಿಂದ ತನ್ನ ಕುಸ್ತಿಪಟುಗಳನ್ನು ಕಳುಹಿಸದಿರಲು ನಿರ್ಧರಿಸಿದೆ.

ಫ್ರೀಸ್ಟೈಲ್ ಮತ್ತು ಗ್ರೀಕೋ ರೋಮನ್ ಸೇರಿದಂತೆ 81 ಪುರುಷ ಕುಸ್ತಿಪಟುಗಳು ರೈಲ್ವೇಸ್‌ನೊಂದಿಗೆ ಸಂಪರ್ಕ ಹೊಂದಿದ್ದಾರೆ. ಈ ಕುಸ್ತಿಪಟುಗಳಿಗೆ ಪ್ರಸ್ತುತ ಕಪುರ್ತಲಾದಲ್ಲಿ ತರಬೇತಿ ನಡೆಯುತ್ತಿದೆ. ರಾಷ್ಟ್ರೀಯ ಕೂಟಕ್ಕೆ ತಂಡದ ಆಯ್ಕೆಗೆ ಇನ್ನೂ ಟ್ರಯಲ್ಸ್ ಹಮ್ಮಿಕೊಳ್ಳದಿರುವುದು ಪೈಲ್ವಾನರಲ್ಲಿ ಗೊಂದಲ ಮೂಡಿಸಿದೆ.

ಹಲವು ಕುಸ್ತಿಪಟುಗಳು ತಮ್ಮ ತವರು ರಾಜ್ಯವನ್ನು ಪ್ರತಿನಿಧಿಸಲು ಅವಕಾಶ ಕೋರಿ ಡಬ್ಲ್ಯುಎಫ್‌ಐಗೆ ಮನವಿ ಸಲ್ಲಿಸಿದ್ದು, ಅವರ ಕೋರಿಕೆಯನ್ನು ಪುರಸ್ಕರಿಸಲಾಗಿದೆ.

ಕರ್ನಾಟಕ ಕುಸ್ತಿ ಸಂಸ್ಥೆಯ ಆತಿಥ್ಯದಲ್ಲಿ ಇದೇ 6ರಿಂದ 8 ರವರೆಗೆ ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ರಾಷ್ಟ್ರೀಯ ಕುಸ್ತಿ ನಡೆಯಲಿದೆ.